ಗುರುವಾರ, ಮೇ 1, 2025 | ₹ 7.00
www.prajavani.net
prajavani.net | prajavani | prajavani | prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕಾಡು ಅಣಬೆ
ದೊಡ್ಡಬಳ್ಳಾಪುರ ತಾಲ್ಲೂಕಿನ ಚಿಕ್ಕಹೆಜ್ಜಾಜಿ ಗ್ರಾಮದ ರೈತ ಬಸವರಾಜು ಅವರ ಅಡಿಕೆ ತೋಟದಲ್ಲಿ ತಾನಾಗಿಯೇ ಬೆಳೆದ 2 ಕೆ.ಜಿ ತೂಕದ ಬೃಹತ್ ಕಾಡು ಅಣಬೆ

ಪೌರ - ಕಾರ್ಮಿಕರ ದಿನಾಚರಣೆ

ಶುಭ ಸಂದರ್ಭದಲ್ಲಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ
ನೇರ ವೇತನದಡಿ ಕರ್ತವ್ಯ ನಿರ್ವಹಿಸುತ್ತಿರುವ

12,692 ಪೌರ ಕಾರ್ಮಿಕರಿಗೆ
ನೇಮಕಾತಿ ಆದೇಶ ಪತ್ರ ವಿತರಿಸುವ
ಅಭೂತಪೂರ್ವ ಹಾಗೂ ಐತಿಹಾಸಿಕ ಕಾರ್ಯಕ್ರಮ

ಉದ್ಘಾಟನೆ:
ಶ್ರೀ ಮಲ್ಲಿಕಾರ್ಜುನ ಖರ್ಗೆ ರವರು
ಸನ್ಮಾನ್ಯ ವಿರೋಧ ಪಕ್ಷದ ನಾಯಕರು, ರಾಜ್ಯಸಭೆ

ಅಧ್ಯಕ್ಷತೆ ಮತ್ತು ನೇಮಕಾತಿ ಆದೇಶ ಪತ್ರ ವಿತರಣೆ:
ಶ್ರೀ ಸಿದ್ದರಾಮಯ್ಯ ರವರು
ಸನ್ಮಾನ್ಯ ಮುಖ್ಯಮಂತ್ರಿಗಳು

ಘನ ಉಪಸ್ಥಿತಿ:
ಶ್ರೀ ಡಿ.ಕೆ. ಶಿವಕುಮಾರ್ ರವರು
ಮಾನ್ಯ ಉಪಮುಖ್ಯಮಂತ್ರಿಗಳು
ಹಾಗೂ ಬೆಂಗಳೂರು ನಗರಾಭಿವೃದ್ಧಿ ಸಚಿವರು

ನುಡಿದಂತೆ ನಡೆದಿದ್ದೇವೆ...

ದಿನಾಂಕ: **01 ಮೇ 2025, ಗುರುವಾರ** | ಸಮಯ: **ಬೆಳಗ್ಗೆ 11:00 ಕ್ಕೆ**
ಸ್ಥಳ: **ತ್ರಿಪುರವಾಸಿನಿ, ಅರಮನೆ ಮೈದಾನ, ಬೆಂಗಳೂರು.**

ಈ ಸಮಾರಂಭದಲ್ಲಿ ಮಾನ್ಯ ಸಚಿವರುಗಳು, ಸಂಸದರು, ಶಾಸಕರು, ವಿಧಾನ ಪರಿಷತ್ ಸದಸ್ಯರು, ಎಲ್ಲಾ ಚುನಾಯಿತ ಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಪಾಲ್ಗೊಳ್ಳಲಿದ್ದಾರೆ.

ಕಾರ್ಯಕ್ರಮದ ನೇರ ಪ್ರಸಾರ ವೀಕ್ಷಿಸಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.

ಪೌರಕಾರ್ಮಿಕರ ಕಲ್ಯಾಣ - ಸ್ವಚ್ಛ ನಗರದ ನಿರ್ಮಾಣ | **ಸರ್ವರಿಗೂ ಸುಸ್ವಾಗತ**

ಬಿಬಿಎಂಪಿ: ತ್ಯಾಜ್ಯ ನಿರ್ವಹಣಾ ಬಳಕೆದಾರರ ಶುಲ್ಕದಿಂದ ಸಂಗ್ರಹ ಹೆಚ್ಚಳ

ಏಪ್ರಿಲ್‌ನಲ್ಲಿ ಸಾವಿರ ಕೋಟಿ ಆಸ್ತಿ ತೆರಿಗೆ ಸಂಗ್ರಹ

• ಆರ್. ಮಂಜುನಾಥ್

ಬೆಂಗಳೂರು: ಬಿಬಿಎಂಪಿಯ ಆಸ್ತಿ ತೆರಿಗೆ ಸಂಗ್ರಹದಲ್ಲಿ ದಾಖಲೆ ಸೃಷ್ಟಿಯಾಗಿದ್ದು, 2025–26ನೇ ಆರ್ಥಿಕ ವರ್ಷದ ಮೊದಲ ತಿಂಗಳಲ್ಲೇ ₹1 ಸಾವಿರ ಕೋಟಿಗೂ ಹೆಚ್ಚು ತೆರಿಗೆ ಸಂಗ್ರಹವಾಗಿದೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ ಏಪ್ರಿಲ್‌ನಲ್ಲಿ ತ್ಯಾಜ್ಯ ನಿರ್ವಹಣಾ ಬಳಕೆದಾರರ ಶುಲ್ಕ ಜಾರಿ ಮಾಡಲಾಗಿದೆ. ಆಸ್ತಿ ತೆರಿಗೆಯಲ್ಲಿಯೇ ಈ ಶುಲ್ಕವನ್ನು ಸೇರಿಸಿರುವುದು ತೆರಿಗೆ ಸಂಗ್ರಹ ಹೆಚ್ಚಾಗಲು ಕಾರಣವಾಗಿದೆ. ಜೊತೆಗೆ, ಏಪ್ರಿಲ್‌ನಲ್ಲಿ ಪೂರ್ಣ ತೆರಿಗೆ ಪಾವತಿಸಿದವರಿಗೆ ಶೇ 5ರಷ್ಟು ರಿಯಾಯಿತಿ ಇತ್ತು. ಅದನ್ನು ಆಸ್ತಿ ಮಾಲೀಕರು ಸದುಪಯೋಗ ಪಡಿಸಿಕೊಂಡಿದ್ದಾರೆ.

ಸುಮಾರು 5 ಲಕ್ಷ ಆಸ್ತಿಗಳಿಂದ ಏಪ್ರಿಲ್ 30ರವರೆಗೆ ಅಂದಾಜು ₹1,200 ಕೋಟಿ ಸಂಗ್ರಹಿಸಲಾಗಿದ್ದು, ನಿಖರ ಅಂಕಿ–ಅಂಶ ಶನಿವಾರ ಲಭ್ಯವಾಗಲಿದೆ

ಮುನೀಶ್ ಮೌದ್ಗಿಲ್, ಕಂದಾಯ ವಿಭಾಗದ ವಿಶೇಷ ಆಯುಕ್ತ, ಬಿಬಿಎಂಪಿ

ಈ ರಿಯಾಯಿತಿ ಮೇ ಅಂತ್ಯದವರೆಗೂ ವಿಸ್ತರಣೆಯಾಗಿದ್ದು, ಸಂಗ್ರಹ ಇನ್ನಷ್ಟು ಹೆಚ್ಚಾಗುವ ಸಾಧ್ಯತೆ ಇದೆ.

2024–25ನೇ ಸಾಲಿನ ಏಪ್ರಿಲ್ 27ರವರೆಗೆ ₹670.38 ಕೋಟಿ ಆಸ್ತಿ ತೆರಿಗೆ ಸಂಗ್ರಹವಾಗಿತ್ತು. 2025–26ನೇ ಸಾಲಿನಲ್ಲಿ ಏಪ್ರಿಲ್ 27ರವರೆಗೆ ಶೇ 40.03ರಷ್ಟು ಹೆಚ್ಚಳವಾಗಿದ್ದು, ₹938.72 ಕೋಟಿ ಸಂಗ್ರಹವಾಗಿದೆ. ಏಪ್ರಿಲ್ 28ರಿಂದ 30ರವರೆಗೆ ಸುಮಾರು ₹200 ಕೋಟಿಗೂ ಹೆಚ್ಚು ತೆರಿಗೆ ಸಂಗ್ರಹವಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ದಕ್ಷಿಣ ಹಾಗೂ ಮಹದೇವಪುರ ವಲಯಗಳು ಒಟ್ಟು ಆಸ್ತಿ ತೆರಿಗೆ ಸಂಗ್ರಹದಲ್ಲಿ ಮುಂಚೂಣಿಯಲ್ಲಿದ್ದು, ದಾಸರಹಳ್ಳಿ, ಆರ್‌.ಆರ್‌. ನಗರ, ಯಲಹಂಕ ವಲಯಗಳು ಹಿಂದೆ ಉಳಿದಿವೆ. ಶೇಕಡಾವಾರು ಹೆಚ್ಚು ಸಂಗ್ರಹದಲ್ಲಿ ಯಲಹಂಕ ಹಾಗೂ ಆರ್‌.ಆರ್‌. ನಗರ ವಲಯಗಳು ಮುಂದಿವೆ.

2025-26 ಆಸ್ತಿ ಸಂಗ್ರಹ ಮಾಹಿತಿ

₹4,094.82 ಕೋಟಿ	21.73 ಲಕ್ಷ ಆಸ್ತಿಗಳಿಂದ ತೆರಿಗೆ ಸಂಗ್ರಹದ ಗುರಿ
₹836.34 ಕೋಟಿ	3.75 ಲಕ್ಷ ಸುಸ್ತಿದಾರರಿಂದ ತೆರಿಗೆ ಬಾಕಿ
₹152.80 ಕೋಟಿ	9,904 ಆಸ್ತಿಗಳಿಂದ ಪರಿಷ್ಕೃತ ತೆರಿಗೆ–ದಂಡ ಬಾಕಿ

2025ರ ಏಪ್ರಿಲ್ 1ರಂತೆ 3,75,446 ಸುಸ್ತಿದಾರರು ₹836.34 ಕೋಟಿಯನ್ನು ಬಾಕಿ ಉಳಿಸಿಕೊಂಡಿದ್ದಾರೆ. ಇದರಲ್ಲಿ ಏಪ್ರಿಲ್‌ನಲ್ಲಿ ₹18.31 ಕೋಟಿಯನ್ನು 18,425 ಆಸ್ತಿಗಳಿಂದ ಸಂಗ್ರಹಿಸಲಾಗಿದೆ. 10,133 ಸುಸ್ತಿದಾರರ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ. 83,039 ವಾಣಿಜ್ಯ ಆಸ್ತಿಗಳಿಗೆ ಬೀಗಮುದ್ರೆ ಹಾಕಲಾಗಿದೆ.

ಏಪ್ರಿಲ್ 1ರಂತೆ 9,896 ಆಸ್ತಿಗಳಿಗೆ ತೆರಿಗೆಯನ್ನು ಪರಿಷ್ಕರಿಸಲಾಗಿದ್ದು, ₹151.45 ಕೋಟಿ ಸಂಗ್ರಹ ಆಗಬೇಕಿದೆ. 259 ಆಸ್ತಿಗಳಿಂದ ₹5.06 ಕೋಟಿ ಸಂಗ್ರಹವಾಗಿದ್ದು, ಏಪ್ರಿಲ್ ಅಂತ್ಯಕ್ಕೆ 9,904 ಆಸ್ತಿಗಳಿಂದ ₹152.80 ಕೋಟಿ ಸಂಗ್ರಹ ಆಗಬೇಕಿದೆ. ಇದರಲ್ಲಿ 95 ಆಸ್ತಿಗಳಿಂದ ₹5.21 ಕೋಟಿ ಸಂಗ್ರಹವಾಗಿದೆ.

ಈವರೆಗೆ ತೆರಿಗೆ ಪಾವತಿಸದ 1,015 ಆಸ್ತಿಗಳನ್ನು ಗುರುತಿಸಲಾಗಿದ್ದು, ಇವುಗಳಿಂದ ₹1.39 ಕೋಟಿ ತೆರಿಗೆ ಸಂಗ್ರಹಿಸುವ ಗುರಿಯನ್ನು ಬಿಬಿಎಂಪಿ ಹೊಂದಿದೆ.

ಆಸ್ತಿ ತೆರಿಗೆ ಸಂಗ್ರಹ (ಏಪ್ರಿಲ್ 27ರ ಅಂತ್ಯಕ್ಕೆ)

ವಲಯ	ಸಂಗ್ರಹ (₹ ಕೋಟಿಗಳಲ್ಲಿ)
ದಕ್ಷಿಣ	179.68
ಮಹದೇವಪುರ	179.09
ಪೂರ್ವ	174.76
ಪಶ್ಚಿಮ	117.48
ಬೊಮ್ಮನಹಳ್ಳಿ	110.12
ಯಲಹಂಕ	76.70
ಆರ್‌.ಆರ್‌.ನಗರ	72.20
ದಾಸರಹಳ್ಳಿ	28.69

‘ನೀರಿನ ಸಮಸ್ಯೆ ಗುರುತಿಸಿ, ಪರಿಹರಿಸಿ’

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ಕ್ಷೇತ್ರದಲ್ಲಿ ಎಲ್ಲೆಲ್ಲಿ ನೀರಿನ ಸಮಸ್ಯೆ ಇದೆಯೋ, ಆ ಬಡಾವಣೆಗಳನ್ನು ಗುರುತಿಸಿ, ತುರ್ತಾಗಿ ಪರಿಹರಿಸುವಂತೆ ಶಾಸಕ ಎಸ್‌. ಮುನಿರಾಜು, ಜಲಮಂಡಳಿ ಅಧಿಕಾರಿಗಳಿಗೆ ತಾಕೀತು ಮಾಡಿದರು.

‘ನಮ್ಮ ಮನೆಗಳಿಗೆ ಸರಿಯಾಗಿ ನೀರು ಪೂರೈಕೆಯಾಗುತ್ತಿಲ್ಲ’ ಎಂದು ಚಿಕ್ಕಸಂದ್ರದ ನಾಗರಿಕರು ದೂರು ನೀಡಿದ ಹಿನ್ನೆಲೆಯಲ್ಲಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ ಶಾಸಕರು, ಜಲಮಂಡಳಿಯ ಅಧಿಕಾರಿಗಳನ್ನು ಸ್ಥಳಕ್ಕೆ ಕರೆಸಿ, ಸಾರ್ವಜನಿಕರ ಎದುರೇ ಸಮಸ್ಯೆ ಕುರಿತು ಚರ್ಚಿಸಿದರು. ‘ಕೂಡಲೇ ಸಮಸ್ಯೆ ಸರಿಪಡಿಸಬೇಕು’ ಎಂದು ಜಲಮಂಡಳಿ ಎಇಇ ಐಶ್ವರ್ಯ ಅವರಿಗೆ ಸೂಚಿಸಿದರು.

‘ಹಲವು ವರ್ಷಗಳಿಂದ ಕಾವೇರಿ ನೀರಿಗಾಗಿ ನಿವಾಸಿಗಳು ಕಾಯುತ್ತಿದ್ದಾರೆ. ಸಾಕಷ್ಟು ನೀರು ಇದ್ದು, ಪೂರೈಸಲು ಎಲ್ಲ ಸೌಲಭ್ಯಗಳಿದ್ದರೂ ಅಧಿಕಾರಿಗಳ ನಿರ್ಲಕ್ಷದಿಂದ ಸಮರ್ಪಕವಾಗಿ ನೀರು ಪೂರೈಕೆಯಾಗುತ್ತಿಲ್ಲ. ಎಲ್ಲಿ ನೀರು ಪೂರೈಕೆ ಸಮಸ್ಯೆ ಇದೆಯೋ ಎಂಬುದನ್ನು ಪರಿಶೀಲಿಸಿ, ಸಮಸ್ಯೆಯನ್ನು ಪರಿಹರಿಸಿ’ ಎಂದು ತಿಳಿಸಿದರು.

ಡಿ.ಕೆ.ಸುರೇಶ್ ಪತ್ನಿ ಎಂದು ವಿಡಿಯೊ ಹರಿಬಿಟ್ಟ ಮಹಿಳೆ!

ಪ್ರಜಾವಾಣಿ ವಾರ್ತೆ

ರಾಮನಗರ: ಮಾಜಿ ಸಂಸದ ಡಿ.ಕೆ. ಸುರೇಶ್ ಅವರ ಪತ್ನಿ ಎಂದು ಹೇಳಿಕೊಂಡು ಮಹಿಳೆಯೊಬ್ಬರು ಸಾಮಾಜಿಕ ಜಾಲತಾಣಗಳಲ್ಲಿ ವಿಡಿಯೊ ಹರಿಬಿಟ್ಟಿದ್ದಾರೆ.

ಡಿ.ಕೆ. ಸುರೇಶ್ ಪರ ವಕೀಲ ಪ್ರದೀಪ್ ಎಂಬುವರು ರಾಮನಗರದ ಸಿಇಎನ್ ಪೊಲೀಸ್ ಠಾಣೆಗೆ ಮಹಿಳೆ ವಿರುದ್ಧ ದೂರು ನೀಡಿದ್ದು, ಪ್ರಕರಣ ದಾಖಲಾಗಿದೆ.

ಇನ್‌ಸ್ಟಾಗ್ರಾಮ್‌ನಲ್ಲಿ pavitrah256 ಎಂಬ ಹೆಸರಿನಲ್ಲಿ ಹಾಗೂ ಫೇಸ್‌ಬುಕ್‌ನಲ್ಲಿ PavitraDksuresh Dodalahalli ಎಂಬ ಹೆಸರಿನಲ್ಲಿ ಖಾತೆ ಹೊಂದಿರುವ ಮಹಿಳೆ, ಏ.8ರಂದು ವಿಡಿಯೊ ಪೋಸ್ಟ್ ಮಾಡಿದ್ದಾರೆ.

ಸುರೇಶ್ ಅವರ ಚಿತ್ರದೊಂದಿಗೆ ತನ್ನ ಚಿತ್ರ ಜೋಡಿಸಿ ಎಡಿಟ್ ಮಾಡಿದ ಚಿತ್ರವನ್ನು ಸಹ ಹಾಕಿಕೊಂಡಿದ್ದಾರೆ. ಪತಿ ಹೆಸರಿನ ಮುಂದೆ ಡಿ.ಕೆ. ಸುರೇಶ್ ಎಂದಿರುವ ನಕಲಿ ಮತದಾರರ ಗುರುತಿನ ಚೀಟಿಯನ್ನು ಸಹ ಪೋಸ್ಟ್ ಮಾಡಿದ್ದಾರೆ.

ಫೇಸ್‌ಬುಕ್‌ನಲ್ಲಿ ವಿಡಿಯೊ ಹಂಚಿಕೊಂಡಿರುವ ಮಹಿಳೆ

ವಿಡಿಯೊದಲ್ಲೇನಿದೆ?: ‘ನಾನು ಮೊದಲು ಡಿ.ಕೆ. ಸುರೇಶ್ ಅವರ ಹೆಂಡತಿಯಾಗಿ ಹೇಳಬೇಕೆಂದರೆ, ನಾನು ಫಸ್ಟ್ ಸುರೇಶ್ ಅವರ ಅಭಿಮಾನಿ. ಯಾಕೆಂದರೆ ಅವರು ಮೂರು ಸಲ ಎಂ.ಪಿ.ಯಾಗಿ ಯಾರೂ ಮಾಡಲಿಕ್ಕಾಗದ ಒಳ್ಳೆಯ ಕೆಲಸಗಳನ್ನು ಮಾಡಿದ್ದಾರೆ. ಇಂತಹವರನ್ನು ನನ್ನ ಗಂಡ ಎಂದು ಹೇಳಿಕೊಳ್ಳಲು ಖುಷಿಪಡುತ್ತೇನೆ’ ಎಂದು ಆಕೆ ವಿಡಿಯೊದಲ್ಲಿ ಹೇಳಿದ್ದಾರೆ.

ದೂರಿನಲ್ಲೇನಿದೆ?: ಸುರೇಶ್ ಅವರ ಪತ್ನಿ ಎಂದು ದುರುದ್ದೇಶದಿಂದ ಹೇಳಿಕೊಂಡು ಅಪಪ್ರಚಾರ ನಡೆಸುತ್ತಿರುವ ಮಹಿಳೆ, ಸಾರ್ವಜನಿಕವಾಗಿ ತಪ್ಪು ಸಂದೇಶ ಹರಡುತ್ತಿದ್ದಾರೆ. ಕಾಂಗ್ರೆಸ್ ಪಕ್ಷದ ಚಿಹ್ನೆ ಸಹ ದುರುಪಯೋಗಪಡಿಸಿಕೊಂಡಿದ್ದಾರೆ. ಆಕೆಯ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ದೂರಿನಲ್ಲಿ ವಕೀಲ ಪ್ರದೀಪ್ ತಿಳಿಸಿದ್ದಾರೆ.

ದೂರಿನ ಮೇರೆಗೆ ಪೊಲೀಸರು ಮಹಿಳೆ ವಿರುದ್ಧ ಭಾರತೀಯ ನ್ಯಾಯ ಸಂಹಿತೆ 237 (ಉದ್ದೇಶಪೂರ್ವಕವಾಗಿ ಸುಳ್ಳು ಘೋಷಣೆ ಮಾಡಿಕೊಳ್ಳುವ ಅಪರಾಧ), 319 (ಮತ್ತೊಬ್ಬರಂತೆ ನಟಿಸಿ ಮೋಸ ಮಾಡುವ ಅಪರಾಧ), 336 (ವಂಚನೆ ಉದ್ದೇಶಕ್ಕಾಗಿ ನಕಲಿ ದಾಖಲೆ ಸೃಷ್ಟಿಸುವ ಅಪರಾಧ) ಹಾಗೂ 353 (ಸಾರ್ವಜನಿಕವಾಗಿ ಕಿಡಿಗೇಡಿತನಕ್ಕೆ ಕಾರಣವಾಗುವ ಹೇಳಿಕೆ) ಕಲಂ ಅಡಿ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ಶಕುಂತಲಾ ಭಟ್, ವಿಜಯಾಗೆ ‘ಸರೋಜಾದೇವಿ ಸಾಹಿತ್ಯ ಪ್ರಶಸ್ತಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ನೀಡುವ ‘ಪದ್ಮಭೂಷಣ ಬಿ. ಸರೋಜಾದೇವಿ ಸಾಹಿತ್ಯ ಪ್ರಶಸ್ತಿ’ಗೆ ಲೇಖಕಿಯರಾದ ಎಚ್‌.ಶಕುಂತಲಾ ಭಟ್ ಮತ್ತು ವಿಜಯಾ ಮೋಹನ್ ಆಯ್ಕೆಯಾಗಿದ್ದಾರೆ.

ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ನೇತೃತ್ವದ ಸಮಿತಿ 2024 ಹಾಗೂ 2025ನೇ ಸಾಲಿಗೆ ಈ ಆಯ್ಕೆ ಮಾಡಿದೆ. ಪ್ರಶಸ್ತಿಯು ಫಲಕದ ಜೊತೆಗೆ ತಲಾ ₹15 ಸಾವಿರ ನಗದು ಒಳಗೊಂಡಿದೆ. ಇನ್ನೂರಕ್ಕೂ ಹೆಚ್ಚು ಚಲನಚಿತ್ರಗಳಲ್ಲಿ ಅಭಿನಯಿಸಿರುವ ಸರೋಜಾದೇವಿ ಅವರು, ಪುತ್ರಿ ಬಿ. ಭುವನೇಶ್ವರಿ ಅವರ ಸ್ಮರಣಾರ್ಥ ದತ್ತಿ ನಿಧಿಯನ್ನು ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಸ್ಥಾಪಿಸಿದ್ದಾರೆ. ಕನ್ನಡ ಸಾಹಿತ್ಯಕ್ಕೆ ಮಹತ್ವದ ಕೊಡುಗೆ ನೀಡಿದ ಲೇಖಕಿಯರನ್ನು ಈ ಪ್ರಶಸ್ತಿಗೆ ಆಯ್ಕೆ ಮಾಡಲಾಗುತ್ತದೆ.

ಎಚ್‌.ಶಕುಂತಲಾ ಭಟ್

ವಿಜಯಾ ಮೋಹನ್

ದಕ್ಷಿಣ ಕನ್ನಡ ಜಿಲ್ಲೆಯ ಹಳೆಯಂಗಡಿಯ ಎಚ್‌.ಶಕುಂತಲಾ ಭಟ್ ಅವರು, ಸಂಘಟನೆ ಮತ್ತು ಸಾಹಿತ್ಯ ಕ್ಷೇತ್ರಕ್ಕೆ ಮಹತ್ವದ ಕೊಡುಗೆಗಳನ್ನು ನೀಡಿದ್ದಾರೆ. ‘ಹಾರುವ ಚೆಂಡು’, ‘ಚಿಣಿಮಿಣಿ’, ‘ಹಬ್ಬ’, ‘ಮಿಠಾಯಿ’ ಅವರ ಪ್ರಮುಖ ಕಥಾ ಸಂಕಲನಗಳಾಗಿವೆ. ತುಮಕೂರು ಜಿಲ್ಲೆಯ ಸುದ್ದೇಗುಂಟೆಯ ವಿಜಯಾ ಮೋಹನ್ ಅವರು, ಮುಖ್ಯ ಶಿಕ್ಷಕಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ‘ತಬ್ಬಲಿ ಸಾರು’, ‘ಜಾತಿ’, ‘ವೋಟು’, ‘ಮೇವು’ ಇವರ ಪ್ರಮುಖ ಕಥಾ ಸಂಕಲನಗಳಾಗಿವೆ ಎಂದು ಕಸಾಪ ಪ್ರಕಟಣೆ ತಿಳಿಸಿದೆ.

ಸುದ್ದಿ 2 ನಿಮಿಷ

ಡಿಡಿಯುಟಿಟಿಎಲ್ ಅಕ್ರಮ ಆರೋಪ ವೀರಯ್ಯ ವಿರುದ್ಧದ ಪ್ರಕರಣ ರದ್ದು

ಬೆಂಗಳೂರು: ಡಿ.ದೇವರಾಜ ಅರಸು ಟ್ರಕ್ ಟರ್ಮಿನಲ್ ನಿಯಮಿತದ (ಡಿಡಿಯುಟಿಟಿಎಲ್) ₹47.50 ಕೋಟಿ ಅಕ್ರಮ ಆರೋಪಕ್ಕೆ ಸಂಬಂಧಿಸಿದಂತೆ ನಿಗಮದ ಮಾಜಿ ಅಧ್ಯಕ್ಷರೂ ಆದ ಬಿಜೆಪಿ ಮುಖಂಡ ಡಿ.ಎಸ್. ವೀರಯ್ಯ ವಿರುದ್ಧದ ತನಿಖೆ ಮತ್ತು ದೋಷಾರೋಪ ಪಟ್ಟಿಯನ್ನು ಹೈಕೋರ್ಟ್ ರದ್ದುಪಡಿಸಿದೆ.

ಪ್ರಕರಣದ ಎರಡನೇ ಆರೋಪಿಯಾಗಿದ್ದ ಡಿ.ಎಸ್. ವೀರಯ್ಯ, ‘ನನ್ನ ವಿರುದ್ಧದ ಎಫ್‌ಐಆರ್ ಮತ್ತು ದೋಷಾರೋಪ ಪಟ್ಟಿ ರದ್ದು-ಪಡಿಸಬೇಕು’ ಎಂದು ಕೋರಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿ, ಕಾಯ್ದಿರಿಸಿದ್ದ ಆದೇಶವನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಪ್ರಕಟಿಸಿದೆ.

ಪ್ರಕರಣವೇನು?: ‘ಡಿ.ದೇವರಾಜ ಅರಸು ಟ್ರಕ್ ಟರ್ಮಿನಲ್ ನಿಯಮಿತದಲ್ಲಿ 2021-23ರ ಅವಧಿಯಲ್ಲಿ ನಿಯಮಾವಳಿ ಮೀರಿ ತುಂಡು ಗುತ್ತಿಗೆ ನೀಡಿಕೆಯ ಮೂಲಕ ಹಣಕಾಸು ದುರ್ಬಳಕೆ ಮಾಡಲಾಗಿದೆ’ ಎಂದು ಆರೋಪಿಸಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕ ಸಿ.ಎನ್. ಶಿವಪ್ರಕಾಶ್ 2023ರ ಸೆಪ್ಟೆಂಬರ್ 23ರಂದು ವಿಲ್ಸನ್ ಗಾರ್ಡನ್ ಪೊಲೀಸ್ ಠಾಣೆಗೆ ದೂರು ನೀಡಿದ್ದರು.

ನಂತರ ಪ್ರಕರಣವನ್ನು ಸಿಐಡಿಗೆ ವರ್ಗಾವಣೆ ಮಾಡಲಾಗಿತ್ತು. ಸಿಐಡಿ, ವೀರಯ್ಯ ಅವರನ್ನು 2024ರ ಜುಲೈ 12 ರಂದು ಬಂಧಿಸಿತ್ತು. ತನಿಖೆ ಪೂರ್ಣಗೊಳಿಸಿ ವಿಚಾರಣಾ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿತ್ತು.

ಸ್ಮಾರ್ಟ್ ಮೀಟರ್ ಮಾರ್ಗಸೂಚಿ ಜಾರಿಗೆ ಹೈಕೋರ್ಟ್ ತಡೆ

ಬೆಂಗಳೂರು: ವಿದ್ಯುತ್ ಸ್ಮಾರ್ಟ್ ಮೀಟರ್ ಕಡ್ಡಾಯ ಅಳವಡಿಕೆಗೆ ಸಂಬಂಧಿಸಿದಂತೆ ಬೆಸ್ಕಾಂ ಹೊರಡಿಸಿರುವ ಮಾರ್ಗಸೂಚಿ ಜಾರಿಗೆ ಹೈಕೋರ್ಟ್ ತಡೆ ನೀಡಿದೆ.

ಈ ಸಂಬಂಧ ದೊಡ್ಡಬಳ್ಳಾಪುರದ ಪಿ.ಎಂ.ಹರೀಶ್ ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ, ‘ಈ ಆದೇಶ ಕೇವಲ ಅರ್ಜಿದಾರರಿಗೆ ಮಾತ್ರವೇ ಅನ್ವಯವಾಗುತ್ತದೆ’ ಎಂದು ಸ್ಪಷ್ಟಪಡಿಸಿದೆ.

ವಿಚಾರಣೆ ವೇಳೆ ಅರ್ಜಿದಾರರ ಪರ ಪದಾಂಕಿತ ಹಿರಿಯ ವಕೀಲೆ ಲಕ್ಷ್ಮಿ ಅಯ್ಯಂಗಾರ್, ‘ಸ್ಮಾರ್ಟ್ ಮೀಟರ್ ಅಳಡಿಕೆಯನ್ನು ಕಡ್ಡಾಯ ಮಾಡಿರುವುದರಿಂದ ಸಾರ್ವಜನಿಕರಿಗೆ ಭಾರಿ ಹೊರೆಯಾಗಲಿದೆ’ ಎಂದು ವಾದ ಮಂಡಿಸಿದರು.

ಕೆಲಕಾಲ ವಾದ ಆಲಿಸಿದ ನ್ಯಾಯಪೀಠ, ಅರ್ಜಿದಾರರಿಗೆ ಸೀಮಿತವಾಗಿ ಬೆಸ್ಕಾಂ ಮಾರ್ಗಸೂಚಿ ಮತ್ತು ಸ್ಮಾರ್ಟ್ ಮೀಟರ್ ಅಳವಡಿಕೆ ಕಡ್ಡಾಯಗೊಳಿಸಿರುವುದಕ್ಕೆ ತಡೆ ನೀಡಿ, ವಿಚಾರಣೆಯನ್ನು ಜೂನ್ 6ಕ್ಕೆ ಮುಂದೂಡಿತು.

ಕೋರಿಕೆ ಏನು?: ‘ಬೆಸ್ಕಾಂ 2025ರ ಫೆಬ್ರುವರಿ 13ರಂದು ಹೊರಡಿಸಿರುವ ಮಾರ್ಗಸೂಚಿಯಂತೆ ಸ್ಮಾರ್ಟ್ ಮೀಟರ್ ಅಳವಡಿಕೆ ಕಡ್ಡಾಯ ಮಾಡಿರುವುದನ್ನು ವಜಾಗೊಳಿಸಬೇಕು ಮತ್ತು ಗ್ರಾಹಕರೇ ಸ್ಮಾರ್ಟ್ ಮೀಟರ್ ಅಥವಾ ಎಲೆಕ್ಟ್ರೊಸ್ಟ್ಯಾಟಿಕ್ ಎನರ್ಜಿ ಮೀಟರ್ ಅಳವಡಿಸಿಕೊಳ್ಳಲು ಅನುಮತಿಸಬೇಕು’ ಎಂದು ಅರ್ಜಿದಾರರು ಕೋರಿದ್ದಾರೆ.

ಕೆಎಸ್‌ಆರ್‌ಟಿಸಿಯು ಅತ್ಯುತ್ತಮ ಸಾರ್ವಜನಿಕ ಸಾರಿಗೆ ಉಪಕ್ರಮದಡಿ ‘ಫೈನಾನ್ಶಿಯಲ್ ಎಕ್ಸ್‌ಪ್ರೆಸ್ ಮೊಬಿಲಿಟಿ2025’ ರಾಷ್ಟ್ರೀಯ ಪ್ರಶಸ್ತಿಯನ್ನು ಪಡೆದಿದ್ದು, ಕೇಂದ್ರ ರಸ್ತೆ ಸಾರಿಗೆ ಸಚಿವ ನಿತಿನ್ ಗಡ್ಕರಿ ಅವರಿಂದ ನಿಗಮದ ಮುಖ್ಯ ತಾಂತ್ರಿಕ ಶಿಲ್ಪಿ ಕೆ.ಎಚ್‌.ಶ್ರೀನಿವಾಸ್ ಅವರು ನವದೆಹಲಿಯಲ್ಲಿ ಬುಧವಾರ ಪ್ರಶಸ್ತಿ ಸ್ವೀಕರಿಸಿದರು

ಕಂಚಿ ಕಾಮಕೋಟಿ ಪೀಠಕ್ಕೆ 71ನೇ ಪೀಠಾಧಿಪತಿ ನೇಮಕ

ಪ್ರಜಾವಾಣಿ ವಾರ್ತೆ

ಚೆನ್ನೈ: 2,500 ವರ್ಷ ಇತಿಹಾಸವಿರುವ ಕಾಂಚಿಪುರಂನ ಕಂಚಿ ಕಾಮಕೋಟಿ ಪೀಠದ 71ನೇ ಪೀಠಾಧಿಪತಿಯಾಗಿ ‘ಸತ್ಯ ಚಂದ್ರಶೇಖರೇಂದ್ರ ಸರಸ್ವತಿ’ ಅವರನ್ನು ನೇಮಿಸಲಾಗಿದೆ.

ಅಕ್ಷಯ ತೃತೀಯಾ ದಿನದಂದು ಇಲ್ಲಿ ನಡೆದ ಧಾರ್ಮಿಕ ಸಮಾರಂಭದಲ್ಲಿ ಹೊಸ ಪೀಠಾಧಿಪತಿ ನೇಮಕ ನಡೆಯಿತು.

ಕಾಂಚಿ ಕಾಮಾಕ್ಷಿ ಅಂಬಾಳ್ ದೇವಸ್ಥಾನದಲ್ಲಿ ಬೆಳಿಗ್ಗೆ 5.30ರಿಂದಲೇ ಸನ್ಯಾಸ ದೀಕ್ಷೆಯ ಧಾರ್ಮಿಕ ಸಮಾರಂಭ\ ಆರಂಭಗೊಂಡಿತು. ಸನ್ಯಾಸ ಸ್ವೀಕಾರಕ್ಕೂ ಮುನ್ನ ಸತ್ಯ ವೆಂಕಟಸೂರ್ಯ ಸುಬ್ರಹ್ಮಣ್ಯ ಗಣೇಶ ಶರ್ಮಾ ದ್ರಾವಿಡ್ (ಪೂರ್ವಾಶ್ರಮದ ಹೆಸರು) ಅವರು ಪಂಚ ಗಂಗಾ ತೀರ್ಥದಲ್ಲಿ ಮುಳುಗಿ, ನಂತರ ತಮ್ಮ ಗುರುಗಳಾದ ವಿಜಯೇಂದ್ರ ಸರಸ್ವತಿ ಶಂಕರಾಚಾರ್ಯ ಸ್ವಾಮೀಜಿ ನೀಡಿದ ಕೇಸರಿ ವಸ್ತ್ರವನ್ನು ಧರಿಸಿದರು. ನಂತರ ಪಂಡಿತರು, ‘ದಂಡ’ ನೀಡಿ, ಶಂಖದ ಮೂಲಕ ಅಭಿಷೇಕ ನೆರವೇರಿಸಿದರು.

ಐದುಭಾಷೆಗಳಲ್ಲಿಧಾರ್ಮಿಕಸಂದೇಶ ನೀಡಿದ ಬಳಿಕ ಅವರಿಗೆ ‘ಸತ್ಯ ಚಂದ್ರಶೇಖರೇಂದ್ರ ಸರಸ್ವತಿ’ ಎಂದು ನಾಮಕರಣ ಮಾಡಲಾಯಿತು. ನಂತರ ಅವರು, ಮಠದವರೆಗೆ ಮೆರವಣಿಗೆಯಲ್ಲಿ ತೆರಳಿದರು. ತಮಿಳುನಾಡಿನ ರಾಜ್ಯಪಾಲ ಆರ್.ಎನ್.ರವಿ, ಸ್ವಾಮೀಜಿಯ ಪೂರ್ವಾಶ್ರಮದ ತಂದೆ–ತಾಯಿ, ಕಿರಿಯ ಸಹೋದರಿ ಕೂಡ ಭಾಗಿಯಾಗಿದ್ದರು.

ವಿವಿಧ ಕಾಮಗಾರಿಗಳಿಗೆ ಚಾಲನೆ

ಯಲಹಂಕ: ₹13.5 ಕೋಟಿ ವೆಚ್ಚದಲ್ಲಿ ನಿರ್ಮಿಸಲಾದ ಕಟ್ಟಡಗಳ ಲೋಕಾರ್ಪಣೆ

ಪ್ರಜಾವಾಣಿ ವಾರ್ತೆ

ಯಲಹಂಕ: ಬಿಬಿಎಂಪಿ ವಾರ್ಡ್ ಸಂಖ್ಯೆ 3 ಮತ್ತು 4ರ ವ್ಯಾಪ್ತಿಯ ವಿವಿಧ ಬಡಾವಣೆಗಳಲ್ಲಿ ₹13.50 ಕೋಟಿ ವೆಚ್ಚದಲ್ಲಿ ನೂತನವಾಗಿ ನಿರ್ಮಿಸಿರುವ ಕಟ್ಟಡಗಳನ್ನು ಶಾಸಕ ಎಸ್‌.ಆರ್‌.ವಿಶ್ವನಾಥ್ ಲೋಕಾರ್ಪಣೆಗೊಳಿಸಿದರು.

ಉಪನಗರ 4ನೇ ಹಂತದಲ್ಲಿ ಜಿಮ್ನಾಸ್ಟಿಕ್ ಮತ್ತು ಬ್ಯಾಡ್ಮಿಂಟನ್ ಕೋರ್ಟ್ ನಿರ್ಮಾಣ ಕಾಮಗಾರಿಗೆ ಗುದ್ದಲಿಪೂಜೆ ನೆರವೇರಿಸಿದರು. ಅಂಬೇಡ್ಕರ್ ನಗರದಲ್ಲಿ ನೂತನವಾಗಿ ನಿರ್ಮಿಸಿರುವ ಶಾಲಾಕಟ್ಟಡ ಮತ್ತು ಸಮುದಾಯಭವನ, ಅಳ್ಳಾಳಸಂದ್ರದಲ್ಲಿ ಸಮುದಾಯ ಭವನ ಹಾಗೂ ನ್ಯಾಯಾಂಗ ಬಡಾವಣೆಯಲ್ಲಿ ನೂತನವಾಗಿ ನಿರ್ಮಿಸಿರುವ ಕಿತ್ತೂರುರಾಣಿ ಚನ್ನಮ್ಮ ಕ್ರೀಡಾಂಗಣವನ್ನು ಉದ್ಘಾಟಿಸಿದರು.

ಇದೇ ವೇಳೆ ಅಂಬೇಡ್ಕರ್ ನಗರದಲ್ಲಿ ಸ್ಥಳೀಯ ನಿವಾಸಿಗಳು, ಮನೆಗಳು ಶಿಥಿಲಗೊಂಡಿದ್ದು ಬಿದ್ದುಹೋಗುವ ಸ್ಥಿತಿಯಲ್ಲಿವೆ. ಚರಂಡಿ ವ್ಯವಸ್ಥೆಯೂ ಸರಿಯಿಲ್ಲದೆ ಮಳೆ ಬಂದಾಗ ಮನೆಗಳಿಗೆ ನೀರು ನುಗ್ಗಿ ತೊಂದರೆ ಅನುಭವಿಸಬೇಕಾಗಿದೆ. ಕೂಡಲೇ ಹಳೆಯ ಮನೆಗಳನ್ನು ತೆರವುಗೊಳಿಸಿ, ನೂತನವಾಗಿ ಮನೆ ನಿರ್ಮಿಸಿಕೊಡಬೇಕು ಎಂದು ಶಾಸಕ ವಿಶ್ವನಾಥ್ ಅವರಿಗೆ ಮನವಿ ಮಾಡಿದರು.

ಯಲಹಂಕ ಉಪನಗರದ ಅಂಬೇಡ್ಕರ್ ನಗರದಲ್ಲಿ ನೂತನವಾಗಿ ನಿರ್ಮಿಸಿರುವ ಶಾಲಾ ಕಟ್ಟಡ ಮತ್ತು ಸಮುದಾಯ ಭವನ ಉದ್ಘಾಟಿಸಿದ ಶಾಸಕ ಎಸ್‌.ಆರ್ ವಿಶ್ವನಾಥ್ ಅವರಿಗೆ, ಸ್ಥಳೀಯ ನಿವಾಸಿಗಳು ವಿವಿಧ ಸಮಸ್ಯೆಗಳನ್ನು ಬಗೆಹರಿಸುವಂತೆ ಬಗ್ಗೆ ಮನವಿ ಮಾಡಿದರು

ಇದಕ್ಕೆ ಪ್ರತಿಕ್ರಿಯಿಸಿದ ಅವರು, ಅಂಬೇಡ್ಕರ್ ನಗರದಲ್ಲಿ ಈ ಹಿಂದೆ 1 + 3 ಮನೆಗಳನ್ನು ನಿರ್ಮಿಸಲು ತೀರ್ಮಾನಿಸಲಾಗಿತ್ತು. ನಂತರ ಯೋಜನೆಯನ್ನು ಮಾರ್ಪಡಿಸಿ, ಪ್ರತಿಯೊಬ್ಬರಿಗೂ ಪ್ರತ್ಯೇಕ ಮನೆಗಳನ್ನು ನಿರ್ಮಿಸುವ ಸಲುವಾಗಿ ಪಟ್ಟಿ ತಯಾರಿಸಿ ಈಗಾಗಲೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಸರ್ಕಾರಕ್ಕೆ ಮತ್ತೆ ಮನವಿ ಮಾಡಿ, ಶೀಘ್ರದಲ್ಲೇ ಸುಸಜ್ಜಿತ ಮನೆ ನಿರ್ಮಿಸಿಕೊಡಲು ಪ್ರಯತ್ನಿಸಲಾಗುವುದು ಎಂದು ಭರವಸೆ ನೀಡಿದರು.

ಬಿಬಿಎಂಪಿ ಕಾರ್ಯಪಾಲಕ ಎಂಜಿನಿಯರ್ ಸುಧಾಕರರೆಡ್ಡಿ, ಸಹಾಯಕ ಕಾರ್ಯಪಾಲಕ ಎಂಜಿನಿಯರ್, ರಾಮ ಸಂಜೀವಯ್ಯ, ರಘುನಂದನ್ ಮಂತ್ರಿ, ಬಿಜೆಪಿ ಮುಖಂಡರಾದ ಪವನ್‌ಕುಮಾರ್.ವಿ, ರಾಜಣ್ಣ, ಮಧುಸೂದನ್, ಕಿರಣ್, ಅಕ್ಷತ್, ರಮೇಶ್, ಎಸ್‌.ಸೋಮಶೇಖರ್, ಮುರಳಿ, ಕೆಂಪಣ್ಣ ಮತ್ತಿತರರು ಉಪಸ್ಥಿತರಿದ್ದರು.

‘ಡಿಜಿಟಲ್ ವೇದಿಕೆ ಭದ್ರತೆಗೆ ‘ಬ್ಲಾಕ್ ಚೈನ್’ ತಂತ್ರಜ್ಞಾನ ಅಳವಡಿಕೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡಿಜಿಟಲ್ ವೇದಿಕೆಗಳ ಭದ್ರತೆಯನ್ನು ಮತ್ತಷ್ಟು ಬಲಪಡಿಸಲು ‘ಬ್ಲಾಕ್ ಚೈನ್’ ನಂತಹ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳಲು ಜಲಮಂಡಳಿ ಚಿಂತನೆ ನಡೆಸಿದೆ.

ರಾಮ್‌ಪ್ರಸಾತ್ ಮನೋಹರ್

‘ಜಲಮಂಡಳಿಯ ನೀರಿನ ಸಂಪರ್ಕ ಅರ್ಜಿ ಸ್ವೀಕಾರದ ಆನ್‌ಲೈನ್ ಜಾಲತಾಣದಿಂದ ದತ್ತಾಂಶ ಕದಿಯುವ ಪ್ರಯತ್ನಗಳು ನಡೆದಿವೆ. ಹೀಗಾಗಿ, ಇಂಥ ತಂತ್ರಜ್ಞಾನಗಳ ಅಳವಡಿಕೆಗೆ ಮುಂದಾಗಿದ್ದೇವೆ’ ಎಂದು ಮಂಡಳಿ ಅಧ್ಯಕ್ಷ ರಾಮ್‌ಪ್ರಸಾತ್ ಮನೋಹರ್ ತಿಳಿಸಿದ್ದಾರೆ.

‘ಏಪ್ರಿಲ್ 11 ರಂದು ಬೆಳಿಗ್ಗೆ ಜಲಮಂಡಳಿಯ ನೀರಿನ ಸಂಪರ್ಕಕ್ಕಾಗಿ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವ ಜಾಲತಾಣದಿಂದ ದತ್ತಾಂಶ ಕದಿಯುವ ಪ್ರಯತ್ನ ನಡೆದಿತ್ತು. ಈ ಕುರಿತು ಇಂಡಿಯನ್ ಕಂಪ್ಯೂಟರ್ ಎಮರ್ಜೆನ್ಸಿ ರೆಸ್ಪಾನ್ಸ್ ಟೀಮ್ ಮಾಹಿತಿ (ಸಿಇಆರ್‌ಟಿ–ಐಎನ್) ನೀಡಿದ ತಕ್ಷಣ, ನಮ್ಮ ಎಂಜಿನಿಯರ್‌ಗಳು ಸೈಬರ್ ದಾಳಿಯನ್ನು ತಡೆಯುವಲ್ಲಿ ಯಶಸ್ವಿಯಾಗಿದ್ದಾರೆ’ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮುಖ್ಯಾಂಶಗಳು

- ಗ್ರಾಹಕರಿಗೆ ಸಂಬಂಧಿಸಿದ ಸೂಕ್ಷ್ಮವಾದ ಯಾವುದೇ ಮಾಹಿತಿ ಸೋರಿಕೆಯಾಗಿಲ್ಲ
- ಜಾಲತಾಣದಲ್ಲಿದ್ದ ದತ್ತಾಂಶ ಕೇಂದ್ರೀಕೃತ ಸರ್ವರ್‌ಗೆ ವರ್ಗ
- ಆನ್‌ಲೈನ್ ದತ್ತಾಂಶ ಸುರಕ್ಷತೆಗೆ ಕ್ರಮ: ಅಧ್ಯಕ್ಷ

‘ಪ್ರಾಥಮಿಕ ಹಂತದ ತನಿಖೆ ಪ್ರಕಾರ, ಜಾಲತಾಣದಲ್ಲಿದ್ದ ಗ್ರಾಹಕರಿಗೆ ಸಂಬಂಧಿಸಿದ ಸೂಕ್ಷ್ಮವಾದ ಯಾವುದೇ ಮಾಹಿತಿ ಸೋರಿಕೆಯಾಗಿಲ್ಲ. ಈ ಬಗ್ಗೆ ಹೆಚ್ಚಿನ ತನಿಖೆಗಾಗಿ ಸೈಬರ್ ಅಪರಾಧ ಠಾಣೆಯಲ್ಲಿ ದೂರು ದಾಖಲಿಸಿದ್ದೇವೆ’ ಎಂದು ಅವರು ವಿವರಿಸಿದ್ದಾರೆ.

‘ಬೆಂಗಳೂರು ಜಲಮಂಡಳಿಯ ಗ್ರಾಹಕರ ದತ್ತಾಂಶಗಳನ್ನು ರಾಜ್ಯ ಸರ್ಕಾರ ನಿರ್ವಹಿಸುವಂತಹ ರಾಜ್ಯ ದತ್ತಾಂಶ ಕೇಂದ್ರದಲ್ಲಿ ಸಂಗ್ರಹಿಸಲಾಗಿದೆ. ಇಂತಹ ಪ್ರಕರಣಗಳು ಮರುಕಳಿಸದಂತೆ ಎಚ್ಚರಿಕೆಯ ಕ್ರಮಗಳನ್ನು ಕೈಗೊಳ್ಳಲಾಗಿದೆ. ಈಗಾಗಲೇ ಈ ಜಾಲತಾಣದಲ್ಲಿದ್ದ ದತ್ತಾಂಶಗಳನ್ನು ಹೆಚ್ಚು ಸುರಕ್ಷಿತ ಕೇಂದ್ರೀಕೃತ ಸರ್ವರ್‌ಗಳಿಗೆ ವರ್ಗಾಯಿಸಲಾಗಿದೆ’ ಎಂದು ತಿಳಿಸಿದ್ದಾರೆ.

ಸಂಗೀತ...

ಶ್ರೀರಾಮಸೇವಾ ಮಂಡಳಿ ರಾಮನವಮಿ ಸೆಲೆಬ್ರೇಷನ್ ಟ್ರಸ್ಟ್ ಚಾಮರಾಜಪೇಟೆಯ ಕೋಟೆ ಪ್ರೌಢಶಾಲೆ ಆವರಣದಲ್ಲಿ ಹಮ್ಮಿಕೊಂಡಿರುವ 87ನೇ ಶ್ರೀ ರಾಮನವಮಿ ಸಂಗೀತೋತ್ಸವದಲ್ಲಿ ಎಸ್. ಸಾಕೇತರಾಮನ್ ಅವರು ಕರ್ನಾಟಕ ಶಾಸ್ತ್ರೀಯ ಸಂಗೀತವನ್ನು ಬುಧವಾರ ಪ್ರಸ್ತುತಪಡಿಸಿದರು ಪ್ರಜಾವಾಣಿ ಚಿತ್ರ

ಟಿಟಾಗಢದಿಂದ ಹೊರಟ ಮೂರು ಕೋಚ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಮ್ಮ ಮೆಟ್ರೊ ಹಳದಿ ಮಾರ್ಗಕ್ಕೆ ಮೂರನೇ ರೈಲು ಪಶ್ಚಿಮ ಬಂಗಾಳದ ಟಿಟಾಗಢ ರೈಲ್ ಸಿಸ್ಟಂ ಲಿಮಿಟೆಡ್ (ಟಿಆರ್‌ಎಸ್‌ಎಲ್) ಕಾರ್ಯಾಗಾರದಲ್ಲಿ ಸಿದ್ಧವಾಗಿದ್ದು, ಅದರ ಮೂರು ಕೋಚ್‌ಗಳನ್ನು ರವಾನಿಸುವ ಕಾರ್ಯಕ್ಕೆ ಬುಧವಾರ ಚಾಲನೆ ನೀಡಲಾಯಿತು.

ಒಂದು ರೈಲು ಆರು ಕೋಚ್‌ಗಳನ್ನು ಹೊಂದಿರುತ್ತದೆ. ಅದರಲ್ಲಿ ಮೂರು ಕೋಚ್‌ಗಳನ್ನು ಹೊತ್ತ ಲಾರಿಗಳು ಬೆಂಗಳೂರು ಕಡೆಗೆ ಬುಧವಾರ ಹೊರಟವು. ಉಳಿದ ಮೂರು ಕೋಚ್‌ಗಳನ್ನು ಮೇ 2ರಂದು ರವಾನಿಸಲಾಗುವುದು ಎಂದು ಕಾರ್ಯಾಗಾರದಿಂದ ಮಾಹಿತಿ ಬಂದಿರುವುದಾಗಿ ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಮೇ 15ರ ಒಳಗೆ ಎಲ್ಲ ಆರು ಕೋಚ್‌ಗಳು ಹೆಬ್ಬಗೋಡಿಯಲ್ಲಿರುವ ‘ನಮ್ಮ ಮೆಟ್ರೊ’ ಡಿಪೊ ತಲುಪಲಿವೆ ಎಂದು ಮಾಹಿತಿ ನೀಡಿದ್ದಾರೆ.

ಬೆಂಗಳೂರಿಗೆ ರವಾನಿಸಲು ಲಾರಿಗೆ ರೈಲು ಕೋಚ್ ಅನ್ನು ಲೋಡ್ ಮಾಡಿರುವುದು

ನಗರದಲ್ಲಿ ಇಂದು

ಸಮಾಜವಾದಿ ಧುರೀಣ ಶಾಂತವೇರಿ ಗೋಪಾಲಗೌಡ ಸ್ಮಾರಕ ಪ್ರಶಸ್ತಿ ಪ್ರದಾನ: ಪುರುಷೋತ್ತಮ ಬಿಳಿಮಲೆ, ಅಧ್ಯಕ್ಷತೆ: ಎಂ. ಪ್ರಕಾಶಮೂರ್ತಿ, ಪ್ರಶಸ್ತಿ ಸ್ವೀಕಾರ: ಬಸಮ್ಮ, ಮುಖ್ಯ ಅತಿಥಿ: ಎಸ್. ಶ್ರೀನಾಥ್, ಚನ್ನಮಲ್ಲಪ್ಪ ಪಾಟೀಲ, ಆಯೋಜನೆ: ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಮೈಕೊ ಕನ್ನಡ ಬಳಗ, ಸ್ಥಳ: ಅಕ್ಕಮಹಾದೇವಿ ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಳಿಗ್ಗೆ 10

ಶಾಂತವೇರಿ ಗೋಪಾಲಗೌಡ

ಅಂತರರಾಷ್ಟ್ರೀಯ ಕಾರ್ಮಿಕ ದಿನಾಚರಣೆ: ಮುಖ್ಯ ಅತಿಥಿಗಳು: ವಿ. ಗೋಪಾಲಗೌಡ, ಅಶೋಕ್, ಕೆ. ಷರೀಫಾ, ಆಯೋಜನೆ: ಕರ್ನಾಟಕ ವರ್ಕರ್ಸ್ ಯೂನಿಯನ್, ಸ್ಥಳ: ಪುರಭವನ (ಟೌನ್‌ಹಾಲ್), ಜೆ.ಸಿ. ರಸ್ತೆ, ಬೆಳಿಗ್ಗೆ 11

ಇಡಗೂರು ಸರ್ಕಾರಿ ಪ್ರೌಢ ಶಾಲೆ ಹಳೆ ವಿದ್ಯಾರ್ಥಿಗಳಿಂದ ಗುರುವಂದನೆ: ಸಾನ್ನಿಧ್ಯ: ನಿಶ್ಚಲಾನಂದನಾಥ ಸ್ವಾಮೀಜಿ, ಉದ್ಘಾಟನೆ: ಎಚ್‌.ಡಿ. ರಂಗನಾಥ್, ವೆಂಕಟೇಶ್ ರಾಮಯ್ಯ, ಮುಖ್ಯ ಅತಿಥಿಗಳು: ಕೆ.ವಿ. ಪ್ರಭಾಕರ್, ಲಕ್ಷ್ಮೀನಾರಾಯಣ, ವೈ.ಡಿ. ರವಿಶಂಕರ್, ಅನು ಪ್ರಭಾಕರ್, ಆಯೋಜನೆ: ಪುಣ್ಯ ಫೌಂಡೇಶನ್ ಟ್ರಸ್ಟ್, ಸ್ಥಳ: ಭಾರತೀಯ ವಿದ್ಯಾ ಭವನ, ರೇಸ್ ಕೋರ್ಸ್ ರಸ್ತೆ, ಬೆಳಿಗ್ಗೆ 10.30

ನಿಶ್ಚಲಾನಂದನಾಥ ಸ್ವಾಮೀಜಿ

ಪಹಲ್ಗಾಮ್ ಹತ್ಯಾಕಾಂಡ ಖಂಡಿಸಿ ಸಾಹಿತಿ ಕಲಾವಿದರ ಸಮಾವೇಶ: ಕೆ. ಮರುಳಸಿದ್ದಪ್ಪ, ಎಸ್‌.ಜಿ. ಸಿದ್ಧರಾಮಯ್ಯ, ಶ್ರೀನಿವಾಸ ಜಿ. ಕಪ್ಪಣ್ಣ, ದತ್ತಣ್ಣ, ಎಲ್‌.ಎನ್. ಮುಕುಂದರಾಜ್, ಕೆ.ವಿ. ನಾಗರಾಜಮೂರ್ತಿ, ವಿಜಯಾ, ‘ಮುಖ್ಯಮಂತ್ರಿ’ ಚಂದ್ರು, ಟಿ.ಎನ್. ಸೀತಾರಾಮ್, ಡಾ. ವಸುಂಧರಾ ಭೂಪತಿ, ವೈ.ಕೆ. ಮುದ್ದುಕೃಷ್ಣ, ರಿಚರ್ಡ್ ಲೂಯಿಸ್, ರಂಗಶ್ರೀ ರಂಗಸ್ವಾಮಿ, ಕೋಲಾರ ದಯಾನಂದ, ಆರ್‌.ಜಿ.ಹಳ್ಳಿ ನಾಗರಾಜ್, ಬಿ.ವಿ. ರಾಜಾರಾಮ್, ಜಗದೀಶ್ ಜಾಲ, ಜಿ.ಎನ್. ಮೋಹನ್, ಸಿ.ಕೆ. ಗುಂಡಣ್ಣ, ಕೆ.ಎಸ್. ನಾಗರಾಜ್, ಅಲಿಬಾಬಾ, ಸಂಚಯ ಗಣೇಶ್, ಕೆ.ಎಸ್‌.ಡಿ.ಎಲ್. ಚಂದ್ರು, ಅಂತರಂಗ ಶ್ಯಾಮ್, ಆಯೋಜನೆ: ರಂಗಭೂಮಿ ಕ್ರಿಯಾ ಸಮಿತಿ, ಸ್ಥಳ: ಪುರಭವನ (ಟೌನ್‌ಹಾಲ್) ಮುಂಭಾಗ, ಜೆ.ಸಿ. ರಸ್ತೆ, ಸಂಜೆ 5.30

ಕೆ.ಮರುಳಸಿದ್ದಪ್ಪ

ಪೌರ-ಕಾರ್ಮಿಕರ ದಿನಾಚರಣೆ ಹಾಗೂ ಪೌರ ಕಾರ್ಮಿಕರಿಗೆ ನೇಮಕಾತಿ ಆದೇಶ ಪತ್ರ ವಿತರಣೆ: ಉದ್ಘಾಟನೆ: ಮಲ್ಲಿಕಾರ್ಜುನ ಖರ್ಗೆ, ನೇಮಕಾತಿ ಆದೇಶ ಪತ್ರ ವಿತರಣೆ: ಸಿದ್ದರಾಮಯ್ಯ, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ಆಯೋಜನೆ: ಬಿಬಿಎಂಪಿ, ಸ್ಥಳ: ತ್ರಿಪುರವಾಸಿನಿ, ಅರಮನೆ ಮೈದಾನ, ಬೆಳಿಗ್ಗೆ 11

ಯುಪಿಎಸ್‌ಸಿ–ಸಿಎಸ್‌ಸಿ ಸಾಧಕರಿಗೆ ಗೌರವಾಭಿನಂದನೆ ಹಾಗೂ ವೆಬ್‌ಸೈಟ್ ಲೋಕಾರ್ಪಣೆ: ಮುಖ್ಯ ಅತಿಥಿಗಳು: ಡಿ.ಕೆ. ಶಿವಕುಮಾರ್, ಎಚ್‌.ಸಿ. ಮಹದೇವಪ್ಪ, ಉಪಸ್ಥಿತಿ: ಸಿ.ಎಸ್. ಕೇದಾರ್, ಜಿ.ಎನ್. ಶ್ರೀಕಂಠಯ್ಯ, ಆಯೋಜನೆ: ಇಂಡಿಯಾ 4 ಐಎಎಸ್, ಸ್ಥಳ: ಪುರಭವನ, ಜೆ.ಸಿ. ರಸ್ತೆ, ಸಂಜೆ 4.30

ಶಂಕರ ಜಯಂತಿ ಮತ್ತು 53ನೇ ವರ್ಷದ ಸುವರ್ಣ ಮಹೋತ್ಸವ ಸಂಗೀತೋತ್ಸವ ಉದ್ಘಾಟನಾ ಸಮಾರಂಭ: ಮುಖ್ಯ ಅತಿಥಿಗಳು: ಎನ್. ಸತ್ಯಪ್ರಕಾಶ್, ಎನ್. ಅಮರನಾಥ್, ಅಧ್ಯಕ್ಷತೆ: ಎಂ. ಅನಂತ್, ಸಂಗೀತೋತ್ಸವ ಅಧ್ಯಕ್ಷತೆ ಹಾಗೂ ಗಾಯನ ಶ್ರೀಕಾಂತಂ ನಾಗೇಂದ್ರ ಶಾಸ್ತ್ರಿ, ಪಿಟೀಲು: ಸಿಂಧು ಸುಚೇತನ್, ಮೃದಂಗ: ಸಿ. ಚೆಲುವರಾಜ್, ಘಟ: ಎಸ್‌.ಎನ್. ನಾರಾಯಣಮೂರ್ತಿ, ಆಯೋಜನೆ: ಶ್ರೀ ತ್ಯಾಗರಾಜ ಗಾನಸಭಾ ಟ್ರಸ್ಟ್, ಸ್ಥಳ: ಬಾಲಮೋಹನ ವಿದ್ಯಾಮಂದಿರ, ರಾಜಾಜಿನಗರ, ಸಂಜೆ 5

87ನೇ ಶ್ರೀ ರಾಮನವಮಿ ಸಂಗೀತೋತ್ಸವ: ರಾಜಂ ವೈದ್ಯನಾಥನ್ ಪ್ರತಿಭಾಕಾಂಕ್ಷಿ ಪ್ರಶಸ್ತಿ ಪ್ರದಾನ ಸಮಾರಂಭ, ಸಂಗೀತ ಕಛೇರಿ: ಮೈಸೂರು ನಾಗರಾಜ್, ಮೈಸೂರು ಮಂಜುನಾಥ್, ಸಾಯ್ ಗಿರಿಧರ್, ಇಶಾನ್ ಘೋಶ್, ಆಯೋಜನೆ: ಶ್ರೀರಾಮಸೇವಾ ಮಂಡಳಿ ರಾಮನವಮಿ ಸೆಲೆಬ್ರೇಷನ್ ಟ್ರಸ್ಟ್, ಸ್ಥಳ: ಕೋಟೆ ಪ್ರೌಢಶಾಲೆ ಆವರಣ, ಚಾಮರಾಜಪೇಟೆ, ಸಂಜೆ 5

ಸ್ವರಶ್ರೀ ಸಂಭ್ರಮ: ನಾಲ್ಕನೇ ವಾರ್ಷಿಕೋತ್ಸವ ಹಾಗೂ ಪ್ರಶಸ್ತಿ ಪ್ರದಾನ: ಸಾನ್ನಿಧ್ಯ: ದಿನೇಶ್ ಗುರೂಜಿ, ಅತಿಥಿಗಳು: ಶ್ರೀಲಕ್ಷ್ಮಿ ಬಿ. ರಾವ್, ಲೀಲಾವತಿ ಕೆ. ಕುಲಕರ್ಣಿ, ಮುಕುಂದ್ ಗಂಗೂರು, ಸ್ವರಶ್ರೀ ಪ್ರಶಸ್ತಿ ಪುರಸ್ಕೃತರು: ಸ್ರೋತಸ್ವಿನಿ ಡಬೀರ್, ಮೇಧಾ ದತ್ತಾತ್ರೇಯ, ಅರವಿಂದ ದೇಶಪಾಂಡೆ, ಸಂಹಿತ ರಾಜ್, ಹರೀಶ್ ಕರಣಮ್, ವೈಭವಿ ವೆಂಕಟೇಶ್ ಕುಲಕರ್ಣಿ, ಅಖಿಲಾ ಕುರಂದವಾಡ, ಆಯೋಜನೆ: ಸ್ವರಶ್ರೀ ಸಂಗೀತ ಶಾಲೆ, ಸ್ಥಳ: ಕುವೆಂಪು ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಾಂಸ್ಕೃತಿಕ ಕಾರ್ಯಕ್ರಮ ಮಧ್ಯಾಹ್ನ 3 ಹಾಗೂ ವೇದಿಕೆ ಕಾರ್ಯಕ್ರಮ ಸಂಜೆ 5.30

ದಾಸರ ಪದಗಳ ಗಾಯನ: ಮೈತ್ರಿ ಧನುಷ್, ಪಿಟೀಲು: ಪರಿಣಿತಾ, ಮೃದಂಗ: ಮುರಳಿ ನಾರಾಯಣರಾವ್, ಆಯೋಜನೆ ಹಾಗೂ ಸ್ಥಳ: ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, 11ನೇ ಮುಖ್ಯರಸ್ತೆ, 45ನೇ ಅಡ್ಡರಸ್ತೆ, ಜಯನಗರ 5ನೇ ಬಡಾವಣೆ, ಸಂಜೆ 5.30

ಬಸವ ಜಯಂತಿ: ಆಶೀರ್ವಚನ ಮತ್ತು ಪ್ರವಚನ, ಸಾನ್ನಿಧ್ಯ: ದಿಂಗಾಲೇಶ್ವರ ಸ್ವಾಮೀಜಿ, ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ, ಮಲಯ ಶಾಂತಮುನಿ ದೇಶೀಕೇಂದ್ರ ಶಿವಾಚಾರ್ಯ ಸ್ವಾಮೀಜಿ, ಚನ್ನಬಸವ ಶಿವಯೋಗಿ, ಶಿವಮೂರ್ತಿ ಮುರುಘಾರಾಜೇಂದ್ರ ಸ್ವಾಮೀಜಿ, ಮುಖ್ಯ ಅತಿಥಿಗಳು: ಅರವಿಂದ ಜತ್ತಿ, ಕೈಲಾಶ್‌ನಾಥ್ ಪಾಟೀಲ, ಮಹಿಮಾ ಪಟೇಲ್, ಕಿರಣ್ ನಿಜಲಿಂಗಪ್ಪ, ಭರತ್ ಬೊಮ್ಮಾಯಿ, ಮಹೇಂದ್ರ ಕಂಠಿ, ಶಂಕರ್ ಬಿದರಿ, ಆಯೋಜನೆ: ಅಖಂಡ ವೀರಶೈವ ಲಿಂಗಾಯತ ವೇದಿಕೆ, ಸ್ಥಳ: ಶ್ರೀಮತಿ ಚಿಕ್ಕಮ್ಮ ರಾಮಯ್ಯ ಕಲ್ಯಾಣ ಮಂಟಪ, 8ನೇ ಕ್ರಾಸ್, ಉಲ್ಲಾಳ ಮುಖ್ಯರಸ್ತೆ, ಜ್ಞಾನಜ್ಯೋತಿ ನಗರ, ಸಂಜೆ 6 (ಬೆಳಿಗ್ಗೆ 9ರಿಂದ ಮಧ್ಯಾಹ್ನ 3ರವರೆಗೆ ಉಚಿತ ಆರೋಗ್ಯ ಶಿಬಿರ)

ಪು.ತಿ.ನರಸಿಂಹಾಚಾರ್ ವಿರಚಿತ ‘ಶ್ರೀಹರಿ ಚರಿತೆ’ ವಾಚನ: ಮನು, ವ್ಯಾಖ್ಯಾನ: ವಿಜಯಲಕ್ಷ್ಮೀ ಮುರಳೀಕೃಷ್ಣ, ಮುಖ್ಯ ಅತಿಥಿ: ಎಂ.ಸಿ. ನರೇಂದ್ರ, ಅಧ್ಯಕ್ಷತೆ: ಜಗದೀಶ ರೆಡ್ಡಿ, ಆಯೋಜನೆ ಹಾಗೂ ಸ್ಥಳ: ಕನ್ನಡ ಯುವಜನ ಸಂಘ, ಎಚ್‌.ಸಿದ್ದಯ್ಯ ರಸ್ತೆ, ಹೊಂಬೇಗೌಡ ನಗರ, ಸಂಜೆ 6.30

‘ಹರಿದಾಸ ವೈಭವ’ ಗಾಯನ: ಜಿ. ಶ್ರೀರಾಗ ಮತ್ತು ಸಂಗಡಿಗರು, ಆಯೋಜನೆ ಹಾಗೂ ಸ್ಥಳ: ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, ಪವಮಾನಪುರ, ಬನಶಂಕರಿ 6ನೇ ಹಂತ, ಸಂಜೆ 7

ಸಾಹಿತ್ಯ, ಸಾಂಸ್ಕೃತಿಕ, ಶೈಕ್ಷಣಿಕ ಸೇರಿ ವಿವಿಧ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

ಗುರುವಾರ, ಮೇ 1, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 120 | ಪುಟ 14

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕೋಟ್ಯಧಿಪತಿ ಸಂಸದೆಯರು

1 ಜಯಾ ಬಚ್ಚನ್, ರಾಜ್ಯಸಭೆ ಸಂಸದೆ (ಸಮಾಜವಾದಿ ಪಕ್ಷ) — ₹1,578 ಕೋಟಿ

5 ಹೇಮಾಮಾಲಿನಿ, ಮಥುರಾ ಸಂಸದೆ (ಬಿಜೆಪಿ) — ₹291 ಕೋಟಿ

7 ಡಾ. ಪ್ರಭಾ ಮಲ್ಲಿಕಾರ್ಜುನ, ದಾವಣಗೆರೆ ಸಂಸದೆ (ಕಾಂಗ್ರೆಸ್) — ₹241 ಕೋಟಿ

ದೇಶದಲ್ಲಿನ ಒಟ್ಟು 513 ಮಹಿಳಾ ಜನಪ್ರತಿನಿಧಿಗಳ ಪೈಕಿ 17 ಜನ ಕೋಟ್ಯಧಿಪತಿಗಳಾಗಿದ್ದಾರೆ ಎಂದು ಎಡಿಆರ್‌ನ 2025ರ ವರದಿ ತಿಳಿಸಿದೆ

ಆಳ-ಅಗಲ
ಗುಂಪು ಹಲ್ಲೆ ಮತ್ತೆ ತಲೆ ಎತ್ತಿದ ಪಿಡುಗು

ಕಾರ್ಮಿಕರ ದಿನದ ಶುಭಾಶಯಗಳು

ಅಕ್ಷಯ ತೃತೀಯ: ಬಂಗಾರ ಖರೀದಿ ಜೋರು 10

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
80,242	24,334	₹1.02 ಲಕ್ಷ (ಬೆಂಗಳೂರು)	₹1.01 ಲಕ್ಷ (ಬೆಂಗಳೂರು)	84.54

ಜಾತಿ ಗಣತಿಗೆ ಕೇಂದ್ರದ ತೀರ್ಮಾನ

ಎನ್‌ಡಿಎ ಸರ್ಕಾರದ ಮಹತ್ವದ ಕ್ರಮ • ರಾಜಕೀಯ ಲಾಭಕ್ಕಾಗಿ ಬಿಜೆಪಿ–ಕಾಂಗ್ರೆಸ್ ನಡುವೆ 'ಸಮರ'

ಪ್ರಜಾವಾಣಿ ವಾರ್ತೆ

ನವದೆಹಲಿ: ಬಹುದೊಡ್ಡ ರಾಜಕೀಯ ಪರಿಣಾಮ ಉಂಟು ಮಾಡುವಂತಹ ಕ್ರಮಕ್ಕೆ ಮುಂದಾಗಿರುವ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ಮುಂದಿನ ದಶಕದ ಜನಗಣತಿ ಯೊಂದಿಗೆ ಜಾತಿ ಗಣತಿ ನಡೆಸಲು ತೀರ್ಮಾನಿಸಿದೆ.

ಸ್ವಾತಂತ್ರ್ಯದ ನಂತರ, ದೇಶದಾದ್ಯಂತ ಜಾತಿ ಜನಗಣತಿ ನಡೆಯುತ್ತಿರುವುದು ಇದೇ ಮೊದಲು. 1931ರ ಜನಗಣತಿಯ ನಂತರ ಜಾತಿ ಗಣತಿಯನ್ನು ಕೈಬಿಡಲಾಗಿತ್ತು. ಜಾತಿ ಗಣತಿಯ ರಾಜಕೀಯ ಲಾಭ ಪಡೆಯಲು ಬಿಜೆಪಿ ಹಾಗೂ ಕಾಂಗ್ರೆಸ್ ನಡುವೆ ಬುಧವಾರವೇ 'ಸಮರ' ಆರಂಭವಾಗಿದೆ.

ಬುಧವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಜಾತಿ ಜನಗಣತಿಯ ತೀರ್ಮಾನ ಕೈಗೊಳ್ಳಲಾಯಿತು. ಆದರೆ, ಈಗಾಗಲೇ ವಿಳಂಬವಾಗಿರುವ ಜನಗಣತಿಯ ವೇಳಾಪಟ್ಟಿಯನ್ನು ಸರ್ಕಾರ ಪ್ರಕಟಿಸಿಲ್ಲ. ಪಹಲ್ಗಾಮ್‌ನಲ್ಲಿ ಉಗ್ರರ ದಾಳಿಯಿಂದ 26 ಮಂದಿ ಮೃತಪಟ್ಟ ಒಂದು ವಾರದ ಬಳಿಕ ಹಾಗೂ ಬಿಹಾರದ ಚುನಾವಣೆಗೆ ಕೆಲವೇ ತಿಂಗಳುಗಳು ಉಳಿದಿರುವಾಗ ಕೇಂದ್ರ ಸರ್ಕಾರ ಜಾತಿ ಜನಗಣತಿಯ ದಾಳ ಉರುಳಿಸಿದೆ.

6ನೇ ಪುಟ ನೋಡಿ

ಜನಗಣತಿಗೆ ಇನ್ನೂ ನಿಗದಿಯಾಗದ ಮುಹೂರ್ತ

ಕೇಂದ್ರ ಸರ್ಕಾರದ ಈ ಸಾಲಿನ ಬಜೆಟ್‌ನಲ್ಲಿ ಜನಗಣತಿ ಉದ್ದೇಶಕ್ಕೆ ಕೇವಲ ₹574.80 ಕೋಟಿ ಹಣ ಹಂಚಿಕೆ ಮಾಡಲಾಗಿದೆ. ಜನಗಣತಿ ಪ್ರಕ್ರಿಯೆ ವಿಳಂಬಕ್ಕೆ ವ್ಯಾಪಕ ಟೀಕೆ ವ್ಯಕ್ತವಾಗಿದೆ. ಆದರೆ, ಪ್ರಧಾನಿ ನರೇಂದ್ರ ಮೋದಿ ಅವರು ತಮ್ಮ ಮೂರನೇ ಅವಧಿಯಲ್ಲೂ ಜನಗಣತಿಯ ಮೂಲಕ ಮಹತ್ವದ ದತ್ತಾಂಶ ಸಂಗ್ರಹಕ್ಕೆ ಇನ್ನೂ ಹಸಿರು ನಿಶಾನೆ ತೋರಿಲ್ಲ.

ಜನಗಣತಿಯನ್ನು ಹತ್ತು ವರ್ಷಗಳಿಗೊಮ್ಮೆ ನಡೆಸಲಾಗುತ್ತದೆ. 2019ರ ಡಿಸೆಂಬರ್ 24ರಂದು ನಡೆದ ಕೇಂದ್ರ ಸಚಿವ ಸಂಪುಟ ಸಭೆಯು 2021ರಲ್ಲಿ₹8,754.23 ಕೋಟಿ ವೆಚ್ಚದಲ್ಲಿ ಜನಗಣತಿ ಮತ್ತು ₹3,941.35 ಕೋಟಿ ವೆಚ್ಚದಲ್ಲಿ ರಾಷ್ಟ್ರೀಯ ಜನಸಂಖ್ಯೆ ನೋಂದಣಿಯ ಪರಿಷ್ಕರಣೆ ನಡೆಸಲು ಒಪ್ಪಿಗೆ ಸೂಚಿಸಿತ್ತು.

ದೇಶದಾದ್ಯಂತ 2020ರ ಏಪ್ರಿಲ್ 1ರಿಂದ ಸೆಪ್ಟೆಂಬರ್ 30ರ ನಡುವೆ ಮನೆ ಮನೆಗೆ ತೆರಳಿ ಜನಗಣತಿ ಮತ್ತು ಎನ್‌ಪಿಆರ್ ಪರಿಷ್ಕರಿಸುವ ಕಾರ್ಯ ಕೈಗೆತ್ತಿಕೊಳ್ಳಲು ತೀರ್ಮಾನಿಸಲಾಗಿತ್ತು. ಆದರೆ, ಕೋವಿಡ್–19 ಸಾಂಕ್ರಾಮಿಕದ ಕಾರಣದಿಂದ ಅದನ್ನು ಮುಂದೂಡಲಾಗಿತ್ತು.

6ನೇ ಪುಟ ನೋಡಿ

ಸಂಪೂರ್ಣ ಪಾರದರ್ಶಕತೆಯೊಂದಿಗೆ ಜಾತಿ ಜನಗಣತಿ ಪ್ರಾರಂಭಿಸಲು ಕೇಂದ್ರ ಸರ್ಕಾರವು ಹಣ ಮಂಜೂರು ಮಾಡಬೇಕು. ಜಾತಿ ಜನಗಣತಿ ಬಹು ಅಗತ್ಯ. ಸಾಮಾಜಿಕ ನ್ಯಾಯದ ಈ ನೀತಿಯ ಅನುಷ್ಠಾನವನ್ನು ಪ್ರಧಾನಿ ತಪ್ಪಿಸುತ್ತಿದ್ದಾರೆ

ಮಲ್ಲಿಕಾರ್ಜುನ ಖರ್ಗೆ, ಎಐಸಿಸಿ ಅಧ್ಯಕ್ಷ

ನಮಗೆ ಜನರ ಗಣತಿ ಬೇಕು: ರಾಹುಲ್

ಜನಗಣತಿಯೊಂದಿಗೆ ಜಾತಿ ಜನಗಣತಿ ನಡೆಸುವ ಕೇಂದ್ರದ 'ಹಠಾತ್' ನಿರ್ಧಾರವನ್ನು ಸ್ವಾಗತಿಸಿದ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, 'ನಮಗೆ ಜನರ ಜನಗಣತಿ ಬೇಕು, ಅಧಿಕಾರಿಗಳ ಜನಗಣತಿಯಲ್ಲ' ಎಂದರು.

ಬುಧವಾರ ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಈ ಪ್ರಕ್ರಿಯೆಯನ್ನು ಕಾಲಮಿತಿಯಲ್ಲಿ ಪೂರ್ಣಗೊಳಿಸಬೇಕು. ಈ ಪ್ರಕ್ರಿಯೆಯನ್ನು ಯಾವಾಗ ಮಾಡಲಾಗುತ್ತದೆ ಎಂಬುದನ್ನು ಸರ್ಕಾರ ತಿಳಿಸಬೇಕು' ಎಂದು ಒತ್ತಾಯಿಸಿದರು. ಜನಗಣತಿ ನಡೆಸಲು ಸರ್ಕಾರ ಅಗತ್ಯ ಅನುದಾನ ಮಂಜೂರು ಮಾಡಬೇಕು ಎಂದು ಅವರು ಆಗ್ರಹಿಸಿದರು.

6ನೇ ಪುಟ ನೋಡಿ

ಬಸವ ಭಕ್ತಿ.. ಬಸವ ಜಯಂತಿ ಅಂಗವಾಗಿ ಬಸವ ಜಯಂತಿ ಉತ್ಸವ ಸಮಿತಿಯಿಂದ ಕಲಬುರಗಿಯ ನಗರೇಶ್ವರ ದೇವಸ್ಥಾನದಿಂದ ಬುಧವಾರ ನಡೆದ ಅದ್ದೂರಿ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದ ಜನಸ್ತೋಮ
ಚಿತ್ರ: ತಾಜುದ್ದೀನ್ ಆಜಾದ್

'ಪಾಕ್ ಪರ ಘೋಷಣೆ ದೇಶದ್ರೋಹ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪಾಕಿಸ್ತಾನದ ಪರ ಘೋಷಣೆ ಕೂಗುವುದು ದೇಶದ್ರೋಹ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಪಾಕಿಸ್ತಾನದ ಪರ ಘೋಷಣೆ ಕೂಗಿದ ಆರೋಪದ ಮೇಲೆ ವ್ಯಕ್ತಿಯೊಬ್ಬನನ್ನು ಗುಂಪು ಹತ್ಯೆ ಮಾಡಿದ ಪ್ರಕರಣದಲ್ಲಿ 15 ಮಂದಿ ವಿರುದ್ಧ ಪ್ರಕರಣ ದಾಖಲಾಗಿದ್ದು ತನಿಖೆ ನಡೆಯುತ್ತಿದೆ. ವರದಿ ಬಂದ ನಂತರ ಕ್ರಮ ಕೈಗೊಳ್ಳಲಾಗುವುದು' ಎಂದರು.

ಸಿದ್ದರಾಮಯ್ಯ

'ಪಾಕಿಸ್ತಾನದ ಪರವಾಗಿ ಯಾರೇ ಮಾತನಾಡಿದರೂ ತಪ್ಪು' ಎಂದೂ ಹೇಳಿದರು.

ಬಾಗಲಕೋಟೆಯಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಅನಿವಾರ್ಯವಾದರೆ ಪಾಕಿಸ್ತಾನದ ಮೇಲೆ ಯುದ್ಧ ಮಾಡಬೇಕು. ಅದಕ್ಕೆ ನಮ್ಮ ವಿರೋಧವಿಲ್ಲ. ಆದರೆ ಭಯೋತ್ಪಾದನೆಯ ಮೂಲೋತ್ಪಾಟನೆಯಾಗಬೇಕು. ಎಲ್ಲರಿಗೂ ಭದ್ರತೆಯನ್ನು ಕೇಂದ್ರ ಸರ್ಕಾರ ಒದಗಿಸಬೇಕು' ಎಂದರು.

'ಹಿಂದೆ ಇಂದಿರಾ ಗಾಂಧಿಯವರು 1971ರಲ್ಲಿ ಯುದ್ಧ ಮಾಡಿ ಪಾಕಿಸ್ತಾನವನ್ನು ಬಗ್ಗು ಬಡಿದಿದ್ದರು. ಪಾಕಿಸ್ತಾನದ ಸುಮಾರು 80 ಸಾವಿರ ಸೈನಿಕರು ಶರಣಾಗತರಾಗಿದ್ದರು' ಎಂದು ಅವರು ಹೇಳಿದರು.

ಘೋಷಣೆ ಬೆಂಬಲಿಸುವುದಿಲ್ಲ: ಲಾಡ್

ಮೈಸೂರು: 'ಭಾರತದಲ್ಲಿ ಇದ್ದುಕೊಂಡು ಪಾಕಿಸ್ತಾನ್ ಜಿಂದಾಬಾದ್ ಎಂದು ಘೋಷಣೆ ಕೂಗುವವರನ್ನು ನಾನು ಬೆಂಬಲಿಸುವುದಿಲ್ಲ. ನನ್ನ ಮನೆಯವರೇ ಹಾಗೆ ಕೂಗಿದ್ದರೂ ಅವರ ಮೇಲೆ ಕ್ರಮವಾಗಬೇಕು' ಎಂದು ಕಾರ್ಮಿಕ ಸಚಿವ ಸಂತೋಷ್ ಲಾಡ್ ಹೇಳಿದರು.

ಇಲ್ಲಿನ ವಿಮಾನ ನಿಲ್ದಾಣದಲ್ಲಿ ಬುಧವಾರ ಪತ್ರಕರ್ತ ರೊಂದಿಗೆ ಮಾತನಾಡಿ, 'ಅವರು ಯಾಕೆ ಕೂಗುತ್ತಿದ್ದಾರೆ ಎಂಬುದಕ್ಕೆ ನೂರಾರು ಕಾರಣಗಳಿವೆ. ಅವರ ಮೇಲೆ ಆಗಿರುವ ಅತ್ಯಾಚಾರ-ಗಳೇನು ಕಡಿಮೆಯೇ? ಅದನ್ನೂ ನಾವು ನೋಡಬೇಕು ತಾನೇ? ಕರ್ನಾಟಕದಲ್ಲಿ ಮಾತ್ರವಲ್ಲ, ದೇಶದ ನಾನಾ ಭಾಗಗಳಲ್ಲೂ ಆ ರೀತಿಯ ಘಟನೆಗಳು ನಡೆದಿವೆ. ಯಾಕೆ ನಡೆಯುತ್ತಿದೆ ಎಂಬುದಕ್ಕೆ ನಾನು ಹೊಣೆಗಾರ ಅಲ್ಲ' ಎಂದು ಹೇಳಿದರು.



'ಇವತ್ತಿನ ಪರಿಸ್ಥಿತಿಯಲ್ಲಿ ವಿಷಯಾಂತರಗಳು ಆಗಬಾರದು' ಎಂದರು.

'ಪಾಕಿಸ್ತಾನದ ಒಳಗೆ ನುಗ್ಗಿ ಹೊಡೆಯಿರಿ. ಇದು ನನ್ನ ವೈಯಕ್ತಿಕ ಅಭಿಪ್ರಾಯ. 1971ರಲ್ಲಿ ಆಗಿನ ಪ್ರಧಾನಿ ಇಂದಿರಾ ಗಾಂಧಿಯವರು ಪಾಕಿಸ್ತಾನದವರ ಮಂಡಿಯೂರಿಸಿದ್ದರು. ಈಗ ಲಕ್ಷಾಂತರ ಜನರ ಮಂಡಿಯೂರಿಸಬೇಕಿದೆ. ಈ ನಿಟ್ಟಿನಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರ ತೀರ್ಮಾನಗಳಿಗೆ ನಮ್ಮ ಬೆಂಬಲವಿದೆ. ಪಾಕಿಸ್ತಾನದವರ ಮನೆಗೆ ನುಗ್ಗಿ ಹೊಡೆಯಬೇಕು. ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಸಿಕ್ಕಾಗಲೂ ಇದನ್ನೇ ಹೇಳಿದ್ದೇನೆ. ಈ ವಿಚಾರದಲ್ಲಿ ಅಭಿಪ್ರಾಯ ಭಿನ್ನತೆ ಇಲ್ಲ' ಎಂದು ಪ್ರತಿಕ್ರಿಯಿಸಿದರು.

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಅಪ್ರಚೋದಿತ ದಾಳಿ: ಪಾಕ್‌ಗೆ ಭಾರತ ಎಚ್ಚರಿಕೆ

ನವದೆಹಲಿ (ಪಿಟಿಐ): ಭಾರತ ಮತ್ತು ಪಾಕಿಸ್ತಾನ ಸೇನೆಗಳ ಕಾರ್ಯಾಚರಣೆ ಮಹಾನಿರ್ದೇಶಕರು ದೂರವಾಣಿ ಮೂಲಕ ಮಾತುಕತೆ ನಡೆಸಿದ್ದಾರೆ.

ಜಮ್ಮು ಮತ್ತು ಕಾಶ್ಮೀರದಲ್ಲಿ ನಿಯಂತ್ರಣ ರೇಖೆಯಲ್ಲಿ ನಡೆಸುತ್ತಿರುವ ಅಪ್ರಚೋದಿತ ಗುಂಡಿನ ದಾಳಿ ವಿಚಾರವಾಗಿ ಭಾರತದ ಮಿಲಿಟರಿ ಕಾರ್ಯಾಚರಣೆ ಮಹಾನಿರ್ದೇಶಕರು ಈ ಸಂದರ್ಭದಲ್ಲಿ ಪಾಕಿಸ್ತಾನಕ್ಕೆ ಎಚ್ಚರಿಕೆ ನೀಡಿದ್ದಾರೆ.

ಪಾಕಿಸ್ತಾನದ ಸೇನೆಯು ನಿಯಂತ್ರಣ ರೇಖೆಯ ಉದ್ದಕ್ಕೂ ಶುಕ್ರವಾರ ರಾತ್ರಿಯಿಂದ ಗುಂಡಿನ ದಾಳಿ ನಡೆಸುತ್ತಿದೆ, ಇದು ಕದನ ವಿರಾಮ ಒಪ್ಪಂದದ ಉಲ್ಲಂಘನೆ ಎಂದು ಮೂಲಗಳು ಹೇಳಿವೆ. ಪಾಕಿಸ್ತಾನದ ದಾಳಿಗೆ ಭಾರತದ ಯೋಧರು ತಕ್ಕ ಪ್ರತ್ಯುತ್ತರ ನೀಡುತ್ತಿದ್ದಾರೆ.

ಕಾರ್ಯಾಚರಣೆ ಮಹಾನಿರ್ದೇಶಕರ ನಡುವೆ ಮಂಗಳವಾರ ಮಾತುಕತೆ ನಡೆದಿದೆ. ಕಾಶ್ಮೀರದ ಪಹಲ್ಗಾಮ್‌ನಲ್ಲಿ ನಡೆದ ಭಯೋತ್ಪಾದಕ ದಾಳಿಗೆ ಪ್ರತ್ಯುತ್ತರ ಹೇಗಿರಬೇಕು ಎಂಬ ಬಗ್ಗೆ ಕೇಂದ್ರ ಸರ್ಕಾರವು ಸಭೆಗಳನ್ನು ನಡೆಸುತ್ತಿರುವ ಹೊತ್ತಿನಲ್ಲೇ ಈ ಮಾತುಕತೆ ನಡೆದಿದೆ.

7ನೇ ಪುಟ ನೋಡಿ

ಭದ್ರತಾ ಸಲಹೆ ಮಂಡಳಿ ಪುನರ್‌ರಚನೆ

ಸರ್ಕಾರವು ರಾಷ್ಟ್ರೀಯ ಭದ್ರತಾ ಸಲಹೆ ಮಂಡಳಿಯನ್ನು (ಎನ್‌ಎಸ್‌ಎಬಿ) ಪುನರ್‌ರಚಿಸಿದೆ. ಪಹಲ್ಗಾಮ್ ದಾಳಿಗೆ ಭಾರತ ಪ್ರತೀಕಾರ ತೀರಿಸುವ ಊಹಾಪೋಹಗಳು ಎದ್ದಿರುವ ಸಂದರ್ಭದಲ್ಲೇ ಈ ಬೆಳವಣಿಗೆ ನಡೆದಿದೆ.

ದೇಶದ ಗುಪ್ತಚರ ಸಂಸ್ಥೆ 'ರಿಸರ್ಚ್ ಆ್ಯಂಡ್ ಅನಲಿಸಿಸ್ ವಿಂಗ್'ನ (ರಾ) ಮಾಜಿ ಮುಖ್ಯಸ್ಥ ಅಲೋಕ್ ಜೋಶಿ ಅವರನ್ನು ಎನ್‌ಎಸ್‌ಎಬಿ ಮುಖ್ಯಸ್ಥರನ್ನಾಗಿ ನೇಮಕ ಮಾಡಲಾಗಿದೆ ಎಂದು ಮೂಲಗಳು ತಿಳಿಸಿವೆ.

ನೌಕಾಪಡೆಯ ಪಶ್ಚಿಮ ಕಮಾಂಡ್‌ನ ಮಾಜಿ ಏರ್ ಕಮಾಂಡರ್ ಏರ್ ಮಾರ್ಷಲ್ ಪಿ.ಎಂ. ಸಿನ್ಹಾ, ಮಾಜಿ ಸದರ್ನ್ ಆರ್ಮಿ ಕಮಾಂಡರ್ ಲೆಫ್ಟಿನೆಂಟ್ ಜನರಲ್ ಎ.ಕೆ.ಸಿಂಗ್ ಮತ್ತು ನೌಕಾಪಡೆಯ ನಿವೃತ್ತ ರಿಯರ್ ಅಡ್ಮಿರಲ್ ಮಾಂಟಿ ಖನ್ನಾ ಅವರನ್ನು ನೂತನ ಸದಸ್ಯರನ್ನಾಗಿ ನೇಮಕ ಮಾಡಲಾಗಿದೆ. ಮಾಜಿ ರಾಜತಾಂತ್ರಿಕ ಅಧಿಕಾರಿ ಬಿ.ವೆಂಕಟೇಶ್ ವರ್ಮಾ ಮತ್ತು ನಿವೃತ್ತ ಐಪಿಎಸ್ ಅಧಿಕಾರಿ ರಾಜೀವ್ ರಂಜನ್ ವರ್ಮಾ ಅವರನ್ನೂ ಸದಸ್ಯರನ್ನಾಗಿ ನೇಮಿಸಲಾಗಿದೆ ಎಂದು ಮೂಲಗಳು ಹೇಳಿವೆ.

155 ವರ್ಷಗಳು

ಯಾರಾದರೂ ಆಭರಣಗಳ ಮೇಲೆ ಸಣ್ಣ ರಿಯಾಯಿತಿಯನ್ನು ಬಯಸುತ್ತಾರೆಯೆ?

ದೊಡ್ಡ ಅವಕಾಶ ನಿಮ್ಮ ಎದುರಲ್ಲಿರುವಾಗ!

ಸಿ. ಕೃಷ್ಣಯ್ಯ ಚೆಟ್ಟಿಯ ಆಭರಣ ಪ್ರಿಯರು ಈ ಅಕ್ಷಯ ತೃತೀಯವನ್ನು ಶೈಲಿಯಿಂದ, ನಂಬಿಕೆಯಿಂದ ಮತ್ತು ಚಾತುರ್ಯದಿಂದ ಆಚರಿಸಲು ಸಜ್ಜಾಗಿದ್ದಾರೆ. ಇದೀಗ ಖರೀದಿಗೆ ಪರಿಪೂರ್ಣ ಸಮಯ! **ನಮ್ಮ ಅದ್ದೂರಿ 1869 ರಿಯಾಯಿತಿ ಹಾಗೂ ಉಳಿತಾಯ ಮಾರಾಟದಲ್ಲಿ ಹೆಚ್ಚು ಆಭರಣ ಪಡೆದು, ಮೌಲ್ಯವತ್ತಾದ ಉಡುಗೊರೆಯನ್ನೂ ನಿಮ್ಮದಾಗಿಸಿಕೊಳ್ಳಿ. 2025ರ ಅಕ್ಷಯ ತೃತೀಯದ ಖರೀದಿಯಲ್ಲಿ, ನಾವೇ ನಿಮ್ಮ ಪರವಾಗಿ ನಿರ್ದಿಷ್ಟ ಮೊತ್ತವನ್ನು (ಕೆಳಗೆ ವಿವರಿಸಿದಂತೆ) ನಮ್ಮ ಅಂಕಿತ ದರ ಭದ್ರತಾ ಯೋಜನೆಯಲ್ಲಿ ಹೂಡಿಕೆ ಮಾಡುತ್ತೇವೆ. ಈ ಹೂಡಿಕೆ 11 ತಿಂಗಳಲ್ಲಿ ಪೂರ್ಣಾವಸ್ಥೆ ತಲುಪಿದ್ದು, ವರ್ಷಕ್ಕೆ 12% ಹೆಚ್ಚುವರಿ ಲಾಭವನ್ನು ನೀಡುತ್ತದೆ – ಇದು ನಿಜಕ್ಕೂ ಅಪರೂಪದ, ಕಲ್ಪನಾತೀತ ಅವಕಾಶ!**

*ನಿಮ್ಮ ಪರವಾಗಿ ನಾವು ಹೂಡಿದ ನಿರ್ದಿಷ್ಟ ಮೊತ್ತ – ಅದು ನಿಮ್ಮ ಭವಿಷ್ಯದ ಲಾಭದ ಬುನಾದಿ!

5%	6%	9%	18.69%
ಚಿನ್ನಾಭರಣಗಳು ಮತ್ತು ಬೆಳ್ಳಿ ವಸ್ತುಗಳ ಮೇಲೆ	ನೈಸರ್ಗಿಕ ವಜ್ರಗಳು ಮತ್ತು ನೈಸರ್ಗಿಕ ವಜ್ರಾಭರಣಗಳ ಮೇಲೆ	ಕ್ರ್ಯಾಷ್.ಕ್ಲಬ್ ಲ್ಯಾಬ್-ಗ್ರೋನ್ ವಜ್ರಗಳು, ಅಪರೂಪದ ಸೆಂಟ್‌ಗಳು ಮತ್ತು ಬೆಳ್ಳಿ ಆಭರಣಗಳ ಮೇಲೆ	ಆಯ್ದ ಚಿನ್ನ, ಪಾರಂಪರಿಕ ಮತ್ತು ನೈಸರ್ಗಿಕ ವಜ್ರಾಭರಣಗಳ ಮೇಲೆ

ವಿಡಿಯೋ ವೀಕ್ಷಿಸಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿರಿ

ಸಿ. ಕೃಷ್ಣಯ್ಯ ಚೆಟ್ಟಿ™
ಗ್ರೂಪ್ ಆಫ್ ಜ್ಯುವೆಲರ್ಸ್

ಕಮರ್ಷಿಯಲ್ ಸ್ಟ್ರೀಟ್ • ಮೇನ್ ಗಾರ್ಡ್ ಕ್ರಾಸ್ ರಸ್ತೆ (ಕೆಂಪು ಬಣ್ಣದ ಮುಂಭಾಗ) • ಜಯನಗರ • ಮಲ್ಲೇಶ್ವರಂ

Tel: 080-4000 1869 / 4100 1869 | www.ckcjewellers.com | blogs.ckcjewellers.com

ಹೆಚ್ಚಿನ ಮಾಹಿತಿಗಾಗಿ ನಮ್ಮ ಮೀಸಲಿಟ್ಟ ಸಂಬಂಧಿತ ವ್ಯವಸ್ಥಾಪಕರಿಗೆ ಕರೆ ಮಾಡಿ: +91 95131 31869

ಸಿಕೆಸಿ ಸಮೂಹ ಕಂಪನಿಗಳು: C. KRISHNIAH CHETTY & SONS™ | C. KRISHNIAH CHETTY JEWELLERS® | C. Krishniah Chetty & Sons | THE 1869 GUILD. C. Krishniah Chetty & Sons Manufacturers | C. KRISHNIAH CHETTY CHARITABLE TRUST | C. Krishniah Chetty Foundation

*ಎಚ್ಚರಿಕೆ ಸೂಚನೆ – ಸಾರ್ವಜನಿಕ ಹಿತಾಸಕ್ತಿಯಲ್ಲಿ: * ಪ್ರಸ್ತುತ ನಮ್ಮ ಕಂಪನಿಯ ನಿರ್ದೇಶಕರು ಆಗಿರುವ ಶ್ರೀ ಸಿ. ಗಣೇಶ್ ನಾರಾಯಣ್ ಮತ್ತು ಅವರ ಪತ್ನಿಯೊಂದಿಗೆ ನಡೆಸುತ್ತಿರುವ ದೀಪಾಲಿ ಕಂ. ಪ್ರೈ. ಲಿ., ಎಂಬ ಕಂಪನಿಯ ಹೆಸರನ್ನು ಮೋಸತನದಿಂದ ನಮ್ಮ ಹೆಸರಿನಂತೆಯೇ ಬದಲಾಯಿಸಿ ನಮಗೆ ಸಂಬಂಧವಿಲ್ಲದ ಒಂದು ವ್ಯಾಪಾರ ಸಂಸ್ಥೆಯನ್ನು ಆರಂಭ ಮಾಡಿರುತ್ತಾರೆ. ಈ ನೂತನ ಅನಧಿಕೃತ ಮಳಿಗೆಯು ಟಚ್‌ಸ್ಟೋನ್ (ನಮ್ಮ ಪ್ರಮುಖ ಶೋರೂಮ್‌ನ ಪಕ್ಕ) ಎಡಭಾಗದಲ್ಲಿ ತೆರೆಯಲಾಗಿದೆ. ಈ ಸಂಸ್ಥೆಯು, ನ್ಯಾಯಾಲಯದ ಆದೇಶಗಳ ಉಲ್ಲಂಘನೆಯ ಅಡಿಯಲ್ಲಿ ನಿರ್ಬಂಧಗಳಿಗೆ ಒಳಪಟ್ಟಿರುತ್ತದೆ. ಆದ್ದರಿಂದ, ನಮ್ಮ ಎಲ್ಲಾ ಗ್ರಾಹಕರಿಗೆ/ಸಾರ್ವಜನಿಕರಿಗೆ ತಿಳಿಸುವ ಎಚ್ಚರಿಕೆ ಸೂಚನೆ ಏನೆಂದರೆ, ದಯವಿಟ್ಟು ಮತ್ತೊಂದು ಅಧಿಕೃತ ಸಿ. ಕೃಷ್ಣಯ್ಯ ಚೆಟ್ಟಿ ಶೋರೂಮ್ ಇದೆಯೆಂಬ ತಪ್ಪು ಕಲ್ಪನೆಗೆ ಒಳಾಗಗದಿರಿ. ವಾಸ್ತವವಾಗಿ ಅದು ಸಿಕೆಸಿ ಹೆಸರು ಅಥವಾ ಸಿಕೆಸಿ ಗ್ರೂಪ್ ಲೋಗೊ ಬಳಸಿಕೊಳ್ಳಲು ಅಧಿಕೃತ ಸಂಸ್ಥೆಯಲ್ಲ. ವಿಷಯಗಳು ನ್ಯಾಯಾಲಯಗಳಲ್ಲಿ ತೀವ್ರ ಆದ್ಯತೆಯ ಮೇರೆಗಿನ ವಿಚಾರಣೆಗೆ ಬಾಕಿ ಇರುತ್ತವೆ. ಗಮನಿಸಿ: *ಒಂದು ವೇಳೆ, ಕಾನೂನಿನ ಪ್ರಕಾರ ಅವರ ವ್ಯವಹಾರ ಸ್ಥಗಿತವಾದಲ್ಲಿ, ಅವರಿಂದ ಮಾರಾಟ ಮಾಡಲಾಗಿರುವ ಉತ್ಪನ್ನಗಳನ್ನು (ಅವರ ಸಂಘರ್ಷಮಯ ವ್ಯಾಪಾರ ಆರಂಭವಾದ ದಿನಾಂಕ 15.03.2023 ರಿಂದ), ನಮ್ಮ ಸಿಕೆಸಿ ನಿಯಮಗಳ ಅಡಿಯಲ್ಲಿ ಮರು–ಖರೀದಿಗೆ/ವಿನಿಮಯ ಯೋಜನೆಯಲ್ಲಿ ಪರಿಗಣಿಸಲಾಗುವುದಿಲ್ಲ. ಇದಲ್ಲದೆ, ಅನಧಿಕೃತ ವ್ಯವಹಾರದೊಂದಿಗೆ ವ್ಯವಹರಿಸುವಾಗ ನೀವು ಆರ್ಥಿಕ ನಷ್ಟವನ್ನು ಅನುಭವಿಸಬಹುದು.*

*ನಿಯಮಗಳು ಮತ್ತು ಷರತ್ತುಗಳು ಅನ್ವಯಿಸುತ್ತವೆ. • ಗುರುತುಗಳು, ಲೋಗೋಗಳು, ಹೆಸರುಗಳು ಮತ್ತು ನೋಂದಾಯಿತ ಟ್ರೇಡ್‌ಮಾರ್ಕ್‌ಗಳ ಅನಧಿಕೃತ ಬಳಕೆಯನ್ನು ನಿಷೇಧಿಸಲಾಗಿದೆ.

ಬಿಬಿಎಂಪಿ: 12,692 ಪೌರ ಕಾರ್ಮಿಕರಿಗೆ ಇಂದು ನೇಮಕಾತಿ ಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿಯಲ್ಲಿ ನೇರ ವೇತನದಡಿ ಕರ್ತವ್ಯ ನಿರ್ವಹಿಸುತ್ತಿರುವ 12,692 ಪೌರ ಕಾರ್ಮಿಕರಿಗೆ ಕಾರ್ಮಿಕ ದಿನಾಚರಣೆಯಂದು (ಮೇ 1) ನೇಮಕಾತಿ ಆದೇಶ ಪತ್ರ ನೀಡಲಾಗುತ್ತಿದೆ.

12,692 ಪೌರ ಕಾರ್ಮಿಕರ ಸೇವೆಯನ್ನು ಕಾಯಂಗೊಳಿಸಲು ಸರ್ಕಾರವು ಅಂತಿಮ ಪಟ್ಟಿ ಸಿದ್ಧಪಡಿಸಿದೆ. ಕಾಯಂಗೊಂಡ ಪೌರಕಾರ್ಮಿಕರ ವೇತನವು ₹32,000 ರಿಂದ ₹33,000 ಕ್ಕೆ ಏರಿಕೆಯಾಗುತ್ತದೆ. ಕಾರ್ಯಕ್ರಮದಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಭಾಗವಹಿಸಲಿದ್ದಾರೆ.

ನೈಋತ್ಯ ರೈಲ್ವೆ

ಪ್ರೊಫಾರ್ಮಾ 10–01

ಭಾರತೀಯ ರೈಲ್ವೆ

"ಸಾರ್ವಜನಿಕ ಅಧಿಸೂಚನೆ"

ನೈಋತ್ಯ ರೈಲ್ವೆಯ ಕೆಳಕಂಡ ವಿಭಾಗದಲ್ಲಿರುವ ರೈಲ್ವೆ ಮಾರ್ಗಗಳು ಮತ್ತು ಆವರಣಗಳ ಎಲ್ಲಾ ಬಳಕೆದಾರರಿಗೆ 25000 ವೋಲ್ಟ್, 50 Hz., AC ಓವರ್‌ಹೆಡ್ ಟ್ರಾಕ್ಷನ್ ತಂತಿಗಳನ್ನು ವಿಭಾಗದ ವಿರುದ್ಧ ನಿರ್ದಿಷ್ಟಪಡಿಸಿದ ದಿನಾಂಕದಂದು ಅಥವಾ ನಂತರ ವಿದ್ಯುತ್ ಚಾಲಿತಗೊಳಿಸಲಾಗುವುದು ಎಂದು ಸೂಚನೆ ನೀಡಲಾಗಿದೆ. ಅದೇ ದಿನಾಂಕದಂದು ಮತ್ತು ನಂತರ ಓವರ್‌ಹೆಡ್ ಟ್ರಾಕ್ಷನ್ ಲೈನ್ ಅನ್ನು ಎಲ್ಲಾ ಸಮಯದಲ್ಲೂ ಕಾರ್ಯನಿರ್ವಹಿಸುತ್ತಿದೆ ಎಂದು ಪರಿಗಣಿಸಲಾಗುತ್ತದೆ ಮತ್ತು ಯಾವುದೇ ಅನಧಿಕೃತ ವ್ಯಕ್ತಿ ಸದರಿ ಓವರ್‌ಹೆಡ್ ಲೈನ್‌ನ ಸಮೀಪಕ್ಕೆ ಬರಬಾರದು ಅಥವಾ ಕೆಲಸ ಮಾಡಬಾರದು.

ವಿಭಾಗ	ಮಾರ್ಗ	ಚೈನೇಜ್	ಶಕ್ತಿಯ ಸಂಭವನೀಯ ದಿನಾಂಕ
ಅಸ್ತಿತ್ವದಲ್ಲಿರುವ ಮೇಲಕ್ಕೆ ಮತ್ತು ಕೆಳಗೆ ಲೈನ್‌ಗಳ ಶಾಶ್ವತ ತಿರುವುಗಳನ್ನು ಪ್ರಸ್ತಾಪಿಸಲಾಗಿದೆ ಬೆಂಗಳೂರು ಪೂರ್ವ (BNCE) ಗೆ ಬೆಂಗಳೂರು ಕಂಟೋನ್ಮೆಂಟ್ (BNC) ನಿಲ್ದಾಣಗಳು.	ಅಸ್ತಿತ್ವದಲ್ಲಿರುವ ಮೇಲಕ್ಕೆಮಾರ್ಗ	ಕಿಮೀ: 349366.100 ರಿಂದ ಕಿಮೀ: 349967.896	15.06.2025
	ಅಸ್ತಿತ್ವದಲ್ಲಿರುವ ಕೆಳಗೆ ಮಾರ್ಗ	ಕಿಮೀ: 349323.000 ರಿಂದ ಕಿಮೀ: 349966.588	

ಸ್ಥಳ : ಬೆಂಗಳೂರು

ಉಪ ಮುಖ್ಯ ವಿದ್ಯುತ್ ಇಂಜಿನಿಯರ್, ಗತಿ ಶಕ್ತಿ ಘಟಕ, ಬೆಂಗಳೂರು

ಪಿಯುಬಿ/74/ಎಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2025–26

South Western Railway - SWR | sw_railways | SWRRLY | SWRRLY

ಭಾರತ ಸರ್ಕಾರ

ದೂರಸಂಪರ್ಕಗಳ ಇಲಾಖೆ

ದೂರಸಂಪರ್ಕಗಳ ವಿಶೇಷ ಮಹಾನಿರ್ದೇಶಕರ ಕಚೇರಿ,

ಕರ್ನಾಟಕ ಎಲ್‌ಎಸ್‌ಎ, 1ನೇ ಮಹಡಿ, ಸಂಚಾರ ಕಾಂಪ್ಲೆಕ್ಸ್ ಬಿಲ್ಡಿಂಗ್,

ಡಬ್ಲ್ಯುಎಂಎಸ್ ಕಾಂಪೌಂಡ್, ಜಯನಗರ, ಬೆಂಗಳೂರು–41.

ಡಿಡಿಜಿ(ಎ)/ಡಿಒಟಿ/ಕೆಟಿಕೆ–ಎಲ್‌ಎಸ್‌ಎ/77–2/ನೇಮಕಾತಿ ವೃಂದ ಸಿ/2024–25/21

ಡೆಪ್ಯುಟೇಶನ್ ಸೂಚನೆ – ಅರ್ಜಿಗಾಗಿನ ಕೊನೆ ದಿನಾಂಕದ ವಿಸ್ತರಣೆ

ಡಿಒಟಿ, ಕರ್ನಾಟಕ ಎಲ್‌ಎಸ್‌ಎ ಇವರು, ದೂರಸಂಪರ್ಕಗಳ ವಿಶೇಷ ಮಹಾನಿರ್ದೇಶಕರ ಕಚೇರಿ, ಕರ್ನಾಟಕ ಎಲ್‌ಎಸ್‌ಎ ಇಲ್ಲಿ ಖಾಲಿ ಇರುವ ಲೋವರ್ ಡಿವಿಜನ್ ಕ್ಲರ್ಕ್ (ಎಲ್‌ಡಿಸಿ) ಮತ್ತು ಟೆಲಿಕಾಂ ಅಸಿಸ್ಟಂಟ್ (ಟಿಎ) ವೃಂದ 'ಸಿ' ಹುದ್ದೆಗಳನ್ನು, ಕೇಂದ್ರ/ ರಾಜ್ಯ ಸರ್ಕಾರ/ ಪಿಎಸ್‌ಯು/ ವಿಶ್ವವಿದ್ಯಾಲಯಗಳಲ್ಲಿ/ ಅಂಗೀಕೃತ ಸಂಶೋಧನಾ ಸಂಸ್ಥೆಗಳಲ್ಲಿ/ಸ್ವಾಯುತ್ತ ಅಂಗಸಂಸ್ಥೆಗಳಲ್ಲಿ ಕಾರ್ಯನಿರ್ಹಿಸುತ್ತಿರುವ ಸಿಬ್ಬಂದಿಗಳ ಮೂಲಕ ಡೆಪ್ಯೂಟೇಶನ್ ಆಧಾರದ ಮೇರೆಗೆ ಭರ್ತಿ ಮಾಡಿಕೊಳ್ಳಲು, ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದ್ದಾರೆ.

ವಿವರಗಳಿಗಾಗಿ ಮತ್ತು ಅರ್ಜಿ ನಮೂನೆಗಾಗಿ ದಯವಿಟ್ಟು ಡಿಒಟಿ' ರವರ www.dot.gov.in ವೆಬ್‌ಸೈಟ್‌ನಲ್ಲಿ ಖಾಲಿಹುದ್ದೆಗಳ ಲಿಂಕ್ ಪರಿಶೀಲಿಸಿರಿ.

ಅರ್ಜಿ ಸ್ವೀಕರಿಸುವ ಕೊನೆಯ ದಿನಾಂಕವನ್ನು 8ನೇ ಮೇ 2025 ರವರೆಗೆ ವಿಸ್ತರಿಸಲಾಗಿದೆ.

CBC 06229/12/0002/2526 — ನಿರ್ದೇಶಕರು (ಆಡಳಿತ)

6 ತಿಂಗಳಲ್ಲಿ 118 ಮಂದಿ ಸಾವು

ವಿದ್ಯುತ್ ಅವಘಡ: ಬೆಸ್ಕಾಂ ವ್ಯಾಪ್ತಿಯಲ್ಲಿ ಹೆಚ್ಚುತ್ತಿರುವ ಪ್ರಕರಣಗಳು

• ಗಾಣಧಾಳು ಶ್ರೀಕಂಠ

ಮುಖ್ಯಾಂಶಗಳು
- ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿರುವ ವಿದ್ಯುತ್ ಅವಘಡ
- ಗ್ರಾಮೀಣ ಪ್ರದೇಶದಲ್ಲಿ ಹೆಚ್ಚು ಪ್ರಕರಣಗಳು
- ನಿರ್ವಹಣೆಯ ಕೊರತೆ ಅವಘಡಗಳಿಗೆ ಕಾರಣ

ಬೆಂಗಳೂರು: ರಾಜ್ಯದಲ್ಲಿ ವಿದ್ಯುತ್ ಅವಘಡ ಪ್ರಕರಣಗಳು ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಲೇ ಇವೆ. ಕಳೆದ ವರ್ಷ ಆರು ತಿಂಗಳಲ್ಲಿ (ಏಪ್ರಿಲ್–ಸೆಪ್ಟೆಂಬರ್) ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ(ಬೆಸ್ಕಾಂ) ವ್ಯಾಪ್ತಿಯಲ್ಲಿ ವಿದ್ಯುತ್ ಅವಘಡಗಳಿಂದ 118 ಮಂದಿ ಮೃತಪಟ್ಟಿದ್ದಾರೆ.

ಬೆಸ್ಕಾಂ, ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗಕ್ಕೆ(ಕೆಇಆರ್‌ಸಿ) ವಾರ್ಷಿಕ ದರ ಪರಿಷ್ಕರಣೆ ಪ್ರಸ್ತಾವದ ಭಾಗವಾಗಿ ಸಲ್ಲಿಸಿರುವ ದಾಖಲೆಗಳಲ್ಲಿ ಈ ಅಂಕಿ ಅಂಶಗಳ ಉಲ್ಲೇಖವಿದೆ.

2015–16 ರಿಂದ 2023–24ರವರೆಗೆ ಬೆಸ್ಕಾಂ ವ್ಯಾಪ್ತಿಯ ಎಂಟು ಜಿಲ್ಲೆಗಳಲ್ಲಿ ವಿದ್ಯುತ್ ಅಪಘಾತಗಳಲ್ಲಿ ವಾರ್ಷಿಕವಾಗಿ ಸರಾಸರಿ 109 ಜನರು ಮೃತಪಟ್ಟಿದ್ದಾರೆ. 2024ರ ಆರು ತಿಂಗಳಲ್ಲಿ ಈ ಪ್ರಮಾಣ ಇನ್ನೂ ಹೆಚ್ಚಾಗಿದೆ. ಈ ಅವಧಿಯಲ್ಲಿ 61 ಪ್ರಾಣಿಗಳೂ ಮೃತಪಟ್ಟಿವೆ. 2024–25ರ ಅಂಕಿ ಅಂಶಗಳು ಇನ್ನೂ ಬಿಡುಗಡೆಯಾಗಿಲ್ಲ. ಅವಘಡಗಳಲ್ಲಿ ಸಾರ್ವಜನಿಕರಷ್ಟೇ ಅಲ್ಲದೇ, ಬೆಸ್ಕಾಂ ಸಿಬ್ಬಂದಿಯೂ ಮೃತಪಟ್ಟಿದ್ದಾರೆ.

ಗ್ರಾಮೀಣ ಪ್ರದೇಶದಲ್ಲಿ ಹೆಚ್ಚು: ಗ್ರಾಮೀಣ ಭಾಗದಲ್ಲಿ ವಿದ್ಯುತ್ ಅಪಘಾತಗಳು ಹೆಚ್ಚಾಗಿವೆ. ಕೃಷಿ ಜಮೀನಿನಲ್ಲಿ ಹೆಚ್ಚು ಘಟನೆಗಳು ನಡೆದಿರುವುದು ವರದಿಯಾಗಿದೆ. ಇದರಲ್ಲಿ ವಿದ್ಯುತ್ ಹರಿಯುತ್ತಿರುವ ತಂತಿ ಸ್ಪರ್ಶಿಸುವುದು, ಬಿದ್ದ ತಂತಿ ತುಳಿದು ಮೃತಪಟ್ಟಿರುವ ಪ್ರಕರಣಗಳು ಹೆಚ್ಚು.

ಮಂಗಳವಾರವಷ್ಟೇ ತಿಪಟೂರು ತಾಲ್ಲೂಕಿನ ಕಲ್ಲಯ್ಯನಪಾಳ್ಯದಲ್ಲಿ ವಿದ್ಯುತ್ ತಂತಿ ಸ್ಪರ್ಶಿಸಿ ಒಬ್ಬ ವ್ಯಕ್ತಿ ಹಾಗೂ ಎರಡು ಸೀಮೆ ಹಸುಗಳು ಮೃತಪಟ್ಟಿವೆ. ರಾಸುಗಳನ್ನು ಮನೆಯ ಸಮೀಪದ ತೋಟದಲ್ಲಿ ಮೇಯಿಸಲು ಹೋದಾಗ ಇದು ಸಂಭವಿಸಿದೆ. ಚಿಕ್ಕ ನಾಯಕನಹಳ್ಳಿ ಬಳಿಯ ಶೆಟ್ಟಿಕೆರೆ ಹೋಬಳಿ ಸೋಮನಹಳ್ಳಿಯಲ್ಲಿ ವಿದ್ಯುತ್ ಸ್ಪರ್ಶಿಸಿ ಕುಶಾಲ್ ಎಂಬ ಬಾಲಕನೊಬ್ಬ ಮೃತಪಟ್ಟಿದ್ದಾನೆ. ಪೋಷಕರ ಜತೆಗೆ ಜಮೀನಿಗೆ ಹೋದಾಗ ವಿದ್ಯುತ್ ತಂತಿ ತುಂಡಾಗಿ ಬಿದ್ದಿರುವುದನ್ನು ಗಮನಿಸದೆ ತುಳಿದಾಗ ಈ ಘಟನೆ ಸಂಭವಿಸಿದೆ. ಹಳೆಯ ವಿದ್ಯುತ್ ತಂತಿ ಬದಲಾಯಿಸದ ಬೆಸ್ಕಾಂ ಅಧಿಕಾರಿಗಳ ನಿರ್ಲಕ್ಷ್ಯವೇ ಕಾರಣ ಎಂದು ಸಾರ್ವಜನಿಕರು ದೂರಿದ್ದಾರೆ.

'ವಿದ್ಯುತ್ ವಾಹಕ ಮಾರ್ಗಗಳ ಬಳಿ ಕಬ್ಬಿಣದ ಸರಳು– ತಗಡುಗಳ ಸ್ಪರ್ಶ, ಪೂರ್ಣ ತಿಳಿವಳಿಕೆಯಿಲ್ಲದೆ ವಿದ್ಯುತ್ ಉಪಕರಣ ಬಳಸುವುದು, ಅನಧಿಕೃತವಾಗಿ ವಿದ್ಯುತ್ ಕೆಲಸಗಳಲ್ಲಿ ತೊಡಗುವುದರಿಂದ ಅವಘಡಗಳು ಸಂಭವಿಸುತ್ತವೆ' ಎಂದು ಅಧಿಕಾರಿಗಳು ಕಾರಣಗಳನ್ನು ಪಟ್ಟಿ ಮಾಡುತ್ತಾರೆ.

ಮಳೆಗಾಲದಲ್ಲಿ ಪ್ರಕರಣಗಳು ಹೆಚ್ಚಾಗಿ ದಾಖಲಾಗಿವೆ. ಕಳೆದ ವರ್ಷ ಆಗಸ್ಟ್ ಮತ್ತು ಅಕ್ಟೋಬರ್ ಮಧ್ಯೆ ಹೆಚ್ಚಿನ ವಿದ್ಯುತ್ ಅವಘಡಗಳು ಸಂಭವಿಸಿವೆ.

ಕಾರಣಗಳೇನು?: ಸಾರ್ವಜನಿಕರ ನಿರ್ಲಕ್ಷ್ಯ, ಅನಧಿಕೃತ ವಿದ್ಯುತ್ ಬಳಕೆ, ಸುರಕ್ಷತಾ ಕ್ರಮಗಳನ್ನು ಕೈಗೊಳ್ಳದಿರುವುದು ಸೇರಿದಂತೆ ಹಲವು ಕಾರಣಗಳನ್ನು ಇಲಾಖೆಯ ಅಧಿಕಾರಿಗಳು ನೀಡುತ್ತಾರೆ.

'ಹಳೆ ತಂತಿಗಳು, ಶಿಥಿಲಗೊಂಡ ಕಂಬಗಳು, ಹಾಳಾಗಿರುವ ವಿದ್ಯುತ್ ಪರಿವರ್ತಕಗಳನ್ನು ಸಕಾಲಕ್ಕೆ ಬದಲಿಸದಿರುವುದು, ಬಹು ಮುಖ್ಯವಾಗಿ ವಾರ್ಷಿಕ ನಿರ್ವಹಣೆಯ ಕೊರತೆಯೇ ಕಾರಣ' ಎನ್ನುತ್ತಾರೆ ಚಿಕ್ಕಬಳ್ಳಾಪುರ ಜಿಲ್ಲೆಯ ಮಂಚೇನಹಳ್ಳಿ ರೈತ ಮುಖಂಡ ಲಕ್ಷ್ಮಿನಾರಾಯಣ.

'ಜಮೀನಿನ ಮೇಲೆ ಹಾದು ಹೋಗಿರುವ ತಂತಿಗಳು ಕೆಳಗೆ ಇಳಿ ಬಿದ್ದಿರುತ್ತವೆ. ಕಂಬಗಳು ಬಾಗಿರುತ್ತವೆ. ಇವುಗಳ ಬಗ್ಗೆ ರೈತರು ಇಲಾಖೆಗೆ ದೂರು ನೀಡಿರುತ್ತಾರೆ. ಅದನ್ನು ಗಂಭೀರವಾಗಿ ಪರಿಗಣಿಸಿ, ಸರಿಪಡಿಸಿದರೆ ಅವಘಡ ತಪ್ಪಿಸಬಹುದು' ಎಂದು ಸಲಹೆ ನೀಡುತ್ತಾರೆ.

ಅವಘಡಗಳನ್ನು ತಪ್ಪಿಸುವ ಸಂಬಂಧ ಪ್ರತಿ ವರ್ಷ ಬೆಸ್ಕಾಂ ಅಪಾಯಕಾರಿ ಸ್ಥಳಗಳನ್ನು ಗುರುತಿಸಿ, ಸರಿಪಡಿಸುವ ಕೆಲಸ ಮಾಡುತ್ತದೆ. 2024ರಲ್ಲಿ ಏಪ್ರಿಲ್–ಸೆಪ್ಟೆಂಬರ್ ತಿಂಗಳ ಮಧ್ಯೆ 39,024 ಅಪಾಯಕಾರಿ ಸ್ಥಳಗಳನ್ನು ಗುರುತಿಸಿ, ಪರಿಹಾರ ಕಾಮಗಾರಿ ಕೈಗೊಂಡಿದೆ. ಆದರೆ, ಇನ್ನೂ 17,463 ಸ್ಥಳಗಳಲ್ಲಿ ಈ ಕೆಲಸ ಬಾಕಿ ಇದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಇಲಾಖೆಯ ತೀವ್ರ ನಿಗಾ ಅಗತ್ಯ'

ಇಂಧನ ಇಲಾಖೆ ಕೈಗಾರಿಕೆ, ವಾಣಿಜ್ಯ ಕ್ಷೇತ್ರಕ್ಕೆ ಕೊಟ್ಟಷ್ಟು ಗಮನವನ್ನು ಗ್ರಾಮೀಣ ಮತ್ತು ಕೃಷಿ ಕ್ಷೇತ್ರಕ್ಕೆ ನೀಡುವುದಿಲ್ಲ. ಈ ಎರಡೂ ಕ್ಷೇತ್ರದಿಂದ ಲಾಭವಿಲ್ಲ ಎಂಬುದು ಇದಕ್ಕೆ ಕಾರಣ. ಈ ನಿರ್ಲಕ್ಷ್ಯದಿಂದಲೇ ಹಳ್ಳಿಗಳಲ್ಲಿ ಹೆಚ್ಚು ವಿದ್ಯುತ್ ಅಪಘಾತ, ಸಾವು ನೋವು ಸಂಭವಿಸುತ್ತಿವೆ. ಜಮೀನುಗಳಲ್ಲಿ ವಿದ್ಯುತ್ ತಂತಿಗಳು ಜೋತುಬಿದ್ದಿದ್ದಾಗ, ಕಂಬಗಳು ಬಾಗಿದ್ದಾಗ ದೂರು ಕೊಡುತ್ತೇವೆ. ಆದರೆ ತಕ್ಷಣ ಸ್ಪಂದಿಸುವುದಿಲ್ಲ. ನಿರ್ವಹಣೆ ಸಮರ್ಪಕವಾಗಿದ್ದರೆ, ಅಪಘಾತಗಳನ್ನು ತಪ್ಪಿಸಬಹುದು ಎಂದು ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಹಸಿರು ಸೇನೆಯ ಅಧ್ಯಕ್ಷ ಬಡಗಲಪುರ ನಾಗೇಂದ್ರ ಹೇಳುತ್ತಾರೆ.

ಸಿ.ಎಂ ಕುರಿತ ಪೋಸ್ಟ್: ಎಫ್‌ಐಆರ್ ದಾಖಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪಾಕಿಸ್ತಾನದ ಬಾವುಟ ಹಿಡಿದು ನೃತ್ಯ ಮಾಡುತ್ತಿರುವಂತೆ ಕೃತಕ ಬುದ್ಧಿಮತ್ತೆ (ಎ.ಐ) ಬಳಸಿ ನಕಲಿ ವಿಡಿಯೊ ಸೃಷ್ಟಿಸಿ ಇನ್‌ಸ್ಟಾಗ್ರಾಂನಲ್ಲಿ ಪೋಸ್ಟ್ ಮಾಡಿದ್ದ ಆರೋಪಿ ವಿರುದ್ಧ ವಿಧಾನಸೌಧ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಮುಖ್ಯಮಂತ್ರಿಯವರ ಉಪ ಕಾರ್ಯದರ್ಶಿ ಅರುಣ್ ಅವರು ನೀಡಿದ ದೂರಿನ ಮೇರೆಗೆ ವಿಧಾನಸೌಧ ಠಾಣೆ ಪೊಲೀಸರು ಎಫ್‌ಐಆರ್ ದಾಖಲಿಸಿಕೊಂಡಿದ್ದಾರೆ.

'ಅಪರಿಚಿತ ವ್ಯಕ್ತಿಯ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ. ಆರೋಪಿಯ ಪತ್ತೆಗೆ ತಜ್ಞರ ನೆರವು ಪಡೆದುಕೊಳ್ಳಲಾಗಿದೆ' ಎಂದು ಪೊಲೀಸರು ಹೇಳಿದರು.

ಇನ್‌ಸ್ಟಾಗ್ರಾಂನಲ್ಲಿ 'ನಮ್ಮ ಮೋದಿ' ಹೆಸರಿನ ಖಾತೆಯಲ್ಲಿ ಸಿದ್ದರಾಮಯ್ಯ ಅವರು ಪಾಕಿಸ್ತಾನದ ಬಾವುಟ ಹಿಡಿದು ನೃತ್ಯ ಮಾಡುತ್ತಿರುವಂತೆ ವಿಡಿಯೊ ಸೃಷ್ಟಿಸಿ ಏಪ್ರಿಲ್ 27ರಂದು ಪೋಸ್ಟ್ ಮಾಡಲಾಗಿದೆ. ರಾಜ್ಯದ ಮುಖ್ಯಮಂತ್ರಿ ಕೈಯಲ್ಲಿ ಶತ್ರು ರಾಷ್ಟ್ರದ ಧ್ವಜವನ್ನು ನೀಡಿ ನೃತ್ಯ ಮಾಡುವಂತೆ ನಕಲಿ ವಿಡಿಯೊ ಸೃಷ್ಟಿಸಿರುವ ಆರೋಪಿಯನ್ನು ಪತ್ತೆ ಮಾಡಿ ಆ ವ್ಯಕ್ತಿಯ ವಿರುದ್ಧ ಕ್ರಮ ಕೈಗೊಳ್ಳುವಂತೆ ದೂರಿನಲ್ಲಿ ಕೋರಲಾಗಿದೆ.

ನಕಲಿ ದಾಖಲೆ ಸೃಷ್ಟಿಸಿ ವಂಚನೆ: ಎಫ್‌ಐಆರ್

ಬೆಂಗಳೂರು: ನಕಲಿ ದಾಖಲೆ ಸೃಷ್ಟಿಸಿ ಅದನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದ ಆರೋಪದ ಅಡಿ ತ್ಯಾಗರಾಜ ನಗರದ ಬಿಜಿಎಸ್ ಬ್ಲೂಮ್ ಫೀಲ್ಡ್ ಶಾಲೆಯ ಮುಖ್ಯಸ್ಥ ಗುರಪ್ಪ ನಾಯ್ಡು ಮತ್ತು ಅವರ ಪತ್ನಿ, ಶಾಲೆಯ ಟ್ರಸ್ಟಿ ಬಿ.ಸುನಿತಾ ಅವರ ವಿರುದ್ಧ ವಿಧಾನಸೌಧ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಅಗ್ನಿ ಸುರಕ್ಷತಾ ಪ್ರಮಾಣ ಪತ್ರವನ್ನು ನಕಲಿಯಾಗಿ ಸೃಷ್ಟಿಸಿದ್ದರು. ಪ್ರಕರಣವೊಂದರಲ್ಲಿ ಅದನ್ನೇ ಹೈಕೋರ್ಟ್‌ಗೆ ಸಲ್ಲಿಸಿದ್ದರು. ಸಿಬಿಎಸ್‌ಇ ಮಾನ್ಯತೆ ಪಡೆಯಲು ಈ ನಕಲಿ ಪತ್ರವನ್ನು ಬಳಸಿಕೊಂಡಿದ್ದರು ಎಂದು ವಕೀಲೆ ಸುಧಾ ಕಾಟ್ವಾ ಅವರು ದೂರು ನೀಡಿದ್ದರು. ನ್ಯಾಯಾಲಯ, ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರಿಗೆ ವಂಚಿಸಿದ್ದ ಆರೋಪದ ಅಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ಅಪಘಾತ: ಹಿಂಬದಿ ಸವಾರ ಸಾವು

ಬೆಂಗಳೂರು: ಸದಾಶಿವನಗರದ ಬಿಎಚ್‌ಇಎಲ್ ಕೆಳಸೇತುವೆಯ ಬಳಿ ಬುಧವಾರ ಬೆಳಿಗ್ಗೆ 6.30ರ ಸುಮಾರಿಗೆ ಹಾಲಿನ ಟ್ಯಾಂಕರ್ ಹಾಗೂ ದ್ವಿಚಕ್ರ ವಾಹನದ ಮಧ್ಯೆ ಸಂಭವಿಸಿದ ಅಪಘಾತದಲ್ಲಿ ದ್ವಿಚಕ್ರ ವಾಹನದಲ್ಲಿದ್ದ ಹಿಂಬದಿಯ ಸವಾರ ಮೃತಪಟ್ಟಿದ್ದಾರೆ.

ಹರ್ಷ (17) ಮೃತಪಟ್ಟವರು. ಸವಾರ ಸಚಿನ್ ಅವರು ಗಾಯಗೊಂಡಿದ್ದಾರೆ.

ಸಚಿನ್ ಅವರು ತನ್ನ ಸ್ನೇಹಿತ ಹರ್ಷ ಅವರನ್ನು ದ್ವಿಚಕ್ರ ವಾಹನದಲ್ಲಿ ಕರೆದುಕೊಂಡು ನ್ಯೂ ಬಿಇಎಲ್ ಮುಖ್ಯ ರಸ್ತೆಯಲ್ಲಿ ತನಿಷ್ಕ್ ಜ್ಯುವೆಲರ್ಸ್‌ನಲ್ಲಿ ಕೆಲಸಕ್ಕೆ ತೆರಳುತ್ತಿದ್ದರು. ಸರ್ಕಲ್ ಮಾರಮ್ಮ ದೇವಸ್ಥಾನದ ಕಡೆಯಿಂದ ಹೋಗುತ್ತಿರುವಾಗ ಸದಾಶಿವನಗರದ ಬಿಎಚ್‌ಇಎಲ್ ಕೆಳಸೇತುವೆಯ ಮೇಲ್ಭಾಗದ ಸರ್ವೀಸ್ ರಸ್ತೆಯಲ್ಲಿ ಹಿಂದಿನಿಂದ ವೇಗವಾಗಿ ಬಂದ ಹಾಲಿನ ಟ್ಯಾಂಕರ್ ದ್ವಿಚಕ್ರ ವಾಹನಕ್ಕೆ ಡಿಕ್ಕಿಯಾಗಿದೆ. ಡಿಕ್ಕಿಯ ರಭಸಕ್ಕೆ ಇಬ್ಬರೂ ಕೆಳಕ್ಕೆ ಬಿದ್ದಿದ್ದರು. ಸಚಿನ್ ಅವರ ಕೈ ಹಾಗೂ ಎಡ ಕಾಲಿಗೆ ಗಾಯವಾಗಿದೆ. ಹಿಂದೆ ಕುಳಿತಿದ್ದ ಹರ್ಷ ಅವರ ತಲೆ, ಮುಖ ಹಾಗೂ ಹೊಟ್ಟೆಯ ಭಾಗಕ್ಕೆ ತೀವ್ರವಾದ ಗಾಯವಾಗಿತ್ತು. ಸ್ಥಳೀಯರ ನೆರವಿನಿಂದ ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗದಲ್ಲಿ ಹರ್ಷ ಮೃತಪಟ್ಟಿದ್ದಾರೆ. ಸಚಿನ್ ಅವರನ್ನು ಎಂ.ಎಸ್. ರಾಮಯ್ಯ ಆಸ್ಪತ್ರೆಗೆ ದಾಖಲಿಸಲಾಗಿದೆ.

ಮದ್ಯ ಸೇವಿಸಿದ್ದ ಚಾಲಕ: 'ಹಾಲಿನ ಟ್ಯಾಂಕರ್ ಚಾಲಕ ಅತಿ ವೇಗದಿಂದ ವಾಹನವನ್ನು ಚಾಲನೆ ಮಾಡಿಕೊಂಡು ಹೋಗುತ್ತಿದ್ದ ಪರಿಣಾಮ ಅಪಘಾತ ನಡೆದಿದೆ. ಚಾಲಕ ನಾಗೇಶ್ (37) ಮದ್ಯ ಸೇವಿಸಿ ಚಾಲನೆ ಮಾಡುತ್ತಿದ್ದ ಎಂಬುದು ಗೊತ್ತಾಗಿದೆ. ಆತನನ್ನು ವಶಕ್ಕೆ ಪಡೆಯಲಾಗಿದೆ' ಎಂದು ಸಂಚಾರ ಪೊಲೀಸರು ಹೇಳಿದರು.

ಸದಾಶಿವನಗರ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮಹಿಳೆ ಮೃತದೇಹ ಪತ್ತೆ: ಕೊಲೆ ಶಂಕೆ

ಬೆಂಗಳೂರು: ಚಿಕ್ಕಜಾಲ ಪೊಲೀಸ್ ಠಾಣಾ ವ್ಯಾಪ್ತಿಯ ಖಾಲಿ ಪ್ರದೇಶದಲ್ಲಿ ನೈಜೀರಿಯಾ ದೇಶದ ಮಹಿಳೆಯ ಮೃತದೇಹ ಪತ್ತೆಯಾಗಿದ್ದು, ಕೊಲೆಯ ಶಂಕೆ ವ್ಯಕ್ತವಾಗಿದೆ.

ಮಹಿಳೆಯ ಮೃತದೇಹದ ಮೇಲೆ ಹಲ್ಲೆಯಿಂದ ಆಗಿರುವ ಗಾಯದ ಗುರುತುಗಳಿವೆ. ಮೃತ ಮಹಿಳೆಗೆ ಅಂದಾಜು 30 ವರ್ಷ ಇರಬಹುದು. ಕೊಲೆ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಮಹಿಳೆ ಕೆಲವು ವರ್ಷಗಳ ಹಿಂದೆಯೇ ನಗರಕ್ಕೆ ಬಂದು ಕೆಲಸ ಮಾಡುತ್ತಿದ್ದರು. ಕೆಲಸದ ಸ್ಥಳದಲ್ಲಿ ನಡೆದ ಗಲಾಟೆಯಿಂದ ಕೊಲೆಯಾಗಿದೆಯೇ ಅಥವಾ ಬೇರೆ ಸ್ಥಳಗಳಲ್ಲಿ ಕೊಲೆ ಮಾಡಿ ಮೃತದೇಹವನ್ನು ತಂದು ಎಸೆಯಲಾಗಿದೆಯೇ ಎಂಬುದನ್ನು ಪರಿಶೀಲಿಸಲಾಗುತ್ತಿದೆ' ಎಂದು ಮೂಲಗಳು ತಿಳಿಸಿವೆ.

ತ್ಯಾಜ್ಯ: ಬಳಕೆದಾರರ ಶುಲ್ಕ ವಿನಾಯಿತಿಗೆ ಮನವಿ

ಬೆಂಗಳೂರು: ಖಾಲಿ ನಿವೇಶನಗಳಿಗೆ ತ್ಯಾಜ್ಯ ನಿರ್ವಹಣಾ ಬಳಕೆದಾರರ ಶುಲ್ಕದಿಂದ ಸಂಪೂರ್ಣ ವಿನಾಯಿತಿ ನೀಡಬೇಕು ಎಂದು ದಾಸರಹಳ್ಳಿ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕ ಆರ್. ಮಂಜುನಾಥ ಅವರು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಮನವಿ ಮಾಡಿಕೊಂಡಿದ್ದಾರೆ.

ಮಂಜುನಾಥ

ಈ ಬಗ್ಗೆ ಪತ್ರ ಬರೆದಿರುವ ಅವರು, 'ದಾಸರಹಳ್ಳಿ ವಿಧಾನಸಭೆ ಕ್ಷೇತ್ರವು 2008–09ನೇ ಸಾಲಿನಿಂದ ಬಿಬಿಎಂಪಿ ವ್ಯಾಪ್ತಿಗೆ ಒಳಪಟ್ಟಿದೆ. ಬಿಬಿಎಂಪಿ 18 ವರ್ಷಗಳಿಂದ ಕಸ ಸಂಗ್ರಹಣೆ ಮಾಡಿ, ಅದಕ್ಕೆ ಸೆಸ್ ಸಂಗ್ರಹಿಸುತ್ತಿದೆ. ಈಗ ಬಳಕೆದಾರರ ಶುಲ್ಕವನ್ನೂ ಪಾವತಿಸಲು ತಂತ್ರಾಂಶದಲ್ಲಿ ಸೇರಿಸಿ, ಆಸ್ತಿ ತೆರಿಗೆಯಲ್ಲೇ ಅದನ್ನು ಪಾವತಿಸಲು ಸೂಚಿಸಲಾಗಿದೆ. ಶುಲ್ಕದ ಪ್ರಮಾಣವನ್ನು ತಗ್ಗಿಸಲು ಕ್ರಮ ಕೈಗೊಳ್ಳಬೇಕು, ನಾಗರಿಕರ ಮೇಲಿನ ಹೊರೆಯನ್ನು ಕಡಿಮೆ ಮಾಡಬೇಕು' ಎಂದು ಕೋರಿದ್ದಾರೆ.

ನೈಋತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂ. ಸಿಎಓ/ಸಿಎನ್/ಬಿಎನ್‌ಸಿ/112/2025

ದಿನಾಂಕ : 24–04–2025

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಕ್ಕಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ಬೆಂಗಳೂರು ದಂಡು ನಲ್ಲಿ ಹೊಸದಾಗಿ ನಿರ್ಮಿತವಾದ ಓಆರ್‌ಹೆಚ್ ಕಟ್ಟಡದ 3, 4 ಮತ್ತು 5ನೇ ಮಹಡಿಗಳಲ್ಲಿ (3 ಮಹಡಿಗಳು) ಅಧಿಕಾರಿಗಳ ರೆಸ್ಟ್ ಹೌಸ್‌ನ ನಿರ್ಮಾಣ (ಸಂಯೋಜಿತ ಟೆಂಡರ್) (ಟೆಂಡರ್ ಉಲ್ಲೇಖ ಸಂ. ಬಿಎನ್‌ಸಿ–ಎಸ್‌ಟಿಎನ್–ಡೆವೆಲಪ್‌ಮೆಂಟ್–04)	ರೂ. 4,60,93,121/–

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 21–05–2025 ರಂದು 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಉಪ ಮುಖ್ಯ ಇಂಜಿನಿಯರ್ / ನಿರ್ಮಾಣ / ಕಾಮಗಾರಿಗಳು / ಬೆಂಗಳೂರು ದಂಡು

ಪಿಯುಬಿ/70/ಎಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2025–26

South Western Railway - SWR | SWRRLY | SWRRLY

IN THE COURT OF THE SENIOR CIVIL JUDGE JMFC AT SIRA

M.C.No. 88/2024

PETITIONER: Girish T. S/o Thimmaiah T. aged about 35 years, Niladri Nilaya, 2nd Cross, 2nd Main, Mahalakshmi Nagar, Batawadi, Tumakuru. **V/S**

RESPONDENT: Lavanya H.S. W/o Girish T aged about 29 years, R/at Hirethrupi Village, Opp. to Anjaneyaswamy Temple, Gudibande Mandal, Madakashira Taluk, Sathay Sai District, Andhra Pradesh.

PUBLICATION

Whereas the petitioner is filled the above petition against the respondent to grant decree of Divorce by Dissolvoing the marriage between the petitioner and respondent solemnized at Hirethurpi Village, Gudibanda Mandal, Madakasira Taluk, Sathya Sai District, Andhra Pradesh. Before the Hon'ble Senior Civil Judge and JMFC at Sira. Though the said Hon'ble court has issued notice to you through court and RLAD, which are un served, hence you are hereby summoned to appear in the above said court and case in person or by pleader on 10.06.2025 at 11 AM to answer the same. Failing which the petition will be disposed off exparte. Given under my hand and seal of the Hon'ble court on this day of 28.04.2025.

By order of Court
Sign/- Shirastedar
Senior Civil Judge & JMFC
Sira.

K. Umesh, Advocate,
Sira - 572137. Mob: 9448771309

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:

080 - 45557160 /161/ 162/ 163/ 164
9845114560 / 9731810277/ 9886213331

REAL ESTATE SELLING

Flat

Kanakapura Road

NEW FLATS Kanakapura Road near Forum Mall, Konanakunte Metro. Swimming Pool, Club house. 2 BHK/ 3 BHK. Good Construction. Anika Maverick Projects:- Sowmya:- 9342247637.

Sites

Nagarabhavi

SALE: SITE 30x60 Nagarabhavi 2nd Stage, 'A' Khata. Immediate Registration. Genuine Buyers. Contact: 6361819741.

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

PERSONAL

Change of Name

CHANGE OF NAME
I, Ashish, S/o Ashok Shetty Residing at No.9, SLV, Regency, D.No. F4, 4th Cross, Vinayaka Layout, Vijayanagar, Bangalore-560040 have changed my name as Ashish A Shetty vide affidavit date 09-04-2025 Sworn before notary K.V.Mani Bangalore.

BUSINESS

Business to Business

Others

REQUIRED COLLATERALS fund againest security T & C 9845203777 required closed sized factory

DH Classifieds — More value, more impact | ಪ್ರಜಾವಾಣಿ
EDUCATION
Book your Educational Related Ads in DH All Karnataka + Prajavani Bengaluru City
www.dhclassifieds.com
BOOK NOW
*Conditions apply
For more details contact:
9731810277
9886213331
9845114560

EDUCATION SUCCESS — ಕ್ಲಾಸಿಫೈಡ್ಸ್



CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

‘ಕರ್ನಾಟಕ ಗ್ರಾಮೀಣ ಬ್ಯಾಂಕ್’ ಇಂದಿನಿಂದ ಅಸ್ತಿತ್ವಕ್ಕೆ

ಪ್ರಜಾವಾಣಿ ವಾರ್ತೆ

ಶ್ರೀಕಾಂತ ಎಂ. ಭಂಡಿವಾಡ

ಧಾರವಾಡ: 'ಒಂದು ರಾಜ್ಯ ಒಂದು ಗ್ರಾಮೀಣ ಬ್ಯಾಂಕ್’ ನೀತಿಯನ್ವಯ ಕೇಂದ್ರ ಸರ್ಕಾರವು ವಿಲೀನ ಅಧಿಸೂಚನೆ ಹೊರಡಿಸಿದ್ದು, ರಾಜ್ಯದಲ್ಲಿನ ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ್ (ಕೆವಿಜಿಬಿ) ಮತ್ತು ಕರ್ನಾಟಕ ಗ್ರಾಮೀಣ ಬ್ಯಾಂಕ್ (ಕೆಜಿಬಿ) ವಿಲೀನವಾಗಿ ಮೇ 1ರಿಂದ ಕರ್ನಾಟಕ ಗ್ರಾಮೀಣ ಬ್ಯಾಂಕ್ ಉದಯಿಸಲಿದೆ.

ಈ ನೂತನ ಬ್ಯಾಂಕ್ ಪ್ರಧಾನ ಕಚೇರಿ ಬಳ್ಳಾರಿಯಲ್ಲಿ ಇದೆ. ಕೆವಿಜಿಬಿ ಅಧ್ಯಕ್ಷ ಶ್ರೀಕಾಂತ ಎಂ. ಭಂಡಿವಾಡ ಅವರು ನೂತನ ಕರ್ನಾಟಕ ಗ್ರಾಮೀಣ ಬ್ಯಾಂಕ್ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಲಿದ್ದಾರೆ.

ಧಾರವಾಡದಲ್ಲಿ ಪ್ರಧಾನ ಕಚೇರಿಯಿದ್ದ ಕೆವಿಜಿಬಿ ಒಂಬತ್ತು ಜಿಲ್ಲೆಗಳಲ್ಲಿ ಒಟ್ಟು 629 ಶಾಖೆ ಹೊಂದಿದ್ದು, ವಹಿವಾಟು ₹38,714 ಕೋಟಿ ಇದೆ. ಬಳ್ಳಾರಿಯಲ್ಲಿ ಪ್ರಧಾನ ಕಚೇರಿ ಇದ್ದ ಕೆಜಿಬಿ 22 ಜಿಲ್ಲೆಗಳಲ್ಲಿ ಒಟ್ಟು 1,122 ಶಾಖೆ ಹೊಂದಿದ್ದು, ವಹಿವಾಟು ₹66,137 ಕೋಟಿ ಇದೆ.

‘ಎರಡೂ ಗ್ರಾಮೀಣ ಬ್ಯಾಂಕ್‌ಗಳು ಪ್ರಾದೇಶಿಕ ಅಭಿವೃದ್ಧಿಯಲ್ಲಿ ಪಾತ್ರ ವಹಿಸಿವೆ. ರೈತರು, ಬಡವರ, ಕುಶಲ ಕರ್ಮಿಗಳಿಗೆ ನೆರವಾಗಿವೆ. ಇದೀಗ ವಿಲೀನವಾಗಿ ಉದಯಿಸಿರುವ ನೂತನ ಬ್ಯಾಂಕ್ ವಿಶ್ವಾಸದಿಂದ ಮುನ್ನಡೆಯಲಿದೆ’ ಎಂದು ಬ್ಯಾಂಕ್ ಅಧ್ಯಕ್ಷ ಶ್ರೀಕಾಂತ ಭಂಡಿವಾಡ ತಿಳಿಸಿರುವುದಾಗಿ ಬ್ಯಾಂಕ್‌ನ ಎಜಿಎಂ ಉಲ್ಲಾಸ್ ಆರ್. ಗುನಗಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೆಎಂಸಿ, ಬಿಬಿಎಂಪಿ ಕಾಯ್ದೆಗಳ ಪುಸ್ತಕಗಳ ಬಾಕ್ಸ್ ಹಸ್ತಾಂತರಿಸಿದ ಉಮಾಶಂಕರ್

ತುಷಾರ್, ಮಹೇಶ್ವರ ರಾವ್ ಅಧಿಕಾರ ಸ್ವೀಕಾರ

ಪ್ರಜಾವಾಣಿ ವಾರ್ತೆ

ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ಮಹೇಶ್ವರ ರಾವ್ ಅವರಿಗೆ ‘ದಂಡ’ ನೀಡುವ ಮೂಲಕ ಅಧಿಕಾರ ಹಸ್ತಾಂತರಿಸಿದರು. ಆಡಳಿತಧಿಕಾರಿಯಾಗಿ ನಿವೃತ್ತರಾದ ಎಸ್‌.ಆರ್‌. ಉಮಾಶಂಕರ್, ವಿಶೇಷ ಆಯುಕ್ತ ಕರೀಗೌಡ ಉಪಸ್ಥಿತರಿದ್ದರು

ಬೆಂಗಳೂರು: ಬಿಬಿಎಂಪಿ ಮುಖ್ಯ ಆಯುಕ್ತರಾಗಿದ್ದ ತುಷಾರ್ ಗಿರಿನಾಥ್ ಅವರು ಆಡಳಿತಾಧಿಕಾರಿಯಾಗಿ ಹಾಗೂ ಮುಖ್ಯ ಆಯುಕ್ತರಾಗಿ ಬಿಎಂಆರ್‌ಸಿಎಲ್‌ನ ವ್ಯವಸ್ಥಾಪಕ ನಿರ್ದೇಶಕ ಎಂ. ಮಹೇಶ್ವರ ರಾವ್ ಅವರು ಬುಧವಾರ ಅಧಿಕಾರ ಸ್ವೀಕರಿಸಿದರು.

ಬಿಬಿಎಂಪಿ ಆಡಳಿತಾಧಿಕಾರಿ ಆಗಿದ್ದ ಎಸ್‌.ಆರ್. ಉಮಾಶಂಕರ್ ಅವರು ಏಪ್ರಿಲ್ 30ರಂದು ನಿವೃತ್ತರಾಗಿದ್ದು, ಅವರಿಂದ ತುಷಾರ್ ಗಿರಿನಾಥ್ ಅಧಿಕಾರ ಸ್ವೀಕರಿಸಿದರು. ಬೆಳ್ಳಿಯ ಬೀಗದ ಕೀ, ಕೆಎಂಸಿ ಹಾಗೂ ಬಿಬಿಎಂಪಿ ಕಾಯ್ದೆಗಳ ಪುಸ್ತಕಗಳ ಬಾಕ್ಸ್ ಅನ್ನು ಹಸ್ತಾಂತರಿಸಿದರು. ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ಬಿಎಂಆರ್‌ಸಿಎಲ್‌ನ ವ್ಯವಸ್ಥಾಪಕ ನಿರ್ದೇಶಕ ಎಂ. ಮಹೇಶ್ವರ ರಾವ್ ಅವರಿಗೆ ಅಧಿಕಾರ ಹಸ್ತಾಂತರಿಸಿದರು.

ಎಂ. ಮಹೇಶ್ವರ ರಾವ್ ಅವರು 2018ರ ಮೇ 3ರಿಂದ ಜೂನ್ 29ರವರೆಗೆ ಬಿಬಿಎಂಪಿ ಆಯುಕ್ತರಾಗಿದ್ದರು. ಇದೀಗ ಮುಖ್ಯ ಆಯುಕ್ತ ಹುದ್ದೆಯನ್ನು ಹೆಚ್ಚುವರಿಯಾಗಿ ವಹಿಸಿಕೊಂಡಿದ್ದಾರೆ.

ಬೆಂಗಳೂರು ನಗರ ಪಾಲಿಕೆ, ಮಹಾನಗರ ಪಾಲಿಕೆ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಈವರೆಗೆ ವಿವಿಧ ಅವಧಿಯಲ್ಲಿ 29 ಅಧಿಕಾರಿಗಳು ಆಡಳಿತಾಧಿಕಾರಿಗಳಾಗಿದ್ದರು. ತುಷಾರ್ ಗಿರಿನಾಥ್ ಅವರು 30ನೇ ಆಡಳಿತಾಧಿಕಾರಿ ಆಗಿದ್ದಾರೆ.

ಅದೇ ರೀತಿ, ವಿವಿಧ ಅವಧಿಗಳಲ್ಲಿ 66 ಆಯುಕ್ತರಿದ್ದರು. 2021ರಲ್ಲಿ ಗೌರವ ಗುಪ್ತ ಅವರು ಪ್ರಥಮ ಮುಖ್ಯ ಆಯುಕ್ತರಾಗಿದ್ದರು. 2022ರ ಮೇ 6ರಿಂದ ತುಷಾರ್ ಗಿರಿನಾಥ್ ಅವರು ಮುಖ್ಯ ಆಯುಕ್ತರಾಗಿದ್ದರು. ಮಹೇಶ್ವರ ರಾವ್ ಅವರು ಬಿಬಿಎಂಪಿಯ ಮೂರನೇ ಮುಖ್ಯ ಆಯುಕ್ತರಾಗಿದ್ದಾರೆ.

ನಗರ ಬದಲಾಗಿದೆ: ಮಹೇಶ್ವರ ರಾವ್

‘15 ವರ್ಷದ ಹಿಂದೆ ಬಿಬಿಎಂಪಿಯಲ್ಲಿ ವಿಶೇಷ ಆಯುಕ್ತನಾಗಿ ಕೆಲಸ ಮಾಡಿದ್ದೇನೆ. ಅಂದಿಗಿಂತ ಇಂದಿಗೆ ನಗರ ಬಹಳಷ್ಟು ಬದಲಾಗಿದೆ. ತುಷಾರ್ ಗಿರಿನಾಥ್ ಅವರಿಗೆ ಬಿಬಿಎಂಪಿ ಬಗ್ಗೆ ಮೂರು ವರ್ಷದ ಅಪಾರ ಅನುಭವವಿದೆ. ಅವರು ಆಡಳಿತಾಧಿಕಾರಿಯಾಗಿದ್ದು, ಅವರ ಮಾರ್ಗದರ್ಶನದಲ್ಲಿ ಕೆಲಸ ಮಾಡುತ್ತೇನೆ’ ಎಂದು ಬಿಬಿಎಂಪಿಯ ನೂತನ ಮುಖ್ಯ ಆಯುಕ್ತ ಎಂ. ಮಹೇಶ್ವರ ರಾವ್ ಹೇಳಿದರು.

‘ಬ್ರ್ಯಾಂಡ್ ಬೆಂಗಳೂರು ಸೇರಿದಂತೆ ಹಲವು ಕೆಲಸಗಳನ್ನು ಮಾಡಿದ್ದಾರೆ. ಆದರೂ ಅವರು ಸಾಕಷ್ಟು ಕೆಲಸ ಬಾಕಿ ಉಳಿದಿದೆ ಎಂದು ಹೇಳಿದ್ದಾರೆ, ಅದನ್ನು ಪೂರ್ಣಗೊಳಿಸಲು ನಾನು ಕ್ರಮ ಕೈಗೊಳ್ಳುತ್ತೇನೆ. ಮಳೆಗಾಲದ ಸಮಸ್ಯೆಗಳನ್ನು ನಿವಾರಿಸಲು ಹಾಗೂ ಇತರೆ ಮೂಲಸೌಕರ್ಯ ಯೋಜನೆಗಳನ್ನು ಪೂರ್ಣಗೊಳಿಸಲು ಪ್ರಯತ್ನ ಮಾಡುತ್ತೇನೆ. ಮಳೆಗಾಲದಲ್ಲಿ ಹಲವು ಸೂಕ್ಷ್ಮ ಪ್ರದೇಶಗಳನ್ನು ಗುರುತಿಸಲಾಗಿದೆ. ಅವುಗಳ ಬಗ್ಗೆ ಸಾಕಷ್ಟು ಕ್ರಮವಾಗಿ, ಇನ್ನೂ ಕೆಲವು ಕಡೆ ಆಗಿಲ್ಲ. ಆ ಬಗ್ಗೆ ನಿಗಾವಹಿಸಲಾಗುವುದು’ ಎಂದು ಹೇಳಿದರು.

ತೃಪ್ತಿ ತಂದಿಲ್ಲ: ತುಷಾರ್ ಗಿರಿನಾಥ್

‘ಮೂರು ವರ್ಷದ ದೀರ್ಘ ಅವಧಿಗೆ ಬಿಬಿಎಂಪಿ ಮುಖ್ಯ ಆಯುಕ್ತನಾಗಿ ಕಾರ್ಯನಿರ್ವಹಿಸಿದ್ದೇನೆ. ಎಲ್ಲವನ್ನೂ ಮಾಡಿದ್ದೇನೆ ಎಂಬ ತೃಪ್ತಿ ಇಲ್ಲ. ಆಡಳಿತ ಅಥವಾ ಸರ್ಕಾರ ಎಂಬುದು ನಿರಂತರ ಪ್ರಕ್ರಿಯೆ. ಯಾವ ಸಂದರ್ಭದಲ್ಲೂ ಎಲ್ಲವೂ ಮುಗಿಯುವುದಿಲ್ಲ. ಯಾವಾಗ ಯಾವ ಹುದ್ದೆಯನ್ನು ಬಿಡುವಾಗ ಸಾಕಷ್ಟು ಕೆಲಸ ಮಾಡಿದ್ದರೂ ಇನ್ನೂ ಕೆಲಸ ಮಾಡಬೇಕಿತ್ತು ಎನಿಸುತ್ತದೆ’ ಎಂದು ತುಷಾರ್ ಗಿರಿನಾಥ್ ಹೇಳಿದರು.

‘ಮಹಾನಗರ ಪಾಲಿಕೆ ಇರುವುದರಿಂದ, ಜನನದಿಂದ ಮರಣದವರೆಗೂ ಹಲವು ಚಟುವಟಿಕೆಗಳಿರುವುದರಿಂದ ತಪ್ಪುಗಳು ಆಗುತ್ತಾ ಇರುತ್ತವೆ. ತಪ್ಪಾಗಿರುವುದಕ್ಕೆ ಮಹಾನಗರದ ಜನರಲ್ಲಿ ಕ್ಷಮೆಯಾಚಿಸುತ್ತೇನೆ. ಮಿತ್ರ ಮಹೇಶ್ವರ ರಾವ್ ಅವರು ಅತಿ ಸಕ್ರಿಯವಾಗಿ ಕೆಲಸ ಮಾಡುವ ಅಧಿಕಾರಿ. ಅವರು ಕ್ರೀಡಾಪಟುವೂ ಆಗಿದ್ದು, ಎಲ್ಲವನ್ನೂ ಸಕಾರಾತ್ಮಕವಾಗಿ ತೆಗೆದುಕೊಂಡು ಒಳ್ಳೆಯ ಕೆಲಸ ಮಾಡುತ್ತಾರೆ. ಅವರಿಗೆ ಎಲ್ಲರೂ ಸಹಕಾರ ನೀಡಲಿ. 12– 13 ಐಎಎಸ್ ಅಧಿಕಾರಿಗಳು ಬಿಬಿಎಂಪಿಯಲ್ಲಿ ಕೆಲಸ ಮಾಡುತ್ತಿರುವುದು ಅಭೂತಪೂರ್ವ ಕಾರ್ಯ. ಇದಕ್ಕೆ ಕಾರಣರಾದ ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿಯವರಿಗೆ ಧನ್ಯವಾದ ಸಲ್ಲಿಸುತ್ತೇನೆ’ ಎಂದು ಹೇಳಿದರು.

ಕಾರ್ಮಿಕ ಇಲಾಖೆ
ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ

"ಕಾರ್ಮಿಕ ದಿನಾಚರಣೆಯ" ಶುಭಾಶಯಗಳು

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು
ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು

ಕಳೆದ ಎರಡು ವರ್ಷಗಳಲ್ಲಿ
ಕಾರ್ಮಿಕ ಇಲಾಖೆಯ ವತಿಯಿಂದ ಕಾರ್ಮಿಕರ ಶ್ರೇಯೋಭಿವೃದ್ಧಿಗಾಗಿ ಅನುಷ್ಠಾನಗೊಳಿಸಿದ ಪ್ರಮುಖ ಯೋಜನೆಗಳು ಮತ್ತು ಕಾರ್ಯಕ್ರಮಗಳು

ಕಾರ್ಮಿಕ ಆಯುಕ್ತಾಲಯ
- ಕರ್ನಾಟಕ ಕಡ್ಡಾಯ ಉಪಧನ ವಿಮಾ ನಿಯಮಗಳು 2024 ಜಾರಿಗೊಳಿಸಿ ಕಾರ್ಮಿಕರ ಉಪಧನವನ್ನು ಸಂರಕ್ಷಿಸಲಾಗುತ್ತಿದೆ.
- ಕನಿಷ್ಠ ವೇತನವನ್ನು ಪರಿಷ್ಕರಿಸಲಾಗಿದೆ. ಇದರಿಂದ ರಾಜ್ಯಾದ್ಯಂತ ಒಟ್ಟು 1.7 ಕೋಟಿ ಸಂಘಟಿತ ಮತ್ತು ಅಸಂಘಟಿತ ಕಾರ್ಮಿಕರಿಗೆ ಪರಿಷ್ಕೃತ ವೇತನದ ಸೌಲಭ್ಯ ದೊರಕಲಿದೆ.
- ಕರ್ನಾಟಕ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳ ಕಾಯ್ದೆ-1961ರ ಅನ್ವಯಿಸುವಿಕೆಯನ್ನು ರಾಜ್ಯದ ಎಲ್ಲಾ ಭೂ ಭಾಗಗಳಿಗೂ ವಿಸ್ತರಿಸಿ ಅಧಿಸೂಚನೆಯನ್ನು ಹೊರಡಿಸಿ ಕಾರ್ಮಿಕರ ಹಿತರಕ್ಷಿಸಲಾಗುತ್ತಿದೆ.

ಕರ್ನಾಟಕ ರಾಜ್ಯ ಕಾರ್ಮಿಕ ಅಧ್ಯಯನ ಸಂಸ್ಥೆ, ಬೆಂಗಳೂರು
- ಕಾರ್ಮಿಕ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿ, ಕೈಗಾರಿಕೆ ಹಾಗೂ ಕಾರ್ಖಾನೆಗಳ ವಿವಿಧ ಬಗೆಯ ನೌಕರರಿಗೆ ತರಬೇತಿಯನ್ನು ನೀಡುವುದು, ಇದರಿಂದಾಗಿ ಕಾರ್ಮಿಕ ಇಲಾಖೆಯನ್ನು ಉತ್ಕೃಷ್ಟವಾಗಿ ಹಾಗೂ ಅಭಿವೃದ್ಧಿ ದಿಸೆಯಲ್ಲಿ ಕಾರ್ಯನಿರ್ವಹಿಸುವುದು ಈ ಸಂಸ್ಥೆಯ ಮುಖ್ಯೋದ್ದೇಶವಾಗಿದೆ.
- ಕಳೆದ ಎರಡು ವರ್ಷದ ಅವಧಿಯಲ್ಲಿ 1572 ಸಿಬ್ಬಂದಿಗಳಿಗೆ ತರಬೇತಿ ನೀಡಲಾಗಿರುತ್ತದೆ ಹಾಗೂ ಇಲ್ಲಿಯವರೆಗೂ ಸಂಸ್ಥೆಯ ವತಿಯಿಂದ ಒಟ್ಟು 154 ವಿವಿಧ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿರುತ್ತದೆ.

ನಿಮ್ಮ ಶ್ರಮ, ಸಮರ್ಪಣೆ ಹಾಗೂ ದೇಶದ ಅಭಿವೃದ್ಧಿಯಲ್ಲಿ ನೀವು ವಹಿಸಿದ ಪಾತ್ರಕ್ಕೆ ಸರ್ಕಾರದ ಪರವಾಗಿ ಧನ್ಯವಾದಗಳನ್ನು ಅರ್ಪಿಸಲು ಇಚ್ಛಿಸುತ್ತೇನೆ.
||ಶ್ರಮ ಮೇವ ಜಯತೇ||
- ಸಂತೋಷ್ ಲಾಡ್ ಮಾನ್ಯ ಕಾರ್ಮಿಕ ಸಚಿವರು

ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ
- 36.29 ಲಕ್ಷ ಫಲಾನುಭವಿಗಳಿಗೆ 2078.91 ಕೋಟಿ ವೆಚ್ಚದಲ್ಲಿ ವಿವಿಧ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ ಸೌಲಭ್ಯಗಳನ್ನು ಒದಗಿಸಲಾಗಿದೆ.
- ರಾಜ್ಯಾದ್ಯಂತ ಮುನ್ನೆಚ್ಚರಿಕಾ ಆರೋಗ್ಯ ತಪಾಸಣಾ ಶಿಬಿರಗಳನ್ನು ಆಯೋಜಿಸಲಾಗಿದ್ದು 11.38 ಲಕ್ಷ ಕಾರ್ಮಿಕರು ಯೋಜನೆಯ ಪ್ರಯೋಜನೆಯನ್ನು ಪಡೆದಿರುತ್ತಾರೆ.
- ಮಂಡಳಿಯ ವತಿಯಿಂದ ನೋಂದಾಯಿತ ನಿರ್ಮಾಣ ಕಾರ್ಮಿಕರ ಆರೋಗ್ಯದ ಹಿತದೃಷ್ಟಿಯಿಂದ ನೂತನವಾಗಿ ರಾಜ್ಯಾದ್ಯಂತ 100 ಸಂಚಾರಿ ಆರೋಗ್ಯ ಘಟಕ ವಾಹನಗಳನ್ನು ಪ್ರಾರಂಭಿಸಲಾಗಿದೆ.
- 6.12 ಲಕ್ಷ ಕಟ್ಟಡ ನಿರ್ಮಾಣ ಕಾರ್ಮಿಕರನ್ನು ಫಲಾನುಭವಿಗಳಾಗಿ ನೋಂದಾಯಿಸಲಾಗಿದೆ.
- ಕಟ್ಟಡ ಮತ್ತು ಇತರೆ ನಿರ್ಮಾಣ ಕಾಮಗಾರಿಗಳಿಂದ 2370 ಕೋಟಿ ಮೊತ್ತದಷ್ಟು ಸುಂಕ ಸಂಗ್ರಹಿಸಲಾಗಿದೆ.
- 43 ಸುಸಜ್ಜಿತ ಡಾ. ಬಿ.ಆರ್. ಅಂಬೇಡ್ಕರ್ ಕಾರ್ಮಿಕ ಸೇವಾ ಕೇಂದ್ರಗಳನ್ನು ಸ್ಥಾಪಿಸಲು ಕ್ರಮವಹಿಸಲಾಗುತ್ತಿದೆ.

ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ
- ಕರ್ನಾಟಕ ಮೋಟಾರು ಸಾರಿಗೆ ಮತ್ತು ಇತರ ಸಂಬಂಧಿತ ಕಾರ್ಮಿಕರ ಸಾಮಾಜಿಕ ಭದ್ರತೆ ಮತ್ತು ಕ್ಷೇಮಾಭಿವೃದ್ಧಿ ಕಾಯ್ದೆ 2024 ಜಾರಿಗೊಳಿಸಿ ಮೋಟಾರು ಸಾರಿಗೆ ಮತ್ತು ಇತರೆ ಸಂಬಂಧಿತ ಕಾರ್ಮಿಕರಿಗೆ ಸಾಮಾಜಿಕ ಭದ್ರತಾ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ.
- ಕರ್ನಾಟಕ ರಾಜ್ಯ ಗಿಗ್ ಕಾರ್ಮಿಕರ ವಿಮಾ ಯೋಜನೆಯನ್ನು ಜಾರಿಗೊಳಿಸಿ ಇ-ಕಾಮರ್ಸ್ ವಲಯದ ಗಿಗ್ ಕಾರ್ಮಿಕರಿಗೆ ಜೀವ ವಿಮೆ, ಅಪಘಾತ ವಿಮೆ ಮತ್ತು ಆಸ್ಪತ್ರೆ ವೆಚ್ಚಗಳ ಮರುಪಾವತಿ ಸೇರಿದಂತೆ ರೂ. 4.00 ಲಕ್ಷಗಳ ವಿಮಾ ಸೌಲಭ್ಯವನ್ನು ಒದಗಿಸಲಾಗುತ್ತಿದೆ.
- ಕರ್ನಾಟಕ ಸಿನಿ ಮತ್ತು ಸಾಂಸ್ಕೃತಿಕ ಕಾರ್ಯಕರ್ತರ (ಕ್ಷೇಮಾಭಿವೃದ್ಧಿ) ಕಾಯ್ದೆ, 2024ನ್ನು ಜಾರಿಗೊಳಿಸಲಾಗಿದೆ.
- ಕರ್ನಾಟಕ ರಾಜ್ಯ ದಿನಪತ್ರಿಕೆ ವಿತರಣಾ ಕಾರ್ಮಿಕರ ಅಪಘಾತ ಪ್ರಯೋಜನ ಮತ್ತು ಆರೋಗ್ಯ ಪ್ರಯೋಜನ ಯೋಜನೆಯನ್ನು ಜಾರಿಗೊಳಿಸಲಾಗಿದೆ.
- ಆಶಾದೀಪ ಯೋಜನೆ: ಖಾಸಗಿ ವಲಯದ ಉದ್ದಿಮೆಗಳಲ್ಲಿ ಪ.ಜಾತಿ/ಪ.ಪಂಗಡ ವರ್ಗಗಳಿಗೆ ಉದ್ಯೋಗಾವಕಾಶಗಳನ್ನು ಒದಗಿಸುವ ಆಶಾದೀಪ ಯೋಜನೆಯನ್ನು ಪರಿಷ್ಕರಿಸಿ ಅನುಷ್ಠಾನಗೊಳಿಸಲಾಗುತ್ತಿದೆ.

ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ
- 56,183 ಫಲಾನುಭವಿಗಳ ಮಕ್ಕಳಿಗೆ ರೂ. 5103.04 ಲಕ್ಷಗಳ ಶೈಕ್ಷಣಿಕ ಪ್ರೋತ್ಸಾಹ ಧನ ವಿತರಣೆ.
- 10 ಫಲಾನುಭವಿಗಳಿಗೆ ರೂ. 1.55 ಲಕ್ಷಗಳ ವೈದ್ಯಕೀಯ ನೆರವು ನೀಡಲಾಗಿದೆ.
- ಮೃತ ಕಾರ್ಮಿಕರ ಅಂತ್ಯ ಸಂಸ್ಕಾರಕ್ಕೆ ಒಟ್ಟು 808 ಫಲಾನುಭವಿಗಳಿಗೆ ರೂ. 80.80 ಲಕ್ಷಗಳನ್ನು ಧನ ಸಹಾಯವಾಗಿ ನೀಡಲಾಗಿದೆ.
- ಹೆರಿಗೆ ಭತ್ಯೆ ಸೌಲಭ್ಯದಡಿ 1408 ಮಹಿಳಾ ಫಲಾನುಭವಿಗಳಿಗೆ ರೂ. 140.80 ಲಕ್ಷಗಳನ್ನು ಧನ ಸಹಾಯವಾಗಿ ನೀಡಲಾಗಿದೆ.
- ಕಾರ್ಮಿಕರ ಉಪಯೋಗಕ್ಕಾಗಿ ಶಿವಮೊಗ್ಗ ಜಿಲ್ಲೆಯ ಭದ್ರಾವತಿ, ಗದಗ ಜಿಲ್ಲೆಯ ನರಗುಂದ, ಹಾವೇರಿ ಜಿಲ್ಲೆಯ ರಟ್ಟಿಹಳ್ಳಿ ಹಾಗೂ ಬಳ್ಳಾರಿಯಲ್ಲಿ ಒಟ್ಟು ರೂ. 21.5 ಕೋಟಿ ವೆಚ್ಚದಲ್ಲಿ ಸಮುದಾಯ ಭವನಗಳನ್ನು ನಿರ್ಮಾಣ ಮಾಡಲಾಗಿದೆ.

ಕಾರ್ಖಾನೆಗಳು ಬಾಯ್ಲರುಗಳು ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆ
- ವ್ಯವಹಾರವನ್ನು ಸುಲಭಗೊಳಿಸಲು, ವಿವಿಧ ಸುಧಾರಣೆಗಳನ್ನು ಕೈಗೊಳ್ಳಲಾಗಿದೆ.
  1. ವಾರಕ್ಕೆ 48 ಗಂಟೆಗಳ ಮಿತಿಯನ್ನು ಬದಲಾಯಿಸದೆ ದೈನಂದಿನ ಕೆಲಸದ ಸಮಯದಲ್ಲಿ ನಮ್ಯತೆ.
  2. ಓವರ್‌ಟೈಮ್ 3 ತಿಂಗಳ ಅವಧಿಯಲ್ಲಿ 144 ಗಂಟೆಗಳವರೆಗೆ ಹೆಚ್ಚುವರಿ ಕೆಲಸ ನಿರ್ವಹಿಸಲು ಅವಕಾಶ
  3. ಮಹಿಳಾ ಕಾರ್ಮಿಕರಿಗೆ ಮೂರು ಪಾಳಿಗಳಿಗೂ ಮತ್ತು ಕಾಲಾನಂತರದಲ್ಲಿಯೂ ಅವಕಾಶ ನೀಡಲಾಗಿದೆ.
- ಸುರಕ್ಷತೆ ಆರೋಗ್ಯ ಮತ್ತು ಅಪಘಾತ ತಡೆಗಟ್ಟುವಿಕೆಯ ಕುರಿತು ಜಾಗೃತಿ ಮೂಡಿಸಲು, 212 ತರಬೇತಿ ಕಾರ್ಯಕ್ರಮಗಳು ಮತ್ತು 21 ವಿಚಾರ ಸಂಕಿರಣಗಳನ್ನು ನಡೆಸಲಾಗಿದೆ.
- ಇಲಾಖೆಯು 21,737 ತಪಾಸಣೆಗಳನ್ನು ನಡೆಸಿದೆ ಮತ್ತು 309 ಪ್ರಕರಣಗಳಿಗೆ ಕಾನೂನು ಕ್ರಮಗಳನ್ನು ಪ್ರಾರಂಭಿಸಲಾಗಿದೆ.

ಕಾರ್ಮಿಕರ ರಾಜ್ಯ ವಿಮಾ ಯೋಜನೆ ವೈದ್ಯಕೀಯ ಸೇವೆಯ ನಿರ್ದೇಶನಾಲಯ (ಇ.ಎಸ್.ಐ.ಎಸ್)
- ರಾಜ್ಯಾದ್ಯಂತ 37 ಲಕ್ಷ ವಿಮಾದಾರರು ಹಾಗೂ 1.88 ಕೋಟಿ ವಿಮಾದಾರರ ಅವಲಂಭಿತರಿಗೆ ವೈದ್ಯಕೀಯ ಸೇವೆಗಳನ್ನು ರಾಜ್ಯದ 07 ಕಾ.ರಾ.ವಿ ಆಸ್ಪತ್ರೆಗಳಲ್ಲಿ, 02 ರೋಗ ಪತ್ತೆ ಹಚ್ಚುವ ಕೇಂದ್ರಗಳಲ್ಲಿ ಮತ್ತು 125 ಕಾ.ರಾ.ವಿ ಚಿಕಿತ್ಸಾಲಯಗಳ ಮುಖಾಂತರ ಒದಗಿಸಲಾಗುತ್ತಿದೆ.
- ಚಿಂಚೋಳಿ. ಅರಸೀಕೆರೆ, ಗಂಜಿಮಟ ಮತ್ತು ಪಡುಬಿದ್ರಿಯಲ್ಲಿ ಹೊಸ ಇಎಸ್‌ಐ ಚಿಕಿತ್ಸಾಲಯಗಳನ್ನು ತೆರೆಯಲಾಗಿದೆ.
- 2024-25 ರ ಬಜೆಟ್‌ನಲ್ಲಿ ಸೂಪರ್ ಸ್ಪೆಷಾಲಿಟಿ ಸೇವೆಗಳು, ಡಿಜಿಟಲ್ ಡಯಾಗ್ನೋಸ್ಟಿಕ್ ಕಿಯೋಸ್ಕ್ ಮೊಬೈಲ್ ಹೆಲ್ತ್ ಯೂನಿಟ್, ಸಮಗ್ರ ಆರೋಗ್ಯ ತಪಾಸಣೆಯನ್ನು ಒಟ್ಟು ರೂ. 311 ಕೋಟಿಗಳಲ್ಲಿ ಜಾರಿಗೆ ತರಲು ಇಎಸ್‌ಐ ಯೋಜನೆಗಳನ್ನು ರೂಪಿಸಲಾಗಿದೆ.


ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯ ರವರು ಮತ್ತು ಕಾರ್ಮಿಕ ಇಲಾಖೆ ಸಚಿವರು ಹಾಗೂ ಮಂಡಳಿಯ ಅಧ್ಯಕ್ಷರಾದ ಶ್ರೀ ಸಂತೋಷ್ ಎಸ್ ಲಾಡ್ ರವರು ಇಲಾಖಾ ಕಾರ್ಯಕ್ರಮವೊಂದರಲ್ಲಿ ಪಾಲ್ಗೊಂಡಿರುವುದು.

ಸಾರ್ವಜನಿಕ ಆಸ್ತಿ ಪಾಸ್ತಿ ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು - ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

https://karbwwb.karnataka.gov.in X WorkersBoard workerswelfare /kbocwwb /kbocwwb
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ : ಕಾರ್ಮಿಕ ಅಧಿಕಾರಿಗಳು, ಹಿರಿಯ ಕಾರ್ಮಿಕ ನಿರೀಕ್ಷಕರು / ಕಾರ್ಮಿಕ ನಿರೀಕ್ಷಕರ ಕಛೇರಿ

ಡಾ|| ಎನ್.ವಿ. ಪ್ರಸಾದ್ ಭಾ.ಆ.ಸೇ., ಸರ್ಕಾರದ ಕಾರ್ಯದರ್ಶಿಗಳು, ಕಾರ್ಮಿಕ ಇಲಾಖೆ
ಡಾ. ಹೆಚ್.ಎನ್. ಗೋಪಾಲಕೃಷ್ಣ ಭಾ.ಆ.ಸೇ., ಆಯುಕ್ತರು, ಕಾರ್ಮಿಕ ಇಲಾಖೆ
ಭಾರತಿ ಡಿ. ಭಾ.ಆ.ಸೇ., ಸಿ.ಇ.ಒ ಮತ್ತು ಕಾರ್ಯದರ್ಶಿ, ಕ.ಕ ಮತ್ತು ಇ.ನಿ.ಕಾ.ಕ ಮಂಡಳಿ

ವಿದೇಶಿ ವಿದ್ಯಮಾನ

ದುಬೈನಲ್ಲಿ ಏರಿಯಲ್ ಟ್ಯಾಕ್ಸಿ ಸೇವೆ 2026ರಲ್ಲಿ ಆರಂಭ

- ದುಬೈನಲ್ಲಿ ಮೊದಲ ಏರಿಯಲ್ ಟ್ಯಾಕ್ಸಿ ಸೇವೆ 2026ರಲ್ಲಿ ಆರಂಭವಾಗಲಿದೆ. ಈ ನವೀನ ಸೌಲಭ್ಯದ ಮೂಲನಿಲ್ದಾಣವನ್ನು ದುಬೈ ಅಂತರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ ನಿರ್ಮಿಸಲಾಗಿದೆ.
- ಈ ವರ್ಟಿಪೋರ್ಟ್ (ಏರಿಯಲ್ ಟ್ಯಾಕ್ಸಿ ನಿಲುಗಡೆಯ ಸ್ಥಳ) 3,100 ಚದರ ಮೀಟರ್‌ಗಳನ್ನು ವ್ಯಾಪಿಸಿದೆ. ಇದು ವಾರ್ಷಿಕವಾಗಿ 42,000 ಲ್ಯಾಂಡಿಂಗ್‌ಗಳನ್ನು ನಿರ್ವಹಿಸುವ ಗುರಿಯನ್ನು ಹೊಂದಿದೆ.
- ಈ ವರ್ಟಿಪೋರ್ಟ್ ಪ್ರತಿ ವರ್ಷ 1,70,000 ಪ್ರಯಾಣಿಕರ ಪ್ರಯಾಣಕ್ಕೆ ಅವಕಾಶ ಕಲ್ಪಿಸುತ್ತದೆ. ದುಬೈನ ಡೌನ್‌ಟೌನ್, ದುಬೈ ಮರೀನಾ ಮತ್ತು ಪಾಮ್ ಜುಮೇರಾದಲ್ಲಿಯೂ ವರ್ಟಿಪೋರ್ಟ್ ನಿಲ್ದಾಣಗಳನ್ನು ನಿರ್ಮಿಸಲಾಗಿದೆ.
- ಏರ್‌ಟ್ಯಾಕ್ಸಿ ಈ ಸೇವೆಯು ಪ್ರಯಾಣದ ಸಮಯವನ್ನು ಕಡಿಮೆ ಮಾಡಲಿದೆ. ಪ್ರಸ್ತುತ ದುಬೈ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಪಾಮ್ ಜುಮೇರಾಕ್ಕೆ ಪ್ರಯಾಣಿಸಲು 45 ನಿಮಿಷಗಳ ಅವಧಿಯ ಅಗತ್ಯವಿದ್ದು, ಏರ್ ಟ್ಯಾಕ್ಸಿ ಸೇವೆ ಆರಂಭವಾದ ನಂತರ ಇದು 10 ನಿಮಿಷಗಳಿಗೆ ಇಳಿಕೆಯಾಗಲಿದೆ ಎಂದು ಅಂದಾಜಿಸಲಾಗಿದೆ.
- ಈ ಯೋಜನೆ ಜಾಬಿ ಏವಿಯೇಷನ್, ಸ್ಕೈಪೋರ್ಟ್ಸ್ ಸೇರಿ ಹಲವು ಅಂತರರಾಷ್ಟ್ರೀಯ ನಿರ್ವಾಹಕರ ಸಹಯೋಗ ಒಳಗೊಂಡಿದೆ.
- 'Joby S4' ಹೆಸರಿನ ವೈಮಾನಿಕ ಟ್ಯಾಕ್ಸಿ ಈ ಯೋಜನೆಯಡಿ ಕಾರ್ಯನಿರ್ವಹಿಸಲಿದ್ದು, ಇದು ಲಂಬವಾದ ಟೇಕ್-ಆಫ್ ಮತ್ತು ಲ್ಯಾಂಡಿಂಗ್ ಸಾಮರ್ಥ್ಯಗಳನ್ನು ಹೊಂದಿದೆ.
- 'Joby S4' ವೈಮಾನಿಕ ಟ್ಯಾಕ್ಸಿ ಪರಿಸರಸ್ನೇಹಿ ಆಯ್ಕೆಯಾಗಿದ್ದು, ಶೂನ್ಯ ಹೊರಸೂಸುವಿಕೆ ಇದರ ವಿಶೇಷವಾಗಿದೆ. ಇದು ಗಂಟೆಗೆ ಗರಿಷ್ಠ 321 ಕಿ.ಮೀ. ವೇಗದಲ್ಲಿ 161 ಕಿ.ಮೀ.ವರೆಗೆ ಹಾರಾಟದ ಸಾಮರ್ಥ್ಯವನ್ನು ಹೊಂದಿದೆ.
- 'Joby S4'ನಲ್ಲಿ ಏಕಕಾಲಕ್ಕೆ ನಾಲ್ವರು ಪ್ರಯಾಣಿಕರು ಮತ್ತು ಪೈಲಟ್ ಪ್ರಯಾಣಿಸಬಹುದಾಗಿದೆ. ಇದು ಸಾಂಪ್ರದಾಯಿಕ ಹೆಲಿಕಾಪ್ಟರ್‌ಗಳಿಗಿಂತ ಕಡಿಮೆ ಶಬ್ದವನ್ನು ಉಂಟು ಮಾಡುತ್ತದೆ.

ಆಸ್ಟ್ರೇಲಿಯಾ: 16 ವರ್ಷದವರೆಗೆ ಸಾಮಾಜಿಕ ಮಾಧ್ಯಮ ನಿರ್ಬಂಧ

- ಆಸ್ಟ್ರೇಲಿಯಾದ ಸರ್ಕಾರವು 16 ವರ್ಷದೊಳಗಿನ ಮಕ್ಕಳಿಗೆ ಸಾಮಾಜಿಕ ಮಾಧ್ಯಮ ಪ್ರವೇಶಕ್ಕೆ ನಿರ್ಬಂಧ ವಿಧಿಸಿ ಕಾನೂನು ಜಾರಿಗೊಳಿಸುವ ಯೋಜನೆಯನ್ನು ಪ್ರಕಟಿಸಿದೆ.
- ಪ್ರಧಾನಿ ಆಂಥೋನಿ ಅಲ್ಬನೀಸ್ ಈ ಉಪಕ್ರಮವನ್ನು ಘೋಷಿಸಿದ್ದು, ಈ ಕುರಿತು ಪರ-ವಿರೋಧ ನಿಲುವು ವ್ಯಕ್ತವಾಗಿವೆ.
- ಪ್ರಸ್ತಾವಿತ ಶಾಸನ ಮಕ್ಕಳ ಸಾಮಾಜಿಕ ಮಾಧ್ಯಮ ಸುರಕ್ಷತೆ ಮಸೂದೆ-2024ರ ಅನ್ವಯ ಜಾರಿಗೊಳ್ಳಲಿದೆ.
- ಹರೆಯದವರಲ್ಲಿ ಸಾಮಾಜಿಕ ಮಾಧ್ಯಮದ ಸಮಸ್ಯಾತ್ಮಕ ಬಳಕೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಈ ಕ್ರಮ ಕೈಗೊಂಡಿರುವುದಾಗಿ ಆಸ್ಟ್ರೇಲಿಯಾ ಸರ್ಕಾರ ಸ್ಪಷ್ಟಪಡಿಸಿದೆ.
- ವಿಶ್ವ ಆರೋಗ್ಯ ಸಂಸ್ಥೆಯ ಅಧ್ಯಯನವು 2022ರಲ್ಲಿ ಶೇ 11ರಷ್ಟು ಹುಡುಗರು, ಶೇ 13ರಷ್ಟು ಹುಡುಗಿಯರು ಸಾಮಾಜಿಕ ಜಾಲತಾಣದ ಸಮಸ್ಯಾತ್ಮಕ ಬಳಕೆ ಮಾಡಿದ್ದಾರೆ.
- ಸಾಮಾಜಿಕ ಜಾಲತಾಣದ ಸಮಸ್ಯಾತ್ಮಕ ಬಳಕೆ ಮಕ್ಕಳ ಮನಸ್ಸಿನ ಮೇಲೆ ನಕಾರಾತ್ಮಕ ಪರಿಣಾಮ ಬೀರಿ ಮಾದಕ ದ್ರವ್ಯ ಸೇವನೆ, ತೀವ್ರ ಒತ್ತಡ ಹೆಚ್ಚಳ, ಮುಕ್ತ ಲೈಂಗಿಕತೆ, ಲೈಂಗಿಕ ಹಾಗೂ ಮಾನಸಿಕ ಶೋಷಣೆಯಂಥ ಬೆಳವಣಿಗೆಗಳಿಗೆ ಕಾರಣವಾಗುತ್ತಿದೆ ಎಂದು ವಿಶ್ವ ಆರೋಗ್ಯ ಸಂಸ್ಥೆ ಕಳವಳ ವ್ಯಕ್ತಪಡಿಸಿದೆ.
- ಪೋಷಕರು ಮಕ್ಕಳ ಆನ್‌ಲೈನ್ ನಡವಳಿಕೆಯ ಬಗ್ಗೆ ಗಮನಹರಿಸುವ ಕುರಿತು ಅಮೆರಿಕದ 'ಸರ್ಜನ್ ಜನರಲ್' ಮಾರ್ಗಸೂಚಿಗಳನ್ನೂ ಬಿಡುಗಡೆ ಮಾಡಿದ್ದಾರೆ.
- ಈ ಹಿನ್ನೆಲೆಯಲ್ಲಿ ಆಸ್ಟ್ರೇಲಿಯಾ ಸಾಮಾಜಿಕ ಮಾಧ್ಯಮ ಕಂಪನಿಗಳು ಗೋಪ್ಯತೆ ಕ್ರಮಗಳನ್ನು ಹೆಚ್ಚಿಸಲು ಮತ್ತು ವಯಸ್ಸಿನ ಮಿತಿಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಒತ್ತಾಯಿಸಿದೆ.
- ಪೋಷಕರು ಮಕ್ಕಳನ್ನು ಮೊಬೈಲ್ ಗೀಳಿನಿಂದ ಹೊರತಂದು ಆರೋಗ್ಯಕರ ಸಾಮಾಜಿಕ ಬೆಳವಣಿಗೆ ಉತ್ತೇಜಿಸಲು ವ್ಯಕ್ತಿಗತ ಸ್ನೇಹವನ್ನು ಪ್ರೋತ್ಸಾಹಿಸಬೇಕು ಹಾಗೂ ಸ್ವತಃ ಪೋಷಕರೇ ಜವಾಬ್ದಾರಿಯುತ ಆನ್‌ಲೈನ್ ನಡವಳಿಕೆ ರೂಪಿಸಿಕೊಳ್ಳಬೇಕು ಮತ್ತು ತಂತ್ರಜ್ಞಾನದ ಸಮರ್ಪಕ ಬಳಕೆ ಹಾಗೂ ದುರ್ಬಳಕೆ ಬಗ್ಗೆ ಮಕ್ಕಳಿಗೆ ಶಿಕ್ಷಣ ನೀಡಬೇಕು ಎಂಬುದಾಗಿ ಆಸ್ಟ್ರೇಲಿಯಾ ಸರ್ಕಾರ ಪ್ರತಿಪಾದಿಸಿದೆ.

ಉತ್ತರ ಕೊರಿಯಾ 'ಶಬ್ದ ಬಾಂಬ್'!

- ಉತ್ತರ ಮತ್ತು ದಕ್ಷಿಣ ಕೊರಿಯಾದ ನಡುವೆ ಉದ್ವಿಗ್ನತೆ ಹೆಚ್ಚಿದ ಹಿನ್ನೆಲೆಯಲ್ಲಿ ಉತ್ತರ ಕೊರಿಯಾ ಮಾನಸಿಕ ಯುದ್ಧದ ರೂಪವಾಗಿ ಧ್ವನಿವರ್ಧಕಗಳನ್ನು ಬಳಸುತ್ತಿದೆ.
- ಧ್ವನಿವರ್ಧಕಗಳಿಂದ ಕರ್ಕಶವಾದ ಹಾಗೂ ಗೊಂದಲದಿಂದ ಕೂಡಿದ ವಾಕ್ಯ, ಶಬ್ದಗಳನ್ನು ಕೇಳಿಸುವ ಮೂಲಕ ದಕ್ಷಿಣ ಕೊರಿಯಾದ ಗಡಿ ಭಾಗಗಳ ಜನ-ಜಾನುವಾರುಗಳ ನೆಮ್ಮದಿಗೆ ಭಂಗ ತರುವ ಕೆಲಸವನ್ನು ಉತ್ತರ ಕೊರಿಯಾ ಮಾಡುತ್ತಿದೆ.
- ಈ ಶಬ್ದಗಳಲ್ಲಿ ವಿಚಿತ್ರವಾದ, ಭಯವನ್ನುಂಟು ಮಾಡುವ ಕೂಗಾಟಗಳು ಮತ್ತು ಕಿರುಚಾಟಗಳು ಸೇರಿವೆ. ಇದರಿಂದ ದಕ್ಷಿಣ ಕೊರಿಯಾದ ಗಡಿ ಗ್ರಾಮಸ್ಥರು ತೀವ್ರ ತೊಂದರೆಗೆ ಈಡಾಗುತ್ತಿದ್ದು, ನಿದ್ರೆಯಿಲ್ಲದ ರಾತ್ರಿಗಳನ್ನು ಕಳೆಯುತ್ತಿದ್ದಾರೆ.
- ಉತ್ತರ ಕೊರಿಯಾ ದಕ್ಷಿಣ ಕೊರಿಯಾದೊಂದಿಗಿನ ಸಾರಿಗೆ ಸಂಪರ್ಕ ನಾಶಪಡಿಸಿದೆ. ಇದರಿಂದ ಉದ್ವಿಗ್ನತೆ ಮತ್ತಷ್ಟು ಹೆಚ್ಚಿದೆ.
- 1950 ರಿಂದ 1953ರವರೆಗೆ ನಡೆದ ಕೊರಿಯನ್ ಯುದ್ಧ ಔಪಚಾರಿಕ ಶಾಂತಿ ಒಪ್ಪಂದವಿಲ್ಲದೇ ಕೊನೆಗೊಂಡ ಹಿನ್ನೆಲೆಯಲ್ಲಿ ಉತ್ತರ ಮತ್ತು ದಕ್ಷಿಣ ಕೊರಿಯಾ ಉದ್ವಿಗ್ನತೆ ಮುಂದುವರಿದಿದೆ.

ಬಹುಆಯ್ಕೆಯ ಪ್ರಶ್ನೋತ್ತರಗಳು

1. ಈ ಹೇಳಿಕೆಗಳನ್ನು ಪರಿಗಣಿಸಿ.

ಎ. ಭಾರತ ಸರ್ಕಾರ 2030ರ ವೇಳೆಗೆ 6ಜಿ ತಂತ್ರಜ್ಞಾನವನ್ನು ಭಾರತದಲ್ಲಿ ಸಕ್ರಿಯಗೊಳಿಸಲು 6ಜಿ ಸಂಶೋಧನೆ ಮತ್ತು ನಾವೀನ್ಯ ವೇಗಗೊಳಿಸುತ್ತಿದೆ.

ಬಿ. ಭಾರತದ ದೂರಸಂಪರ್ಕ ಇಲಾಖೆಯು 1ನೇ ಜೂನ್ 2024 ರಂದು 6ಜಿ ತಂತ್ರಜ್ಞಾನ ಆವಿಷ್ಕಾರ ಗುಂಪನ್ನು ರಚಿಸಿದೆ.

ಸರಿ ಉತ್ತರ ಆರಿಸಿ

ಎ. ಹೇಳಿಕೆ ಎ ಸರಿ ಬಿ. ಹೇಳಿಕೆ ಬಿ ಸರಿ

ಸಿ. ಎರಡೂ ತಪ್ಪು ಡಿ. ಎರಡೂ ಸರಿ

ಉತ್ತರ: ಎ

2. ಸಂವಹನ ತಂತ್ರಜ್ಞಾನಕ್ಕೆ ಸಂಬಂಧಿಸಿ, LTE (ಲಾಂಗ್-ಟರ್ಮ್ ಎವಲ್ಯೂಷನ್.ಮತ್ತು VoLTE (ವಾಯ್ಸ್ ಓವರ್ ಲಾಂಗ್-ಟರ್ಮ್ ಎವಲ್ಯೂಷನ್ ನಡುವಿನ ವ್ಯತ್ಯಾಸ/ವ್ಯತ್ಯಾಸಗಳು ಯಾವುವು?

ಎ. LTE ಅನ್ನು ಸಾಮಾನ್ಯವಾಗಿ 3ಜಿ ಮತ್ತು VoLTE ಅನ್ನು ಸಾಮಾನ್ಯವಾಗಿ ಸುಧಾರಿತ 3ಜಿ ಎಂದು ಮಾರಾಟ ಮಾಡಲಾಗುತ್ತದೆ

ಬಿ. LTE ಡೇಟಾ-ಮಾತ್ರ ಒದಗಿಸುವ ತಂತ್ರಜ್ಞಾನವಾಗಿದೆ ಮತ್ತು VoLTE ಧ್ವನಿ-ಮಾತ್ರ ಒದಗಿಸುವ ತಂತ್ರಜ್ಞಾನವಾಗಿದೆ.

ಸರಿ ಉತ್ತರ ಆಯ್ಕೆಮಾಡಿ

ಎ. 1 ಮಾತ್ರ ಬಿ. 2 ಮಾತ್ರ

ಸಿ. 1 ಮತ್ತು 2 ಎರಡೂ ಡಿ. 1 ಮತ್ತು 2 ಅಲ್ಲ

ಉತ್ತರ: ಡಿ

3. 'ಲಕ್ಷತಿ ದೀದಿ' ಕಾರ್ಯಕ್ರಮದಡಿ ಯಾವ ಚಟುವಟಿಕೆಗಳನ್ನು ಕೈಗೊಳ್ಳಲಾಗುತ್ತದೆ?

1. ಡ್ರೋನ್ ಬಳಕೆಗೆ ಸಂಬಂಧಿಸಿದ ತರಬೇತಿ

2. ಡ್ರೋನ್ ದುರಸ್ತಿಗೆ ಸಂಬಂಧಿಸಿದ ತರಬೇತಿ

ಸರಿ ಉತ್ತರ ಗುರುತಿಸಿ

ಎ. 1 ಮಾತ್ರ ಬಿ. 2 ಮಾತ್ರ

ಸಿ. 1 ಮತ್ತು 2 ಡಿ. ಎರಡೂ ತಪ್ಪು

ಉತ್ತರ: ಸಿ

4. ವಿಶ್ವಕರ್ಮ ಯೋಜನೆಯ ಅಡಿಯಲ್ಲಿ ಕೆಳಗಿನ ಯಾವ ವಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವವರಿಗೆ ತರಬೇತಿ ನೀಡಲಾಗುತ್ತದೆ?

1. ಹೊಲಿಗೆ ಕೆಲಸ 2. ದೋಣಿ ತಯಾರಿಕೆ

3. ಕಮ್ಮಾರರು 4. ಶಿಲ್ಪಿಗಳು

5. ಕುಂಬಾರರು

ಸರಿ ಉತ್ತರ ಗುರುತಿಸಿ

ಎ. 1, 2, 3, 4 ಮತ್ತು 5

ಬಿ. 1, 2 ಮತ್ತು 3

ಸಿ. 2 ಮತ್ತು 3 ಡಿ. 3 ಮತ್ತು 4

ಉತ್ತರ: ಎ

5. ಕೃತಕ ಬುದ್ಧಿಮತ್ತೆ ಕುರಿತ ಜಾಗತಿಕ ಶೃಂಗಸಭೆ (INDIAai) 2024ರಲ್ಲಿ ಭಾರತದ ಯಾವ ನಗರದಲ್ಲಿ ನಡೆಯಿತು?

1. ಮುಂಬೈ 2. ನವದಹೆಲಿ

3. ಬೆಂಗಳೂರು 4. ಹೈದರಾಬಾದ್

ಉತ್ತರ: 2

6. ಜಿಎಐಯ ಕಾರ್ಯದರ್ಶಿ ಮಂಡಳಿ ಆತಿಥ್ಯವನ್ನು ಯಾರು ವಹಿಸಿಕೊಂಡಿದ್ದಾರೆ?

1. ವಿಶ್ವಸಂಸ್ಥೆ 2. ವಿಶ್ವ ವಾಣಿಜ್ಯ ಸಂಸ್ಥೆ

3.ಆರ್ಥಿಕ ಸಹಕಾರ ಮತ್ತು ಅಭಿವೃದ್ಧಿ ಸಂಘಟನೆ

4. ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆ (IMF)

ಉತ್ತರ: 3

7. ಅಂತರರಾಷ್ಟ್ರೀಯ ಪರಮಾಣು ಶಕ್ತಿ ಸಂಸ್ಥೆ ತನ್ನ ಪ್ರಾದೇಶಿಕ ಕಚೇರಿಗಳನ್ನು ಯಾವ ಸ್ಥಳದಲ್ಲಿ ಹೊಂದಿದೆ?

1. ಜಿನಿವಾ 2. ನ್ಯೂಯಾರ್ಕ್

3. ಟೊರೆಂಟೊ 4. ಟೋಕಿಯೋ

5. ರೋಮ್

ಸರಿ ಉತ್ತರ ಗುರುತಿಸಿ

ಎ. 1, 2, 3 ಮತ್ತು 4 ಬಿ. 1, 2 ಮತ್ತು 4

ಸಿ. 2, 3 ಮತ್ತು 4 ಡಿ. 2 ಮತ್ತು 5

ಉತ್ತರ: ಎ

8. ಯಾವ ವರ್ಷ ಭಾರತ ಅಂತರರಾಷ್ಟ್ರೀಯ ಪರಮಾಣು ಶಕ್ತಿ ಸಂಸ್ಥೆಯ ಸದಸ್ಯತ್ವ ಪಡೆಯಿತು?

ಎ. 1967 ಬಿ. 1957 ಸಿ. 1977 ಡಿ. 1987

ಉತ್ತರ: ಬಿ

9. ಯಾವ ಅಂಶಗಳನ್ನು ರಾಷ್ಟ್ರೀಯ ಜಾನುವಾರು ಅಭಿಯಾನದ ಉಪ ಅಭಿಯಾನಗಳು ಎಂದು ಪರಿಗಣಿಸಬಹುದು?

1. ಜಾನುವಾರುಗಳ ಮೇವಿನ ಉಪ ಅಭಿಯಾನ

2. ಜಾನುವಾರು ವಲಯದ ಅಭಿವೃದ್ಧಿ ಉಪ ಅಭಿಯಾನ

3. ಈಶಾನ್ಯ ಪ್ರದೇಶದಲ್ಲಿ ಹಂದಿ ಅಭಿವೃದ್ಧಿ ಉಪ ಅಭಿಯಾನ

4. ಕೌಶಲ ಅಭಿವೃದ್ಧಿ ಉಪ ಅಭಿಯಾನ

ಸರಿ ಉತ್ತರ ಗುರುತಿಸಿ

ಎ. 1, 2, 3 ಮತ್ತು 4 ಬಿ. 2 ಮತ್ತು 4

ಸಿ. 3 ಮತ್ತು 4 ಡಿ. 2 ಮತ್ತು 3

ಉತ್ತರ: ಎ

10. ಈ ಹೇಳಿಕೆಗಳನ್ನು ಪರಿಗಣಿಸಿ.

1. ಮೊಟ್ಟೆ ಉತ್ಪಾದನೆಯಲ್ಲಿ ಭಾರತ ಜಾಗತಿಕ ಮಟ್ಟದಲ್ಲಿ ನಾಲ್ಕನೇ ಸ್ಥಾನವನ್ನು ಹೊಂದಿದೆ.

2. ಮಾಂಸ ಉತ್ಪಾದನೆಯಲ್ಲಿ ಭಾರತ ಜಾಗತಿಕ ಮಟ್ಟದಲ್ಲಿ ಎಂಟನೇ ಸ್ಥಾನವನ್ನು ಹೊಂದಿದೆ.

ಸರಿ ಉತ್ತರ ಗುರುತಿಸಿ

ಎ.1 ಮಾತ್ರ ಬಿ. 2 ಮಾತ್ರ

ಸಿ. 1 ಮತ್ತು 2 ಡಿ. ಎರಡೂ ತಪ್ಪು

ಉತ್ತರ: ಬಿ

11. ಹಂಸ ಮೆಹತಾ ಅವರಿಗೆ ಸಂಬಂಧಿಸಿ ಸರಿಯಾದ ಹೇಳಿಕೆಗಳನ್ನು ಪರಿಗಣಿಸಿ.

1. ಇವರು ಭಾರತದ ವಿದ್ವಾಂಸರು, ಶಿಕ್ಷಣ ತಜ್ಞರು ಮತ್ತು ಲೇಖಕರಾಗಿದ್ದರು.

2. ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಸಾರ್ವತ್ರಿಕ ಘೋಷಣೆ ರಚನೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದರು.

3. 1946ರ ಅಖಿಲ ಭಾರತ ಮಹಿಳಾ ಸಮಾವೇಶದ ಅಧ್ಯಕ್ಷತೆಯನ್ನು ವಹಿಸಿದ್ದರು.

ಸರಿ ಉತ್ತರ ಗುರುತಿಸಿ

ಎ. 1 ಮಾತ್ರ ಬಿ. 2 ಮಾತ್ರ

ಸಿ. 1, 2 ಮತ್ತು 3 ಡಿ. 2 ಮತ್ತು 3

ಉತ್ತರ: ಸಿ

12. ಈ ಹೇಳಿಕೆಗಳನ್ನು ಪರಿಗಣಿಸಿ.

ಎ. 1950ರಲ್ಲಿ ಭಾರತದ ಒಕ್ಕೂಟವನ್ನು ಭಾಗ ಎ, ಬಿ, ಸಿ, ಡಿ ಮತ್ತು ಇ ರಾಜ್ಯಗಳು ಎಂದು ವರ್ಗೀಕರಣ ಮಾಡಲಾಗಿತ್ತು.

ಬಿ. ಪ್ರಸ್ತುತ ದೇಶದಲ್ಲಿ 28 ರಾಜ್ಯಗಳು ಮತ್ತು 8 ಕೇಂದ್ರಾಡಳಿತ ಪ್ರದೇಶಗಳಿವೆ.

ಸರಿಯಾದ ಉತ್ತರ ಆರಿಸಿ

ಎ. ಹೇಳಿಕೆ ಎ ಸರಿ ಬಿ. ಹೇಳಿಕೆ ಬಿ ಸರಿ

ಸಿ. ಎರಡೂ ತಪ್ಪು ಡಿ. ಎರಡೂ ಸರಿ

ಉತ್ತರ: ಬಿ

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ- ಇಂಗ್ಲಿಷ್

Second Language ENGLISH

Unit-1 Prose : A Hero

20. Do you think Swami really wanted to join the police? If not, what did he want to be?

Answer: No. Swami did not want to join the police force.

Swami had quite made up his mind to become an engine driver, railway guard or a bus conductor later in life. He agreed to police inspector's invitation to join police only out of politeness.

21. Did Swami muster up courage to sleep alone after the burglar's incident?

Answer: No, Swami did not muster courage to sleep alone after burglar's incident. He pretended to sleep at his usual place beside granny at 7.30 pm much before the return of his father.

22. Who supported Swami?

Answer: Swami's mother supported him by showing her anger against his father. She asked Swami's father to let him sleep where he likes and need not risk his life again.

23. A report about a boy in the newspaper was an unexpected event in Swami's life. Justify.

Answer: The report generated a difference of opinion between Swami and his father. Swami felt it may not be a boy but a strong grown up man, who could fight with tiger. But his father was angry about Swami questioning the veracity of news report and also for emphasizing more on strength of person than courage to fight a tiger. Hence Swami's father challenged him to prove his courage by sleeping alone in the office room. This was a frightening proposal for twelve years old Swami who was habituated to sleep beside his granny. This was an unexpected event in Swami's life.

24. Swami made a comment on the newspaper report. Was he right? How did his view differ from that of his father?

Answer: When Swami's father read the report of the courage of young boy who faced a tiger bravely, Swami did not agree with his father. Swami felt it may not be a boy but a strong grown up man, who could fight with tiger.

Swami's father was angry about Swami questioning the veracity of news report and also for emphasizing more on strength of person than courage to fight a tiger. Given age of Swami being approximately 12 years his experience compared to his father's was small, he is right in his comment.

25. What desperate attempts did Swami make to escape from his father?

Answer: When his father challenged Swami to sleep alone in his office room that night, Swami tried various attempts to escape. Swami first tried to change the subject by talking loudly and enthusiastically about another matter, but his father was not diverted. Then Swami tiptoed into the bed beside his granny, pulled the blanket over his face and pretended to sleep by snoring. When his father started making him shift to room, Swami throwed a look of appeal at his mother to save him. His mother's appeal to allow him sleep in the hall was rejected by his father. Swami's repeated his request of not shifting saying that there may be scorpions behind the law books since the room is dusty. Thus Swami desperately tried to escape from his father proposition.

26. Why did Swami conclude that his father's proposition was frightful?

Answer: Swami was habituated to sleep beside his granny in the passage and any change in this practice kept him trembling and awake all night. Hence he concluded his father's proposition was frightful.

27. As the night advanced, Swami felt that something terrible would happen to him. What would it be? How would it happen?

Answer: As the night advanced and the silence in the house deepened, Swami's heart began beating faster and he felt something terrible would happen to him. Swami remembered stories of devils and ghosts. Every moment he expected devils to come up and carry him away; there was the instance of his old friend in fourth class who suddenly disappeared and was said to have been carried off by a ghost to Siam or Nepal.

28. There was absolute silence in the room. In spite of, some noises reached Swami's ears. What were they?

Answer: In spite of absolute silence, Swami was able to hear ticking off the clock, rustle of the trees, snoring sounds and vague insects humming.

29. Narrate Swami's dreadful experience when he was lying under the bench

Answer: In sleep under the bench Swami was racked with nightmares. A tiger was chasing him. His feet stuck to the ground. He desperately tried to escape but his feet would not move; the tiger was at his back, and he could hear its claws scratch the ground; it became louder with every moment. Swami tried open eyes but his eye lids would not open and nightmare continued. Swami groaned in despair.

30. How was Swami honoured by his classmates, teacher and headmaster?

Answer: Congratulations were showered on Swami. His classmates looked him with respect and teacher patted his back. The headmaster said he is a true scout. (The Police Inspector invited him to join the police.)

31. Why did father want Swami to sleep alone in the office room?

Answer: Swami's father wanted him sleep alone in the office room to prove that he is a courageous boy as despite being in second form, he was habituated to sleep beside his granny. Father wanted him become independent person.

32. Who do you think was wiser, Swami or his father? Justify your preference.

Answer: Swami's father was wiser as he used a comment by Swami about a news report to improve his personality by showing courage of sleeping alone in office room and make him independent person.

33. Why did Swami feel relieved at the end?

Answer: Swami's father wanted him to continue sleep independently without being at granny's side. But clever Swami slept beside granny before father returned home. Swami's mother expressed anger at his father for not letting him sleep wherever he likes and asked him not to risk Swami's life again.

(Contd…….)

ದಿಕ್ಸೂಚಿ ನಿಮಗೆ ಇಷ್ಟ ಆಗಿದೆಯೇ? ನಿಮ್ಮ ಅನಿಸಿಕೆಯನ್ನು ಇಲ್ಲಿ ದಾಖಲಿಸಿ

ಎಸ್ಸೆಸ್ಸೆಲ್ಸಿ ಸಮಾಜ ವಿಷಯದ ಇಂಗ್ಲಿಷ್ ಮಾದರಿಯ ಪ್ರಶ್ನೋತ್ತರಕ್ಕೆ ಇಲ್ಲಿ ಸ್ಕ್ಯಾನ್ ಮಾಡಿ

II PUC- BIOLOGY

REPRODUCTION

Reproduction in flowering plants

2. Give the step by step description of the sexual reproduction taking place in plants.

Ans:- The sexual reproduction in plants takes place in the following steps

(a) The male organ of the flower called 'stamen' makes the male gametes (male sex cells) of the plant. These male gametes are present in pollen grains. ***(….Contd)***

(b) The female organ of the flower called 'carpel' makes the female gametes (female sex cells) of the plant. These female gametes are present in ovules. These gametes are also called ova, egg cells or just eggs.

(c) The male gametes are present in pollen grains fertilise the female gametes are present in ovules.

(d) The fertilised egg cells grow within ovules and become seeds.

e) Seeds produce new plants on germination.

Answer the following :-

1. Mention some of the differences between the Apocarpous and Syncarpous Ovary.

Ans:-

Apocarpous Ovary	*Syncarpous Ovary*
The ovary is formed from a single free carpel.	The ovary is formed from fusion of two or more carpels.
The flower bears one to several free pistils.	The flower bears a single pistil.
Ovary is unilocular.	Ovary can be uni or multilocular.
It occurs only in primitive families.	It occurs in most of the families.
Fruit is simple in uni-carpelled flowers or aggregate in poly-carpelled flowers.	The fruit is generally simple.

2. Mention the two types of self – pollination.

Ans:- The two types of self – pollination are:-

a) Autogamy b) Geitonogamy

3. What is Autogamy?

Ans:- Autogamy is a type of self pollination which occurs between anther and stigma of the same flower. It occurs in all those intersexual or perfect flowers which either remain closed or where anthers/pollen come in contact with stigma by gravity and mechanical means.

4. Mention the different types of Autogamy?

Ans:- The different types of Autogamy are –

a) Homogamy b) Cleistogamy

c) Bud formation

d) Non-dehiscence of Anther

e) Fail safe device

5. Mention some of the advantages of the self pollination.

Ans:- Some of the advantages of the self pollination are It is a sure and economical method of pollination.

a) It is employed as fail-safe device.

b) It produces homozygous progeny.

c) It is used to maintain pure lines.

d) It maintains the superiority of the race indefinitely.

e) The plants need not produce large number of pollen grains.

f) Flowers do not develop attractants for favouring external agencies.

g) Harmful and useless characters are eliminated naturally.

6. **Mention some of the differences between the Autogamy and Geitonogamy.**

Ans:-

Autogamy	*Geitonogamy*
The transfer of pollen grains from anther to the stigma of the same flower.	It is the transfer of pollen grains from anther of one flower to the stigma of another flower of same plant.
The flowers are hermaphrodite.	The flowers are generally unisexual
No external agency is required for pollination.	An external agency is required to perform pollination.

7. Mention some of the differences between the Chasmogamy and Cleistogamy.

Ans:-

Chasmogamy	*Cleistogamy*
It is a condition of opening of mature flowers.	It is a condition of keeping the flowers closed throughout.
The flowers are conspicuous.	The flowers are small and inconspicuous.
Both self and cross pollination can occur.	Only self-pollination is possible.
Both external and internal factors are involved in effecting pollination.	Only internal factors take part in pollination.
It is a normal condition.	It is a fail safe device.

8. Mention some of the disadvantages of the self pollination.

Ans:- Some of the disadvantages of the self pollination are

a) No new traits are introduced.

b) It decreases variability and adaptability to changes in environment.

c) Disease resistance decreases with time.

d) Recessive traits appear regularly as self pollination introduces homozygosity.

e) There is no way to eliminate defective traits.

f) Yield decreases with time due to reduction in vigour and vitality.

9. Identify the type of flowers shown in A and B. Which of the two will produce an assured seed set.



Ans:- **A – Chasmogamous flower.**

B- Cleistogamous flowers

Cleistogamous flowers produce assured seed as they do not depend upon external agency for pollination.

(Contd……)

ಕೇರಳದ ಕೋಟಕ್ಕಲ್ ಚೋಲಕ್ಕುಂಡ್ ಜುಮಾ ಮಸೀದಿಯ ಕಬರಸ್ತಾನದಲ್ಲಿ ಅಶ್ರಫ್ ಅಂತ್ಯಸಂಸ್ಕಾರ

ಗುಂಪು ಹಲ್ಲೆಯಿಂದ ಸಾವು: ಮತ್ತೆ ಐವರ ಬಂಧನ

ಪ್ರಜಾವಾಣಿ ವಾರ್ತೆ

ಮಂಗಳೂರು: ನಗರದ ಹೊರವಲಯದ ಕುಡುಪುವಿನಲ್ಲಿ ಕೇರಳದ ವಯನಾಡ್ ಜಿಲ್ಲೆಯ ಮೊಹಮ್ಮದ್ ಅಶ್ರಫ್ (34) ಎಂಬವರ ಮೇಲೆ ಗುಂಪು ಹಲ್ಲೆ ನಡೆಸಿ ಕೊಲೆ ಮಾಡಿದ ಆರೋಪದಲ್ಲಿ ಮತ್ತೆ ಐವರನ್ನು ಬಂಧಿಸಲಾಗಿದೆ. ಪ್ರಕರಣಕ್ಕೆ ಸಂಬಂಧಿಸಿ ಬಂಧಿತರ ಸಂಖ್ಯೆ 20 ಆಗಿದೆ.

ಕೈಕಂಬದ ಪದವು ಮೇಗಿನ ಮನೆಯ ಯತಿರಾಜ್, ವಾಮಂಜೂರು ತಿರುವೈಲ್‌ನ ಸಚಿನ್, ಕುಲಶೇಖರ ಪದವು ಕೋಟಿಮುರದ ಅನಿಲ್, ಕುಡುಪು ಮಹಾಲಕ್ಷ್ಮಿ ನಿವಾಸದ ಸುಶಾಂತ್ ಮತ್ತು ಕುಡುಪು ದೇವಸ್ಥಾನ ಬಳಿಯ ಆದರ್ಶ ಬಂಧಿತರು ಎಂದು ಮಂಗಳೂರು ಪೊಲೀಸ್ ಕಮಿಷನರ್ ಅನುಪಮ್ ಅಗ್ರವಾಲ್ ತಿಳಿಸಿದ್ದಾರೆ.

ಏ.27ರಂದು ಕುಡುಪು ಭಟ್ರ ಕಲ್ಲುರ್ಟಿ ದೈವಸ್ಥಾನದ ಸಮೀಪ ಮೈದಾನದಲ್ಲಿ ಕ್ರಿಕೆಟ್ ಪಂದ್ಯ ನಡೆದಿತ್ತು. ಅಲ್ಲಿ ಆರೋಪಿಗಳಿಗೂ ಅಶ್ರಫ್‌ಗೂ ಜಗಳವಾಗಿತ್ತು. ನಂತರ ಗುಂಪು ಅಶ್ರಫ್ ಮೇಲೆ ಹಲ್ಲೆ ನಡೆಸಿ ಕೊಲೆ ಮಾಡಿತ್ತು. ಅವರ ಶವ ದೇವಸ್ಥಾನದ ಸಮೀಪದಲ್ಲಿ ಪತ್ತೆಯಾಗಿತ್ತು.

ಮಂಗಳೂರಿನ ಕುಡುಪುವಿನಲ್ಲಿ ಗುಂಪು ಹಲ್ಲೆಯಿಂದ ಯುವಕ ಮೊಹಮ್ಮದ್ ಅಶ್ರಫ್ ಮೃತಪಟ್ಟಿರುವ ಪ್ರಕರಣ ಖಂಡಿಸಿ, ತಪ್ಪಿತಸ್ಥರ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಸೋಷಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ (ಎಸ್‌ಡಿಪಿಐ) ಮಂಗಳೂರು ಘಟಕದವರು ಬುಧವಾರ ಮಂಗಳೂರಿನ ಕ್ಲಾಕ್ ಟವರ್ ಬಳಿ ಪ್ರತಿಭಟನೆ ನಡೆಸಿದರು ಪ್ರಜಾವಾಣಿ ಚಿತ್ರ

ಅಂತ್ಯಸಂಸ್ಕಾರ: ಮೊಹಮ್ಮದ್ ಅಶ್ರಫ್ ಅವರ ಸಹೋದರ ಅಬ್ದುಲ್ ಜಬ್ಬಾರ್ ಮತ್ತು ಸಂಬಂಧಿಕರು ಮಂಗಳವಾರ ತಡರಾತ್ರಿ ಮಂಗಳೂರು ತಲುಪಿದ್ದರು. ಮಹಜರು ನಂತರ ಮೃತಶರೀರವನ್ನು ಕುಟುಂಬದವರಿಗೆ ಹಸ್ತಾಂತರಿಸಲಾಯಿತು. ನಂತರ ಬಂದರು ಸಮೀಪದ ಕೇಂದ್ರ ಜುಮಾ ಮಸೀದಿಯಲ್ಲಿ ಮೃತದೇಹದ ಸ್ನಾನ ಮಾಡಿಸಿ ಕಫನ್ ಬಟ್ಟೆ ತೊಡಿಸಿದ ನಂತರ ನಮಾಜ್ ನೆರವೇರಿಸಲಾಯಿತು.

ಅಶ್ರಫ್ ಜನಿಸಿದ ಊರು ಮಲಪ್ಪುರಂ ಜಿಲ್ಲೆಯ ಕೋಟಕ್ಕಲ್‌ನ ಪಾರಾಪ್ಪುರ್ ಚೋಲಕ್ಕುಂಡ್ ಜುಮಾ ಮಸೀದಿಯ ಕಬರಸ್ತಾನದಲ್ಲಿ ಬುಧವಾರ ಅಂತ್ಯಸಂಸ್ಕಾರ ನೆರವೇರಿಸಲಾಯಿತು ಎಂದು ಜಬ್ಬಾರ್ ತಿಳಿಸಿದರು.

ಎಸ್‌ಡಿಪಿಐ ಪ್ರತಿಭಟನೆ: ಹತ್ಯೆ ಪ್ರಕರಣ ಖಂಡಿಸಿ, ಸೋಷಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ (ಎಸ್‌ಡಿಪಿಐ) ದವರು ಬುಧವಾರ ಇಲ್ಲಿ ಪ್ರತಿಭಟನೆ ನಡೆಸಿದರು.

'ಹತ್ಯೆ ಪ್ರಕರಣದಲ್ಲಿ ಮಾಜಿ ಕಾರ್ಪೊರೇಟರ್ ಪತಿ ಭಾಗಿಯಾಗಿರುವ ಆರೋಪ ಇದ್ದು, ಆತನನ್ನು ಬಂಧಿಸಬೇಕು. ಮೃತನ ಕುಟುಂಬಕ್ಕೆ ರಾಜ್ಯ ಸರ್ಕಾರ ಪರಿಹಾರ ನೀಡಬೇಕು' ಎಂದು ಎಸ್‌ಡಿಪಿಐ ಮಂಗಳೂರು ಘಟಕದ ಅಧ್ಯಕ್ಷ ಅಬ್ದುಲ್ ಜಲೀಲ್ ಆಗ್ರಹಿಸಿದರು.

ಕೆಟ್ಟ ಹೆಸರು ತರುವ ಹುನ್ನಾರ: ಸಚಿವ

'ಕೋಮು ಸಂಘರ್ಷ ಹುಟ್ಟು ಹಾಕುವ ಮೂಲಕ ಸರ್ಕಾರಕ್ಕೆ ಕೆಟ್ಟ ಹೆಸರು ತರಲು ಪಟ್ಟಭದ್ರ ಹಿತಾಸಕ್ತಿಗಳು ಮುಂದಾಗಿವೆ. ಈ ಹುನ್ನಾರದ ಬಗ್ಗೆ ಜನರು ಎಚ್ಚೆತ್ತುಕೊಳ್ಳಬೇಕು' ಎಂದು ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಹೇಳಿದ್ದಾರೆ.

ಎಕ್ಸ್‌ನಲ್ಲಿ ಪೋಸ್ಟ್ ಹಾಕಿರುವ ಅವರು 'ಅಶ್ರಫ್ ಹತ್ಯೆ ಸಮಾಜದ ಶಾಂತಿ ಕದಡುವ ದುಷ್ಟಶಕ್ತಿಗಳ ಕೃತ್ಯ. ಸಾಮರಸ್ಯ ಮತ್ತು ಭಾವೈಕ್ಯದ ನೆಲೆಯಾಗಿದ್ದ ದಕ್ಷಿಣ ಕನ್ನಡದ ಕೋಮು ಸೌಹಾರ್ದಕ್ಕೆ ಕೊಳ್ಳಿ ಇಡಲು ಯತ್ನಿಸಿದ ದುಷ್ಕರ್ಮಿಗಳ ಹೆಡೆಮುರಿ ಕಟ್ಟಲಾಗುವುದು' ಎಂದರು.

'ಪ್ರಚೋದನೆಯೇ ಕಾರಣ'

'ಬಿಜೆಪಿಯವರ ಪ್ರಚೋದನೆಯಿಂದಾಗಿ ಜಿಲ್ಲೆಯಲ್ಲಿ ಯುವಜನರು ತಪ್ಪುದಾರಿ ತುಳಿಯುತ್ತಿದ್ದಾರೆ. ಈ ಪ್ರಕರಣವೂ ಬಿಜೆಪಿ ಕಾರ್ಯಕರ್ತನ ಪ್ರಚೋದನೆಯಿಂದಲೇ ನಡೆದಿದೆ. ಇದರಲ್ಲಿ ಪೊಲೀಸ್ ಇಲಾಖೆಯ ವೈಫಲ್ಯವೂ ಇದೆ' ಎಂದು ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹರೀಶ್‌ಕುಮಾರ್ ಕೆ. ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಇಲ್ಲಿ ಮಾತನಾಡಿದ ಅವರು, 'ಹಿಂದುಳಿದ ವರ್ಗದ ಯುವಕರನ್ನು ಪ್ರಚೋದಿಸುವ ಕೆಲಸ ಈ ಹಿಂದಿನಿಂದಲೂ ಬಿಜೆಪಿಯಿಂದ ನಡೆಯುತ್ತಿದೆ. ಅವರಿಗೆ ಬಜರಂಗದಳ ಮತ್ತಿತರ ವ್ಯವಸ್ಥೆ ಅಡಿಯಲ್ಲಿ ತರಬೇತಿ ನೀಡಲಾಗುತ್ತಿದೆ. ಪರಿಣಾಮವಾಗಿ ಹಲವಾರು ಯುವಕರು ಈಗಲೂ ಜೈಲಿನಲ್ಲಿದ್ದಾರೆ. ಕಾನೂನು ಕುಣಿಕೆಯಲ್ಲಿ ಸಿಲುಕಿಕೊಂಡು, ಜೀವನ ಹಾಳು ಮಾಡಿಕೊಂಡಿದ್ದಾರೆ. ಅವರನ್ನೇ ಅವಲಂಬಿಸಿರುವ ಕುಟುಂಬಗಳು ಕಷ್ಟಕ್ಕೆ ಸಿಲುಕಿವೆ. ಬಿಜೆಪಿಯ ಈ ನಡೆ ಅಕ್ಷಮ್ಯ' ಎಂದರು.

ಅಶ್ರಫ್ ಕುಟುಂಬಕ್ಕೆ ₹ 50 ಲಕ್ಷ ಪರಿಹಾರ ನೀಡಬೇಕು, ಗುಪ್ತಚರ ವಿಭಾಗದ ವೈಫಲ್ಯದ ಬಗ್ಗೆ ತನಿಖೆ ನಡೆಸಬೇಕು

ಟಿ.ಎಂ ಶಾಹಿದ್ ತೆಕ್ಕಿಲ್
ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ

ಅಣ್ಣನನ್ನು ಯಾಕೆ ಕೊಂದಿದ್ದಾರೆ ಗೊತ್ತಿಲ್ಲ. ಇಂಥ ಘಟನೆಗಳಿಂದ ಭಾರತಕ್ಕೆ ಕೆಟ್ಟ ಹೆಸರು ಬರುತ್ತದೆ ಎಂಬುದರ ಅರಿವಿರಬೇಕು

ಅಬ್ದುಲ್ ಜಬ್ಬಾರ್
ಕೊಲೆಯಾದ ಅಶ್ರಫ್ ಸಹೋದರ

ಸಿಐಎಸ್‌ಸಿಇ ಫಲಿತಾಂಶ ರಾಜ್ಯದ ಶಾಲೆಗಳ ಸಾಧನೆ

ಬೆಂಗಳೂರು: ಕೌನ್ಸಿಲ್ ಫಾರ್ ದಿ ಇಂಡಿಯನ್ ಸ್ಕೂಲ್ ಸರ್ಟಿಫಿಕೇಟ್ ಎಕ್ಸಾಮಿನೇಷನ್ಸ್‌ನ (ಸಿಐಎಸ್‌ಸಿಇ) 10 ಮತ್ತು 12ನೇ ತರಗತಿಯ ಬೋರ್ಡ್ ಪರೀಕ್ಷೆಯ ಫಲಿತಾಂಶ ಬುಧವಾರ ಪ್ರಕಟವಾಗಿದ್ದು, ಕರ್ನಾಟಕದ ಶಾಲೆಗಳು ಉತ್ತಮ ಸಾಧನೆ ತೋರಿಸಿವೆ.

ಐಸಿಎಸ್‌ಇ (10ನೇ ತರಗತಿ) ಪರೀಕ್ಷೆಗೆ ಹಾಜರಾದ 29,745 ವಿದ್ಯಾರ್ಥಿಗಳ ಪೈಕಿ 29,656 ವಿದ್ಯಾರ್ಥಿಗಳು (ಶೇ 99.70) ತೇರ್ಗಡೆಯಾಗಿದ್ದಾರೆ. ಐಎಸ್‌ಸಿ (12ನೇ ತರಗತಿ) ಪರೀಕ್ಷೆಗೆ ಒಟ್ಟು 2,442 ವಿದ್ಯಾರ್ಥಿಗಳು ಹಾಜರಾಗಿದ್ದು, 2,433 (ಶೇ 99.63) ಮಂದಿ ತೇರ್ಗಡೆ ಆಗಿದ್ದಾರೆ. ಐಸಿಎಸ್‌ಇ ಒಟ್ಟು 425, ಐಎಸ್‌ಸಿ 55 ಶಾಲೆಗಳಿವೆ.

ಐಸಿಎಸ್‌ಇನಲ್ಲಿ ಹೆಣ್ಣು ಮಕ್ಕಳು ಶೇ 99.82ರಷ್ಟು ಸಾಧನೆ ತೋರಿಸಿದ್ದು, ಹುಡುಗರಿಗಿಂತ (ಶೇ 99.65) ಉತ್ತಮ ಸಾಧನೆ ಮಾಡಿದ್ದಾರೆ. ಐಎಸ್‌ಸಿಯಲ್ಲಿ ಬಾಲಕಿಯರು ಶೇ 99.61ರಷ್ಟು ಉತ್ತೀರ್ಣರಾದರೆ, ಹುಡುಗರ ತೇರ್ಗಡೆ ಪ್ರಮಾಣ ಶೇ 99.65.

ಐಸಿಎಸ್‌ಇ ಮತ್ತು ಐಎಸ್‌ಸಿ ಪರೀಕ್ಷೆ ಬರೆದ ರಾಜ್ಯದ ಹಲವು ವಿದ್ಯಾರ್ಥಿಗಳು ಶೇ 99ಕ್ಕೂ ಹೆಚ್ಚು ಅಂಕಗಳನ್ನು ಪಡೆದಿದ್ದಾರೆ. ಐಸಿಎಸ್‌ಇಯಲ್ಲಿ ಗ್ರೀನ್‌ವುಡ್ ಹೈ ಇಂಟರ್‌ನ್ಯಾಶನಲ್ ಸ್ಕೂಲ್‌ನ ಪ್ರಗತಿ ಗಿರೀಶ್ ಆತ್ರೇಯ ಮತ್ತು ನೊಟ್ರೆ ಡೇಮ್ ಅಕಾಡೆಮಿಯ ಸಾಕ್ಷಿ ಶೇ 99.80 ಅಂಕ ಗಳಿಸಿದ್ದಾರೆ. ಐಸಿಎಸ್‌ಇಯಲ್ಲಿ ಗ್ರೀನ್‌ವುಡ್ ಹೈಸ್ಕೂಲ್‌ನ ಸ್ವರ್ಣಾ ಚೌಧರೆ, ರಾಘವ್ ದೀಕ್ಷಿತ್ ಮತ್ತು ಅನನ್ಯ ಪಿ ಮಿನ್ನಮರೆಡ್ಡಿ ಶೇ 99.60 ಅಂಕ ಗಳಿಸಿದ್ದಾರೆ.

ಐಎಸ್‌ಸಿಯಲ್ಲಿ ವಿಜ್ಞಾನ ವಿಭಾಗದಲ್ಲಿ ಗ್ರೀನ್‌ವುಡ್ ಹೈ ಇಂಟರ್‌ನ್ಯಾಶನಲ್‌ನ ಅರ್ನಯ್ ಗುಪ್ತಾ ಮತ್ತು ದೀಪ್ತಿ ಮೆನನ್ ಕ್ರಮವಾಗಿ ಶೇ 99.50 ಮತ್ತು ಶೇ 99.25 ಅಂಕ ಗಳಿಸಿದ್ದಾರೆ.

ವೈದ್ಯಕೀಯ ಶಿಕ್ಷಣ ಮುಂದುವರಿಸಲು ವಿಜ್ಞಾನ ವಿಷಯ ತೆಗೆದುಕೊಳ್ಳಲು ನಿರ್ಧರಿಸಿದ್ದೇನೆ

ಪ್ರಗತಿ ಗಿರೀಶ್ ಆತ್ರೇಯ

ಬೋರ್ಡ್ ಪರೀಕ್ಷೆ ಬರೆದ ಬಳಿಕ ಶೇ 98 ಅಂಕ ಗಳಿಸುವ ನಿರೀಕ್ಷೆ ಇತ್ತು. ಆದರೆ, ಬಂದಿರುವ ಫಲಿತಾಂಶ ನನಗೆ ಅಚ್ಚರಿ ಮೂಡಿಸಿದೆ. ವೈದ್ಯಕೀಯ ಪ್ರವೇಶಕ್ಕೆ ಈಗಾಗಲೇ ನೀಟ್ ತರಬೇತಿ ಪಡೆಯುತ್ತಿದ್ದೇನೆ

ಸಾಕ್ಷಿ

ವಿವಿಧೆಡೆ ಬಸವಣ್ಣನ ತತ್ವ, ಸಿದ್ಧಾಂತ ಸ್ಮರಣೆ

ಸಂಭ್ರಮದ ಬಸವ ಜಯಂತ್ಯುತ್ಸವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರ ವಿವಿಧೆಡೆ ವಿವಿಧ ಸಂಘ ಸಂಸ್ಥೆಗಳು, ವಿದ್ಯಾಸಂಸ್ಥೆಗಳು ಬಸವ ಜಯಂತಿಯನ್ನು ಸಂಭ್ರಮದಿಂದ ಆಚರಿಸಿದವು. ಬಸವಣ್ಣನ ಚಿಂತನೆಗಳನ್ನು ನೆನಪು ಮಾಡಿಕೊಳ್ಳಲಾಯಿತು. ನುಡಿ ಗೌರವ ಸಲ್ಲಿಸಲಾಯಿತು. ವಚನಗಾಯನಗಳ ಇಂಪು ಪಸರಿಸಲಾಯಿತು.

ಬೆಂಗಳೂರು ವಿ.ವಿ: ಬೆಂಗಳೂರು ನಗರ ವಿಶ್ವವಿದ್ಯಾಲಯದ ಸೆಂಟ್ರಲ್ ಕಾಲೇಜಿನ ಆವರಣದಲ್ಲಿ ಬಿಸಿಯು ಪ್ರಭಾರ ಕುಲಪತಿ ಕೆ.ಆರ್. ಜಲಜಾ, ಕುಲಸಚಿವ (ಮೌಲ್ಯಮಾಪನ) ರಮೇಶ್ ಬಿ., ಬೋಧಕರು, ವಿದ್ಯಾರ್ಥಿಗಳು, ಬೋಧಕೇತರ ಸಿಬ್ಬಂದಿ ಬಸವಣ್ಣನವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು.

ಕುಲಸಚಿವ ಟಿ.ಜವರೇಗೌಡರ ಮಾರ್ಗದರ್ಶನದಲ್ಲಿ ಏರ್ಪಡಿಸಲಾಗಿದ್ದ ಕಾರ್ಯಕ್ರಮದಲ್ಲಿ ಪ್ರಾಧ್ಯಾಪಕರಾದ ದೇವರಾಜ್, ಹರಿಪ್ರಸಾದ್, ರಿತಿಕಾ ಸಿನ್ಹಾ, ನಿರ್ಮಲಾ, ಎನ್.ಎಸ್.ಎಸ್. ಸಂಯೋಜಕ ಗೋವಿಂದೇಗೌಡ ಉಪಸ್ಥಿತರಿದ್ದರು. ಕನ್ನಡ ವಿಭಾಗದ ಮಂಜು ಸಿ.ಎನ್. ಮತ್ತು ತಂಡದವರು ವಚನ ಗಾಯನ ಪ್ರಸ್ತುತಪಡಿಸಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ: ಬೆಂಗಳೂರು ನಗರ ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಆಶ್ರಯದಲ್ಲಿ ನಗರದ ಜಿ.ಕೆ.ವಿ.ಕೆ. ಆವರಣದಲ್ಲಿರುವ ಬಾಬು ರಾಜೇಂದ್ರ ಪ್ರಸಾದ್ ಅಂತರಾಷ್ಟ್ರೀಯ ಸಭಾಂಗಣದಲ್ಲಿ ಬಸವ ಜಯಂತಿ ಹಮ್ಮಿಕೊಳ್ಳಲಾಯಿತು.

ಬೆಂಗಳೂರು ನಗರ ಜಿಲ್ಲಾಧಿಕಾರಿ ಜಿ. ಜಗದೀಶ್, ಹೆಚ್ಚುವರಿ ಜಿಲ್ಲಾಧಿಕಾರಿ ಜಗದೀಶ್ ನಾಯಕ್, ಅಧಿಕಾರಿಗಳು, ಸಿಬ್ಬಂದಿ ಉಪಸ್ಥಿತರಿದ್ದರು.

ವಚನಜ್ಯೋತಿ ಬಳಗ: ಬಸವಣ್ಣನೊಡನೆ ಹೆಜ್ಜೆ ಎಂದರೆ ಮೆರವಣಿಗೆಯಲ್ಲ. ಬಸವ ತತ್ವಗಳನ್ನು ಬದುಕಿನಲ್ಲಿ ಪರಿಪಾಲಿಸುವುದು ಎಂದು ಬೇಲಿಮಠದ ಶಿವರುದ್ರ ಸ್ವಾಮೀಜಿ ಹೇಳಿದರು.

ವಚನಜ್ಯೋತಿ ಬಳಗ ವಿಜಯನಗರದಲ್ಲಿ ಆಯೋಜಿಸಿದ್ದ ಬಸವ ಉತ್ಸವವನ್ನು ಉದ್ಘಾಟಿಸಿ ಅವರು ಮಾತನಾಡಿದರು.

'ವಚನಗಳ ಮೂಲಕ ಕನ್ನಡಕ್ಕೆ ಹೊಸ ದಿಕ್ಕು ನೀಡಿದ ಕನ್ನಡದ ಅಣ್ಣ ಬಸವಣ್ಣ ಜಗದಣ್ಣ ಆಗಿದ್ದಾರೆ' ಎಂದು ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಸಿ. ಸೋಮಶೇಖರ್ ಬಣ್ಣಿಸಿದರು.

ಬಸವ ಸಮಿತಿಯ ಅಧ್ಯಕ್ಷ ಅರವಿಂದ ಜತ್ತಿ, ಐಎಎಸ್ ಅಧಿಕಾರಿ ಶಿವಾನಂದ ಕಾಪಸಿ, ವಚನಜ್ಯೋತಿ ಬಳಗದ ಅಧ್ಯಕ್ಷ ಎಸ್. ಪಿನಾಕಪಾಣಿ, ಶಾಸಕ ಎಂ. ಕೃಷ್ಣಪ್ಪ, ವಿಶ್ವಬಂಧು ಪ್ರತಿಷ್ಠಾನದ ಸಿದ್ದಯ್ಯ ಗುರೂಜಿ, ನಾರಸಂದ್ರ ಮಠದ ಸಿದ್ದಲಿಂಗ ಸ್ವಾಮೀಜಿ, ಜಯವಿಭವಸ್ವಾಮಿ, ಮಹಮದೀಯರ ಕನ್ನಡ ವೇದಿಕೆಯ ಅಧ್ಯಕ್ಷ ಸಮೀವುಲ್ಲಾ ಖಾನ್, ಕನ್ನಡ ಶ್ರೀಸಾಮಾನ್ಯರ ಕೂಟದ ಅಧ್ಯಕ್ಷ ಶ್ರ.ದೇ. ಪಾರ್ಶ್ವನಾಥ್, ಶರಣ ಸೇವಾ ಸಮಾಜದ ಅಧ್ಯಕ್ಷ ಎಂ.ಎಸ್. ನಟರಾಜ್ ಸಹಿತ ಅನೇಕರು ಭಾಗವಹಿಸಿದ್ದರು.

ಬಸವ ಜಯಂತಿ ಪ್ರಯುಕ್ತ ವೀರಶೈವ ಲಿಂಗಾಯತ ವೇದಿಕೆಯಿಂದ ಲಕ್ಷ್ಮೀವೆಂಕಟೇಶ್ವರ ದೇವಸ್ಥಾನ ರಸ್ತೆಯಲ್ಲಿರುವ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ಮಹಾಮಂಗಳಾರತಿ, ಪ್ರಸಾದ ವಿನಿಯೋಗ ನಡೆಯಿತು.

ವಚನಜ್ಯೋತಿ ಬಳಗದಿಂದ ವಿಜಯನಗರದಲ್ಲಿ ಬಸವ ಉತ್ಸವ ನಡೆಯಿತು

'ವಿಧಾನಸೌಧ ಬಸವಸೌಧವಾಗಲಿ'

'ವಿಧಾನಸೌಧದ ಹೆಸರನ್ನು ಬಸವ ಸೌಧ ಎಂದು ಮರುನಾಮಕರಣ ಮಾಡಬೇಕು' ಎಂದು ಕೇಂದ್ರದ ಮಾಜಿ ಸಚಿವ ಸಿ.ಎಂ. ಇಬ್ರಾಹಿಂ ಆಗ್ರಹಿಸಿದರು.

ನವಕರ್ನಾಟಕ ನಿರ್ಮಾಣ ಆಂದೋಲನ ವತಿಯಿಂದ ಬುಧವಾರ ನಡೆದ 'ವಿಶ್ವಗುರು ಬಸವಣ್ಣ ಜಯಂತಿ' ಕಾರ್ಯಕ್ರಮದಲ್ಲಿ ಮಾತನಾಡಿದರು.

ರೈತ ಸಂಘ ಹಾಗೂ ಹಸಿರು ಸೇನೆಯ ಅಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್ ಮಾತನಾಡಿ, 'ಬಸವಣ್ಣನ ಆಡಳಿತ ಮತ್ತು ಶರಣರ ವಿಚಾರಗಳು ನಮಗೆ ಬೇಕಿದೆ' ಎಂದು ಹೇಳಿದರು.

ಆಂದೋಲನದ ಸದಸ್ಯರಾದ ಎಂ. ಗೋಪಿನಾಥ್, ಎನ್. ಮೂರ್ತಿ, ಆರ್. ಮೋಹನ್‌ರಾಜ್, ಭಕ್ತರಹಳ್ಳಿ ಬೈರೇಗೌಡ, ಅಮೃತೇಶ್, ಅರುಣ ಕುಮಾರ್ ಭಾಗವಹಿಸಿದ್ದರು.

ಚನ್ನಸಂದ್ರ: ಕಾಯಕ ಯೋಗಿಯ ಸ್ಮರಣೆ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: 'ಜಗಜ್ಯೋತಿ ಬಸವೇಶ್ವರರು ವಚನಗಳ ಮೂಲಕ ಸಮಾಜದಲ್ಲಿ ಬೇರೂರಿದ ಜಾತಿ ವ್ಯವಸ್ಥೆ, ಮೂಢನಂಬಿಕೆ ಹಾಗೂ ಅನಿಷ್ಠ ಪದ್ಧತಿಗಳನ್ನು ಹೋಗಲಾಡಿಸಿದರು' ಎಂದು ಭೀಮವಾದ ದಲಿತ ಸಂಘರ್ಷ ಸಮಿತಿ ರಾಜ್ಯ ಸಂಚಾಲಕ ಬಿ.ಎನ್.ವೆಂಕಟೇಶ್ ಹೇಳಿದರು.

ಕಾಡುಗೋಡಿ ಸಮೀಪದ ಚನ್ನಸಂದ್ರದಲ್ಲಿ ಭೀಮವಾದ ದಲಿತ ಸಂಘರ್ಷ ಸಮಿತಿ ವತಿಯಿಂದ ವಿಶ್ವಗುರು ಬಸವಣ್ಣನವರ ಜಯಂತಿ ಪ್ರಯುಕ್ತ ಬಸವೇಶ್ವರರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮಾತನಾಡಿದರು.

ಡಾ.ಬಿ.ಆರ್.ಅಂಬೇಡ್ಕರ್ ಪ್ರತಿ ಸಮುದಾಯಕ್ಕೆ ಸಂವಿಧಾನದಲ್ಲಿ ಮೀಸಲಾತಿ ಕಲ್ಪಿಸುವ ಮೂಲಕ ಸಮಾನ ಅವಕಾಶ ದಕ್ಕಿಸಿಕೊಟ್ಟಿದ್ದಾರೆ. ಬಸವಣ್ಣ ಹಾಗೂ ಡಾ.ಬಿಆರ್ ಅಂಬೇಡ್ಕರ್ ಅವರ ತತ್ವ ಆದರ್ಶಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡು ಅವರು ಹಾಕಿಕೊಟ್ಟ ಮಾರ್ಗದಲ್ಲಿ ನಾವೆಲ್ಲರೂ ಸಾಗೋಣ ಎಂದು ತಿಳಿಸಿದರು.

ಈ ವೇಳೆ ಡಿ.ಸಿದ್ದರಾಜು, ಕೆ.ಕುಮಾರ್, ಸೊಣ್ಣೆಗೌಡ, ಮಹಾದೇವ, ವೈ.ರಾಜಣ್ಣ, ಎಸ್.ಬಾಬು, ಕೆ.ವೈ. ದಿವ್ಯ, ಎಂ.ಮಂಜುನಾಥ್, ಜಿ.ಆರ್. ವೆಂಕಟೇಶ್, ಕರುಣಾಕರನ್ ಇದ್ದರು.

ಬೆಂಗಳೂರಿನ ಚಾಲುಕ್ಯ ವೃತ್ತದಲ್ಲಿ ಬಸವ ಸಮಿತಿಯಲ್ಲಿ ಸಮಿತಿಯ ಜಂಟಿ ಕಾರ್ಯದರ್ಶಿ ಸುನೀಲ್ ಕುಮಾರ್ ರಾಗಟೆ, ಬೃಹತ್ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ, ಮುಖ್ಯಮಂತ್ರಿ ಸಿದ್ದರಾಮಯ್ಯ, ಅರವಿಂದ ಜತ್ತಿ ಅವರು ಬಸವಣ್ಣನವರ ಪ್ರತಿಮೆಗೆ ಪುಷ್ಪ ನಮನ ಸಲ್ಲಿಸಿದರು ಪ್ರಜಾವಾಣಿ ಚಿತ್ರ

ಜನಮಾನಸದಲ್ಲಿ ಉಳಿದ ವಿಶ್ವಗುರು

ಬೆಂಗಳೂರು: ಸಮಾಜದಲ್ಲಿ ಪರಿವರ್ತನೆ ತರುವ ಕಾರ್ಯಗಳ ಮೂಲಕ ಜನಮಾನಸದಲ್ಲಿ ವಿಶ್ವಗುರು ಬಸವಣ್ಣ ಅಚ್ಚಳಿಯದೇ ಉಳಿದಿದ್ದಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಬಸವ ಜಯಂತಿ ಪ್ರಯುಕ್ತ ಬಸವೇಶ್ವರ ವೃತ್ತದಲ್ಲಿರುವ ಅನುಭವ ಮಂಟಪದಲ್ಲಿ ಬಸವಣ್ಣನವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಅವರು ಮಾತನಾಡಿದರು.

ಸಾಮಾಜಿಕ ಕ್ರಾಂತಿ ಮಾಡಿರುವ ಬಸವಣ್ಣ ಅವರನ್ನು ನೆನಪು ಮಾಡಿಕೊಳ್ಳುವುದು ಕನ್ನಡಿಗರ, ಭಾರತೀಯರ ಕರ್ತವ್ಯ. ಅವರಿಗೆ ಕೃತಜ್ಞತೆ ಸಲ್ಲಿಸಲು ಸರ್ಕಾರದ ವತಿಯಿಂದ ಸಾಂಸ್ಕೃತಿಕ ನಾಯಕ ಎಂದು ಘೋಷಣೆ ಮಾಡಲಾಗಿದೆ ಎಂದು ಹೇಳಿದರು.

ಬಿದರಿಗೆ 'ಪವಾಡ ಶ್ರೀ' ಪ್ರಶಸ್ತಿ ಪ್ರದಾನ

ನೆಲಮಂಗಲ: ಬಸವತತ್ವಗಳು ಸರ್ವಜನಾಂಗದ ಆಸ್ತಿ, ಬಸವತತ್ವದ ಆರಾಧಕರು ನಾವಾಗಿ, ಜಗ ಸರ್ವಜನಾಂಗದ ಶಾಂತಿಯ ತೋಟವಾಗಬೇಕು, ವಿಶಾಲತತ್ವದ ಅಡಿಯಲ್ಲಿ ಸಮಾಜ ಸೃಷ್ಟಿಯಾಗಬೇಕು ಎಂದು ನಿವೃತ್ತ ಪೊಲೀಸ್ ಮಹಾನಿರ್ದೇಶಕ ಶಂಕರ ಬಿದರಿ ತಿಳಿಸಿದರು.

ಬಸವಣ್ಣದೇವರ ಮಠದಲ್ಲಿ ಆಯೋಜಿಸಿದ್ದ ಬಸವಜಯಂತಿ ಉತ್ಸವದಲ್ಲಿ 'ಪವಾಡ ಶ್ರೀ' ಪ್ರಶಸ್ತಿ ಸ್ವೀಕರಿಸಿ ಅವರು ಮಾತನಾಡಿದರು.

ಕಾರ್ಯಕ್ರಮದಲ್ಲಿ ಯಲಹಂಕ ಶಾಸಕ ಎಸ್. ಆರ್. ವಿಶ್ವನಾಥ್ ಅವರು 'ಎಡೆಯೂರು ಸಿದ್ದಲಿಂಗೇಶ್ವರ', 'ಶ್ರೀ ಶಿವಕುಮಾರ ದರ್ಶನ', 'ವಚನ ಶಿಕ್ಷಣ' ಕೃತಿಗಳನ್ನು ಲೋಕಾರ್ಪಣೆ ಮಾಡಿದರು. ಸ್ಥಳೀಯ ಶಾಸಕ ಎನ್.ಶ್ರೀನಿವಾಸ್ ಯುವಜನ ಕ್ಷೇಮಾಭಿವೃದ್ಧಿ ಟ್ರಸ್ಟ್ ಲಾಂಛನ ಅನಾವರಣಗೊಳಿಸಿದರು.

ನಗರಸಭೆ ಅಧ್ಯಕ್ಷ ಎನ್.ಗಣೇಶ್, ಉಪಾಧ್ಯಕ್ಷ ಆನಂದ್, ಸದಸ್ಯರಾದ ಲತಾ ಹೇಮಂತ್ ಕುಮಾರ್, ಪೂರ್ಣಿಮಾ ಸುಗ್ಗರಾಜು ಇದ್ದರು.

ಬಹುಮಾನ ವಿತರಣೆ: ಬಸವ ಜಯಂತಿ ಅಂಗವಾಗಿ ಆಯೋಜಿಸಿದ್ದ ರಾಜ್ಯಮಟ್ಟದ ಕಂಠಪಾಠ ಸ್ಪರ್ಧೆಯಲ್ಲಿ 1,040 ವಚನಗಳನ್ನು ನಿರಂತರವಾಗಿ ವಾಚಿಸಿದ ಹಿರೇಬಾಗವಾಡಿಯ ಲಾವಣ್ಯ ಅಂಗಡಿ ಅವರಿಗೆ ಪ್ರಥಮ ಬಹುಮಾನವಾಗಿ ₹1 ಲಕ್ಷ ನಗದು ಹಾಗೂ 'ವಚನ ರತ್ನ' ಪ್ರಶಸ್ತಿ ನೀಡಲಾಯಿತು. 990 ವಚನ ವಾಚಿಸಿದ ಬೇಲೂರಿನ ವೈ.ಎನ್. ನೀಲಾ ಅವರಿಗೆ ದ್ವಿತೀಯ ಬಹುಮಾನವಾಗಿ ₹75 ಸಾವಿರ ನಗದು, 465 ವಚನ ವಾಚಿಸಿದ ಬೈಲಹೊಂಗಲದ ಮದನಬಾವಿಯ ವಿನಾಯಕ ಗುಜನಾಳ ಅವರಿಗೆ ತೃತೀಯ ಬಹುಮಾನವಾಗಿ ₹50,000 ನಗದು ನೀಡಲಾಯಿತು. ತೆಲಂಗಾಣದ ಜ್ಯೋತಿ ಅವರಿಗೆ ₹25,000 ನಗದು ಹಾಗೂ ಪ್ರದೀಪ್ ಅವರಿಗೆ ₹10,000 ನೀಡಿ ಗೌರವಿಸಲಾಯಿತು.

ಬಸವಣ್ಣದೇವರ ಮಠದ ಸಿದ್ದಲಿಂಗ ಶ್ರೀಗಳು ಹಾಗೂ ವಿವಿಧ ಮಠಾಧೀಶರು ಶಂಕರ ಬಿದರಿ ಅವರಿಗೆ 'ಪವಾಡ ಶ್ರೀ' ಪ್ರಶಸ್ತಿ ಪ್ರದಾನ ಮಾಡಿದರು

'ಯುದ್ಧಕ್ಕೆ ಬಸವ ತತ್ವವೇ ಮದ್ದು'

ವಿಶ್ವ ಬಸವ ಜಯಂತಿ ಕಾರ್ಯಕ್ರಮದಲ್ಲಿ ಅರವಿಂದ ಜತ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಸವಪ್ರಜ್ಞೆ ಇರುತ್ತಿದ್ದರೆ ಪಹಲ್ಗಾಮ್‌ನಲ್ಲಿ ನಡೆದ ಉಗ್ರಗಾಮಿಗಳ ದಾಳಿ, ರಷ್ಯಾ – ಉಕ್ರೇನ್ ಯುದ್ಧಗಳು ನಡೆಯುತ್ತಿರಲಿಲ್ಲ. ಎಲ್ಲ ಹಿಂಸೆ, ಯುದ್ಧಗಳಿಗೆ ಬಸವಣ್ಣನ ತತ್ವದಲ್ಲಿ, ವಚನಗಳಲ್ಲಿ ಮದ್ದಿದೆ' ಎಂದು ಬಸವ ಸಮಿತಿ ಅಧ್ಯಕ್ಷ ಅರವಿಂದ ಜತ್ತಿ ತಿಳಿಸಿದರು.

ಬುಧವಾರ ನಡೆದ ವಿಶ್ವ ಬಸವ ಜಯಂತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಬಸವ ಸಮಿತಿ ಟ್ರಸ್ಟ್‌ನ ಚುನಾಯಿತ ಸದಸ್ಯ ಕೆ. ಮೋಹನ್‌ದೇವ ಆಳ್ವ ಅವರಿಗೆ 'ದಾಸೋಹ ರತ್ನ' ಪ್ರಶಸ್ತಿ ಪ್ರದಾನ ಮಾಡಲಾಯಿತು. ಸಂಗೀತ ಕ್ಷೇತ್ರದ ಸಾಧನೆಗಾಗಿ ತೋಂಟಪ್ಪ ಉತ್ತಂಗಿ ಅವರಿಗೆ ಅತ್ತಾವರ ಬೀಡು ಕೋಳೂರು ಗುತ್ತು ದೇವ ಆಳ್ವ ಮತ್ತು ಕೊಡ್ಮಾಣ್ ಗುತ್ತು ವಿಟ್ಟಮ್ಮ ಆಳ್ವ ಸಂಸ್ಮರಣಾರ್ಥ ₹1 ಲಕ್ಷ ನಗದು ಪ್ರಶಸ್ತಿ ನೀಡಲಾಯಿತು. ಸಮಿತಿ ಪ್ರಕಟಿಸಿದ ಕೃತಿಗಳನ್ನು ಬಿಡುಗಡೆ ಮಾಡಲಾಯಿತು.

ಬೇಲಿಮಠದ ಶಿವರುದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಮಾಜಿ ಸಚಿವರಾದ ಲೀಲಾವತಿ ಆರ್. ಪ್ರಸಾದ್, ರಾಣಿ ಸತೀಶ್, ಕೈಗಾರಿಕೆ ಸಚಿವರ ಪಿಆರ್‌ಒ ಮಹಾಂತೇಶ ಬಿರಾದಾರ, ಐಲೈಟ್ ಚಾರಿಟಬಲ್ ಟ್ರಸ್ಟ್‌ನ ಅವಿನಾಶ್ ಪಾಳೇಗಾರ್, ಬಸವ ಸಮಿತಿ ಹಿರಿಯ ಉಪಾಧ್ಯಕ್ಷ ಪ್ರಭುದೇವ ಜೆ. ಚಿಗಟೇರಿ, ಪ್ರಧಾನ ಕಾರ್ಯದರ್ಶಿ ಗಿರೀಶ್ ಎಸ್. ದಿಬ್ಬೂರು ಭಾಗವಹಿಸಿದ್ದರು.

ಕೆ. ಮೋಹನ್‌ದೇವ ಆಳ್ವ ಅವರಿಗೆ 'ದಾಸೋಹರತ್ನ ಪ್ರಶಸ್ತಿ', ವಚನ ಸಂಗೀತಕ್ಕಾಗಿ ತೋಂಟಪ್ಪ ಉತ್ತಂಗಿ ಅವರಿಗೆ ಅತ್ತಾವರ ಬೀಡು ಕೋಳೂರು ಗುತ್ತು ದೇವ ಆಳ್ವ ಮತ್ತು ಕೊಡ್ಮಾಣ್ ಗುತ್ತು ವಿಟ್ಟಮ್ಮ ಆಳ್ವ ಸಂಸ್ಮರಣಾ ಪ್ರಶಸ್ತಿ ನೀಡಲಾಯಿತು

'ಮಹಾನ್ ಮಾನವತಾವಾದಿ ಬಸವಣ್ಣ'

ಕರ್ನಾಟಕ ದಲಿತ ಕ್ರಿಯಾ ವೇದಿಕೆ ರಾಜ್ಯಾಧ್ಯಕ್ಷ ಕಾಡುಗೋಡಿ ಸೊಣ್ಣಪ್ಪ ಅವರು ಬಸವೇಶ್ವರರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಬಸವಣ್ಣನವರು ಸರ್ವಧರ್ಮ ಜಾತಿ ಜನಾಂಗಗಳನ್ನು ಒಂದುಗೂಡಿಸಿ ಮಹಾಮಾನವತಾದಿಯಾಗಿದ್ದರು ಎಂದು ಕರ್ನಾಟಕ ದಲಿತ ಕ್ರಿಯಾ ವೇದಿಕೆ ರಾಜ್ಯಾಧ್ಯಕ್ಷ ಕಾಡುಗೋಡಿ ಸೊಣ್ಣಪ್ಪ ಹೇಳಿದರು.

ಸಮೀಪದ ಕಾಡುಗೋಡಿಯ ಬಾಪೂಜಿ ವೃತ್ತದಲ್ಲಿ ಹಮ್ಮಿಕೊಂಡಿದ್ದ ಬಸವ ಜಯಂತಿ ಪ್ರಯುಕ್ತ ಬಸವೇಶ್ವರರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮಾತನಾಡಿದರು.

ಬಸವಣ್ಣನವರು ಚಳವಳಿಗಳ ಮೂಲಕ ಮಾನವ ಕುಲವೊಂದೆ ಎಂಬ ಸಂದೇಶ ಸಾರಿದರು. ಸರ್ವ ಜನಾಂಗಗಳನ್ನು ಒಂದುಗೂಡಿಸುವ ಕೆಲಸ ಮಾಡಿದ್ದರು. ಜಗತ್ತಿನಲ್ಲಿ ಜಾತಿ ಬೇಧ ಇರಬಾರದು ಸರ್ವರು ಒಂದಾಗಿ ಬಾಳಬೇಕು ಎಂದು ಕನಸು ಕಂಡಿದ್ದರು ಎಂದರು.

ಕಾರ್ಯಕ್ರಮದಲ್ಲಿ ನರಸಿಂಹ, ಬೆಳತ್ತೂರು ವೆಂಕಟೇಶ್, ಡಾ.ಕೃಷ್ಣ ಮೂರ್ತಿ ಮಾದಿಗ, ಕುಮಾರ್, ಮುನಿಯಪ್ಪ, ರಮೇಶ್, ಮೂರ್ತಿ, ನಟರಾಜ್, ಫಾತಿಮಾ, ರಾಣಿ, ಉದಯಕುಮಾರ್, ಪ್ರಕಾಶ್, ಮುನಿಂದ್ರ ಇದ್ದರು.

ಬಸವ ಜಯಂತಿ

ರಾಜರಾಜೇಶ್ವರಿನಗರ: 'ಬುದ್ದ, ಬಸವ ಹಾಗೂ ಬಿ.ಆರ್. ಅಂಬೇಡ್ಕರ್, ಮಹಾತ್ಮ ಗಾಂಧೀಜಿ ಅವರ ತತ್ವ, ಸಿದ್ಧಾಂತ, ವಿಚಾರಧಾರೆಗಳು ಕಲುಷಿತ ಸಮಾಜದ ಪರಿವರ್ತನೆಗೆ ಪ್ರೇರಕ ಶಕ್ತಿಯಾಗಿವೆ' ಎಂದು ಶಾಸಕ ಎಸ್ ಟಿ ಸೋಮಶೇಖರ್ ಹೇಳಿದರು.

ಸರ್ ಎಂ.ವಿಶ್ವೇಶ್ವರಯ್ಯ ಬಡಾವಣೆ ಒಂದನೇ ಹಂತ ಅಂಬೇಡ್ಕರ್ ವೃತ್ತದಲ್ಲಿ ಡಾ.ಬಿ.ಆರ್ ಅಂಬೇಡ್ಕರ್ ಪ್ರತಿಷ್ಠಾನ ಸೇವಾ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ ಜಗಜ್ಯೋತಿ ಬಸವೇಶ್ವರರು ಹಾಗೂ ಡಾ. ಬಿ ಆರ್ ಅಂಬೇಡ್ಕರ್ ಅವರ ಜಯಂತ್ಯುತ್ಸವ ಮತ್ತು ನಾಮಫಲಕ ಉದ್ಘಾಟನಾ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು.

ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಷ್ಠಾನ ಸೇವಾ ಟ್ರಸ್ಟ್ ಅಧ್ಯಕ್ಷ ಜಿ.ಮುನಿರಾಜು ಮಾತನಾಡಿದರು.

ಜಾತಿ ಒಡೆಯುತ್ತಿರುವ ಕಾಂಗ್ರೆಸ್: ಛಲವಾದಿ

ಬೆಂಗಳೂರು: ಬುದ್ಧ, ಬಸವ ಮತ್ತು ಅಂಬೇಡ್ಕರ್ ಅವರು ಜಾತಿಗಳ ನಿರ್ಮೂಲನೆ ಮಾಡುವ ಸದುದ್ದೇಶ ಹೊಂದಿದ್ದರು. ಆದರೆ ಕಾಂಗ್ರೆಸ್ ಸರ್ಕಾರವು ಜಾತಿ ಜಾತಿಗಳನ್ನು ಒಡೆಯುತ್ತಿದೆ. ಕೇವಲ ಓಟ್ ಬ್ಯಾಂಕ್‌ಗಾಗಿಯೇ ರಾಜಕಾರಣವನ್ನು ಮಾಡುತ್ತಿದೆ ಎಂದು ಛಲವಾದಿ ನಾರಾಯಣ ಸ್ವಾಮಿ ಟೀಕಿಸಿದರು.

ಎಸ್.ಎಂ. ಕೃಷ್ಣ ಹೆಸರಲ್ಲಿ 8 ದತ್ತಿ ನಿಧಿ

ಪ್ರಜಾವಾಣಿ ವಾರ್ತೆ

ಎಸ್.ಎಂ. ಕೃಷ್ಣ

ಬೆಂಗಳೂರು: ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರ ಹೆಸರಿನಲ್ಲಿ ವಿವಿಧ ಪ್ರಶಸ್ತಿ ನೀಡಲು ಮಂಡ್ಯ ಜಿಲ್ಲೆಯ ಜನಪ್ರತಿನಿಧಿಗಳು ಹಾಗೂ ಅಭಿಮಾನಿಗಳು ಎಂಟು ದತ್ತಿ ನಿಧಿ ಸ್ಥಾಪಿಸಿದ್ದಾರೆ.

ಎಸ್.ಎಂ. ಕೃಷ್ಣ ಅವರ 93ನೇ ಜನ್ಮದ ದಿನ ಸ್ಮರಣಾರ್ಥ ದತ್ತಿ ನಿಧಿ ಸ್ಥಾಪಿಸಲಾಗಿದ್ದು, ಪ್ರತಿ ವರ್ಷ ವಿವಿಧ ಕ್ಷೇತ್ರದ ಸಾಹಿತಿಗಳು, ಗಣ್ಯರು, ರೈತರು, ವಿದ್ಯಾರ್ಥಿಗಳಿಗೆ ಪ್ರಶಸ್ತಿ ನೀಡಲಾಗುತ್ತದೆ ಎಂದು ವಿಧಾನ ಪರಿಷತ್‌ನ ಕಾಂಗ್ರೆಸ್ ಸದಸ್ಯ ದಿನೇಶ್ ಗೂಳಿಗೌಡ ತಿಳಿಸಿದ್ದಾರೆ.

'ದಿವ್ಯ ಚೇತನ ಎಸ್.ಎಂ.ಕೃಷ್ಣ ದತ್ತಿನಿಧಿ' ಸ್ಥಾಪಿಸಿ, ವಿಶ್ವವಿದ್ಯಾಲಯಗಳು ಮತ್ತು ಪ್ರತಿಷ್ಠಿತ ಸಂಸ್ಥೆಗಳು ಪ್ರತಿ ವರ್ಷ ತಲಾ ಒಬ್ಬರಿಗೆ ಪ್ರಶಸ್ತಿ ಅಥವಾ ಉತ್ತಮ ವಿದ್ಯಾರ್ಥಿಗಳಿಗೆ ಚಿನ್ನದ ಪದಕ ನೀಡುತ್ತವೆ. ಸಂಬಂಧಪಟ್ಟ ಸಂಸ್ಥೆಗಳಿಗೆ ಡಿಡಿ ಮೂಲಕ ಹಣವನ್ನು ಕಳುಹಿಸಿ ಕೊಡಲಾಗಿದೆ ಎಂದರು.

ದತ್ತಿ ನಿಧಿ ವಿವರ:

- ಕೃಷಿ ಸಚಿವ ಎನ್. ಚಲುವರಾಯ ಸ್ವಾಮಿ ಅವರಿಂದ ಬೆಂಗಳೂರಿನ ಗಾಂಧಿ ಕೃಷಿ ವಿಶ್ವವಿದ್ಯಾಲಯಕ್ಕೆ ₹5 ಲಕ್ಷ ದತ್ತಿ ನಿಧಿ– ಪ್ರಗತಿಪರ ರೈತರೊಬ್ಬರಿಗೆ ಪ್ರಶಸ್ತಿ
- ಮಂಡ್ಯ ಉಸ್ತುವಾರಿ ಸಚಿವ ಎನ್. ಚಲುವರಾಯ ಸ್ವಾಮಿ ಅವರಿಂದ ಮಂಡ್ಯದ ಕರ್ನಾಟಕ ಸಂಘಕ್ಕೆ ₹5 ಲಕ್ಷ ದತ್ತಿ ನಿಧಿ– ಸಮಾಜ ಸೇವೆಗಾಗಿ ಪ್ರಶಸ್ತಿ
- ಶಾಸಕ ಕೆ.ಎಂ.ಉದಯ್ ಅವರಿಂದ ಮೈಸೂರು ವಿಶ್ವವಿದ್ಯಾಲಯಕ್ಕೆ ₹10 ಲಕ್ಷ ದತ್ತಿ ನಿಧಿ– ಚಿನ್ನದ ಪದಕ ಪಡೆದ ಇಬ್ಬರು ವಿದ್ಯಾರ್ಥಿಗಳಿಗೆ ಚಿನ್ನದ ಪದಕ
- ಮಳವಳ್ಳಿ ಶಾಸಕ ಪಿ.ಎಂ. ನರೇಂದ್ರ ಸ್ವಾಮಿ ಅವರಿಂದ ಕಾನೂನು ವಿಶ್ವವಿದ್ಯಾಲಯಕ್ಕೆ ₹5 ಲಕ್ಷ ದತ್ತಿ– ಪ್ರಥಮ ಸ್ಥಾನಗಳಿಸಿದ ವಿದ್ಯಾರ್ಥಿಗೆ ಚಿನ್ನದ ಪದಕ
- ಶ್ರೀರಂಗಪಟ್ಟಣ ಶಾಸಕ ಎ.ಬಿ. ರಮೇಶ ಬಂಡಿಸಿದ್ದೇಗೌಡ ಅವರಿಂದ ಕರ್ನಾಟಕ ಚಿತ್ರಕಲಾ ಪರಿಷತ್‌ಗೆ ₹5 ಲಕ್ಷ ದತ್ತಿ– ಒಬ್ಬರು ಚಿತ್ರಕಲಾವಿದರಿಗೆ ನಗದು– ಪ್ರಶಸ್ತಿ
- ಮಂಡ್ಯ ಶಾಸಕ ರವಿಕುಮಾರ್ ಗಣಿಗ ಅವರಿಂದ ಮಂಡ್ಯ ವಿ.ವಿ.ಗೆ ₹5 ಲಕ್ಷ ದತ್ತಿ– ಚಿನ್ನದ ಪದಕ ಪಡೆದ ವಿದ್ಯಾರ್ಥಿಗೆ ಪದಕ
- ಸ್ಟಾರ್ ಚಂದ್ರು (ವೆಂಕಟರಮಣೇಗೌಡ) ಅವರಿಂದ ಕನ್ನಡ ಸಾಹಿತ್ಯ ಪರಿಷತ್‌ಗೆ ₹5 ಲಕ್ಷ ದತ್ತಿ– ಒಬ್ಬ ಸಾಹಿತಿಗೆ ನಗದು, ಪ್ರಶಸ್ತಿ
- ವಿಧಾನ ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಅವರಿಂದ ಮೈಸೂರಿನ ರಾಮಕೃಷ್ಣ ಆಶ್ರಮಕ್ಕೆ ₹5 ಲಕ್ಷ ದತ್ತಿ– ಪ್ರಥಮ ಸ್ಥಾನ ಪಡೆದವರಿಗೆ ಚಿನ್ನದ ಪದಕ

ಹೆಣ್ಣುಮಕ್ಕಳಿಂದಲೇ ಅಂತ್ಯಸಂಸ್ಕಾರ

ಪ್ರಜಾವಾಣಿ ವಾರ್ತೆ

ಸಾಗರ (ಶಿವಮೊಗ್ಗ): ವ್ಯಕ್ತಿಯೊಬ್ಬರ ಅಂತ್ಯಸಂಸ್ಕಾರದ ವಿಧಿ ವಿಧಾನಗಳನ್ನು ಪುರುಷರ ಬದಲು ಕುಟುಂಬದ ಮಹಿಳೆಯರೇ ನಡೆಸಿದ ಅಪರೂಪದ ಘಟನೆ ಸಾಗರ ನಗರದಲ್ಲಿ ಈಚೆಗೆ ಜರುಗಿದೆ.

ಇಲ್ಲಿನ ಸೊರಬ ರಸ್ತೆಯ ಸಿದ್ದೇಶ್ವರ ಶಾಲೆ ಹಿಂಭಾಗದ ನಿವಾಸಿ ಗೋಪಾಲ ರಾಮಚಂದ್ರ ಭಟ್ಟರು ಕ್ಯಾನ್ಸರ್‌ನಿಂದ ಮೃತಪಟ್ಟಿದ್ದರು. 78 ವರ್ಷದ ಅವರು ಈ ಹಿಂದೆ ಸೊರಬ ತಾಲ್ಲೂಕಿನ ಉಳವಿಯ ಮಹಾಗಣಪತಿ ದೇವಸ್ಥಾನದ ಅರ್ಚಕರಾಗಿದ್ದರು.

ಇರುವಷ್ಟು ಕಾಲ ಅವರನ್ನು ಆರೈಕೆ ಮಾಡಿದ್ದ ಕುಟುಂಬದ ಹೆಣ್ಣುಮಕ್ಕಳು ಅವರ ಅಂತ್ಯಸಂಸ್ಕಾರ ನಡೆಸಲೂ ನಿರ್ಧರಿಸಿದ್ದರು. ಚಟ್ಟಕ್ಕೆ ಹೆಗಲು ಕೊಡುವುದರಿಂದ ಹಿಡಿದು ಅಂತ್ಯಕ್ರಿಯೆ ನಡೆದ ಮಾರಿಕಾಂಬಾ ರುದ್ರಭೂಮಿಯಲ್ಲಿ ಶವ ಇಳಿಸುವ ಕೆಲಸವನ್ನೂ ಅವರೇ ನಡೆಸಿದ್ದಾರೆ.

'ಶಾಸ್ತ್ರ, ಆಚರಣೆಗಳನ್ನು ಯಾರು ಮಾಡಬೇಕು ಎಂಬುದು ಮುಖ್ಯವಲ್ಲ. ಕೋವಿಡ್ ನಮಗೆ ಮರೆಯಲಾಗದ ಪಾಠ ಕಲಿಸಿದೆ. ಗಂಡು, ಹೆಣ್ಣು ಎಂಬುದಕ್ಕಿಂತಲೂ ಮುಖ್ಯವಾಗಿ ಸ್ಪಂದಿಸುವ ಗುಣ ಇರಬೇಕು' ಎಂದು ಗೋಪಾಲ ಭಟ್ಟರ ಸಂಬಂಧಿ ರಾಜೇಶ್ವರಿ ಭಟ್ ತಿಳಿಸಿದರು.

ಸಾಗರದಲ್ಲಿ ಈಚೆಗೆ ಮಹಿಳೆಯರು ಚಟ್ಟಕ್ಕೆ ಹೆಗಲು ಕೊಟ್ಟಿದ್ದ ಕ್ಷಣ

ಹುಬ್ಬಳ್ಳಿ ಎನ್‌ಕೌಂಟರ್: ನೋಟಿಸ್

ನವದೆಹಲಿ (ಪಿಟಿಐ): ಹುಬ್ಬಳ್ಳಿಯಲ್ಲಿ ಬಾಲಕಿಯ ಅಪಹರಣ, ಅತ್ಯಾಚಾರ ಮತ್ತು ಕೊಲೆ ಹಾಗೂ ಎನ್‌ಕೌಂಟರ್‌ನಲ್ಲಿ ಆರೋಪಿಯ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಕರ್ನಾಟಕ ಸರ್ಕಾರ ಮತ್ತು ರಾಜ್ಯ ಪೊಲೀಸ್ ಮುಖ್ಯಸ್ಥರಿಗೆ ನೋಟಿಸ್ ನೀಡಲಾಗಿದೆ ಎಂದು ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ (ಎನ್‌ಎಚ್‌ಆರ್‌ಸಿ) ಬುಧವಾರ ತಿಳಿಸಿದೆ.

ಸಂತ್ರಸ್ತೆ ಮತ್ತು ಆರೋಪಿಯ ಮರಣೋತ್ತರ ಪರೀಕ್ಷೆ ವರದಿ ಹಾಗೂ ಮ್ಯಾಜಿಸ್ಟೀರಿಯಲ್ ತನಿಖಾ ವರದಿ ಸೇರಿ ಒಟ್ಟಾರೆ ವರದಿಯನ್ನು ನಾಲ್ಕು ವಾರಗಳ ಒಳಗಾಗಿ ನೀಡುವಂತೆ ತಿಳಿಸಲಾಗಿದೆ ಎಂದು ಹೇಳಿಕೆಯಲ್ಲಿ ತಿಳಿಸಿದೆ.

ರೈಲು ಗಾಲಿ ಕಾರ್ಖಾನೆ
ಯಲಹಂಕ, ಬೆಂಗಳೂರು-560 064
ವೆಬ್‌ಸೈಟ್: www.rwf.indianrailways.gov.in

ತಿದ್ದುಪಡಿ

ಟೆಂಡರ್ ಸೂಚನೆ ಸಂಖ್ಯೆ ಆರ್‌ಡಬ್ಲ್ಯುಎಫ್/ಪಿಸಿಇಇ/ಇಎಲ್/ಟಿಡಿ/2025–26/01/ಆರ್‌ಟಿ ದಿನಾಂಕ 26.04.2025 **ದಿನಾಂಕವನ್ನು 29.04.2025** ಕ್ಕೆ ಪರಿಷ್ಕರಿಸಲಾಗಿದೆ. ಟೆಂಡರ್ ಮುಕ್ತಾಯದ ದಿನಾಂಕ ಮತ್ತು ಸಮಯ: **23.05.2025, ಮಧ್ಯಾಹ್ನ 3.00 ಗಂಟೆಗೆ** ಮುಂದೂಡಲಾಗಿದೆ.

ಉಪ ಮುಖ್ಯ ಎಲೆಕ್ಟ್ರಿಕಲ್ ಇಂಜಿನಿಯರ್

Infosys
Navigate your next

Infosys Limited
CIN : L85110KA1981PLC013115
44, Infosys Avenue, Electronics City, Hosur Road, Bengaluru - 560 100
Phone: 91 80 2852 0261, Fax: 91 80 2852 0362
investors@infosys.com, www.infosys.com

NOTICE OF LOSS OF SHARE CERTIFICATES

Notice is hereby given that the following share certificate(s) issued by the Company are stated to have been lost or misplaced and the registered share holder(s) thereof have applied for the issue of duplicate share certificate(s).

Notice is hereby given that the Company will proceed to **issue letter of confirmation in lieu of duplicate share certificate(s)** unless a valid objection is received by the Company within 15 days from the date of publication of this notice. No claims will be entertained by the Company with respect to the original share certificate(s) subsequent to the issue of duplicates thereof.

Name of Shareholder	Folio No.	Certificate No.	Distinctive Nos.		No. of Shares
			From	To	
S SURESH	ITL013305	145443	662049	662056	8
		151237	277560041	277560048	8

Any person who has/have a claim in respect of the said certificate(s) should lodge his/her/their claim with all supporting documents with the Company at its registered office. If no valid and legitimate claim is received within 15 days from the date of publication of this notice, the Company will proceed to issue **Letter of Confirmation in lieu of duplicate share certificate(s)** to the person listed above and no further claim would be entertained from any other person(s).

Registered Office:
Electronics City, Hosur Road,
Bengaluru - 560 100

April 30, 2025
Bengaluru, India

For **Infosys Limited**
Sd/-
A.G.S. Manikantha
Company Secretary
Membership No. A21918

ಖಾಸಗಿ ವಿಮಾ ಕಂಪನಿಗಳು ಪಾವತಿಸುವ ಹಣ ಆಸ್ಪತ್ರೆಯ ಅಭಿವೃದ್ಧಿ, ಸೌಲಭ್ಯ ವಿಸ್ತರಣೆಗೆ ಬಳಕೆ

ಸರ್ಕಾರಿ ಆಸ್ಪತ್ರೆ: ವಿಮೆಯಡಿ ಚಿಕಿತ್ಸೆ

• ವರುಣ ಹೆಗಡೆ

ಬೆಂಗಳೂರು: ನಗರದ ಸರ್ಕಾರಿ ವೈದ್ಯಕೀಯ ಸಂಸ್ಥೆಗಳು ಖಾಸಗಿ ವಿಮೆಯಡಿಯೂ ಚಿಕಿತ್ಸೆ ನೀಡಲಾರಂಭಿಸಿದ್ದು, ವಿಮಾ ಕಂಪನಿಗಳು ಪಾವತಿಸುವ ಹಣವನ್ನು ಆಸ್ಪತ್ರೆಯ ಅಭಿವೃದ್ಧಿ ಹಾಗೂ ವೈದ್ಯಕೀಯ ಸೌಲಭ್ಯ ಬಲವರ್ಧನೆಗೆ ಬಳಸಿಕೊಳ್ಳಲು ನಿರ್ಧರಿಸಿವೆ.

ಆಸ್ಪತ್ರೆಗಳ ಆರ್ಥಿಕ ಸಂಪನ್ಮೂಲ ವೃದ್ಧಿ ಹಾಗೂ ಅಭಿವೃದ್ಧಿಯ ಉದ್ದೇಶದಿಂದ ವೈದ್ಯಕೀಯ ಶಿಕ್ಷಣ ಇಲಾಖೆಯು ಪ್ರಮುಖ ವೈದ್ಯಕೀಯ ಸಂಸ್ಥೆಗಳಿಗೆ ಖಾಸಗಿ ವಿಮೆಯಡಿ ಚಿಕಿತ್ಸೆಗೆ ಅವಕಾಶ ಕಲ್ಪಿಸಿದೆ. ಇದರಿಂದಾಗಿ ವೈದ್ಯಕೀಯ ಸಂಸ್ಥೆಗಳು ವಿವಿಧ ವಿಮಾ ಕಂಪನಿಗಳ ಜತೆಗೆ ಒಪ್ಪಂದ ಮಾಡಿಕೊಂಡು, ರೋಗಿಗಳ ದಾಖಲಾತಿ ಪ್ರಾರಂಭಿಸಿವೆ. ಈ ಸಂಬಂಧ ಆಸ್ಪತ್ರೆಗಳಲ್ಲಿನ ವಿಶೇಷ ವಾರ್ಡ್‌ಗಳನ್ನು ಬಳಸಿಕೊಳ್ಳಲಾಗಿದ್ದು, 5ರಿಂದ 7 ಹಾಸಿಗೆಗಳನ್ನು ಮೀಸಲಿಟ್ಟಿವೆ.

ವೈದ್ಯಕೀಯ ಶಿಕ್ಷಣ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ವಿಕ್ಟೋರಿಯಾ ಆಸ್ಪತ್ರೆ, ಪ್ರಧಾನ ಮಂತ್ರಿ ಸ್ವಾಸ್ಥ್ಯ ಸುರಕ್ಷಾ ಯೋಜನೆ (ಪಿಎಂಎಸ್‌ಎಸ್‌ವೈ) ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ, ಸಂಜಯ ಗಾಂಧಿ ಟ್ರಾಮ ಮತ್ತು ಅಸ್ಥಿ ಚಿಕಿತ್ಸಾ ಸಂಸ್ಥೆ, ರಾಜೀವ್ ಗಾಂಧಿ ಎದೆರೋಗಗಳ ಸಂಸ್ಥೆ, ಇಂದಿರಾ ಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆ ಸೇರಿ ವಿವಿಧ ವೈದ್ಯಕೀಯ ಶಿಕ್ಷಣ ಸಂಸ್ಥೆಗಳು ಒಂದು–ಎರಡು ಖಾಸಗಿ ವಿಮೆ ಕಂಪನಿಗಳ ಜತೆಗೆ ಒಪ್ಪಂದ ಮಾಡಿಕೊಂಡಿವೆ. ಇನ್ನಷ್ಟು ವಿಮಾ ಕಂಪನಿಗಳ ಜತೆಗೆ ಒಪ್ಪಂದ ಮಾಡಿಕೊಳ್ಳಲು ವೈದ್ಯಕೀಯ ಸಂಸ್ಥೆಗಳು ಆಸಕ್ತಿ ತೋರಿವೆ.

ಉತ್ತಮ ಸ್ಪಂದನೆ: ಜಯದೇವ ಹೃದ್ರೋಗ ಸಂಸ್ಥೆ, ಬೌರಿಂಗ್ ಮತ್ತು ಲೇಡಿ ಕರ್ಜನ್ ಆಸ್ಪತ್ರೆ, ಗ್ಯಾಸ್ಟ್ರೋಎಂಟರಾಲಜಿ ಸೈನ್ಸಸ್ ಆ್ಯಂಡ್ ಆರ್ಗನ್ ಟ್ರಾನ್ಸ್‌ಪ್ಲಾಂಟ್ ಸಂಸ್ಥೆಯು (ಐಗಾಟ್) ಈ ಹಿಂದೆಯೇ ಖಾಸಗಿ ಆರೋಗ್ಯ ವಿಮೆ ಕಂಪನಿಗಳ ಜತೆಗೆ ಒಪ್ಪಂದ ಮಾಡಿಕೊಂಡು, ಚಿಕಿತ್ಸೆ ನೀಡುತ್ತಿವೆ. ಇಲ್ಲಿ ಉತ್ತಮ ಸ್ಪಂದನೆ ವ್ಯಕ್ತವಾಗಿರುವುದರಿಂದಲೇ ಉಳಿದ ವೈದ್ಯಕೀಯ ಸಂಸ್ಥೆಗಳೂ ವಿಮಾ ಕಂಪನಿಗಳ ಜತೆಗೆ ಒಪ್ಪಂದ ಮಾಡಿಕೊಂಡಿವೆ.

‘ಖಾಸಗಿ ಆಸ್ಪತ್ರೆಗಳಲ್ಲಿ ₹ 3 ಲಕ್ಷ ತಗಲುವ ಶಸ್ತ್ರಚಿಕಿತ್ಸೆಗಳನ್ನು ಸರ್ಕಾರಿ ವ್ಯವಸ್ಥೆಯಡಿ ₹ 70 ಸಾವಿರದಿಂದ ₹ 80 ಸಾವಿರಕ್ಕೆ ನಡೆಸಲಾಗುತ್ತಿದೆ. ಇದರಿಂದಾಗಿ ವಿಮೆ ಮೌಲ್ಯ ಒಂದು ಲಕ್ಷ ರೂಪಾಯಿ ಇದ್ದರೂ ಇಲ್ಲಿ ಚಿಕಿತ್ಸೆ ಸಾಧ್ಯವಾಗಲಿದೆ. ವಿಶೇಷ ವಾರ್ಡ್ ಮಾತ್ರ ಬಳಸಿಕೊಳ್ಳುವುದರಿಂದ ಬಡ ರೋಗಿಗಳ ಚಿಕಿತ್ಸೆಗೆ ಸಮಸ್ಯೆ ಆಗುವುದಿಲ್ಲ. ಬದಲಾಗಿ, ವಿಮಾ ಕಂಪನಿಗಳು ಪಾವತಿಸುವ ಹಣದಿಂದ ಬಡ ರೋಗಿಗಳಿಗೆ ಇನ್ನಷ್ಟು ಗುಣಮಟ್ಟದ ವೈದ್ಯಕೀಯ ಸೌಲಭ್ಯ ಒದಗಿಸಲು ಸಾಧ್ಯವಾಗಲಿದೆ’ ಎಂದು ಸಂಜಯ ಗಾಂಧಿ ಟ್ರಾಮ ಮತ್ತು ಅಸ್ಥಿ ಚಿಕಿತ್ಸಾ ಸಂಸ್ಥೆಯ (ಎಸ್‌ಜಿಐಟಿಒ) ನಿರ್ದೇಶಕ ಡಾ. ಮದನ್ ಬಲ್ಲಾಳ್ ತಿಳಿಸಿದರು.

ಸಂಜಯ ಗಾಂಧಿ ಟ್ರಾಮ ಮತ್ತು ಅಸ್ಥಿ ಚಿಕಿತ್ಸಾ ಸಂಸ್ಥೆ

ಕಡಿಮೆ ಪ್ರೀಮಿಯಂ ವಿಮೆ

ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸಾ ಪ್ಯಾಕೇಜ್ ದರ ಅಧಿಕವಿರುವುದರಿಂದ ₹ 5 ಲಕ್ಷ ಹಾಗೂ ಅದಕ್ಕಿಂತ ಹೆಚ್ಚಿನ ಮೌಲ್ಯದ ಆರೋಗ್ಯ ರಕ್ಷಣೆ ಒದಗಿಸುವ ವಿಮೆಯನ್ನು ಖರೀದಿಸಬೇಕಾಗಿದೆ. ಖಾಸಗಿ ಆಸ್ಪತ್ರೆಗಳಿಗೆ ಹೋಲಿಸಿದಲ್ಲಿ ಸರ್ಕಾರಿ ಆಸ್ಪತ್ರೆಗಳಲ್ಲಿ ಚಿಕಿತ್ಸಾ ಪ್ಯಾಕೇಜ್‌ಗಳ ದರ ಕಡಿಮೆ ಇರಲಿದೆ. ಇದರಿಂದ ಕಡಿಮೆ ಪ್ರೀಮಿಯಂನ ವಿಮೆಯನ್ನೂ ಖರೀದಿಸಿ, ಚಿಕಿತ್ಸೆಗಳನ್ನು ಪಡೆದುಕೊಳ್ಳಲು ಸಾಧ್ಯವಾಗುತ್ತದೆ.

ಖಾಸಗಿ ವಿಮೆ ಕಂಪನಿಯೊಂದರ ಜತೆಗೆ ಒಪ್ಪಂದ ಮಾಡಿ, ಚಿಕಿತ್ಸೆ ಒದಗಿಸಲಾಗುತ್ತಿದೆ. ಮುಂದಿನ ದಿನಗಳಲ್ಲಿ ಇನ್ನಷ್ಟು ವಿಮೆ ಕಂಪನಿಗಳ ಜತೆಗೆ ಒಪ್ಪಂದ ಮಾಡಿಕೊಳ್ಳಲಾಗುವುದು

ಡಾ. ಸಂಜಯ್ ಕೆ.ಎಸ್., ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆ ನಿರ್ದೇಶಕ

ಖಾಸಗಿ ವಿಮೆಯಡಿ ಚಿಕಿತ್ಸೆಗೆ ವಿಶೇಷ ವಾರ್ಡ್ ಅನ್ನು ಬಳಸಿಕೊಳ್ಳಲಾಗಿದೆ. ಸರ್ಕಾರಿ ವಿಮಾ ಯೋಜನೆಗಳ ಜತೆಗೆ ಖಾಸಗಿ ವಿಮೆಯಡಿಯೂ ಚಿಕಿತ್ಸೆ ಪ್ರಾರಂಭಿಸಲಾಗಿದೆ

ಡಾ. ಮದನ್ ಬಲ್ಲಾಳ್, ಎಸ್‌ಜಿಐಟಿಒ ನಿರ್ದೇಶಕ

ಬೆಳ್ತಂಗಡಿಯಲ್ಲಿ ಧಾರಾಕಾರ ಮಳೆ

ಮಂಗಳೂರು: ಬೆಳ್ತಂಗಡಿ ತಾಲ್ಲೂಕಿನ ವಿವಿಧೆಡೆ ಬುಧವಾರ ಮಧ್ಯಾಹ್ನದ ಬಳಿಕ ಭಾರಿ ಮಳೆ ಸುರಿದಿದೆ.

ಉಜಿರೆಯ ಕಾಲೇಜು ರಸ್ತೆಯಲ್ಲಿ ಗಾಳಿ ಮಳೆಗೆ ಬೃಹತ್ ಗಾತ್ರದ ಮರವೊಂದು ರಸ್ತೆಗೆ ಉರುಳಿ ಬಿತ್ತು. ಚಲಿಸುತ್ತಿದ್ದ ಬೈಕ್ ಮೇಲೆ ಮರ ಬಿದ್ದ ಪರಿಣಾಮ ಬೈಕಿಗೆ ಸಂಪೂರ್ಣ ಹಾನಿಯಾಗಿದ್ದು ಸವಾರ ನೀರಚಿಲುಮೆಯ ಅಮಿತ್ ಪವಾಡ ಸದೃಶವಾಗಿ ಅಪಾಯದಿಂದ ಪಾರಾಗಿದ್ದಾರೆ. ಮಂಗಳೂರು ನಗರದಲ್ಲಿ ಸಂಜೆ ಸಾಧಾರಣ ಮಳೆಯಾಯಿತು.

ಸುದ್ದಿ 2 ನಿಮಿಷ

ಮೇ 5ರಿಂದ ಹಿಂದೂ ಧರ್ಮ ಶಿಕ್ಷಣ ತರಬೇತಿ

ಪುತ್ತೂರು (ದಕ್ಷಿಣ ಕನ್ನಡ): ‘ಹಿಂದೂ ಧರ್ಮದ ಮಕ್ಕಳಿಗೆ ಬಾಲ್ಯದಲ್ಲೇ ಧಾರ್ಮಿಕ ಶಿಕ್ಷಣ ನೀಡುವ ಉದ್ದೇಶದಿಂದ ಶೃಂಗೇರಿ ಮಠದ ಮಾರ್ಗದರ್ಶನದಲ್ಲಿ ಪುತ್ತೂರಿನಲ್ಲಿ ‘ಹಿಂದೂ ಧರ್ಮ ಶಿಕ್ಷಣ’ ತರಬೇತಿ ಪ್ರಾರಂಭವಾಗಲಿದ್ದು, ಮೇ 5ರಂದು ಶೃಂಗೇರಿಯಲ್ಲಿ ವಿಧುಶೇಖರ ಭಾರತಿ ಸ್ವಾಮೀಜಿ ಈ ಯೋಜನೆಗೆ ಚಾಲನೆ ನೀಡುವರು’ ಎಂದು ಹಿಂದೂ ಧರ್ಮ ಶಿಕ್ಷಣ ಪುತ್ತೂರು ತಾಲ್ಲೂಕು ಸಮಿತಿಗಳ ಸಂಯೋಜಕ ಕಾವು ಹೇಮನಾಥ ಶೆಟ್ಟಿ ಹೇಳಿದರು.

ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಹಿಂದೂ ಧರ್ಮ ಶಿಕ್ಷಣ’ಕ್ಕಾಗಿ ಈಗಾಗಲೇ ಪುತ್ತೂರು ತಾಲ್ಲೂಕಿನಲ್ಲಿ 30 ಗ್ರಾಮ ಸಮಿತಿಗಳು ರಚನೆಯಾಗಿವೆ. ಭಜನಾ ಮಂದಿರ ಅಥವಾ ದೇವಸ್ಥಾನದಲ್ಲಿ ಮಕ್ಕಳಿಗೆ ಧಾರ್ಮಿಕ ಶಿಕ್ಷಣ ಕೊಡುವ ವ್ಯವಸ್ಥೆ ಮಾಡಲಾಗುವುದು. ಇದಕ್ಕಾಗಿ ಶೃಂಗೇರಿ ಮಠದಲ್ಲಿ ಪಠ್ಯ ರೂಪಿಸಲಾಗುತ್ತಿದೆ. ಪಠ್ಯಕ್ರಮ ಅಂತಿಮಗೊಂಡ ನಂತರ ಪುತ್ತೂರು ಮತ್ತು ಕಡಬ ತಾಲ್ಲೂಕಿನ ಗ್ರಾಮ ಸಮಿತಿಗಳ ಉಸ್ತುವಾರಿಯಲ್ಲಿ ತರಗತಿಗಳು ನಡೆಯಲಿವೆ. ಪುತ್ತೂರಿನಿಂದ ಆರಂಭಗೊಳ್ಳುವ ಈ ಧರ್ಮಶಿಕ್ಷಣ ರಾಷ್ಟ್ರದಾದ್ಯಂತ ವಿಸ್ತರಣೆಗೊಳ್ಳಲಿದೆ. ತರಗತಿಗಳನ್ನು ನಡೆಸುವ ಶಿಕ್ಷಕರಿಗೆ ಶೃಂಗೇರಿ ಮಠದಲ್ಲಿ ತರಬೇತಿ ಕಾರ್ಯಾಗಾರ ಆಯೋಜಿಸಲಾಗುವುದು’ ಎಂದರು.

‘ಯೋಜನೆಯನ್ನು ಶೃಂಗೇರಿ ಮಠ ಆಯೋಜಿಸುತ್ತಿದೆ’ ಎಂದು ಪುತ್ತೂರು ತಾಲ್ಲೂಕು ಹಿಂದೂ ಶಿಕ್ಷಣ ಸಮಿತಿ ಉಪಾಧ್ಯಕ್ಷ ಆರ್.ಸಿ ನಾರಾಯಣ ಹೇಳಿದರು.

ಮುಸ್ಲಿಮರಿಂದ ಮಹಾಪ್ರಸಾದ ಸೇವೆ

ಯರಗಟ್ಟಿ (ಬೆಳಗಾವಿ ಜಿಲ್ಲೆ): ಇಲ್ಲಿನ ಮರಡಿ ಬಸವೇಶ್ವರ ಜಾತ್ರೆ ಅಂಗವಾಗಿ ಬುಧವಾರ, ಪಟ್ಟಣದ ಮುಸ್ಲಿಂ ಸಮಾಜದವರು 5,000ಕ್ಕೂ ಹೆಚ್ಚು ಭಕ್ತರಿಗೆ ಪ್ರಸಾದ ಉಣಬಡಿಸಿದರು.

5 ಕ್ವಿಂಟಲ್ ಅಕ್ಕಿಯ ಅನ್ನ, 8 ಕ್ವಿಂಟಲ್ ಗೋಧಿಯ ಹುಗ್ಗಿ, ಬದನೆಕಾಯಿ ಪಲ್ಯ, ಸಾರು ಬಡಿಸಿದರು. ಭಕ್ತರು ಊಟ ಮಾಡಿದ ನಂತರ ತಟ್ಟೆಗಳನ್ನೂ ಸಮಾಜದವರೇ ತೆಗೆದು ಸಾಮರಸ್ಯ ಸಾರಿದರು.

ಪಟ್ಟಣದ ವಿವಿಧ ಸಮಾಜಗಳ ಮುಖಂಡರಾದ ಇಮ್ತಿಯಾಜ್ ಖಾದ್ರಿ, ಎ.ಎಂ. ಹಾದಿಮನಿ, ಸದಾನಂದ ಹಣಬರ, ಕುಮಾರ ಹಿರೇಮಠ, ದುಂಡಯ್ಯ ಕರ್ಜಗಿಮಠ, ಆಬಿದ್ ಜಮಾದಾರ, ಇಮಾಮಸಾಬ್ ಹುಸೇನ ನಾಯ್ಕರ, ಕಾಸಿಮ್ ಹೊರಟ್ಟಿ, ಆಸೀಫ್ ಗೋಕಾಕ್, ದಿಲಾವರ ಕರ್ನಾಚಿ, ರಾಜು ಗೋಕಾಕ, ಸಿರಾಜ್ ನದಾಫ, ರಾಜು ಕತ್ತಿಶೆಟ್ಟಿ, ಗೋಕಾಕ, ನಜಿರ್ ನದಾಫ, ಸಲೀಮ್ ಜಮಾದಾರ, ಮಂಜು ಬೆಣ್ಣಿ, ರಜಾಕ್ ದಿಲಾವರ ನಾಯ್ಕ್, ಪೀರಸಾಬ ತಹಸೀಲ್ದಾರ್, ದಿಲಾವರಸಾಬ್ ಸಿಕ್ಕಲಗಿ, ಲಿಯಾಖತ್ ಬಾಗವಾನ, ಮುನ್ನಾ ಶಬಶಾಖಾನ ಮುಂತಾದವರು ನೇತೃತ್ವ ವಹಿಸಿದ್ದರು.

ಸಂಸತ್: ಬಸವ ಜಯಂತಿ

ಬಸವೇಶ್ವರ ಭಾವಚಿತ್ರಕ್ಕೆ ಅತಿಥಿಗಳು ಪುಷ್ಪನಮನ ಸಲ್ಲಿಸಿದರು

ಪ್ರಜಾವಾಣಿ ವಾರ್ತೆ

ನವದೆಹಲಿ: ರೈಲ್ವೆ ಇಲಾಖೆಯ ಆಶ್ರಯದಲ್ಲಿ ಸಂಸತ್ತಿನ ಪ್ರೇರಣಾ ಸ್ಥಳದಲ್ಲಿ ಜಗಜ್ಯೋತಿ ಬಸವೇಶ್ವರರ ಜಯಂತಿಯನ್ನು ಬುಧವಾರ ಆಚರಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಕೇಂದ್ರ ಸಚಿವ ವಿ. ಸೋಮಣ್ಣ, ‘ಜಾತಿರಹಿತ ಮತ್ತು ವರ್ಗರಹಿತ ಸಮಾಜದ ಕಲ್ಪನೆಯನ್ನು ಜಗತ್ತಿಗೆ ತೋರಿಸಿದವರು ಬಸವಣ್ಣನವರು. ಕಾಯಕವೇ ಕೈಲಾಸ ಎಂಬ ತತ್ವದೊಂದಿಗೆ ಆರೋಗ್ಯವಂತ ಸಮಾಜಕ್ಕೆ ಅಡಿಪಾಯ ಹಾಕಿದವರು ಬಸವೇಶ್ವರರು’ ಎಂದರು.

ಬಸವಣ್ಣನವರ ಸಾರಥ್ಯದಲ್ಲಿ ನಡೆದ ಸುಧಾರಣೆಯ ಪ್ರಯತ್ನ ಒಂದು ಸಾಮಾಜಿಕ ಚಳವಳಿಯಾಗಿ ರೂಪುಗೊಂಡಿತ್ತು. ಸಾಮಾನ್ಯ ಬದುಕಿನ ಎಲ್ಲಾ ಸ್ತರಗಳು ಆ ಚಳುವಳಿಯ ಒಂದು ಭಾಗವಾದದ್ದು ಶರಣರ ಪೂರ್ಣ ದೃಷ್ಟಿಯ ಸಂಕೇತ ಎಂದು ಮಾಧ್ಯಮಕ್ಕೆ ತಿಳಿಸಿದ್ದಾರೆ.

ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು, ರೈಲ್ವೆ ಸಚಿವ ಅಶ್ವಿನಿ ವೈಷ್ಣವ್, ಆಹಾರ ಮತ್ತು ಗ್ರಾಹಕ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ, ಕಾರ್ಮಿಕ ಮತ್ತು ಉದ್ಯೋಗ ಖಾತೆಯ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ, ಸಚಿವರಾದ ರವನೀತ ಸಿಂಗ್, ರಾಜಭೂಷಣ್ ಚೌಧರಿ, ಸಂಸದರಾದ ಪಿ.ಸಿ.ಗದ್ದಿಗೌಡರ, ತೇಜಸ್ವಿ ಸೂರ್ಯ, ಈರಣ್ಣ ಕಡಾಡಿ, ಮಾಜಿ ಸಂಸದರಾದ ಡಾ. ಉಮೇಶ್ ಜಾಧವ, ಅಣ್ಣಾ ಸಾಹೇಬ್ ಜೊಲ್ಲೆ, ಶಾಸಕ ಬಿ. ಪಿ. ಹರೀಶ್, ಬಸವ ಮೃತ್ಯುಂಜಯ ಸ್ವಾಮೀಜಿ, ಬಸವ ಪ್ರಕಾಶ ಸ್ವಾಮೀಜಿ, ಬಸವಕುಮಾರ ಸ್ವಾಮೀಜಿ ಭಾಗವಹಿಸಿದ್ದರು.

‘ಪ್ರಜಾತಂತ್ರದಲ್ಲಿ ಚರ್ಚೆ ಇರಬೇಕು’

ಗ್ರಂಥಾಲಯ ತಜ್ಞ ಎಸ್‌.ಆರ್. ಗುಂಜಾಳರಿಗೆ ‘ಬಸವ ರಾಷ್ಟ್ರೀಯ ಪ್ರಶಸ್ತಿ’ ಪ್ರದಾನ

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: ‘ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಚರ್ಚೆಗೆ ಅವಕಾಶ ಇರುತ್ತದೆ. ಆದರೆ, ‘ಮನ್ ಕೀ ಬಾತ್’ನಲ್ಲಿ ಕೇಳುವುದಷ್ಟೇ ಅವಕಾಶ ಹೇಳಲಿಕ್ಕೆ ಆಗುವುದಿಲ್ಲ. ಯಾವತ್ತೂ ಜನರ ಧ್ವನಿ ಕೇಳಿಲ್ಲ. ಏನು ಹೇಳುತ್ತಾರೋ ಅದನ್ನು ಕೇಳಬೇಕು. ಅದು ಸರ್ವಾಧಿಕಾರಿ ಧೋರಣೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಟೀಕಿಸಿದರು.

ಕೂಡಲಸಂಗಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಸಾಂಸ್ಕೃತಿಕ ನಾಯಕ ಬಸವ ಜಯಂತಿ ಅಂಗವಾಗಿ ಬುಧವಾರ ಹಮ್ಮಿಕೊಂಡಿದ್ದ ಅನುಭವ ಮಂಟಪ ಬಸವಾದಿ ಶರಣರ ವೈಭವದಲ್ಲಿ ₹10 ಲಕ್ಷ ನಗದು ಹೊಂದಿದ ‘ಬಸವ ರಾಷ್ಟ್ರೀಯ ಪ್ರಶಸ್ತಿ’ಯನ್ನು ಸಾಹಿತಿ, ಗ್ರಂಥಾಲಯ ತಜ್ಞ ಎಸ್.ಆರ್. ಗುಂಜಾಳ ಅವರಿಗೆ ಪ್ರದಾನ ಮಾಡಿ ಮಾತನಾಡಿದ ಅವರು, ‘ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಚರ್ಚೆಗಳ ಮೂಲಕ ಪರಿಹಾರ ಕಂಡುಕೊಳ್ಳಬೇಕು. ಸರ್ವಾಧಿಕಾರಿ ವ್ಯವಸ್ಥೆಯಲ್ಲಿ ಚರ್ಚೆಗಳಿರುವುದಿಲ್ಲ’ ಎಂದು ಪ್ರಧಾನಿ ನರೇಂದ್ರ ಮೋದಿ ಹೆಸರು ಹೇಳದೇ ವಾಗ್ದಾಳಿ ನಡೆಸಿದರು.

ಬಸವ ಜಯಂತಿ ಅಂಗವಾಗಿ ಹಮ್ಮಿಕೊಂಡಿದ್ದ ಅನುಭವ ಮಂಟಪ ಬಸವಾದಿ ಶರಣರ ವೈಭವದಲ್ಲಿ ₹10 ಲಕ್ಷ ನಗದು ಹೊಂದಿದ ‘ಬಸವ ರಾಷ್ಟ್ರೀಯ ಪ್ರಶಸ್ತಿ’ಯನ್ನು ಸಾಹಿತಿ, ಗ್ರಂಥಾಲಯ ತಜ್ಞ ಎಸ್‌.ಆರ್. ಗುಂಜಾಳ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರದಾನ ಮಾಡಿದರು. ಬಿ.ಟಿ. ಲಲಿತಾ ನಾಯಕ, ಮೀನಾಕ್ಷಿ ಬಾಳಿ, ನಿಜಗುಣಾನಂದ ಸ್ವಾಮೀಜಿ, ಸಚಿವರಾದ ಆರ್‌.ಬಿ. ತಿಮ್ಮಾಪುರ, ಶಿವರಾಜ್ ತಂಗಡಗಿ, ಜ್ಞಾನಪ್ರಕಾಶ ಸ್ವಾಮೀಜಿ, ಶಾಸಕ ವಿಜಯಾನಂದ ಕಾಶಪ್ಪನವರ, ಸಚಿವ ಎಂ.ಬಿ. ಪಾಟೀಲ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಾರ್ಯದರ್ಶಿ ವೆಂಕಟೇಶ್, ನಿರ್ದೇಶಕರಾದ ಕೆ.ಎಂ. ಗಾಯತ್ರಿ ಪಾಲ್ಗೊಂಡಿದ್ದರು

‘ಕಂದಾಚಾರ, ಮೌಢ್ಯಗಳು ಹೋಗಿ ಸಮ ಸಮಾಜ ನಿರ್ಮಾಣ ಆಗಬೇಕು. ಆದರೆ, ಒಂಬತ್ತು ಶತಮಾನಗಳಾದರೂ ಸಮ ಸಮಾಜ ನಿರ್ಮಾಣವಾಗಿಲ್ಲ. ರಾಜಕೀಯ ಪ್ರಜಾಪ್ರಭುತ್ವ ಸಿಕ್ಕಿದೆ. ಆರ್ಥಿಕ, ಸಾಮಾಜಿಕವಾಗಿ ಸ್ವಾತಂತ್ರ್ಯ ಸಿಕ್ಕಿಲ್ಲ. ಹಿಂದಿನ ಜನ್ಮದ ಪಾಪದ ಫಲ, ಹಣೆಬರಹ ಎಂಬ ಕರ್ಮ ಸಿದ್ಧಾಂತದ ಮೂಲಕ ಪಟ್ಟಭದ್ರ ಹಿತಾಸಕ್ತಿಗಳು ಕಟ್ಟಿ ಹಾಕಿವೆ. ಅದನ್ನು ನಂಬುವುದಿಲ್ಲ ಎಂದು ಶಪಥ ಮಾಡಬೇಕು’ ಎಂದು ಹೇಳಿದರು.

‘ಕಾಯಕ ಅಂದರೆ ಉತ್ಪಾದನೆ, ದಾಸೋಹ ಅಂದರೆ ವಿತರಣೆ. ಇವುಗಳನ್ನು ಪ್ರತಿಯೊಬ್ಬರೂ ಮಾಡಿದಾಗಲೇ ಸಮಾನತೆ ಸಾಧ್ಯ’ ಎಂದು ಹೇಳಿದ ಸಿದ್ದರಾಮಯ್ಯ, ‘ಬಸವ ಕಲ್ಯಾಣದಲ್ಲಿ ₹700 ಕೋಟಿ ವೆಚ್ಚದಲ್ಲಿ ನಿರ್ಮಿಸುತ್ತಿರುವ ಅನುಭವ ಮಂಟಪವನ್ನು ಇದೇ ಆರ್ಥಿಕ ವರ್ಷದಲ್ಲಿ ಪೂರ್ಣಗೊಳಿಸಲಾಗುವುದು. ಬಸವಣ್ಣ, ನೀಲಾಂಬಿಕೆ ಮೂರ್ತಿ ನಿರ್ಮಾಣ, ತರಿಕೆರೆಯಲ್ಲಿ ಅಕ್ಕನಾಗಲಾಂಬಿಕೆ, ತಿಗಡಿಯಲ್ಲಿ ಕಲ್ಯಾಣಮ್ಮನವರ ಐಕ್ಯ ಸ್ಥಳ ಅಭಿವೃದ್ಧಿ ಮಾಡಲಾಗುವುದು’ ಎಂದು ಭರವಸೆ ನೀಡಿದರು.

ಅರ್ಹತೆ ಪಡೆಯದವರಿಗೂ ಮುಖ್ಯ ಪರೀಕ್ಷೆ

ಬೆಂಗಳೂರು: ಗೆಜೆಟೆಡ್ ಪ್ರೊಬೇಷನರಿ 384 ಹುದ್ದೆಗಳ ನೇಮಕಾತಿಯ ಪೂರ್ವಭಾವಿ ಪರೀಕ್ಷೆಯಲ್ಲಿ ಅರ್ಹತೆ ಪಡೆಯದ 185 ಅಭ್ಯರ್ಥಿಗಳಿಗೆ ಮುಖ್ಯ ಪರೀಕ್ಷೆ ಬರೆಯಲು ಹೈಕೋರ್ಟ್ ಮತ್ತು ಕರ್ನಾಟಕ ಆಡಳಿತ ನ್ಯಾಯಮಂಡಳಿ ಷರತ್ತುಬದ್ಧ ಅನುಮತಿ ನೀಡಿದೆ.

ಮುಖ್ಯ ಪರೀಕ್ಷೆಗೆ ಇದೇ 2ರಂದು ಮಧ್ಯಾಹ್ನ 3 ಗಂಟೆಯ ಒಳಗೆ ಶುಲ್ಕ ಸಹಿತ ಖುದ್ದಾಗಿ ಅರ್ಜಿ ಸಲ್ಲಿಸಬೇಕು. ಹೀಗೆ ಅರ್ಜಿ ಸಲ್ಲಿಸಿದವರು ಬೆಂಗಳೂರಿನ ಮೈಸೂರು ರಸ್ತೆಯಲ್ಲಿ ಕಸ್ತೂರ್ಬಾ ನಗರದ ಬಿಬಿಎಂಪಿ ಸಂಯೋಜಿತ ಪಿಯು ಕಾಲೇಜಿನಲ್ಲಿ ಪರೀಕ್ಷೆಗೆ ಹಾಜರಾಗಬೇಕು. ಈ ಅಭ್ಯರ್ಥಿಗಳು ಪ್ರವೇಶಪತ್ರವನ್ನು ಕೆಪಿಎಸ್‌ಸಿ ಕಚೇರಿಯಲ್ಲಿ ಮೇ 2ರಂದು ಸಂಜೆ 5.30ರವರೆಗೆ ಅಥವಾ ಮರುದಿನ ಬೆಳಿಗ್ಗೆ 8 ಗಂಟೆಗೆ ಪರೀಕ್ಷಾ ಕೇಂದ್ರದಲ್ಲಿ ಪಡೆದು ಪರೀಕ್ಷೆ ಬರೆಯಬೇಕು ಎಂದು ಕೆಪಿಎಸ್‌ಸಿ ತಿಳಿಸಿದೆ.

ಬಸ್‌ನಲ್ಲಿ ನಮಾಜ್: ತನಿಖೆಗೆ ಸೂಚನೆ

ಪ್ರಜಾವಾಣಿ ವಾರ್ತೆ

ಹಾವೇರಿ: ಹಾನಗಲ್‌ನಿಂದ ವಿಶಾಲಗಡ್‌ಕ್ಕೆ ಹೋಗುವ ಬಸ್ಸಿನ ಸೀಟಿನಲ್ಲಿಯೇ ಚಾಲಕ ನಯಾಜ್ ಮುಲ್ಲಾ ಅವರು ನಮಾಜ್ ಮಾಡಿರುವ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿದ್ದು, ಈ ಬಗ್ಗೆ ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ (ವಾಕರಸಾಸಂ) ಭದ್ರತಾ ವಿಭಾಗದ ಅಧಿಕಾರಿಗಳು ತನಿಖೆ ಆರಂಭಿಸಿದ್ದು ಸಿಬ್ಬಂದಿ ವಿರುದ್ಧ ಶಿಸ್ತು ಕ್ರಮಕ್ಕೆ ಸೂಚಿಸಲಾಗಿದೆ.

‘ಹಾನಗಲ್ ಡಿಪೊದಲ್ಲಿ ಕೆಲಸ ಮಾಡುತ್ತಿರುವ ಚಾಲಕ ನಯಾಜ್, ಬಸ್ಸಿನ ಸೀಟಿನಲ್ಲಿ ನಮಾಜ್ ಮಾಡಿರುವ ಸಂಗತಿ ಗೊತ್ತಾಗಿದೆ. ಈ ಬಗ್ಗೆ ತನಿಖೆ ನಡೆಸಿ ವರದಿ ಸಲ್ಲಿಸುವಂತೆ ಭದ್ರತಾ ವಿಭಾಗದ ಅಧಿಕಾರಿಗಳಿಗೆ ತಿಳಿಸಲಾಗಿದೆ. ಅವರು ವರದಿ ನೀಡಿದ ಬಳಿಕ ಪರಿಶೀಲಿಸಿ ಶಿಸ್ತು ಕ್ರಮ ಜರುಗಿಸಲಾಗುವುದು’ ಎಂದು ವಾಕರಸಾಸಂ ಜಿಲ್ಲಾ ವಿಭಾಗೀಯ ನಿಯಂತ್ರಣಾಧಿಕಾರಿ ವಿಜಯಕುಮಾರ ಜಿ. ‘ಪ್ರಜಾವಾಣಿ’ಗೆ ತಿಳಿಸಿದರು.

ಪ್ರಯಾಣಿಕನಿಂದ ವಿಡಿಯೊ ಚಿತ್ರೀಕರಣ: ‘ಚಾಲಕ ನಯಾಜ್, ಹಾನಗಲ್‌ನಿಂದ ವಿಶಾಲಗಡಕ್ಕೆ ಹೋಗುವ ಬಸ್‌ನಲ್ಲಿ (ಕೆಎ–27, ಎಫ್–0914) ಹಲವು ವರ್ಷಗಳಿಂದ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಚಾಲಕ ಹಾಗೂ ನಿರ್ವಾಹಕ ಎರಡೂ ಜವಾಬ್ದಾರಿಗಳನ್ನು ನಿಭಾಯಿಸುತ್ತಿದ್ದಾರೆ. ಅಪಘಾತ ರಹಿತ ಗಣನೀಯ ಸೇವೆಗಾಗಿ ನಯಾಜ್ ಅವರಿಗೆ ಚಿನ್ನದ ಪದಕವೂ ಲಭಿಸಿದೆ’ ಎಂದು ವಾಕರಸಾಸಂ ಮೂಲಗಳು ಹೇಳಿವೆ.

‘ಇತ್ತೀಚೆಗೆ ವಿಶಾಲಗಡಕ್ಕೆ ಹೊರಟಿದ್ದ ಚಾಲಕ, ನಮಾಜ್ ಸಮಯದಲ್ಲಿ ಮಾರ್ಗಮಧ್ಯೆಯೇ ಬಸ್ ನಿಲ್ಲಿಸಿದ್ದರು. ಚಾಲಕನ ಹಿಂಬದಿಯ ಸೀಟಿನಲ್ಲಿದ್ದ ಪ್ರಯಾಣಿಕರನ್ನು ಎಬ್ಬಿಸಿ ಬೇರೆಡೆ ಕಳುಹಿಸಿದ್ದರು. ನಂತರ, ಅದೇ ಸೀಟಿನಲ್ಲಿ ಕುಳಿತು ನಮಾಜ್ ಮಾಡಿದ್ದರು. ಇದೇ ದೃಶ್ಯವನ್ನು ಪ್ರಯಾಣಿಕರೊಬ್ಬರು ಚಿತ್ರೀಕರಣ ಮಾಡಿ, ಸಾಮಾಜಿಕ ಮಾಧ್ಯಮಗಳಲ್ಲಿ ಅಪ್‌ಲೋಡ್ ಮಾಡಿದ್ದಾರೆ’ ಎಂದು ತಿಳಿಸಿದೆ.

ಸರ್ಕಾರಿ ಸಾರಿಗೆ ಬಸ್‌ನಲ್ಲಿ ಚಾಲಕ ನಮಾಜ್ ಮಾಡಿರುವುದಕ್ಕೆ ಹಲವರು ವಿರೋಧ ವ್ಯಕ್ತಪಡಿಸಿದ್ದಾರೆ. ‘ಚಾಲಕ ಈಗ ನಮಾಜ್ ಮಾಡಿದ್ದಾರೆ. ಮತ್ತೊಬ್ಬರು ಹೋಮ–ಹವನ ಮಾಡುತ್ತಾರೆ. ಸರ್ವಜನಾಂಗದವರು ಬಳಸುವ ಸಾರಿಗೆ ಬಸ್‌ನಲ್ಲಿ ಇಂಥ ಆಚರಣೆಗೆ ಕಡಿವಾಣ ಹಾಕಬೇಕು’ ಎಂದು ಹಲವರು ಆಗ್ರಹಿಸಿದ್ದಾರೆ. ವಿಡಿಯೊ ಪೋಸ್ಟ್ ಮಾಡಿರುವ ಬಿಜೆಪಿ ಜಿಲ್ಲಾ ಘಟಕ ‘ಈ ಚಾಲಕನ ವಿರುದ್ಧ ಸಂಬಂಧಪಟ್ಟ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೆ, ಹೋರಾಟ ಮಾಡಲಾಗುವುದು’ ಎಂದು ಎಚ್ಚರಿಸಿದೆ.



ಹಾನಗಲ್– ವಿಶಾಲಗಡ್ ಮಾರ್ಗದ ವಾಯವ್ಯ ಸಾರಿಗೆ ಬಸ್ಸಿನಲ್ಲಿ ನಮಾಜ್ ಮಾಡುತ್ತಿರುವ ಚಾಲಕ

ಮಾರ್ಗಮಧ್ಯದಲ್ಲಿ ಬಸ್ ನಿಲ್ಲಿಸಿ ನಮಾಜ್ ಮಾಡಿರುವುದು ಆಕ್ಷೇಪಾರ್ಹ. ಈ ಬಗ್ಗೆ ಕೂಡಲೇ ತನಿಖೆ ನಡೆಸಿ ಸಿಬ್ಬಂದಿ ವಿರುದ್ಧ ಶಿಸ್ತಿನ ಕ್ರಮ ಜರುಗಿಸಲು ಸೂಚಿಸಲಾಗಿದೆ

ರಾಮಲಿಂಗಾ ರೆಡ್ಡಿ, ಸಾರಿಗೆ ಸಚಿವ

‘ಸಾಮಾಜಿಕ, ಆರ್ಥಿಕ ಸಮೀಕ್ಷೆ ನಡೆಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೇಂದ್ರ ಸರ್ಕಾರವು ಜಾತಿ ಜನಗಣತಿಯ ಜತೆಗೆ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸಮೀಕ್ಷೆಯನ್ನೂ ನಡೆಸಬೇಕು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಒತ್ತಾಯಿಸಿದ್ದಾರೆ.

‘ಈ ಬಾರಿ ಜನಗಣತಿ ಜತೆಗೆ ಜಾತಿ ಗಣತಿಯನ್ನೂ ನಡೆಸುವ ಕೇಂದ್ರ ಸರ್ಕಾರದ ತೀರ್ಮಾನವನ್ನು ನಮ್ಮ ಸರ್ಕಾರ ಹೃತ್ಪೂರ್ವಕವಾಗಿ ಸ್ವಾಗತಿಸುತ್ತದೆ’ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

‘ಕರ್ನಾಟಕದಲ್ಲಿ ನಾವು ಕೇವಲ ಜಾತಿ ಗಣತಿ ನಡೆಸದೆ, ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸ್ಥಿತಿಗತಿಗಳ ಸಮೀಕ್ಷೆಯನ್ನು ನಡೆಸಿದ್ದೇವೆ. ಈ ದತ್ತಾಂಶಗಳ ಆಧಾರದಲ್ಲಿ ಈಗಿನ ಮೀಸಲಾತಿ ನೀತಿಯನ್ನು ಪರಿಷ್ಕರಿಸಿ ಅದರ ಮಿತಿಯನ್ನು ಹೆಚ್ಚಿಸುವ ಪ್ರಯತ್ನ ಕೂಡ ನಡೆದಿದೆ. ಜಾತಿ ಗಣತಿಯ ಜತೆಯಲ್ಲಿ ಈ ಪ್ರಕ್ರಿಯೆಯನ್ನೂ ಕೂಡಾ ಕೇಂದ್ರ ಸರ್ಕಾರ ಪೂರ್ಣಗೊಳಿಸಲಿದೆ ಎಂದು ನಂಬಿದ್ದೇನೆ’ ಎಂದಿದ್ದಾರೆ.

‘ಜಾತಿ ಗಣತಿ ಎನ್ನುವುದು ಹಿಂದೂ ಸಮಾಜವನ್ನು ಒಡೆಯುವ ಹುನ್ನಾರ ಎಂದೆಲ್ಲ ವರ್ಷಗಳ ಕಾಲ ಟೀಕಾ ಪ್ರಹಾರ ಮಾಡುತ್ತಾ ಬಂದ ಬಿಜೆಪಿ ಮತ್ತು ಅದರ ನೇತೃತ್ವದ ಸರ್ಕಾರಗಳು ಕೊನೆಗೂ ಜಾತಿ ಗಣತಿಯ ಸಾಮಾಜಿಕ ಮಹತ್ವವನ್ನು ಅರ್ಥ ಮಾಡಿಕೊಂಡಿರುವುದು ಸ್ವಾಗತಾರ್ಹ ಬೆಳವಣಿಗೆ’ ಎಂದು ತಿಳಿಸಿದ್ದಾರೆ.

‘ಕರ್ನಾಟಕದಲ್ಲಿ ನಾವು ನಡೆಸಿದ್ದ ಸಮೀಕ್ಷೆಯ ವರದಿ ಸಿದ್ಧ ಇದೆ. ಬಿಜೆಪಿಯ ರಾಜ್ಯ ಘಟಕ ನಾನಾ ಸಬೂಬುಗಳನ್ನು ಮುಂದೊಡ್ಡಿ ಇದನ್ನು ವಿರೋಧಿಸುತ್ತಿದೆ. ಈ ಸಮೀಕ್ಷೆಯನ್ನು ಆಧಾರವಾಗಿಟ್ಟುಕೊಂಡು ಮೀಸಲಾತಿಯನ್ನು ಪರಿಷ್ಕರಿಸಿ ಈಗಿನ ಶೇಕಡಾ 50ರ ಮಿತಿಯನ್ನು ಹೆಚ್ಚಿಸುವ ಪ್ರಯತ್ನ ಕೂಡಾ ನಡೆದಿದೆ. ಈ ಎಲ್ಲ ಪ್ರಯತ್ನಗಳಿಗೆ ಅಡ್ಡಗಾಲು ಹಾಕುತ್ತಿರುವ ಬಿಜೆಪಿಯ ನಾಯಕರಿಗೆ ಪ್ರಧಾನಿ ಮೋದಿ ಬುದ್ಧಿ ಹೇಳಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ’ ಎಂದಿದ್ದಾರೆ.

ನಮ್ಮ ಗ್ಯಾರಂಟಿಗಳನ್ನು ಟೀಕಿಸುತ್ತಲೇ ಅದನ್ನು ಅನುಸರಿಸಿದ್ದ ಮೋದಿಯವರ ಸರ್ಕಾರ, ಈಗ ಜಾತಿಗಣತಿ ಕೈಗೆತ್ತಿಕೊಂಡಿರುವುದು ನಮ್ಮ ಪಕ್ಷದ ನೀತಿ ಜನಪರವಾಗಿರುವುದಕ್ಕೆ ಸಾಕ್ಷಿ

ಸಿದ್ದರಾಮಯ್ಯ, ಮುಖ್ಯಮಂತ್ರಿ

‘ತಾಕತ್ತಿದ್ದರೆ ಸಿ.ಎಂ ಸಿದ್ದರಾಮಯ್ಯರನ್ನು ಇಳಿಸಿ’

ಬೆಂಗಳೂರು: ‘ರಾಜ್ಯದಲ್ಲಿ ಬಿಜೆಪಿಗೆ ಒಂದೇ ಒಂದು ಸಭೆ ಮಾಡಲು ಬಿಡುವುದಿಲ್ಲ ಎಂದು ದಮ್ಕಿ ಹಾಕಿದ್ದೀರಿ. ನಿಮಗೆ ನಿಜವಾಗಿಯೂ ತಾಕತ್ತಿದ್ದರೆ ಇಂದಿರಾ ಗಾಂಧಿ ಅವರಿಗೆ ಕಪ್ಪು ಬಾವುಟ ತೋರಿಸಿದ್ದ ಸಿದ್ದರಾಮಯ್ಯ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಇಳಿಸಿ ಪಕ್ಷದಿಂದ ಉಚ್ಛಾಟನೆ ಮಾಡಿ’ ಎಂದು ವಿರೋಧ ಪಕ್ಷದ ನಾಯಕ ಆರ್.ಅಶೋಕ ಅವರು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಸವಾಲು ಹಾಕಿದ್ದಾರೆ.

‘ಉತ್ತರನ ಪೌರುಷ ಒಲೆಯ ಮುಂದೆ ಎನ್ನುವ ಹಾಗೆ ನಿಮ್ಮ ಪ್ರತಾಪ ಬರೀ ಮಾಧ್ಯಮಗಳ ಮುಂದೆ ಡೈಲಾಗ್ ಹೊಡೆಯೋದಕ್ಕೆ ಮಾತ್ರ ಸೀಮಿತನಾ’ ಎಂದು ಅವರು ಪ್ರಶ್ನಿಸಿದ್ದಾರೆ.

‘ನಿಮ್ಮ ಪಕ್ಷದ ಸರ್ವೋಚ್ಚ ನಾಯಕಿ ಪ್ರಧಾನಿ ಆಗಿದ್ದಾಗ ಕಪ್ಪು ಬಾವುಟ ತೋರಿಸಿದ್ದ ವ್ಯಕ್ತಿಯನ್ನು ಪಕ್ಷಕ್ಕೆ ಕರೆದುಕೊಂಡು ಬಂದು ಎರಡೆರಡು ಬಾರಿ ಮುಖ್ಯಮಂತ್ರಿ ಮಾಡಿ, ಅವರ ಋಣದಲ್ಲಿ ಅಧಿಕಾರ ಅನುಭವಿಸುತ್ತಿರುವ ನಿಮಗೆ ಬಿಜೆಪಿಯವರ ಪ್ರತಿಭಟನೆಗೆ ದಮ್ಕಿ ಹಾಕುವ ಯಾವ ನೈತಿಕತೆ ಇದೆ’ ಎಂದಿದ್ದಾರೆ.

ಜಾತಿ ಗಣತಿಗೆ ಕೇಂದ್ರದ ತೀರ್ಮಾನ

ಒಂದನೇ ಪುಟದಿಂದ...

ಲೋಕಸಭಾ ಚುನಾವಣೆಯಲ್ಲಿ ಉತ್ತರ ಪ್ರದೇಶದಲ್ಲಿ ದಲಿತರು ಹಾಗೂ ಒಬಿಸಿಗಳು ಬಿಜೆಪಿಯಿಂದ ದೂರ ಸರಿದಿದ್ದರು. ಇದರಿಂದಾಗಿ, ರಾಜ್ಯದಲ್ಲಿ ಬಿಜೆಪಿ ಕಡಿಮೆ ಸ್ಥಾನ ಗಳಿಸಿತ್ತು. 2027ರಲ್ಲಿ ನಡೆಯಲಿರುವ ಉತ್ತರ ಪ್ರದೇಶ ವಿಧಾನಸಭಾ ಚುನಾವಣೆಯನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ಸರ್ಕಾರ ಈ ಅಚ್ಚರಿಯ ತೀರ್ಮಾನ ತೆಗೆದುಕೊಂಡಂತಿದೆ.

ಆದಾಗ್ಯೂ, ಸರ್ಕಾರವು ಜಾತಿ ಗಣತಿಯನ್ನು ಯಾವಾಗ ಪೂರ್ಣಗೊಳಿಸಲು ಉದ್ದೇಶಿಸಿದೆ ಎಂಬುದರ ಕುರಿತು ಯಾವುದೇ ಸ್ಪಷ್ಟತೆ ಇಲ್ಲ. 2021ರಲ್ಲಿ ನಡೆಯಬೇಕಿದ್ದ ಜನಗಣತಿಯ ವೇಳಾಪಟ್ಟಿಯನ್ನು ಸರ್ಕಾರ ಇನ್ನೂ ಪ್ರಕಟಿಸಿಲ್ಲ. ಜಾತಿ ಎಣಿಕೆಯನ್ನು ಸೇರಿಸುವುದರಿಂದ ಈ ಕಾರ್ಯವು ಮತ್ತಷ್ಟು ವಿಳಂಬವಾಗುವ ಸಾಧ್ಯತೆಯೂ ಇದೆ.

ರಾಷ್ಟ್ರವ್ಯಾಪಿ ಜಾತಿ ಗಣತಿ ನಡೆಯಬೇಕು ಎಂದು ವಿರೋಧ ಪಕ್ಷ ನಾಯಕ ರಾಹುಲ್ ಗಾಂಧಿ ಕಳೆದ ಮೂರು ವರ್ಷಗಳಿಂದಒತ್ತಾಯಿಸುತ್ತಿದ್ದಾರೆ.‘ಜಾತಿಗಣತಿಯಿಂದ ಸಮಾಜದ ವಿವಿಧ ಜಾತಿಗಳ ಆರ್ಥಿಕ, ಸಾಮಾಜಿಕ ಮತ್ತು ಶೈಕ್ಷಣಿಕ ಸ್ಥಿತಿಗತಿಯ ಬಗ್ಗೆ ಸ್ಪಷ್ಟ ಚಿತ್ರಣ ದೊರೆಯುತ್ತದೆ. ಇದರಿಂದ ಹಿಂದುಳಿದ ವರ್ಗಗಳಿಗೆ, ದಲಿತರಿಗೆ ಮತ್ತು ಆದಿವಾಸಿಗಳಿಗೆ ಉದ್ದೇಶಿತ ಯೋಜನೆಗಳನ್ನು ರೂಪಿಸಲು ಸಾಧ್ಯವಾಗುತ್ತದೆ' ಎಂಬುದು ಅವರ ಪ್ರತಿಪಾದನೆ. ‘ಇಂಡಿಯಾ’ ಮೈತ್ರಿಕೂಟದ ಪಕ್ಷಗಳು ಇದಕ್ಕೆ ಧ್ವನಿಗೂಡಿಸಿವೆ. 2024ರ ಲೋಕಸಭಾ ಚುನಾವಣೆ ಹಾಗೂ ಈಚಿನ ವಿಧಾನಸಭಾ ಚುನಾವಣೆಗಳಲ್ಲಿ ಜಾತಿಗಣತಿಯು ಪ್ರಮುಖ ಚುನಾವಣಾ ವಿಷಯವಾಗಿತ್ತು. ಕರ್ನಾಟಕ, ಬಿಹಾರ ಹಾಗೂ ತೆಲಂಗಾಣದಂತಹ ರಾಜ್ಯಗಳು ಈಗಾಗಲೇ ಅಂತಹ ಸಮೀಕ್ಷೆಗಳನ್ನು ನಡೆಸಿವೆ. ಕರ್ನಾಟಕ ಹಾಗೂ ತೆಲಂಗಾಣದಲ್ಲಿ ಜಾತಿ ಗಣತಿ ವರದಿ ಮಂಡನೆಗೆ ರಾಹುಲ್ ಒತ್ತಡ ಪ್ರಮುಖ ಕಾರಣ.

ರಾಜಕೀಯ ವ್ಯವಹಾರಗಳ ಸಂಪುಟ ಸಮಿತಿ ತೆಗೆದುಕೊಂಡ ನಿರ್ಧಾರವನ್ನು ಘೋಷಿಸಿದ ಕೇಂದ್ರ ಸಚಿವ ಅಶ್ವಿನಿ ವೈಷ್ಣವ್, ‘ಜನಗಣತಿಯು ಕೇಂದ್ರದ ವ್ಯಾಪ್ತಿಗೆ ಬರುತ್ತದೆ. ಆದರೆ, ಕೆಲವು ರಾಜ್ಯಗಳು ಪಾರದರ್ಶಕವಲ್ಲದ ಸಮೀಕ್ಷೆಗಳ ಹೆಸರಿನಲ್ಲಿ ಜಾತಿ ಗಣತಿ ನಡೆಸಿವೆ. ಇದು ಸಮಾಜದಲ್ಲಿ ಸಾಕಷ್ಟು ಅನುಮಾನಗಳನ್ನು ಸೃಷ್ಟಿಸಿದೆ’ ಎಂದು ಆರೋಪಿಸಿದರು.

‘ಸ್ವಾತಂತ್ರ್ಯದ ನಂತರ ನಡೆದ ಎಲ್ಲ ಜನಗಣತಿಗಳಲ್ಲಿ ಜಾತಿಯನ್ನು ಸೇರಿಸಿರಲಿಲ್ಲ. ಕಾಂಗ್ರೆಸ್ ಸರ್ಕಾರಗಳು ಯಾವಾಗಲೂ ಜಾತಿ ಗಣತಿ ವಿರೋಧಿಸಿವೆ. ಕಾಂಗ್ರೆಸ್ ಪಕ್ಷವು ಈ ವಿಷಯವನ್ನು ರಾಜಕೀಯ ಸಾಧನವಾಗಿ ಬಳಸಿಕೊಂಡಿದೆ’ ಎಂದು ಅವರು ವಾಗ್ದಾಳಿ ನಡೆಸಿದರು. ವಿರೋಧ ಪಕ್ಷಗಳ ಸರ್ಕಾರ ಇರುವ ರಾಜ್ಯಗಳಲ್ಲಿ ರಾಜಕೀಯ ಕಾರಣಕ್ಕಾಗಿ ಜಾತಿ ಸಮೀಕ್ಷೆ ನಡೆಸಲಾಗಿದೆ’ ಎಂದರು.

‘ಈ ಎಲ್ಲ ಸಂಗತಿಗಳನ್ನು ಪರಿಗಣಿಸಿ ಮತ್ತು ರಾಜಕೀಯದಿಂದ ಸಾಮಾಜಿಕ ರಚನೆಗೆ ತೊಂದರೆಯಾಗದಂತೆ ನೋಡಿಕೊಳ್ಳಲು, ಸಮೀಕ್ಷೆಗಳ ಬದಲಿಗೆ ಜಾತಿ ಗಣತಿಯನ್ನು ಜನಗಣತಿಯಲ್ಲಿ ಪಾರದರ್ಶಕವಾಗಿ ಸೇರಿಸಲು ನಿರ್ಧರಿಸಲಾಗಿದೆ. ಇದು ನಮ್ಮ ಸಮಾಜದ ಸಾಮಾಜಿಕ ಮತ್ತು ಆರ್ಥಿಕ ರಚನೆಯನ್ನು ಬಲಪಡಿಸುತ್ತದೆ’ ಎಂದು ಸಚಿವರು ಹೇಳಿದರು.

‘ಕೆಲವು ರಾಜ್ಯಗಳು ಜಾತಿ ಸಮೀಕ್ಷೆಯನ್ನು ಉತ್ತಮವಾಗಿ ಮಾಡಿವೆ. ಆದರೆ, ಇನ್ನೂ ಕೆಲವು ರಾಜ್ಯಗಳು ಅಂತಹ ಸಮೀಕ್ಷೆಗಳನ್ನು ಸಂಪೂರ್ಣವಾಗಿ ರಾಜಕೀಯ ದೃಷ್ಟಿಕೋನದಿಂದ ಪಾರದರ್ಶಕವಲ್ಲದ ರೀತಿಯಲ್ಲಿ ನಡೆಸಿವೆ’ ಎಂದರು.

ಜಾತಿಗಣತಿಯ ಈ ಮಹತ್ವದ ಹೆಜ್ಜೆಯಿಂದ ಭಾರತವು ಅಧಿಕೃತ, ವೈಜ್ಞಾನಿಕ ಮತ್ತು ಪಾರದರ್ಶಕವಾದ ಜಾತಿ ದತ್ತಾಂಶ ಹೊಂದಲಿದೆ. ಕೇವಲ ರಾಜಕೀಯ ಪ್ರೇರಿತ ರಾಜ್ಯ ಮಟ್ಟದ ಸಮೀಕ್ಷೆಗಳು ವಿಶ್ವಾಸಾರ್ಹತೆ, ಏಕರೂಪತೆ ಹೊಂದಿರುವುದಿಲ್ಲ

ಎಚ್.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವ

ಜನಗಣತಿಯೊಂದಿಗೆ ಜಾತಿ ಗಣತಿ ನಡೆಸಬೇಕು ಎಂಬುದು ಕಾಂಗ್ರೆಸ್‌ನ ಬಹುದಿನದ ಬೇಡಿಕೆ ಆಗಿತ್ತು. ಸಾಮಾಜಿಕ ನ್ಯಾಯದಡಿ ಗಣತಿ ನಡೆಸಬೇಕು ಎಂದು ಪಕ್ಷ ಒತ್ತಾಯಿಸುತ್ತಲೇ ಬಂದಿದೆ. ಅಹಮದಾಬಾದ್‌ನಲ್ಲಿ ನಡೆದ ಪಕ್ಷದ ಕಾರ್ಯಕಾರಿ ಸಮಿತಿ ಸಭೆಯಲ್ಲೂ ಈ ಬಗ್ಗೆ ನಿರ್ಣಯ ಕೈಗೊಳ್ಳಲಾಗಿತ್ತು

ಜೈರಾಮ್ ರಮೇಶ್, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

ಜನರ ಗಣತಿ ಬೇಕು: ರಾಹುಲ್

ಒಂದನೇ ಪುಟದಿಂದ...

‘ದೇಶದಾದ್ಯಂತ ಜಾತಿ ಗಣತಿ ನಡೆಯಬೇಕು ಎಂಬುದು ನಮ್ಮ ಬಹುದಿನದ ಬೇಡಿಕೆ. ಈ ನಿಟ್ಟಿನಲ್ಲಿ ಸರ್ಕಾರ ಮೊದಲ ಹೆಜ್ಜೆ ಇಟ್ಟಿದೆ. ತೆಲಂಗಾಣದ ಜಾತಿ ಗಣತಿಯು ಮಾದರಿಯಾದುದು’ ಎಂದರು. ಬಿಹಾರ ವಿಧಾನಸಭಾ ಚುನಾವಣೆಯ ಕಾರಣಕ್ಕೆ ಜಾತಿ ಗಣತಿ ನಡೆಸಲು ಸರ್ಕಾರ ಮುಂದಾಗಿದೆಯೇ ಎಂಬ ಪ್ರಶ್ನೆಗೆ ಉತ್ತರಿಸಲು ನಿರಾಕರಿಸಿದರು.

ವೈದ್ಯಕೀಯ ಪ್ರವೇಶ ಪರೀಕ್ಷೆ: ರಾಜ್ಯದಲ್ಲಿಯೂ ಸಕಲ ಸಿದ್ಧತೆ

381 ಕೇಂದ್ರಗಳಲ್ಲಿ 4ರಂದು ನೀಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಸಕ್ತ ಸಾಲಿನ ವೈದ್ಯಕೀಯ ಪ್ರವೇಶಕ್ಕೆ ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ (ಎನ್‌ಟಿಎ) ವತಿಯಿಂದ ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆ (ನೀಟ್-ಯುಜಿ) ರಾಜ್ಯದ 381 ಪರೀಕ್ಷಾ ಕೇಂದ್ರಗಳಲ್ಲಿ ಮೇ 4ರಂದು ನಡೆಯಲಿದೆ.

ಮಧ್ಯಾಹ್ನ 2 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ಪರೀಕ್ಷೆ ನಡೆಯಲಿದ್ದು, 1.49 ಲಕ್ಷ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಿದ್ದಾರೆ.

ವಿದ್ಯಾರ್ಥಿಗಳು ಪರೀಕ್ಷಾ ಕೇಂದ್ರಕ್ಕೆ ಬೆಳಿಗ್ಗೆ 11 ಗಂಟೆಯಿಂದ ಮಧ್ಯಾಹ್ನ 1.30ರ ಒಳಗೆ ಪ್ರವೇಶಾತಿ ಪತ್ರದೊಂದಿಗೆ ಕಾಲೇಜಿನಿಂದ ನೀಡಿರುವ ಗುರುತಿನ ಚೀಟಿ, ಆಧಾರ್ ಕಾರ್ಡ್, ಪ್ಯಾನ್ ಕಾರ್ಡ್, ಮತದಾರರ ಗುರುತಿನ ಚೀಟಿ ಅಥವಾ ಇತರೆ ಯಾವುದಾದರೂ ಅಂಗೀಕೃತ ಗುರುತಿನ ಚೀಟಿಯ ಜೊತೆ ಒಂದು ಪೋಸ್ಟ್ ಕಾರ್ಡ್ ಮತ್ತು ಎರಡು ಪಾಸ್‌ಪೋರ್ಟ್ ಅಳತೆಯ ಭಾವಚಿತ್ರಗಳ ಸಹಿತ ಹಾಜರಾಗಬೇಕು. ನೋಂದಣಿ ಪ್ರಕ್ರಿಯೆ ಪೂರ್ಣಗೊಂಡ ವಿದ್ಯಾರ್ಥಿಗಳು ತಮ್ಮ ರಿಜಿಸ್ಟರ್ ನಂಬರ್ ಇರುವ ಕೊಠಡಿಗೆ ತೆರಳಬೇಕು.

ವಿದ್ಯಾರ್ಥಿಗಳನ್ನು ಎನ್‌ಟಿಎ ವತಿಯಿಂದ ನೇಮಿಸಿರುವ ಏಜೆನ್ಸಿಗಳು ನೋಂದಣಿ ಮಾಡಿಕೊಳ್ಳಲಿದ್ದು, ನಿಯೋಜಿತ ಪೊಲೀಸ್ ಸಿಬ್ಬಂದಿ ಸುರಕ್ಷತಾ ತಪಾಸಣೆ ನಡೆಸಲಿದ್ದಾರೆ. ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳಿಗೆ ಬಯೋಮೆಟ್ರಿಕ್ ಹಾಜರಾತಿ ಕಡ್ಡಾಯವಾಗಿದ್ದು, ಪ್ರವೇಶ ಪತ್ರದಲ್ಲಿ ನೀಡಿರುವ ಮಾರ್ಗಸೂಚಿಗಳನ್ನು ಪಾಲಿಸಬೇಕು.

1.49 ಲಕ್ಷ ನೀಟ್‌ಗೆ ಅರ್ಜಿ ಸಲ್ಲಿಸಿರುವ ವಿದ್ಯಾರ್ಥಿಗಳು

ಮಧ್ಯಾಹ್ನ **2**ರಿಂದ ಸಂಜೆ **5** ಗಂಟೆ ಪರೀಕ್ಷಾ ಅವಧಿ

ಬಳೆ, ಓಲೆ, ಮೂಗುತಿ ನಿಷೇಧ

- ಕಿವಿಯೋಲೆ, ಬಳೆ, ಸರ, ಕಾಲ್ಗೆಜ್ಜೆ, ಮೂಗುತಿ, ಜಡೆ ಕ್ಲಿಪ್, ಎತ್ತರದ ಚಪ್ಪಲಿ, ಯಾವುದೇ ಲೋಹದ ಉಪಕರಣ ಧರಿಸಲು ಅವಕಾಶ ಇಲ್ಲ
- ವಿದ್ಯಾರ್ಥಿಗಳು ಪೂರ್ಣ ತೋಳಿರುವ ಮೇಲಂಗಿ, ದೊಡ್ಡ ಬಟನ್‌ಗಳಿರುವ ಶರ್ಟ್, ಪ್ಯಾಂಟ್, ಶೂ, ಸಾಕ್ಸ್ ಧರಿಸುವಂತಿಲ್ಲ
- ಯಾವುದೇ ರೀತಿಯ ಎಲೆಕ್ಟ್ರಾನಿಕ್ ಉಪಕರಣಗಳನ್ನು ತರಲು ಅಥವಾ ಧರಿಸಲು ಕೂಡಾ ಅವಕಾಶ ಇಲ್ಲ

ಪರೀಕ್ಷಾ ಅವಧಿಯಲ್ಲಿ ಪ್ರತಿ ಗಂಟೆಗೊಮ್ಮೆ ಬೆಲ್ ಮೂಲಕ ಸೂಚನೆ ನೀಡಲಾಗುವುದು. ಜಿಲ್ಲಾಡಳಿತದ ವತಿಯಿಂದ ಪರೀಕ್ಷಾ ಕೇಂದ್ರಗಳಿಗೆ ನಿರಂತರ ವಿದ್ಯುತ್ ವ್ಯವಸ್ಥೆ, ಆರೋಗ್ಯ ಸಿಬ್ಬಂದಿ ಹಾಗೂ ತುರ್ತುಸೇವೆಗಳ ನಿಯೋಜನೆ, ಪರೀಕ್ಷಾ ಕೇಂದ್ರಗಳ ಸ್ವಚ್ಛತೆ ಮತ್ತು ಪರೀಕ್ಷೆಗೆ ಹಾಜರಾಗುವ ಅಂಗವಿಕಲರು, ವಿಶೇಷ ಚೇತನ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ವೀಲ್ ಚೇರ್ ವ್ಯವಸ್ಥೆ ಹಾಗೂ ತುರ್ತು ಅಗ್ನಿಶಾಮಕ ವ್ಯವಸ್ಥೆ ಕಲ್ಪಿಸಲಾಗುವುದು.

ಪರೀಕ್ಷಾ ಕೇಂದ್ರಗಳಲ್ಲಿ ಫ್ರಿಸ್ಕಿಂಗ್ ಮತ್ತು ಜಾಮರ್ ಅಳವಡಿಸಲು ಎನ್‌ಟಿಎ ವತಿಯಿಂದ ಏಜೆನ್ಸಿಗಳನ್ನು ನಿಯೋಜಿಸಲಾಗಿದ್ದು, ಈ ಬಗ್ಗೆ ಪರೀಕ್ಷಾ ಕೇಂದ್ರಗಳ ಮುಖ್ಯಸ್ಥರು ಖಚಿತಪಡಿಸಿಕೊಳ್ಳಬೇಕು. ಪರೀಕ್ಷಾ ಕೇಂದ್ರಗಳ ಸುತ್ತ ನಿಷೇಧಾಜ್ಞೆ ಜಾರಿಗೊಳಿಸಲಾಗುವುದು. ನಿಯೋಜಿತ ಅಧಿಕಾರಿ, ಸಿಬ್ಬಂದಿಯನ್ನು ಹೊರತುಪಡಿಸಿ ಇತರರಿಗೆ ಪರೀಕ್ಷಾ ಕೇಂದ್ರಗಳಿಗೆ ಪ್ರವೇಶ ಇರುವುದಿಲ್ಲ ಎಂದು ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ತಿಳಿಸಿದೆ.

ಜನಗಣತಿಗೆ ಇನ್ನೂ ನಿಗದಿಯಾಗದ ಮುಹೂರ್ತ

ಒಂದನೇ ಪುಟದಿಂದ...

ಕೋವಿಡ್ ಹಾವಳಿ ಮುಗಿದ ನಂತರವೂ ಜನಗಣತಿಯನ್ನು ತಡೆ ಹಿಡಿಯಲಾಗಿದ್ದು, ಸರ್ಕಾರ ಹೊಸ ವೇಳಾಪಟ್ಟಿಯನ್ನು ಇನ್ನೂ ಪ್ರಕಟಿಸಿಲ್ಲ. ಅಧಿಕಾರಿಗಳ ಪ್ರಕಾರ, ಜನಗಣತಿ ಮತ್ತು ಎನ್‌ಪಿಆರ್ ಪ್ರಕ್ರಿಯೆಗೆ ₹12 ಸಾವಿರ ಕೋಟಿಗೂ ಹೆಚ್ಚು ವೆಚ್ಚವಾಗಲಿದೆ. ಜನಗಣತಿಯ ಪ್ರಕ್ರಿಯೆ ಮುಗಿಯಲು ಕನಿಷ್ಠ ಒಂದೂವರೆ ವರ್ಷ ಬೇಕು.

ಜಾತಿ ಗಣತಿಯ ವೇಳಾಪಟ್ಟಿ ಘೋಷಣೆಯಾಗದ ಕಾರಣ 2024–25ನೇ ಸಾಲಿನಲ್ಲಿ ಅನುದಾನ ಹಂಚಿಕೆ ಕಡಿಮೆ ಮಾಡಲಾಗಿದೆ’ ಎಂದು ಗೃಹ ಸಚಿವಾಲಯವು ಸಂಸದೀಯ ಸ್ಥಾಯಿ ಸಮಿತಿಗೆ ತಿಳಿಸಿತ್ತು. ಜನಗಣತಿಗೆ ಸಂಬಂಧಿಸಿದ ಹಲವು ಪೂರ್ವಸಿದ್ಧತಾ ಕಾರ್ಯಗಳು ಪೂರ್ಣಗೊಂಡಿವೆ ಎಂದೂ ಮಾಹಿತಿ ನೀಡಿತ್ತು.

ಡಿಜಿಟಲ್ ಜನಗಣತಿ: ಜನಗಣತಿ ಯಾವಾಗ ನಡೆದರೂ, ಈ ಬಾರಿಯದ್ದು ಮೊದಲ ಡಿಜಿಟಲ್ ಜನಗಣತಿಯಾಗಿರಲಿದೆ. ದೇಶದ ಪ್ರಜೆಗಳಿಗೆ ವಿವರಗಳನ್ನು ಸ್ವತಃ ನಮೂದಿಸಲು ಇದು ಅವಕಾಶ ನೀಡಲಿದೆ.

ಸರ್ಕಾರದ ಗಣತಿಗಾರರ ಬದಲಿಗೆ ತಾವೇ ಗಣತಿಯ ಅರ್ಜಿ ನಮೂನೆಯನ್ನು ಭರ್ತಿ ಮಾಡಲು ಬಯಸಿದ ನಾಗರಿಕರು ರಾಷ್ಟ್ರೀಯ ಜನಸಂಖ್ಯೆ ನೋಂದಣಿ ಮಾಡುವುದನ್ನು ಕಡ್ಡಾಯ ಮಾಡಲಾಗಿದೆ. ಇದಕ್ಕಾಗಿ ಸರ್ಕಾರ ಸ್ವಯಂ-ಗಣತಿ ಪೋರ್ಟಲ್ ಅನ್ನು ರೂಪಿಸಿದೆ. ಆದರೆ, ಅದಿನ್ನೂ ಉದ್ಘಾಟನೆಯಾಗಿಲ್ಲ. ಸ್ವಯಂ-ಗಣತಿ ವೇಳೆ ಆಧಾರ್ ಸಂಖ್ಯೆ ಅಥವಾ ಮೊಬೈಲ್ ನಂಬರ್ ವಿವರವನ್ನು ಕಡ್ಡಾಯವಾಗಿ ಸಂಗ್ರಹಿಸಲಾಗುತ್ತದೆ.

ಸದ್ಯ ಲಭ್ಯವಿರುವ ದತ್ತಾಂಶಗಳು ಹಾಗೂ ಜಾರಿಯಲ್ಲಿರುವ ಯೋಜನೆಗಳನ್ನು 2011ರ ಜನಗಣತಿ ಪ್ರಕಾರ ಇದ್ದ ಜನಸಂಖ್ಯೆಗೆ ಅನುಗುಣವಾಗಿ ರೂಪಿಸಲಾಗಿದೆ.

ಕಣಿವೆಯಲ್ಲಿ ಹೆಚ್ಚಿದ ಬೇಗುದಿ

ವೀಸಾ ರದ್ದು: ಪಾಕ್‌ನಿಂದ ಸ್ವದೇಶಕ್ಕೆ ಮರಳಿದ 1,465 ಭಾರತೀಯರು

ಭಾರತ ತೊರೆದ 786 ಮಂದಿ

ನವದೆಹಲಿ (ಪಿಟಿಐ): ಪಹಲ್ಗಾಮ್ ದಾಳಿಗೆ ಪ್ರತ್ಯುತ್ತರವಾಗಿ ಕೇಂದ್ರ ಸರ್ಕಾರ ಹೊರಡಿಸಿದ ಆದೇಶದಂತೆ ಕಳೆದ ಆರು ದಿನಗಳಲ್ಲಿ 55 ರಾಜತಾಂತ್ರಿಕ ಅಧಿಕಾರಿಗಳು ಒಳಗೊಂಡಂತೆ 786 ಪಾಕಿಸ್ತಾನಿ ಪ್ರಜೆಗಳು ಅಟ್ಟಾರಿ – ವಾಘಾ ಗಡಿ ಮೂಲಕ ಭಾರತವನ್ನು ತೊರೆದಿದ್ದಾರೆ.

ಸಾರ್ಕ್ ವೀಸಾ ಸೇರಿದಂತೆ ಒಟ್ಟು 12 ವಿಧಗಳ ವೀಸಾದೊಂದಿಗೆ ಭಾರತ ಪ್ರವೇಶಿಸಿದ್ದವರು ಪಾಕಿಸ್ತಾನಕ್ಕೆ ವಾಪಸಾಗಲು ಏ.27 ಕೊನೇ ದಿನವಾಗಿತ್ತು. ವೈದ್ಯಕೀಯ ವೀಸಾದಲ್ಲಿ ಬಂದವರಿಗೆ ದೇಶ ತೊರೆಯಲು ಏ.29ರ ಗಡುವು ನೀಡಲಾಗಿತ್ತು.

ಪಾಕಿಸ್ತಾನಿ ವೀಸಾ ಹೊಂದಿರುವ ಭಾರತದ ಎಂಟು ಪ್ರಜೆಗಳು ಕೂಡಾ ಗಡಿ ದಾಟಿದ್ದಾರೆ ಎಂದು ಅಧಿಕಾರಿಗಳು ಬುಧವಾರ ಮಾಹಿತಿ ನೀಡಿದ್ದಾರೆ.

ಇದೇ ಅವಧಿಯಲ್ಲಿ 25 ರಾಜತಾಂತ್ರಿಕರು ಮತ್ತು ಅಧಿಕಾರಿಗಳು ಸೇರಿದಂತೆ ಒಟ್ಟು 1,465 ಭಾರತೀಯರು ಪಾಕಿಸ್ತಾನದಿಂದ ಭಾರತಕ್ಕೆ ಬಂದಿದ್ದಾರೆ. ಭಾರತದ ದೀರ್ಘಾವಧಿ ವೀಸಾ ಹೊಂದಿರುವ 151 ಪಾಕಿಸ್ತಾನಿ ಪ್ರಜೆಗಳು ಕೂಡಾ ಇದರಲ್ಲಿ ಸೇರಿದ್ದಾರೆ.

ನವದೆಹಲಿಯ ಪಾಕ್ ಹೈಕಮಿಷನ್ ಕಚೇರಿಯಲ್ಲಿರುವ ಸೇನಾ, ನೌಕಾಪಡೆ ಮತ್ತು ವಾಯುಪಡೆ ಸಲಹೆಗಾರರಿಗೆ ಒಂದು ವಾರದ ಒಳಗಾಗಿ ದೇಶ ತೊರೆಯುವಂತೆ ಏ.23ರಂದು ಸೂಚಿಸಲಾಗಿತ್ತು. ಇವರ ಐವರು ಸಹಾಯಕ ಸಿಬ್ಬಂದಿಗೂ ಇದೇ ಸೂಚನೆ ನೀಡಲಾಗಿತ್ತು. ಆದರೆ ದೀರ್ಘಾವಧಿಯ, ರಾಜತಾಂತ್ರಿಕ ಅಥವಾ ಅಧಿಕೃತ ವೀಸಾಗಳನ್ನು ಹೊಂದಿರುವವರಿಗೆ 'ಭಾರತ ಬಿಟ್ಟು ತೊಲಗಿ' ಆದೇಶದಿಂದ ವಿನಾಯಿತಿ ನೀಡಲಾಗಿದೆ. ಭಾರತವು ಇಸ್ಲಾಮಾಬಾದ್‌ನಲ್ಲಿರುವ ಪಾಕ್ ಹೈಕಮಿಷನ್ ಕಚೇರಿಯ ತನ್ನ ಅಧಿಕಾರಿಗಳನ್ನು ವಾಪಸ್ ಕರೆಸಿಕೊಂಡಿದೆ.

ಕೆಲವು ಪಾಕಿಸ್ತಾನಿ ಪ್ರಜೆಗಳು ವಿಮಾನಗಳ ಮೂಲಕವೂ ಭಾರತವನ್ನು ತೊರೆದಿರಬಹುದು ಎಂದು ಅಧಿಕಾರಿಗಳು ಹೇಳಿದ್ದಾರೆ. ಭಾರತ– ಪಾಕಿಸ್ತಾನ ನಡುವೆ ನೇರ ವಿಮಾನ ಸಂಚಾರ ಇಲ್ಲದ ಕಾರಣ ಅವರು ಮೂರನೇ ದೇಶದ ಮೂಲಕ ತೆರಳಿರಬಹುದು ಎಂದಿದ್ದಾರೆ.

ಕೇಂದ್ರ ಗೃಹ ಸಚಿವ ಅಮಿತ್ ಶಾ ಏ.25ರಂದು ಎಲ್ಲ ರಾಜ್ಯಗಳ ಮುಖ್ಯಮಂತ್ರಿಗಳಿಗೆ ಕರೆ ಮಾಡಿ, ನಿಗದಿತ ಗಡುವು ಮೀರಿದ ಬಳಿಕ ಪಾಕಿಸ್ತಾನದ ಯಾವುದೇ ಪ್ರಜೆ ಭಾರತದಲ್ಲಿ ಉಳಿಯದಂತೆ ನೋಡಿಕೊಳ್ಳಬೇಕು ಎಂದು ಸೂಚಿಸಿದ್ದರು.

ಭಾರತದ ಪ್ರಜೆಯನ್ನು ವಿವಾಹವಾಗಿರುವ ಪಾಕಿಸ್ತಾನದ ಸಬಾ ಕಿರಣ್ ಅವರು ಅಟ್ಟಾರಿವಾಘಾ ಗಡಿ ಮೂಲಕ ಸ್ವದೇಶಕ್ಕೆ ತೆರಳುವಾಗ ಪುತ್ರಿಗೆ ವಿದಾಯ ಹೇಳಿದರು –ಪಿಟಿಐ ಚಿತ್ರ

ವಿವಿಧ ದಿನಗಳಲ್ಲಿ ಪಾಕ್‌ಗೆ ತೆರಳಿದವರು	
ಏ.24	28
ಏ.25	191
ಏ.26	81
ಏ.27	237
ಏ.28	145
ಏ.29	94

ಬಿಕ್ಕಟ್ಟು ಪರಿಹರಿಸಲು ಅಮೆರಿಕ ಮನವಿ

ನ್ಯೂಯಾರ್ಕ್/ ವಾಷಿಂಗ್ಟನ್ (ಪಿಟಿಐ): ಭಾರತ–ಪಾಕಿಸ್ತಾನದ ಮಧ್ಯೆ ಉಂಟಾಗಿರುವ ಬಿಗುವಿನ ವಾತಾವರಣವನ್ನು ತಿಳಿಗೊಳಿಸಲು ಉಭಯ ದೇಶಗಳು ಮುಂದಾಗಬೇಕು ಎಂದು ಅಮೆರಿಕ ಮನವಿ ಮಾಡಿದೆ.

ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮ್ಯಾಕ್ರೊ ರುಬಿಯೊ ಅವರು ಉಭಯ ದೇಶಗಳ ವಿದೇಶಾಂಗ ಸಚಿವರುಗಳೊಂದಿಗೆ ಶೀಘ್ರವೇ ಮಾತುಕತೆ ನಡೆಸಲಿದ್ದಾರೆ.

ವಿದೇಶಾಂಗ ಇಲಾಖೆ ವಕ್ತಾರ ಟಮ್ಮಿ ಬ್ರೂಸ್ ಅವರು, 'ಅಮೆರಿಕವು ಕಾಶ್ಮೀರ ವಿಚಾರಕ್ಕೆ ಸಂಬಂಧಿಸಿದಂತೆ ಭಾರತ–ಪಾಕಿಸ್ತಾನವನ್ನು ಸಂಪರ್ಕಿಸಿದೆ. ಪರಿಸ್ಥಿತಿ ಬಿಗಡಾಯಿಸದಂತೆ ಮತ್ತು ಸಂಯಮ ಕಾಯ್ದುಕೊಳ್ಳುವಂತೆ ಹೇಳಿದೆ' ಎಂದರು.

'ತಕ್ಕ ಪರಿಣಾಮ ಎದುರಿಸಬೇಕು'

24–36 ಗಂಟೆಗಳಲ್ಲಿ ಭಾರತದಿಂದ ಕಾರ್ಯಾಚರಣೆ: ಪಾಕ್

ಇಸ್ಲಾಮಾಬಾದ್ (ಪಿಟಿಐ): ಭಾರತವು ಮುಂದಿನ 24ರಿಂದ 36 ಗಂಟೆಗಳಲ್ಲಿ ತನ್ನ ವಿರುದ್ಧ ಮಿಲಿಟರಿ ಕಾರ್ಯಾಚರಣೆ ನಡೆಸಲು ಯೋಜನೆ ರೂಪಿಸಿರುವುದು ಗುಪ್ತಚರ ಮೂಲಗಳಿಂದ ತಿಳಿದು ಬಂದಿದೆ ಎಂದು ಪಾಕಿಸ್ತಾನ ಬುಧವಾರ ಹೇಳಿದೆ.

'ಒಂದು ವೇಳೆ ಸೇನಾ ಕಾರ್ಯಾಚರಣೆ ನಡೆಸಿದ್ದೇ ಆದರೆ, ತಕ್ಕ ಪರಿಣಾಮ ಎದುರಿಸಬೇಕು' ಎಂದು ಭಾರತಕ್ಕೆ ಎಚ್ಚರಿಕೆ ನೀಡಿದೆ.

ಪಹಲ್ಗಾಮ್‌ಭಯೋತ್ಪಾದಕರ ದಾಳಿಗೆ ಪ್ರತ್ಯುತ್ತರ ನೀಡಲು ದಾಳಿಯ ಮಾದರಿ, ಗುರಿ ಹಾಗೂ ಸಮಯ ನಿರ್ಧರಿಸಲು ಸಶಸ್ತ್ರ ಪಡೆಗಳಿಗೆ ಸಂಪೂರ್ಣ ಕಾರ್ಯಾಚರಣೆ ಸ್ವಾತಂತ್ರ್ಯ ಇದೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಸೇನೆಗಳ ಮುಖ್ಯಸ್ಥರಿಗೆ ಸೂಚಿಸಿದ ಕೆಲವೇ ಗಂಟೆಗಳ ಬಳಿಕ ಪಾಕಿಸ್ತಾನದ ಹೇಳಿಕೆ ಹೊರಬಿದ್ದಿದೆ.

ಪಹಲ್ಗಾಮ್ ದಾಳಿಯಲ್ಲಿ ಪಾಕಿಸ್ತಾನದ ಕೈವಾಡದ ಬಗ್ಗೆ 'ಹುಸಿ ಆರೋಪ'ಗಳ ಆಧಾರದ ಮೇಲೆ ಭಾರತವು ಪಾಕಿಸ್ತಾನದ ವಿರುದ್ಧ ಮಿಲಿಟರಿ ಕಾರ್ಯಾಚರಣೆ ಕೈಗೊಳ್ಳಲು ಸಿದ್ಧತೆ ನಡೆಸುತ್ತಿದೆ ಎಂದು ಪಾಕಿಸ್ತಾನದ ಮಾಹಿತಿ ಸಚಿವ ಅತಾವುಲ್ಲಾ ತರಾರ್ ಹೇಳಿದ್ದಾರೆ.

ಪಾಕಿಸ್ತಾನವು ಸ್ವತಃ ಭಯೋತ್ಪಾದನೆಯಿಂದ ಸಾಕಷ್ಟು ಕಷ್ಟ ಅನುಭವಿಸಿದೆ ಮತ್ತು ಭಯೋತ್ಪಾದನೆಯನ್ನು ಅದು ಯಾವುದೇ ರೂಪದಲ್ಲಿದ್ದರೂ ಖಂಡಿಸುತ್ತದೆ ಎಂದು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಪಹಲ್ಗಾಮ್ ದಾಳಿಯ ಬಗ್ಗೆ ತಟಸ್ಥ ತನಿಖಾ ಆಯೋಗ ನಡೆಸುವ 'ವಿಶ್ವಾಸಾರ್ಹ, ಪಾರದರ್ಶಕ ಮತ್ತು ಸ್ವತಂತ್ರ' ತನಿಖೆಗೆ ಎಲ್ಲ ರೀತಿಯ ಸಹಕಾರ ನೀಡುವ ಭರವಸೆಯನ್ನು ಭಾರತಕ್ಕೆ ಕೊಟ್ಟಿದ್ದೇವೆ. ಆದರೆ ಭಾರತವು ತನಿಖೆಯಿಂದ ತಪ್ಪಿಸಿಕೊಳ್ಳಲು, ಯುದ್ಧದ ಮಾರ್ಗವನ್ನು ಆರಿಸಿಕೊಂಡಿದೆ ಎಂದು ಆರೋಪಿಸಿದ್ದಾರೆ.

'ಭಾರತವು ಸೇನಾ ಕಾರ್ಯಾಚರಣೆ ನಡೆಸಿದರೆ, ಪಾಕಿಸ್ತಾನವು ತಿರುಗೇಟು ನೀಡಲಿದೆ ಎಂಬುದನ್ನು ಅಂತರ ರಾಷ್ಟ್ರೀಯ ಸಮುದಾಯಕ್ಕೆ ಮನವರಿಕೆ ಮಾಡಿಕೊಡುತ್ತಿದ್ದೇವೆ. ಪರಿಸ್ಥಿತಿ ಬಿಗಡಾಯಿಸಿದರೆ ಅದರ ಸಂಪೂರ್ಣ ಹೊಣೆಗಾರಿಕೆ ಭಾರತದ ಮೇಲಿರುತ್ತದೆ' ಎಂದಿದ್ದಾರೆ.

'ಸೇನಾ ಕಮಾಂಡರ್ ವಜಾ ಆಗಿಲ್ಲ'

ನವದೆಹಲಿ (ಪಿಟಿಐ): ಪಹಲ್ಗಾಮ್‌ನಲ್ಲಿ ನಡೆದ ದಾಳಿ ಬಳಿಕ ಭಾರತೀಯ ಸೇನೆಯ ಉತ್ತರ ವಲಯದ ಕಮಾಂಡರ್ ಲೆ. ಜನರಲ್ ಎಂ.ವಿ.ಸುಚೀಂದ್ರ ಕುಮಾರ್ ಅವರನ್ನು ತೆಗೆದುಹಾಕಲಾಗಿದೆ ಎಂಬುದು ಸುಳ್ಳು. ಪಾಕಿಸ್ತಾನದ ಪರವಿರುವ ಕೆಲ ಸಾಮಾಜಿಕ ಜಾಲತಾಣ ಖಾತೆಗಳು ಈ ಸುಳ್ಳು ಸುದ್ದಿಯನ್ನು ಪಸರಿಸುತ್ತಿವೆ ಎಂದು ಸರ್ಕಾರ ಬುಧವಾರ ಹೇಳಿದೆ.

ಪಿಐಬಿ ಸತ್ಯಶೋಧನ (ಫ್ಯಾಕ್ಟ್‌ಚೆಕ್) ವಿಭಾಗವು ಈ ಬಗ್ಗೆ ಎಕ್ಸ್‌ನಲ್ಲಿ ಮಾಹಿತಿ ಹಂಚಿಕೊಂಡಿದೆ. 'ಪಾಕಿಸ್ತಾನದ ಪರವಿರುವ ಕೆಲ ಸಾಮಾಜಿಕ ಜಾಲತಾಣ ಖಾತೆಗಳಲ್ಲಿ ಸುಚೀಂದ್ರ ಕುಮಾರ್ ಅವರನ್ನು ತೆಗೆದುಹಾಕಲಾಗಿದೆ ಎಂಬ ಸುಳ್ಳು ಸುದ್ದಿ ಪಸರಿಸಲಾಗಿದೆ. ವಾಸ್ತವದಲ್ಲಿ ಸುಚೀಂದ್ರ ಕುಮಾರ್ ಏ.30ರಂದು ನಿವೃತ್ತಿ ಹೊಂದಿದ್ದು, ಲೆಫ್ಟಿನೆಂಟ್ ಜನರಲ್ ಪ್ರತೀಕ್ ಶರ್ಮಾ ಅವರನ್ನು ಉತ್ತರ ವಲಯದ ಹೊಸ ಕಮಾಂಡರ್ ಆಗಿ ನೇಮಿಸಲಾಗುತ್ತದೆ' ಎಂದು ಸ್ಪಷ್ಟನೆ ನೀಡಿದೆ.

ಅಲ್ಲದೇ, ಸೇನೆಯ ಸೂಕ್ಷ್ಮ ಮಾಹಿತಿಗಳು ಸೋರಿಕೆಯಾಗಿವೆ ಎಂದೂ ಕೆಲವು ಪತ್ರಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಹರಿ ಬಿಡಲಾಗಿದೆ. ಅವು ನಕಲಿ ಎಂದು ಹೇಳಿದೆ.

ಪಾಕ್ ವಿಮಾನಗಳಿಗೆ ಭಾರತ ವಾಯುಪ್ರದೇಶ ನಿರ್ಬಂಧ

ನವದೆಹಲಿ (ಪಿಟಿಐ): ಪಹಲ್ಗಾಮ್‌ನಲ್ಲಿ ಭಯೋತ್ಪಾದಕರ ದಾಳಿ ಬಳಿಕ ಪಾಕಿಸ್ತಾನದ ವಿಮಾನಗಳಿಗೆ ತನ್ನ ವಾಯುಪ್ರದೇಶ ಬಳಸದಂತೆ ಭಾರತವು ಬುಧವಾರ ನಿರ್ಬಂಧ ಹೇರಿದೆ.

'ನಿರ್ಬಂಧ ಹೇರಿದ ಕುರಿತು ಪಾಕಿಸ್ತಾನಕ್ಕೆ ಅಧಿಕೃತವಾಗಿ ತಿಳಿಸಲಾಗಿದೆ' ಎಂದು ಮೂಲಗಳು ತಿಳಿಸಿವೆ. ವಾರದ ಹಿಂದೆ, ಭಾರತದ ವಿಮಾನಗಳಿಗೆ ತನ್ನ ವಾಯುಪ್ರದೇಶ ಬಳಸದಂತೆ ಪಾಕಿಸ್ತಾನವು ನಿರ್ಬಂಧ ಹೇರಿತ್ತು.

ಗಿಲ್ಗಿಟ್, ಸ್ಕರ್ದುಗೆ ವಿಮಾನ ಸಂಚಾರ ರದ್ದು: ಇಸ್ಲಾಮಾಬಾದ್ (ಪಿಟಿಐ): ಸರ್ಕಾರಿ ಸ್ವಾಮ್ಯದ ವಿಮಾನಯಾನ ಸಂಸ್ಥೆ ಪಾಕಿಸ್ತಾನ ಇಂಟರ್‌ನ್ಯಾಷನಲ್ ಏರ್‌ಲೈನ್ಸ್ (ಪಿಐಎ), ಪಾಕ್ ಆಕ್ರಮಿತ ಕಾಶ್ಮೀರದ ಗಿಲ್ಗಿಟ್ ಮತ್ತು ಸ್ಕರ್ದು ಸೇರಿದಂತೆ ಉತ್ತರ ಭಾಗದ ಕೆಲವು ಪ್ರದೇಶಗಳಿಗೆ ತನ್ನ ವಿಮಾನ ಸಂಚಾರವನ್ನು ರದ್ದುಗೊಳಿಸಿದೆ.

ಭಾರತದೊಂದಿಗಿನ ಉದ್ವಿಗ್ನತೆ ಹೆಚ್ಚುತ್ತಿರುವ ಸಂದರ್ಭದಲ್ಲಿ ಭದ್ರತೆಯ ಕಾರಣಗಳಿಂದಾಗಿ ಪಿಐಎ ಈ ನಿರ್ಧಾರ ತೆಗೆದುಕೊಂಡಿದೆ ಎಂದು ಸ್ಥಳೀಯ ಮಾಧ್ಯಮಗಳು ವರದಿ ಮಾಡಿವೆ.

ಕರಾಚಿ–ಸ್ಕರ್ದು ಮತ್ತು ಲಾಹೋರ್–ಸ್ಕರ್ದು ನಡುವೆ ಸಂಚರಿಸುವ ಎರಡು ವಿಮಾನಗಳನ್ನು ರದ್ದುಗೊಳಿಸಲಾಗಿದೆ ಎಂದು ಮೂಲಗಳನ್ನು ಉಲ್ಲೇಖಿಸಿ ಜಂಗ್ ದಿನಪತ್ರಿಕೆ ವರದಿ ಮಾಡಿದೆ.

'ಪಾಕಿಸ್ತಾನ ಹತೋಟಿಯಲ್ಲಿಡಲು ಬೆಂಬಲ'

ಪ್ರಧಾನಿಗೆ ಸಂಪೂರ್ಣ ಅಧಿಕಾರ ಕೊಟ್ಟಿದ್ದೇವೆ: ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪಾಕಿಸ್ತಾನವನ್ನು ಹತೋಟಿಯಲ್ಲಿ ಇಡಲು ನಾವು (ಕಾಂಗ್ರೆಸ್ ಪಕ್ಷ) ಪ್ರಧಾನಿಗೆ ಬೆಂಬಲ ನೀಡಿದ್ದೇವೆ. ಆದರೆ, ಭಾರತ ದೇಶದ ಸೈನಿಕರಿಗಾಗಲಿ, ಜನರಿಗಾಗಲಿ ಯಾವುದೇ ರೀತಿಯ ತೊಂದರೆ ಆಗಬಾರದು' ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದರು.

ಸುದ್ದಿಗಾರರ ಜೊತೆ ಬುಧವಾರ ಮಾತನಾಡಿದ ಅವರು, 'ಪಾಕಿಸ್ತಾನದ ವಿರುದ್ಧ ಕಾರ್ಯಾಚರಣೆ ನಡೆಸಲು ನಾವು ಪ್ರಧಾನಿಗೆ ಈಗಾಗಲೇ ಸಂಪೂರ್ಣ ಅಧಿಕಾರ ಕೊಟ್ಟಿದ್ದೇವೆ. ಅದನ್ನು ಅವರು ಉಪಯೋಗ ಮಾಡಿಕೊಳ್ಳಲಿ' ಎಂದರು.

'ದೇಶದ ಜನರ ಅನಿಸಿಕೆ ಹಾಗೂ ಭಾವನೆಗೆ ಪೂರಕವಾಗಿ ಎಲ್ಲ ಪಕ್ಷಗಳು ಮೋದಿ ಅವರಿಗೆ ಅಧಿಕಾರ ನೀಡಿವೆ. ತಮ್ಮ ಕೆಲಸವನ್ನು ಅವರು ಮಾಡಲಿ. ದೇಶದ ರಕ್ಷಣೆಗಾಗಿ ಆದಷ್ಟು ಬೇಗ ಒಳ್ಳೆಯ ಹೆಜ್ಜೆಗಳನ್ನು ಇಡಬೇಕು' ಎಂದರು.

'ಸಂಸತ್ ಅಧಿವೇಶನ ಕರೆಯಬೇಕು ಎಂದು ಎಲ್ಲ ಪಕ್ಷದವರು ಒಂದಾಗಿ ಹೇಳಿದ್ದೇವೆ. ಪಹಲ್ಗಾಮ್‌ನಲ್ಲಿ ಉಗ್ರರ ದಾಳಿಯ ನಂತರ ಈವರೆಗೆ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ಅಧಿವೇಶನದಲ್ಲಿ ಪ್ರಧಾನಿ ಮಾಹಿತಿ ನೀಡಬೇಕು. ಕೆಲವು ಗುಪ್ತ ಕಾರ್ಯಸೂಚಿಗಳಿರುತ್ತವೆ. ಅದನ್ನು ಮಾಡಲಿ. ಇವತ್ತಿನ ಪರಿಸ್ಥಿತಿ ಏನಿದೆ? ತಮ್ಮ ಮನಸ್ಸಿನಲ್ಲಿ ಏನಿದೆ ಎನ್ನುವುದನ್ನು ಎರಡೂ ಸದನಗಳ ಸಭಾ ನಾಯಕರನ್ನು ಕರೆದು ಅವರು ಸಮಾಲೋಚನೆ ನಡೆಸುವುದು ಒಳ್ಳೆಯದು' ಎಂದು ಹೇಳಿದರು.

'ಯಾರ ಗೌರವಕ್ಕೂ ಧಕ್ಕೆ ತರಬಾರದು'

'ಪ್ರಧಾನಿಯೇ ಇರಲಿ, ಇತರ ಯಾರೇ ಮುಖಂಡರು ಇರಲಿ, ಅವರ ಗೌರವಕ್ಕೆ ಧಕ್ಕೆ ತರುವಂಥ ಕೆಲಸ ಮಾಡಬಾರದು' ಎಂದು ಮಲ್ಲಿಕಾರ್ಜುನ ಖರ್ಗೆ ಹೇಳಿದರು.

ಮೋದಿಯವರ ತಲೆ ಇಲ್ಲದ ಭಾವಚಿತ್ರ ಹಾಕಿ 'ಗಾಯಬ್' ಎಂದು ಕಾಂಗ್ರೆಸ್ ಟ್ವೀಟ್ ಮಾಡಿರುವ ಬಗ್ಗೆ ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, 'ಆ ವಿಚಾರ ನನಗೆ ಗೊತ್ತಿಲ್ಲ. ಅವರಾಗಲಿ, ನಮ್ಮವರೇ ಆಗಲಿ ಈ ರೀತಿ ಮಾಡುವುದು ಸರಿಯಲ್ಲ' ಎಂದರು.

ಪಹಲ್ಗಾಮ್ ದಾಳಿಯ ಬಗ್ಗೆ ವಿವಾದಾತ್ಮಕ ಹೇಳಿಕೆ ನೀಡದಂತೆ ಪಕ್ಷದ ನಾಯಕರಿಗೆ ಸೂಚನೆ ನೀಡಿರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, 'ದೆಹಲಿಯಲ್ಲಿ ನಡೆದ ಸಿಡಬ್ಲ್ಯುಸಿ ಸಭೆಯಲ್ಲಿ ತೆಗೆದುಕೊಂಡಿರುವ ನಿರ್ಣಯವನ್ನು ಎಲ್ಲರೂ ಪಾಲಿಸಬೇಕು. ಅದನ್ನು ಮತ್ತೊಮ್ಮೆ ಮನವರಿಕೆ ಮಾಡಿದ್ದೇವೆ. ಎಲ್ಲರೂ ಅದನ್ನು ಅನುಸರಿಸಬೇಕು' ಎಂದರು.

ಶುಭಂ ಕುಟುಂಬ ಭೇಟಿ ಮಾಡಿದ ರಾಹುಲ್

ಲಖನೌ/ಅಮೇಠಿ: ಪಹಲ್ಗಾಮ್‌ನಲ್ಲಿ ನಡೆದ ಭಯೋತ್ಪಾದಕರ ದಾಳಿಯಲ್ಲಿ ಹತ್ಯೆಯಾದ ಕಾನ್ಪುರದ ಶುಭಂ ದ್ವಿವೇದಿ ಅವರ ಕುಟುಂಬವನ್ನು ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಬುಧವಾರ ಭೇಟಿ ಮಾಡಿದರು.

ಕಾನ್ಪುರ ಜಿಲ್ಲೆಯ ಹಾಥಿಪುರ ಗ್ರಾಮದಲ್ಲಿರುವ ಶುಭಂ ಅವರ ಮನೆಯಲ್ಲಿ ಸುಮಾರು 20 ನಿಮಿಷಗಳವರೆಗೆ ರಾಹುಲ್ ಇದ್ದರು. 'ನಾನು ನನ್ನ ಅಜ್ಜಿ ಮತ್ತು ಅಪ್ಪನನ್ನು ಭಯೋತ್ಪಾದನೆಯ ಕಾರಣದಿಂದಲೇ ಕಳೆದುಕೊಂಡಿದ್ದೇನೆ' ಎಂದು ಹೇಳಿ ರಾಹುಲ್ ಅವರು ಶುಭಂ ಅವರ ಪತ್ನಿ ಇಶಾನ್ಯ ಅವರಿಗೆ ಸಮಾಧಾನ ಮಾಡಿದರು.

'ಶುಭಂ ಅವರಿಗೆ ಹುತಾತ್ಮ ಸ್ಥಾನಮಾನ ನೀಡಬೇಕು' ಎಂದು ಪತ್ನಿ ಇಶಾನ್ಯ ಆಗ್ರಹಿಸಿದ್ದರು. ಈ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆಯುವುದಾಗಿ ರಾಹುಲ್ ಅವರು ಭರವಸೆ ನೀಡಿದರು.

ಕಾನ್ಪುರದ ಶುಭಂ ಅವರ ಪತ್ನಿ ಇಶಾನ್ಯ ಅವರನ್ನು ರಾಹುಲ್ ಗಾಂಧಿ ಅವರು ಬುಧವಾರ ಭೇಟಿ ಮಾಡಿದರು –ಪಿಟಿಐ ಚಿತ್ರ

ರಾಹುಲ್ ವಿರುದ್ಧ ಅವಹೇಳನಾಕಾರಿ ಪೋಸ್ಟರ್

ರಾಹುಲ್ ಗಾಂಧಿ ಅವರು ಬುಧವಾರ ಅಮೇಠಿಗೆ ಭೇಟಿ ನೀಡುವ ಕೆಲವು ಗಂಟೆಗಳ ಮೊದಲು ಇಲ್ಲಿನ ಕಾಂಗ್ರೆಸ್ ಕಚೇರಿ ಬಳಿಯೂ ಸೇರಿದಂತೆ ನಗರಾದ್ಯಂತ 'ರಾಹುಲ್ ಗಾಂಧಿ ಭಯೋತ್ಪಾದಕರ ಬೆಂಬಲಿಗ' ಎಂಬ ಪೋಸ್ಟರ್‌ಗಳನ್ನು ಅಂಟಿಸಲಾಗಿತ್ತು. ಭದ್ರತೆ ಒದಗಿಸಲಾಗಿತ್ತಾದರೂ ಸಂಘರ್ಷ ಏರ್ಪಡುವ ವಾತಾವರಣ ನಿರ್ಮಾಣವಾಗಿತ್ತು. ಬಳಿಕ ಪೊಲೀಸರು ಪೋಸ್ಟರ್‌ಗಳನ್ನು ತೆರವು ಮಾಡಿದರು. ಪೋಸ್ಟರ್ ಅಂಟಿಸಿರುವುದರ ಹಿಂದೆ ಯಾರಿದ್ದಾರೆ ಎನ್ನುವ ಬಗ್ಗೆ ತಿಳಿದುಬಂದಿಲ್ಲ.

ದೋಣಿಮನೆ ಕಾಶ್ಮೀರದ ದಲ್ ಸರೋವರದಲ್ಲಿ ನಿಲುಗಡೆ ಮಾಡಲಾಗಿರುವ ದೋಣಿಮನೆ ಬುಧವಾರ ಸೂರ್ಯಾಸ್ತದ ಹೊತ್ತಿನಲ್ಲಿ ಕಂಡಿದ್ದು ಹೀಗೆ –ಎಎಫ್‌ಪಿ ಚಿತ್ರ

ಪಾಕ್ ಧ್ವಜದ ಮೇಲೆ ಮೂತ್ರ ವಿಸರ್ಜನೆ ಮಾಡಿಸಿದ ಹಿಂದೂಪರ ಕಾರ್ಯಕರ್ತರು

ಪ್ರಜಾವಾಣಿ ವಾರ್ತೆ

ಲಖನೌ: ರಸ್ತೆಯಲ್ಲಿ ಬಿದ್ದಿದ್ದ ಪಾಕಿಸ್ತಾನದ ಧ್ವಜವನ್ನು ಕುತೂಹಲದಿಂದ ಕೈಗೆತ್ತಿಕೊಂಡ ಮುಸ್ಲಿಂ ಬಾಲಕನನ್ನು ಹಿಂದೂಪರ ಸಂಘಟನೆಯ ಕಾರ್ಯಕರ್ತರು ನಿಂದಿಸಿ, ಬಲವಂತವಾಗಿ ಧ್ವಜದ ಮೇಲೆ ಮೂತ್ರ ವಿಸರ್ಜನೆ ಮಾಡಿಸಿದ ಘಟನೆ ಉತ್ತರ ಪ್ರದೇಶದ ಅಲಿಗಢ ನಗರದಲ್ಲಿ ನಡೆದಿದೆ.

ಈ ವಿಡಿಯೊ ಜಾಲತಾಣಗಳಲ್ಲಿ ವ್ಯಾಪಕವಾಗಿ ಹರಿದಾಡುತ್ತಿದೆ. ಮುರಾದ್ ಎಂದು ಗುರುತಿಸಲಾದ 9ನೇ ತರಗತಿ ವಿದ್ಯಾರ್ಥಿಯಿಂದ ಬಲವಂತವಾಗಿ ಪಾಕ್ ಧ್ವಜದ ಮೇಲೆ ಮೂತ್ರವಿಸರ್ಜನೆ ಮಾಡಿಸಿದ ದೃಶ್ಯ ವಿಡಿಯೊದಲ್ಲಿದೆ. ಸೋಮವಾರವೇ ಘಟನೆ ನಡೆದಿದ್ದು, ತಡವಾಗಿ ವರದಿಯಾಗಿದೆ.

ವರದಿಗಳ ಪ್ರಕಾರ, ಸ್ನೇಹಿತರ ಜೊತೆ ಮನೆಗೆ ಹೋಗುತ್ತಿದ್ದ ವಿದ್ಯಾರ್ಥಿ ಮುರಾದ್, ನಗರದ ರಸಲ್‌ಗಂಜ್ ಸಮೀಪ ರಸ್ತೆಯಲ್ಲಿ ಬಿದ್ದಿದ್ದ ಧ್ವಜವನ್ನು ಕೈಗೆತ್ತಿಕೊಂಡಿದ್ದ. ಇದನ್ನು ಕೆಲ ಜನರು ನೋಡಿದ್ದರು. ಬಳಿಕ ವಿದ್ಯಾರ್ಥಿಯ ಹೆಸರು ಕೇಳಿದ ಅವರು ಅವಾಚ್ಯವಾಗಿ ನಿಂದಿಸಿದ್ದರು. ನಂತರ ಧ್ವಜದ ಮೇಲೆ ಮೂತ್ರ ವಿಸರ್ಜಿಸುವಂತೆ ಒತ್ತಾಯಿಸಿದ್ದರು. ಬಾಲಕನಿಗೆ 'ಹಿಂದೂಸ್ತಾನ್ ಜಿಂದಾಬಾದ್', 'ಪಾಕಿಸ್ತಾನ್ ಮುರ್ದಾಬಾದ್' ಎಂದು ಘೋಷಣೆ ಕೂಗುವಂತೆಯೂ ಒತ್ತಾಯಿಸಿದ್ದರು.

'ಕುತೂಹಲದಿಂದ ಧ್ವಜವನ್ನು ಕೈಗೆತ್ತಿಕೊಂಡೆ' ಎಂದು ಬಾಲಕ ಪರಿಪರಿಯಾಗಿ ಬೇಡಿಕೊಂಡರೂ ಗುಂಪು ಆತನ ಮಾತಿಗೆ ಕಿವಿಗೊಡಲಿಲ್ಲ ಎಂದು ವರದಿಗಳು ತಿಳಿಸಿವೆ.

ಈ ಸಂಬಂಧ ಪ್ರಕರಣ ದಾಖಲಾಗಿದ್ದು, ಮೂವರನ್ನು ಬಂಧಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

'ಪ್ರಕರಣದ ಬಗ್ಗೆ ತನಿಖೆ ನಡೆಸಲಾಗುತ್ತಿದೆ. ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು' ಎಂದು ಪೊಲೀಸರು ತಿಳಿಸಿದ್ದಾರೆ.

> **ಪಹಲ್ಗಾಮ್‌ನಲ್ಲಿ ಭಯೋತ್ಪಾದಕ ದಾಳಿ ನಡೆದ ನಂತರ ಕೆಲವರು ಕೋಮು ಸೌಹಾರ್ದ ಕದಡಲು ಯತ್ನಿಸುತ್ತಿದ್ದಾರೆ**
> **ಮನೋಜ್ ಯಾದವ್**
> ಸಮಾಜವಾದಿ ಪಕ್ಷದ ನಾಯಕ

ಪಾಕ್‌ಗೆ ಭಾರತ ಎಚ್ಚರಿಕೆ

ಒಂದನೇ ಪುಟದಿಂದ...

ಮಾತುಕತೆಯು ಎಂದಿನ ಪ್ರಕ್ರಿಯೆಯ ಒಂದು ಭಾಗ, ಇದು ಪ್ರತಿವಾರ ನಡೆಯುವ ಮಾತುಕತೆ ಎಂದು ಮೂಲಗಳು ಹೇಳಿವೆ. ಪಾಕಿಸ್ತಾನ ಮಿಲಿಟರಿಯು ಕದನ ವಿರಾಮ ಉಲ್ಲಂಘಿಸುತ್ತಿರುವುದನ್ನು ಭಾರತದ ಮಿಲಿಟರಿ ಕಾರ್ಯಾಚರಣೆಗಳ ಮಹಾನಿರ್ದೇಶಕರು ಪ್ರಮುಖವಾಗಿ ಪ್ರಸ್ತಾಪಿಸಿದರು ಎಂದು ಗೊತ್ತಾಗಿದೆ.

ಬಿಕ್ಕಟ್ಟು ಶಮನದ ಭಾಗವಾಗಿ ಭಾರತ ಮತ್ತು ಪಾಕಿಸ್ತಾನದ ಸೇನಾಪಡೆಗಳು, ಗಡಿ ನಿಯಂತ್ರಣ ರೇಖೆಯ ಉದ್ದಕ್ಕೂ ಗುಂಡಿನ ದಾಳಿಯನ್ನು ನಿಲ್ಲಿಸುವುದಾಗಿ 2021ರ ಫೆಬ್ರುವರಿ 25ರಂದು ಘೋಷಿಸಿದ್ದವು. 2003ರಲ್ಲಿ ಆದ ಕದನ ವಿರಾಮ ಒಪ್ಪಂದಕ್ಕೆ ತಮ್ಮ ಬದ್ಧತೆಯನ್ನು ಮತ್ತೊಮ್ಮೆ ವ್ಯಕ್ತಪಡಿಸಿದ್ದವು. ಗುಂಡಿನ ದಾಳಿ ನಡೆಸದೆ ಇರುವ ಒಪ್ಪಂದವನ್ನು ಕಳೆದ ವಾರದವರೆಗೂ ಬಹುಮಟ್ಟಿಗೆ ಪಾಲಿಸಲಾಗುತ್ತಿತ್ತು.

ಪಾಕಿಸ್ತಾನದ ಮಿಲಿಟರಿಯು ಬಾರಾಮುಲ್ಲಾ ಮತ್ತು ಕುಪ್ವಾರಾ ಜಿಲ್ಲೆಗಳಲ್ಲಿನ ನಿಯಂತ್ರಣ ರೇಖೆಯಲ್ಲಿ, ಪರ್ಗವಾಲ್ ವಲಯದಲ್ಲಿ ಅಂತರರಾಷ್ಟ್ರೀಯ ಗಡಿಯಲ್ಲಿ ಮಂಗಳವಾರ ರಾತ್ರಿಯೂ ಅಪ್ರಚೋದಿತವಾಗಿ ಗುಂಡಿನ ದಾಳಿ ನಡೆಸಿದೆ ಎಂದು ಮೂಲಗಳು ತಿಳಿಸಿವೆ.

ಪ್ರಧಾನಿ ನರೇಂದ್ರ ಮೋದಿ ಅವರು ಈ ನಡುವೆ, ಭದ್ರತೆ ಕುರಿತ ಸಂಪುಟ ಸಮಿತಿಯ ಸಭೆ ನಡೆಸಿದರು. ಪ್ರಧಾನಿ ನಿವಾಸದಲ್ಲಿ ನಡೆದ ಈ ಸಭೆಯಲ್ಲಿ ಜಮ್ಮು ಮತ್ತು ಕಾಶ್ಮೀರದ ಭದ್ರತೆಯ ಸ್ಥಿತಿ ಬಗ್ಗೆ ಚರ್ಚೆ ಆಯಿತು ಎಂದು ಮೂಲಗಳು ಹೇಳಿವೆ. ರಕ್ಷಣಾ ಸಚಿವ ರಾಜನಾಥ ಸಿಂಗ್, ಗೃಹ ಸಚಿವ ಅಮಿತ್ ಶಾ, ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಈ ಸಭೆಯಲ್ಲಿ ಭಾಗಿಯಾಗಿದ್ದರು ಎನ್ನಲಾಗಿದೆ.

ಬಾದಾಮಿ, ವಾಲ್‌ನಟ್, ಅಪ್ರಿಕಾಟ್, ಬೆಲೆ ಏರಿಕೆ

ಒಣ ಹಣ್ಣು ಸಾಗಾಟಕ್ಕೆ ಹೊಡೆತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಹಲ್ಗಾಮ್‌ನಲ್ಲಿ ನಡೆದ ಭಯೋತ್ಪಾದಕ ದಾಳಿಯು ಒಣಗಿದ ಹಣ್ಣುಗಳ (ಡ್ರೈ ಫ್ರೂಟ್ಸ್) ಸಾಗಾಟಕ್ಕೆ ಹೊಡೆತ ನೀಡಿದೆ. ಪರಿಣಾಮ ಕಾಶ್ಮೀರ ಹಾಗೂ ಆ ಮಾರ್ಗವಾಗಿ ಪೂರೈಕೆಯಾಗುವ ಒಣಗಿದ ಹಣ್ಣುಗಳ ಬೆಲೆ ವಿಪರೀತ ಏರಿಕೆಯಾಗಿದೆ.

ಕಾಶ್ಮೀರದ ಬಾದಾಮಿ (ಚಿಕ್ಕ ಬಾದಾಮಿ), ವಾಲ್‌ನಟ್, ಅಪ್ರಿಕಾಟ್, ಶಿಲಾಜಿತ್ (ಗಿಡಮೂಲಿಕೆ), ಜೇನುತುಪ್ಪ ಸೇರಿದಂತೆ ಸರಬರಾಜು ಆಗುವ ಆಹಾರ ಪದಾರ್ಥಗಳ ಪೂರೈಕೆ ಪ್ರಮಾಣ ಬಹಳ ಕಡಿಮೆಯಾಗಿದೆ. ಹಸಿ ಹಣ್ಣುಗಳಾದ ಚೆರ್ರಿ, ಪಾಮ್, ಪಿಯರ್ಸ್‌ಗಳ ಪೂರೈಕೆ ಸಂಪೂರ್ಣ ಸ್ಥಗಿತಗೊಂಡಿದೆ.

ಇದಲ್ಲದೇ ಅಫ್ಗಾನಿಸ್ತಾನದ ಕಂದಹಾರ್, ಕಾಬೂಲ್‌ನಿಂದ ಒಣ ಹಣ್ಣುಗಳು ಅಟ್ಟಾರಿ- ವಾಘಾ ಗಡಿ ಮೂಲಕ ಭಾರತಕ್ಕೆ ಪೂರೈಕೆಯಾಗುತ್ತಿದ್ದವು. ಪಹಲ್ಗಾಮ್ ದಾಳಿ ಬಳಿಕ ಪಹಲ್ಗಾಮ್, ಶ್ರೀನಗರಗಳನ್ನು ಸಂಪರ್ಕಿಸುವ ರಸ್ತೆಗಳನ್ನು, ವಾಘಾ ಗಡಿ ಸಂಪರ್ಕವನ್ನು ಮುಚ್ಚಲಾಗಿದೆ. ಇದೆಲ್ಲ ದರ ಏರಿಕೆಯಾಗಲು ಕಾರಣ ಎಂದು ಶಿವಾಜಿನಗರ ರಸೆಲ್ ಮಾರುಕಟ್ಟೆ ಸಂಘದ ಪ್ರಧಾನ ಕಾರ್ಯದರ್ಶಿ ಹಾಗೂ ಕಂಟೋನ್ಮೆಂಟ್ ಹಣ್ಣು ಮತ್ತು ಒಣ ಹಣ್ಣು ವರ್ತಕರ ಸಂಘದ ಅಧ್ಯಕ್ಷ ಮಹಮ್ಮದ್ ಇದ್ರೀಸ್ ಚೌಧರಿ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

ಕಾಶ್ಮೀರದಿಂದ ಪೂರೈಕೆಯಾಗುವ ವಾಲ್‌ನಟ್ ಎಣ್ಣೆ, ಬಾದಾಮಿ ಎಣ್ಣೆಯನ್ನು ಚಿಕ್ಕ ಮಕ್ಕಳಿಗೆ ಮಾಲೀಶ್ ಮಾಡಲು ಬಳಸಲಾಗುತ್ತದೆ. ಈ ಎಣ್ಣೆ ಕೂಡ ಪೂರೈಕೆಯಾಗುತ್ತಿಲ್ಲ. ಗರ್ಭಿಣಿಯರು ಹೆಚ್ಚಾಗಿ ಬಳಸುವ ಕೇಸರಿ ಪೂರೈಕೆ ಬಹುತೇಕ ಕಡಿಮೆಯಾಗಿದೆ. ತಾರಾ ಹೋಟೆಲ್‌ಗಳಲ್ಲಿಯೇ ಒಣ ಹಣ್ಣುಗಳಿಗೆ ಭಾರಿ ಬೇಡಿಕೆ ಇರುವುದು. ಆದರೆ, ಬೇಡಿಕೆಗೆ ತಕ್ಕಂತೆ ಪೂರೈಕೆ ಇಲ್ಲದೇ ಹೋದಾಗ ಬೆಲೆ ಏರಿಕೆ ಆಗುವುದು ಸಹಜ ಎಂದು ವರ್ತಕರು ತಿಳಿಸಿದ್ದಾರೆ.

ಕಾಶ್ಮೀರದ ಒಣ ಹಣ್ಣುಗಳನ್ನು ಅಲ್ಲಿನ ವರ್ತಕರು ಜಮ್ಮು ಮಾರುಕಟ್ಟೆಗೆ ತರುತ್ತಾರೆ. ಅಲ್ಲಿಂದ ಸಗಟು ವರ್ತಕರು ದೆಹಲಿಗೆ ತರುತ್ತಾರೆ. ದೆಹಲಿಯಿಂದ ದೇಶದ ವಿವಿಧ ನಗರಗಳಿಗೆ ಸರಬರಾಜು ಮಾಡಲಾಗುತ್ತದೆ. ಈಗಾಗಲೇ ಸರಬರಾಜು ಆಗಿರುವ ಒಣ ಹಣ್ಣುಗಳನ್ನು ಮಧ್ಯವರ್ತಿಗಳು ದಾಸ್ತಾನು ಇಟ್ಟುಕೊಂಡಿದ್ದಾರೆ. ಪೂರೈಕೆ ಕಡಿಮೆಯಾಗಿರುವ ಸಂದರ್ಭವನ್ನು ಬಳಸಿಕೊಂಡು ಅವರು ಬೆಲೆ ಏರಿಕೆ ಮಾಡಿದ್ದಾರೆ. ಪರಿಸ್ಥಿತಿ ತಿಳಿಗೊಂಡರೆ ಮುಂದೆ ಬೆಲೆ ಇಳಿಕೆಯಾಗಬಹುದು. ಬಿಗು ವಾತಾವರಣ ಮುಂದುವರಿದರೆ ಒಂದೆರಡು ತಿಂಗಳ ಬಳಿಕ ದರ ಎಲ್ಲಿಗೆ ತಲುಪಲಿದೆ ಎಂದು ಹೇಳುವುದು ಕಷ್ಟ ಎಂದು ವ್ಯಾಪಾರಿಗಳು ಆತಂಕ ವ್ಯಕ್ತಪಡಿಸಿದರು.

ಬೆಲೆ ವಿವರ (ಪ್ರತಿ ಕೆ.ಜಿ ದರ ₹ಗಳಲ್ಲಿ)

ಆಹಾರ ಪದಾರ್ಥ(ಕೆ.ಜಿ.)	2 ವಾರದ ಹಿಂದಿನ ದರ	ಈಗಿನ ದರ
ಕಾಶ್ಮೀರಿ ಬಾದಾಮಿ	1,200	1,600
ಅಂಜೂರ	1,200	1,800
ಅಪ್ರಿಕಾಟ್	480	800
ಜಾಫ್ರನ್ (ಕೇಸರಿ)	2.5 ಲಕ್ಷ	3 ಲಕ್ಷ
ಕಾಶ್ಮೀರಿ ಜೇನುತುಪ್ಪ	600	900
ಕಾಶ್ಮೀರಿ ಗಾರ್ಲಿಕ್ (ಗೋಲ್ಡನ್)	1,800	2,500
ಗ್ರೇ ವಾಲ್‌ನಟ್	1,400	2,000
ವಾಲ್‌ನಟ್	800	1,200

ಅಂಗವಿಕಲರಿಗಾಗಿ ಕೆವೈಸಿ ಪ್ರಕ್ರಿಯೆಯಲ್ಲಿ ಬದಲಾವಣೆಗೆ 'ಸುಪ್ರೀಂ' ಸೂಚನೆ

ನವದೆಹಲಿ (ಪಿಟಿಐ): ಅಂಗವಿಕಲರು ಮತ್ತು ಆ್ಯಸಿಡ್ ದಾಳಿ ಸಂತ್ರಸ್ತರು ಇ–ಕೆವೈಸಿ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು ಅನುವು ಮಾಡಿಕೊಡುವ ಕೆಲ ಬದಲಾವಣೆಗಳನ್ನು ತರಲು ಕೇಂದ್ರ ಸರ್ಕಾರ ಮತ್ತು ಆರ್‌ಬಿಐಗೆ ಸುಪ್ರೀಂ ಕೋರ್ಟ್ ಬುಧವಾರ ಸೂಚನೆ ನೀಡಿದೆ.

ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ ಮತ್ತು ಆರ್. ಮಹದೇವನ್ ಅವರನ್ನು ಒಳಗೊಂಡ ನ್ಯಾಯಪೀಠವು, ಇ–ಕೆವೈಸಿ ಪ್ರಕ್ರಿಯೆಯು ಎಲ್ಲರನ್ನೂ ಒಳಗೊಂಡಿರಬೇಕೆಂದು ಕೇಂದ್ರ ಸರ್ಕಾರ ಮತ್ತು ವಿವಿಧ ಸಾರ್ವಜನಿಕ ಸಂಸ್ಥೆಗಳಿಗೆ 20 ನಿರ್ದೇಶನಗಳನ್ನು ನೀಡಿದೆ.

ಡಿಜಿಟಲ್ ಆ್ಯಕ್ಸೆಸ್ ಲಭ್ಯವಾಗುತ್ತಿರುವ ಬಗ್ಗೆ ಹೊಣೆಗಾರಿಕೆಗಾಗಿ ಪ್ರತಿ ಇಲಾಖೆಗಳಲ್ಲಿ ನೋಡಲ್ ಅಧಿಕಾರಿಯನ್ನು ಪ್ರತಿವಾದಿಗಳು ನೇಮಕ ಮಾಡಬಹುದು ಎಂದೂ ತಿಳಿಸಿದೆ.

ಆರ್‌ಬಿಐಗೆ ಆದೇಶ: ಸಾಂಪ್ರದಾಯಿಕ ವಿಧಾನದ ಹೊರತಾಗಿ ಗ್ರಾಹಕರ 'ಜೀವಂತಿಕೆ'ಯನ್ನು ಪರಿಶೀಲಿಸುವ ಪರ್ಯಾಯ ವಿಧಾನವನ್ನು ಪರಿಚಯಿಸುವಂತೆ ನೂತನ ಮಾರ್ಗಸೂಚಿ ಬಿಡುಗಡೆ ಮಾಡಲು ಆರ್‌ಬಿಐಗೆ ಕೋರ್ಟ್ ಆದೇಶ ನೀಡಿದೆ.

'ಅಂಗವಿಕಲರು ಮತ್ತು ಆ್ಯಸಿಡ್ ದಾಳಿ ಸಂತ್ರಸ್ತರು ಕೆವೈಸಿ ಪ್ರಕ್ರಿಯೆ ಪೂರ್ಣಗೊಳಿಸಲು ಸಾಧ್ಯವಾಗದ ಕಾರಣ ಮಾರ್ಗಸೂಚಿಯಲ್ಲಿ ಬದಲಾವಣೆ ತರುವುದು ಅಗತ್ಯ. ಅವರು ಬ್ಯಾಂಕ್ ಖಾತೆ ತೆರೆಯಲು ಮತ್ತು ಕಲ್ಯಾಣ ಯೋಜನೆಗಳ ಸದುಪಯೋಗ ಪಡೆಯಲು ಅದು ನೆರವಾಗಲಿದೆ' ಎಂದು ಹೇಳಿದೆ.

ಡಿಜಿಟಲ್ ಆ್ಯಕ್ಸೆಸ್ ಪಡೆಯುವ ಹಕ್ಕು ಸಂವಿಧಾನದ 21ನೇ ವಿಧಿಯಡಿಯಲ್ಲಿ ಬರುವ ಬದುಕುವ ಹಕ್ಕಿನ ಅಂತರ್ಗತ ಭಾಗ ಎಂದು ಕೋರ್ಟ್ ಅಭಿಪ್ರಾಯಪಟ್ಟಿದೆ.

ಚೋಕ್ಸಿ ವಿರುದ್ಧ ಜಾಮೀನು ರಹಿತ ವಾರಂಟ್

ಮುಂಬೈ (ಪಿಟಿಐ): ಕೆನರಾ ಬ್ಯಾಂಕ್ ನೇತೃತ್ವದ ಬ್ಯಾಂಕ್‌ಗಳ ಒಕ್ಕೂಟದಿಂದ ಪಡೆದ ₹55 ಕೋಟಿ ಸಾಲವನ್ನು ಹಿಂದಿರುಗಿಸದೆ ವಂಚಿಸಿದ ಪ್ರಕರಣದಲ್ಲಿ ಉದ್ಯಮಿ ಮೆಹುಲ್ ಚೋಕ್ಸಿ ವಿರುದ್ಧ ಇಲ್ಲಿನ ನ್ಯಾಯಾಲಯವೊಂದು ಜಾಮೀನು ರಹಿತ ವಾರಂಟ್ ಹೊರಡಿಸಿದೆ.

ಬಹುಕೋಟಿ ಮೊತ್ತದ ಪಂಜಾಬ್ ನ್ಯಾಷನಲ್ ಬ್ಯಾಂಕ್ ವಂಚನೆ ಪ್ರಕರಣದಲ್ಲಿ ಚೋಕ್ಸಿಯನ್ನು ಏಪ್ರಿಲ್ 12ರಂದು ಬೆಲ್ಜಿಯಂನಲ್ಲಿ ಬಂಧಿಸಲಾಗಿದೆ.

ಬಂಧನ ರಹಿತ ವಾರಂಟ್ ಹೊರಡಿಸಿರುವ ಹೆಚ್ಚುವರಿ ಮುಖ್ಯ ನ್ಯಾಯಿಕ ಮ್ಯಾಜಿಸ್ಟ್ರೇಟ್ ಆರ್.ಬಿ. ಠಾಕೂರ್ ಅವರು ವಿಚಾರಣೆಯನ್ನು ಜೂನ್ 2ಕ್ಕೆ ಮುಂದೂಡಿದ್ದಾರೆ. ಬೆಜೆಲ್ ಜುವೆಲ್ಲರಿ ಎಂಬ ಕಂಪನಿಗೆ ಕೆನರಾ ಬ್ಯಾಂಕ್ ಮತ್ತು ಬ್ಯಾಂಕ್ ಆಫ್ ಮಹಾರಾಷ್ಟ್ರ ಕ್ರಮವಾಗಿ ₹30 ಕೋಟಿ ಹಾಗೂ ₹25 ಕೋಟಿ ಸಾಲವನ್ನು ಕಾರ್ಯಾಚರಣೆ ಬಂಡವಾಳವಾಗಿ ಒದಗಿಸಿದ್ದವು. ಆದರೆ ಕಂಪನಿಯು ಈ ಮೊತ್ತವನ್ನು ಅನ್ಯ ಉದ್ದೇಶಕ್ಕೆ ಬಳಸಿಕೊಂಡಿತು ಎಂದು ಸಿಬಿಐ ಆರೋಪಿಸಿದೆ.

ವೈವಾಹಿಕ ಪ್ರಕರಣವೊಂದರಲ್ಲಿ ಭಿನ್ನ ಆದೇಶದ ಬಗ್ಗೆ ಸುಪ್ರೀಂ ಕೋರ್ಟ್ ಅಭಿಪ್ರಾಯ

'ಹೊಂದಾಣಿಕೆ ಇಲ್ಲದ ತೀರ್ಪು: ವಿಶ್ವಾಸಕ್ಕೆ ಧಕ್ಕೆ'

ನವದೆಹಲಿ (ಪಿಟಿಐ): ಬೇರೆ ಬೇರೆ ನ್ಯಾಯಪೀಠಗಳು ಪರಸ್ಪರ ಹೊಂದಾಣಿಕೆ ಇಲ್ಲದೆ ತೀರ್ಪುಗಳನ್ನು ಪ್ರಕಟಿಸಿದಾಗ ಸಾರ್ವಜನಿಕರು ನ್ಯಾಯಾಲಯಗಳ ಮೇಲೆ ಇರಿಸಿರುವ ವಿಶ್ವಾಸಕ್ಕೆ ಧಕ್ಕೆ ಆಗುತ್ತದೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಬೇರೆ ಬೇರೆ ತೀರ್ಪುಗಳ ನಡುವೆ ಸಾಮಂಜಸ್ಯ ಇದ್ದಾಗ ಅದು ಜವಾಬ್ದಾರಿಯುತ ನ್ಯಾಯಾಂಗದ ಪಾಲಿಗೆ ಹೆಗ್ಗುರುತಾಗಿ ಪರಿಣಮಿಸುತ್ತದೆ ಎಂದು ಅದು ಹೇಳಿದೆ.

ಕರ್ನಾಟಕ ಹೈಕೋರ್ಟ್‌ನ ಎರಡು ಏಕಸದಸ್ಯ ಪೀಠಗಳು ವೈವಾಹಿಕ ಪ್ರಕರಣವೊಂದರಲ್ಲಿ ಭಿನ್ನ ಆದೇಶ ಹೊರಡಿಸಿರುವ ಬಗ್ಗೆ ನ್ಯಾಯಮೂರ್ತಿಗಳಾದ ಪಿ.ಎಸ್. ನರಸಿಂಹ ಮತ್ತು ಜಾಯಮಾಲ್ಯಾ ಬಾಗಚಿ ಅವರು ಇರುವ ವಿಭಾಗೀಯ ಪೀಠವು ವಿಚಾರಣೆ ನಡೆಸುತ್ತಿದೆ.

'ಒಬ್ಬರು ನ್ಯಾಯಮೂರ್ತಿಯು ಸಂಬಂಧಿಗಳ ವಿರುದ್ಧ ಕಾನೂನು ಕ್ರಮವನ್ನು ರದ್ದುಪಡಿಸಲು ನಿರಾಕರಿಸಿದ್ದಾರೆ. ಅರ್ಜಿದಾರರ ಮೇಲೆ ಹಲ್ಲೆ ಆಗಿತ್ತು ಎಂಬುದನ್ನು ಗಾಯಗಳಿಗೆ ಸಂಬಂಧಿಸಿದ ಪ್ರಮಾಣಪತ್ರವು ಹೇಳುತ್ತಿದೆ ಎಂದಿದ್ದಾರೆ. ಆದರೆ ಇನ್ನೊಬ್ಬರು ನ್ಯಾಯಮೂರ್ತಿಯು ಪ್ರತಿವಾದಿ ಪತಿ ವಿರುದ್ಧದ ಕಾನೂನು ಕ್ರಮವನ್ನು ರದ್ದುಪಡಿಸಿದ್ದಾರೆ, ದೂರುದಾರರ ಆರೋಪಗಳಿಗೆ ವೈದ್ಯಕೀಯ ಪ್ರಮಾಣಪತ್ರವು ಪೂರಕವಾಗಿಲ್ಲ ಎಂದು ಹೇಳಿದ್ದಾರೆ' ಎಂದು ಸುಪ್ರೀಂ ಕೋರ್ಟ್‌ನ ಪೀಠವು ಹೇಳಿದೆ.

ಪತಿಯ ವಿರುದ್ಧದ ಕಾನೂನು ಕ್ರಮವನ್ನು ರದ್ದುಪಡಿಸಿ ಎರಡನೆಯ ನ್ಯಾಯಮೂರ್ತಿ ನೀಡಿರುವ ಆದೇಶದ ಬಗ್ಗೆ ಅತೃಪ್ತಿ ವ್ಯಕ್ತಪಡಿಸಿರುವ ನ್ಯಾಯಮೂರ್ತಿ ಬಾಗಚಿ ಅವರು, 'ಎಫ್‌ಐಆರ್‌ನಲ್ಲಿರುವ ಆರೋಪಗಳ ವಿಶ್ವಾಸಾರ್ಹತೆಯ ಬಗ್ಗೆ ವಿಚಾರಣೆ ನಡೆಸಿ ನ್ಯಾಯಮೂರ್ತಿ ತಪ್ಪು ಮಾಡಿದ್ದಾರೆ ಎಂಬುದು ನಮ್ಮ ಅಭಿಪ್ರಾಯ' ಎಂದು ಹೇಳಿದ್ದಾರೆ.

ಕೆಲವು ಸಂಬಂಧಿಕರ ವಿರುದ್ಧದ ಕಾನೂನು ಕ್ರಮವನ್ನು ರದ್ದುಪಡಿಸಲು ನಿರಾಕರಿಸಿ ಮೊದಲು ಒಂದು ಆದೇಶ ಹೊರಡಿಸಲಾಗಿತ್ತಾದರೂ, ಪತಿಯ ವಿರುದ್ಧದ ಕಾನೂನು ಕ್ರಮ ರದ್ದುಪಡಿಸಿದ ಆದೇಶದಲ್ಲಿ ಅದರ ಬಗ್ಗೆ ಉಲ್ಲೇಖ ಇಲ್ಲದಿರುವುದು ಏಕೆ ಎಂಬುದಕ್ಕೆ ವಿವರಣೆ ಸಿಗುತ್ತಿಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

'ಪತಿಯ ವಿರುದ್ಧದ ಕಾನೂನು ಕ್ರಮವನ್ನು ರದ್ದುಪಡಿಸುವ ಸಂದರ್ಭದಲ್ಲಿ ನ್ಯಾಯಮೂರ್ತಿಯು ಮೊದಲಿನ ಆದೇಶವನ್ನು ಪರಾಮರ್ಶಿಸಬೇಕಿತ್ತು, ಭಿನ್ನ ತೀರ್ಮಾನಕ್ಕೆ ಬಂದಿರುವುದಕ್ಕೆ ಕಾರಣ ಗುರುತಿಸಬೇಕಿತ್ತು. ಇದನ್ನು ಮಾಡುವಲ್ಲಿ ವಿಫಲವಾಗಿರುವುದು ನ್ಯಾಯಿಕ ಶಿಸ್ತಿಗೆ ಭಂಗ ತಂದಿದೆ' ಎಂದು ಕೋರ್ಟ್ ವಿವರಿಸಿದೆ.

ಮಧ್ಯಸ್ಥಿಕೆ ತೀರ್ಪು: ಬದಲಾವಣೆಗೆ ಅಧಿಕಾರ ಇದೆ– 'ಸುಪ್ರೀಂ'

ನವದೆಹಲಿ (ಪಿಟಿಐ): ಮಧ್ಯಸ್ಥಿಕೆ ಮತ್ತು ರಾಜೀಸಂಧಾನ ಕಾಯ್ದೆ–1996ರ ಅಡಿಯಲ್ಲಿ ನ್ಯಾಯಾಲಯಗಳು ಮಧ್ಯಸ್ಥಿಕೆ ತೀರ್ಪುಗಳನ್ನು ಬದಲಾಯಿಸಬಹುದು ಎಂದು ಸುಪ್ರೀಂ ಕೋರ್ಟ್ ಬುಧವಾರ ಮಹತ್ವದ ತೀರ್ಪು ಪ್ರಕಟಿಸಿದೆ.

1996ರ ಕಾಯ್ದೆಯ ಅಡಿಯಲ್ಲಿ, ಕೆಲವು ನಿರ್ದಿಷ್ಟ ಸಂದರ್ಭಗಳಲ್ಲಿ, ಮಧ್ಯಸ್ಥಿಕೆ ತೀರ್ಪುಗಳಲ್ಲಿ ನ್ಯಾಯಾಲಯ ಬದಲಾವಣೆ ತರಬಹುದು ಎಂದು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಸಂಜೀವ್ ಖನ್ನಾ ನೇತೃತ್ವದ ಪೀಠವು ಬಹುಮತದ ತೀರ್ಪಿನಲ್ಲಿ ಹೇಳಿದೆ.

ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ, ಸಂಜಯ್ ಕುಮಾರ್, ಆಗಸ್ಟೀನ್ ಜಾರ್ಜ್ ಮಸೀಹ್, ಕೆ.ವಿ. ವಿಶ್ವನಾಥನ್ ಅವರೂ ಈ ಪೀಠದಲ್ಲಿ ಇದ್ದರು. ನ್ಯಾಯಮೂರ್ತಿ ವಿಶ್ವನಾಥನ್ ಅವರು ಮಾತ್ರ ಭಿನ್ನ ತೀರ್ಪು ಬರೆದಿದ್ದು, ಮಧ್ಯಸ್ಥಿಕೆ ತೀರ್ಪುಗಳನ್ನು ನ್ಯಾಯಾಲಯಗಳು ಬದಲಾಯಿಸುವಂತಿಲ್ಲ ಎಂದು ಹೇಳಿದ್ದಾರೆ.

ಸುಪ್ರೀಂ ಕೋರ್ಟ್‌ನ ಈ ತೀರ್ಪು ವಾಣಿಜ್ಯ ವಿಚಾರಗಳಿಗೆ ಸಂಬಂಧಿಸಿದ ವ್ಯಾಜ್ಯಗಳಲ್ಲಿ ದೇಶದ ಹಾಗೂ ಅಂತರರಾಷ್ಟ್ರೀಯ ಮಧ್ಯಸ್ಥಿಕೆ ಕೇಂದ್ರಗಳು ನೀಡಿದ ತೀರ್ಪುಗಳ ಮೇಲೆ ಪರಿಣಾಮ ಬೀರಲಿದೆ.

ತೀರ್ಪು ಪ್ರಕಟಿಸಿದ ಸಿಜೆಐ ಅವರು, ಮಧ್ಯಸ್ಥಿಕೆ ಕೇಂದ್ರಗಳು ನೀಡಿದ ತೀರ್ಪುಗಳಲ್ಲಿ ಬದಲಾವಣೆ ತರುವಾಗ ನ್ಯಾಯಾಲಯಗಳು ಎಚ್ಚರಿಕೆ ವಹಿಸಬೇಕು ಎಂಬ ಕಿವಿಮಾತು ಹೇಳಿದ್ದಾರೆ.

'ಸಂವಿಧಾನದ 142ನೆಯ ವಿಧಿಯು ಸುಪ್ರೀಂ ಕೋರ್ಟ್‌ಗೆ ನೀಡಿರುವ ವಿಶೇಷ ಅಧಿಕಾರವನ್ನು ಬಳಸಿ ಮಧ್ಯಸ್ಥಿಕೆ ಕೇಂದ್ರಗಳ ತೀರ್ಪುಗಳಲ್ಲಿ ಬದಲಾವಣೆ ತರಬಹುದು. ಆದರೆ ಈ ಅಧಿಕಾರವನ್ನು ಸಂವಿಧಾನದ ಚೌಕಟ್ಟಿನ ಒಳಗೆ ಬಹಳ ಎಚ್ಚರಿಕೆಯಿಂದ ಬಳಸಬೇಕು' ಎಂದು ಸಿಜೆಐ ಖನ್ನಾ ಸ್ಪಷ್ಟಪಡಿಸಿದ್ದಾರೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

❦ ಸುಭಾಷಿತ ❦

ಮನುಷ್ಯ ಬಾಳಬೇಕಾಗಿರುವುದು ದ್ವೇಷಕ್ಕಾಗಿ ಅಲ್ಲ, ವಿನಾಶಕ್ಕಾಗಿ ಅಲ್ಲ; ಬದುಕಿಗಾಗಿ ಮತ್ತು ಶಾಂತಿಗಾಗಿ.

–ಎಸ್.ರಾಧಾಕೃಷ್ಣನ್

ಪಠ್ಯಪುಸ್ತಕ ಪರಿಷ್ಕರಣೆ ವಿವಾದ ಎನ್‌ಸಿಇಆರ್‌ಟಿ ಕ್ರಮಕ್ಕೆ ಸ್ಪಷ್ಟತೆ ಬೇಕು

ರಾಷ್ಟ್ರೀಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಮಂಡಳಿ (ಎನ್‌ಸಿಇಆರ್‌ಟಿ) ಏಳನೆಯ ತರಗತಿಯ ಸಮಾಜ ವಿಜ್ಞಾನ ಪಠ್ಯಪುಸ್ತಕವನ್ನು ಪ್ರಸಕ್ತ ಶೈಕ್ಷಣಿಕ ವರ್ಷಕ್ಕೆ ಪರಿಷ್ಕರಿಸಿದೆ. ದೆಹಲಿಯ ಸುಲ್ತಾನರು ಮತ್ತು ಮೊಘಲರ ಕುರಿತ ಭಾಗವನ್ನು ಪಠ್ಯಪುಸ್ತಕದಿಂದ ಕೈಬಿಟ್ಟಿದೆ. ಇವುಗಳ ಬದಲಿಗೆ ಭಾರತದ ಪ್ರಾಚೀನ ರಾಜವಂಶಗಳು, ಮಹಾ ಕುಂಭಮೇಳ, ಯಾತ್ರಾಸ್ಥಳಗಳ ಬಗ್ಗೆ ಮಾಹಿತಿ ಒದಗಿಸಲಾಗಿದೆ. ಇತಿಹಾಸ, ಭೂಗೋಳಶಾಸ್ತ್ರ ಮತ್ತು ಪೌರನೀತಿಗೆ ಪ್ರತ್ಯೇಕ ಪಠ್ಯಪುಸ್ತಕ ಇದ್ದಿದ್ದನ್ನು ಬದಲಿಸಿ, 'ಎಕ್ಸ್‌ಪ್ಲೋರಿಂಗ್ ಸೊಸೈಟಿ– ಇಂಡಿಯಾ ಆ್ಯಂಡ್ ಬಿಯಾಂಡ್' (ಸಮಾಜದ ಅನ್ವೇಷಣೆ– ಭಾರತ ಮತ್ತು ಅದರ ಆಚೆಗೆ) ಎಂಬ ಒಂದೇ ಪಠ್ಯಪುಸ್ತಕವನ್ನು ನೀಡಲಾಗಿದೆ. ಹೊಸ ಪಠ್ಯಪುಸ್ತಕದಲ್ಲಿ ಇತಿಹಾಸದ ಪಾಠಗಳು ಮೂರು ಮತ್ತು ಆರನೆಯ ಶತಮಾನದ ನಡುವಿನ ಗುಪ್ತರ ಕಾಲಕ್ಕೆ ಕೊನೆಗೊಳ್ಳುತ್ತವೆ. ದೆಹಲಿಯ ಸುಲ್ತಾನರು ಮತ್ತು ಮೊಘಲರ ಅವಧಿ ಕುರಿತ ಪಾಠಗಳನ್ನು ಕೈಬಿಡಲಾಗಿದೆ. ಹೊಸ ಪಠ್ಯಪುಸ್ತಕದಲ್ಲಿನ ಅಧ್ಯಾಯಗಳು ಪ್ರಾಚೀನ ಭಾರತ, ಶಾತವಾಹನರು, ಚೋಳರು, ಪಾಂಡ್ಯರು, ಮೌರ್ಯ ಸಾಮ್ರಾಜ್ಯ, ಸಾಮ್ರಾಟ್ ಅಶೋಕನ ಕಾಲದ ರಾಜಕೀಯ ಸ್ಥಿತಿಯ ಬಗ್ಗೆ ಹೆಚ್ಚು ಗಮನ ನೀಡಿವೆ.



ಪಠ್ಯಪುಸ್ತಕದ ಹೂರಣದ ಕುರಿತು ಸ್ಪಷ್ಟತೆ ಇಲ್ಲದಿರುವುದು ಹೆಚ್ಚಿನ ಕಳವಳ ಉಂಟುಮಾಡುವಂತಿದೆ

ಇತಿಹಾಸಕ್ಕೆ ಸಂಬಂಧಿಸಿದ ಹಳೆಯ ಪಠ್ಯಪುಸ್ತಕ 7ನೇ ಶತಮಾನದ ನಂತರದ ವಿವರಗಳನ್ನು ಒಳಗೊಂಡಿತ್ತು. ಅದು ದೆಹಲಿಯ ಸುಲ್ತಾನರು, ಮೊಘಲ್ ಆಡಳಿತಗಾರರು, ಅವರ ಆಡಳಿತ ವ್ಯವಸ್ಥೆ ಒಳಗೊಂಡಂತೆ ಮಧ್ಯಯುಗದ ಬಗ್ಗೆ ವಿವರ ಒಳಗೊಂಡಿತ್ತು. ಆದರೆ ಹೊಸ ಪಠ್ಯಪುಸ್ತಕವು ಭಾರತ ಮತ್ತು ವಿಶ್ವದ ಐದು ಅಂಶಗಳ ಬಗ್ಗೆ ಗಮನ ಹರಿಸಿದೆ. ನಮ್ಮ ಸಾಂಸ್ಕೃತಿಕ ಪರಂಪರೆ ಮತ್ತು ಜ್ಞಾನ ಸಂಪ್ರದಾಯಗಳು, ಆಡಳಿತ ಮತ್ತು ಪ್ರಜಾತಂತ್ರ, ನಮ್ಮ ಸುತ್ತಲಿನ ಆರ್ಥಿಕ ಜೀವನ ಸೇರಿದಂತೆ ಐದು ಅಂಶಗಳ ಬಗ್ಗೆ ಗಮನ ನೀಡಿದೆ. ಧಾರ್ಮಿಕ ಸ್ಥಳಗಳ ಬಗ್ಗೆ 'ನೆಲವು ಪವಿತ್ರವಾಗುವುದು ಹೇಗೆ' ಎಂಬ ಹೆಸರಿನ ಹೊಸ ಪಾಠವೊಂದು ಇದೆ. 66 ಕೋಟಿ ಜನರು ಭಾಗಿಯಾಗಿದ್ದರು ಎಂದು ಹೇಳಲಾಗಿರುವ ಕುಂಭಮೇಳದ ಬಗ್ಗೆಯೂ ವಿವರ ಇದೆ. ಇದು ಪಠ್ಯಪುಸ್ತಕದ ಮೊದಲ ಭಾಗ ಮಾತ್ರ, ಮುಂದಿನ ಭಾಗದಲ್ಲಿ ಹೆಚ್ಚಿನ ಅಧ್ಯಾಯಗಳು ಇರುತ್ತವೆ ಎಂದು ಎನ್‌ಸಿಇಆರ್‌ಟಿ ಅಧಿಕಾರಿಗಳು ಹೇಳಿದ್ದಾರೆ. ಆದರೆ, ಈಗ ಕೈಬಿಟ್ಟಿರುವ ಭಾಗಗಳನ್ನು ಪಠ್ಯಪುಸ್ತಕದ ಎರಡನೆಯ ಭಾಗದಲ್ಲಿ ಅಳವಡಿಸಲಾಗುತ್ತದೆಯೇ ಎಂಬುದನ್ನು ಅವರು ಸ್ಪಷ್ಟವಾಗಿ ಹೇಳಿಲ್ಲ. ಎರಡನೆಯ ಭಾಗವು ಈ ವರ್ಷದಲ್ಲಿ ಮುಂದಿನ ದಿನಗಳಲ್ಲಿ ಹೊರಬರುವ ನಿರೀಕ್ಷೆ ಇದೆ. ಮೊಘಲರ ಕಾಲದ ಪಾಠವನ್ನು ಕೈಬಿಟ್ಟಿಲ್ಲ, ಪುನರಾವರ್ತನೆಗಳನ್ನು ಮಾತ್ರ ಕೈಬಿಡಲಾಗಿದೆ ಎಂದು ಕೇಂದ್ರ ಶಿಕ್ಷಣ ಖಾತೆ ರಾಜ್ಯ ಸಚಿವ ಸುಕಾಂತ ಮಜುಂದಾರ್ ಅವರು ಹೇಳಿದ್ದಾರೆ.

ಪಠ್ಯಪುಸ್ತಕದ ಮೊದಲ ಭಾಗದಲ್ಲಿ ಇತಿಹಾಸಕ್ಕೆ ಸಂಬಂಧಿಸಿದ ಮಹತ್ವದ ಕಾಲಘಟ್ಟವೊಂದನ್ನು ಕೈಬಿಡಲಾಗಿದೆ, ಅದು ಪಠ್ಯಪುಸ್ತಕದ ಎರಡನೆಯ ಭಾಗದಲ್ಲಿ ಸೇರ್ಪಡೆ ಆಗುತ್ತದೆ ಎಂಬುದು ಖಚಿತವಿಲ್ಲ ಎನ್ನುವುದು ವಾಸ್ತವ. ಈಗಿನ ಆಡಳಿತಾರೂಢರು ಪಠ್ಯಪುಸ್ತಕಗಳನ್ನು ಸೈದ್ಧಾಂತಿಕ ಹಾಗೂ ರಾಜಕೀಯ ಕದನಕ್ಕೆ ಬಳಕೆ ಮಾಡಿಕೊಳ್ಳುತ್ತಿದ್ದಾರೆ. ರಾಷ್ಟ್ರೀಯ ಶಿಕ್ಷಣ ನೀತಿಯು ಭಾರತೀಯ ಮೌಲ್ಯಗಳಿಗೆ ಆದ್ಯತೆ ನೀಡುತ್ತದೆ ಎಂಬುದು ಪಠ್ಯಪುಸ್ತಕಗಳಲ್ಲಿ ಕಾಲಕಾಲಕ್ಕೆ ಬದಲಾವಣೆ ತರುವುದಕ್ಕೆ ನೆಪವಾಗಿ ಒದಗಿಬಂದಿದೆ. ಎನ್‌ಸಿಇಆರ್‌ಟಿ ಪಠ್ಯಪುಸ್ತಕಗಳು ಮತ್ತೆ ಮತ್ತೆ ಪರಿಷ್ಕರಣೆ ಕಂಡಿವೆ. ಪುನರಾವರ್ತನೆಯನ್ನು ಇಲ್ಲವಾಗಿಸುವ ನೆಪ ಹೇಳಿ ಪಠ್ಯಗಳನ್ನು ಬದಲಾಯಿಸಲಾಗಿದೆ. ಬಾಬರಿ ಮಸೀದಿ ಧ್ವಂಸ, 1975ರಲ್ಲಿ ಜಾರಿಯಾದ ತುರ್ತು ಪರಿಸ್ಥಿತಿ, ದಲಿತ ಚಳವಳಿಗಳು, ನಕ್ಸಲ್‌ವಾದ, ಕೋಮು ಹಿಂಸಾಚಾರಗಳು ಮತ್ತು 2002ರ ಗುಜರಾತ್ ಗಲಭೆಗೆ ಸಂಬಂಧಿಸಿದ ಉಲ್ಲೇಖಗಳನ್ನು ಪರಿಷ್ಕರಿಸಲಾಗಿದೆ, ಅವುಗಳಿಗೆ ಕತ್ತರಿ ಹಾಕಲಾಗಿದೆ ಅಥವಾ ತೆಗೆದುಹಾಕಲಾಗಿದೆ. ಪಠ್ಯಪುಸ್ತಕದ ಹೂರಣದ ಕುರಿತು ಸ್ಪಷ್ಟತೆ ಇಲ್ಲದಿರುವುದು, ಪಠ್ಯದ ಯಾವ ಭಾಗವನ್ನು ಕೈಬಿಡಬಹುದು ಅಥವಾ ಉಳಿಸಿಕೊಳ್ಳಬಹುದು ಎಂಬುದು ಸ್ಪಷ್ಟವಾಗದೇ ಇರುವುದು, ಯಾವಾಗ ಮತ್ತು ಎಷ್ಟು ಹಂತಗಳಲ್ಲಿ ಆ ಕೆಲಸ ನಡೆಯಬಹುದು ಎಂಬುದು ಗೊತ್ತಾಗದೇ ಇರುವುದು ಪಠ್ಯಪುಸ್ತಕಗಳನ್ನು ಆಗಾಗ ಪರಿಷ್ಕರಿಸುವುದಕ್ಕಿಂತ ಹೆಚ್ಚಿನ ಕಳವಳ ಉಂಟುಮಾಡುವಂತಿವೆ.

ದಿನದ ಟ್ವೀಟ್

ಧರ್ಮದ ಮೂಲ ಅರಿಯೋಣ

ದಯವಿಲ್ಲದ ಧರ್ಮವದೇವುದಯ್ಯಾ? ದಯವೇ ಬೇಕು ಸಕಲ ಪ್ರಾಣಿಗಳೆಲ್ಲರಲ್ಲಿಯೂ, ದಯವೇ ಧರ್ಮದ ಮೂಲವಯ್ಯಾ, ಕೂಡಲಸಂಗಯ್ಯನಂತಲ್ಲದೊಲ್ಲನಯ್ಯಾ! ಹೇಗೆ ಬದುಕಬೇಕು ಅಂತ ಇದಕ್ಕಿಂತ ಸಿಂಪಲ್ ಆಗಿ ಯಾರಾದರೂ ಹೇಳಿದ್ದಾರ? ಇದನ್ನು ಅರ್ಥ ಮಾಡಿಕೊಂಡ ಮೇಲೆ ಬೇರೆ ಧರ್ಮಗ್ರಂಥಗಳ ಅವಶ್ಯಕತೆ ಇದೆಯಾ? ಬಸವ ಜಯಂತಿಯ ಶುಭಾಶಯಗಳು.

ಸುಶ್ರಾವ್ಯ ಮೂರ್ತಿ

ಕಿಡಿನುಡಿ

ಪಾಕಿಸ್ತಾನ ಮತ್ತು ಬಾಂಗ್ಲಾದೇಶದ ಲಕ್ಷಾಂತರ ಮಂದಿ ಅಕ್ರಮವಾಗಿ ನೆಲಸಿರುವುದು ಭಾರಿ ಭದ್ರತಾ ಲೋಪವನ್ನು ಬಹಿರಂಗಪಡಿಸಿದೆ. ನಮ್ಮ ಭದ್ರತಾ ಸಂಸ್ಥೆಗಳು ಏನು ಮಾಡುತ್ತಿವೆ? ಈ ಬೆಳವಣಿಗೆಯ ಬಗ್ಗೆ ದಶಕಗಳ ಕಾಲ ಪರಿಶೀಲನೆಯನ್ನೇ ನಡೆಸಿಲ್ಲ ಎಂದಾದರೆ, ನಿಜಕ್ಕೂ ನಾವು ಎಷ್ಟರಮಟ್ಟಿಗೆ ಸುರಕ್ಷಿತವಾಗಿ ಇದ್ದೇವೆ? ಸ್ಥಳೀಯ ಪೊಲೀಸರನ್ನು ಇದಕ್ಕೆ ಹೊಣೆ ಮಾಡಬೇಕಾಗಿದೆ.

ರಾಮ್ ಕುಮಾರ್, ಎಂಜಿನಿಯರ್

25 ವರ್ಷಗಳ ಹಿಂದೆ

ಸೋಮವಾರ, 1-5-2000

• ಸಿಇಟಿಗೆ ಬಂದ ಹೊರರಾಜ್ಯದ ದಂಡು

ಬೆಂಗಳೂರು, ಏ. 30– ರಾಜ್ಯದಾದ್ಯಂತ ಮೇ 2 ಮತ್ತು 3ರಂದು ನಡೆಯಲಿರುವ ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ) ರಾಷ್ಟ್ರದೆಲ್ಲೆಡೆ ತೀವ್ರ ಕುತೂಹಲ ಕೆರಳಿಸಿದೆ. ಈ ಬಾರಿಯ ಸಿಇಟಿ ಪರೀಕ್ಷೆಗೆ ಹೊರರಾಜ್ಯಗಳಿಂದ 40 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಹಾಜರಾಗಲಿದ್ದು, ಇಂದು ಸಾವಿರಾರು ವಿದ್ಯಾರ್ಥಿಗಳ ಮೊದಲ ದೊಡ್ಡ ತಂಡ ವಿಶೇಷ ರೈಲಿನಲ್ಲಿ ದೆಹಲಿಯಿಂದ ನಗರಕ್ಕೆ ಆಗಮಿಸಿತು.

ಹೊರರಾಜ್ಯದ ವಿದ್ಯಾರ್ಥಿಗಳಿಗಾಗಿಯೇ ಬಿಡಲಾದ (ದೆಹಲಿ) ನಿಜಾಮುದ್ದೀನ್–ಬೆಂಗಳೂರು ವಿಶೇಷ ರೈಲಿನಲ್ಲಿ ವಿದ್ಯಾರ್ಥಿಗಳು ಇಲ್ಲಿಗೆ ಆಗಮಿಸಿದಾಗ, ಅವರ ಮುಖದಲ್ಲಿ ಬಳಲಿಕೆಯ ಜತೆಗೆ ಪರೀಕ್ಷಾ ಕುತೂಹಲವೂ ಕಾಣಿಸುತ್ತಿತ್ತು.

ಅತ್ಯಧಿಕ (111) ಪರೀಕ್ಷಾ ಕೇಂದ್ರಗಳು ಬೆಂಗಳೂರಿನಲ್ಲಿ ಇರುವುದರಿಂದ ಇಲ್ಲಿ ಈ ಬಾರಿ ಸಹಜವಾಗಿ ಹೊರರಾಜ್ಯಗಳ ಹೆಚ್ಚಿನ ಸಂಖ್ಯೆಯ ವಿದ್ಯಾರ್ಥಿಗಳು (31,353) ಪರೀಕ್ಷೆ ಬರೆಯಲಿದ್ದಾರೆ.

• ಗಾಯಕ ಅತ್ರಿ ಸೇರಿ 6 ಜನ ತುಂಗೆ ಪಾಲು

ಶೃಂಗೇರಿ, ಏ. 30– ಇಲ್ಲಿಗೆ ಸಮೀಪದ ಉಳಿವೆಬೈಲು ಬಳಿಯ ತುಂಗಾ ನದಿಯ ನೀರಿನ ಸುಳಿಗೆ ಸಿಲುಕಿ ಇಂದು ಸಂಗೀತಗಾರ ಜಿ.ವಿ.ಅತ್ರಿ ಸೇರಿದಂತೆ ಕುಟುಂಬದ ಆರು ಜನ ಮೃತಪಟ್ಟರು.

ಮಧ್ಯಾಹ್ನ ಸುಮಾರು 12.30ರಲ್ಲಿ ಈ ದುರಂತ ಸಂಭವಿಸಿದೆ. ಉಳಿವೆಬೈಲು ಯುವಕ ಸಂಘವೊಂದರ ಬೆಳ್ಳಿಹಬ್ಬದ ಸಮಾರಂಭದಲ್ಲಿ ನಿನ್ನೆ ಅತ್ರಿಯವರು ಸಂಗೀತ ಕಾರ್ಯಕ್ರಮ ನೀಡಿದ್ದರು.

50 ವರ್ಷಗಳ ಹಿಂದೆ

ಗುರುವಾರ, 1-5-1975

• ರೈತರ ವಿರುದ್ಧ 'ಮೀಸಾ' ಬಳಕೆಗೆ ಅರಸು ವಿರೋಧ

ಬೆಂಗಳೂರು, ಏ. 30– ರೈತರ ವಿರುದ್ಧ 'ಮೀಸಾ' ಕಾನೂನನ್ನು ಬಳಸುವುದನ್ನು ತಾವು ಒಪ್ಪುವುದಿಲ್ಲವಾದರೂ ಸಿಂದಗಿಯ ರೈತರೊಬ್ಬರನ್ನು 'ಮೀಸಾ' ಅನ್ವಯ ಬಂಧಿಸಿರುವ ಸನ್ನಿವೇಶ ಯಾವುದೆಂದು ತಿಳಿಯದೇ ಆ ಬಗ್ಗೆ ಏನನ್ನೂ ಹೇಳಬಯಸುವುದಿಲ್ಲ ಎಂದು ಮುಖ್ಯಮಂತ್ರಿ ದೇವರಾಜ ಅರಸು ಅವರು ಇಂದು ವಿಧಾನಪರಿಷತ್ತಿನಲ್ಲಿ ಹೇಳಿದರು.

ಸಿಂದಗಿಯಲ್ಲಿ ರೈತರೊಬ್ಬರನ್ನು 'ಮೀಸಾ' ಅನ್ವಯ ಬಂಧಿಸಿರುವುದರ ಕಡೆಗೆ ಜಿ.ಪಿ.ಒಡೆಯ ರಾಜ್ ಮತ್ತು ಎಸ್.ಆರ್. ಬೊಮ್ಮಾಯಿ ಅವರು ಸರ್ಕಾರದ ಗಮನ ಸೆಳೆದಾಗ, ಈ ಬಗ್ಗೆ ಸರ್ಕಾರ ಸಂಬಂಧಪಟ್ಟ ಜಿಲ್ಲಾಧಿಕಾರಿಗೆ ಯಾವುದೇ ನಿರ್ದಿಷ್ಟ ಆಜ್ಞೆ ನೀಡಿಲ್ಲ. ಅವರು ಸ್ಥಳೀಯವಾಗಿ ಯಾವ ಸನ್ನಿವೇಶದಲ್ಲಿ 'ಮೀಸಾ' ಕಾನೂನನ್ನು ಬಳಸುವ ನಿರ್ಧಾರ ಕೈಗೊಂಡರೆಂದು ಗೊತ್ತಾಗಿಲ್ಲ. ಅಗತ್ಯಬಿದ್ದರೆ ಬಂಧನ ಆಜ್ಞೆಯನ್ನು ಪುನರ್ ಪರಿಶೀಲಿಸಲಾಗುವುದು ಎಂದರು.

• ಸಂಕಟ ತಪ್ಪಿಲ್ಲ

ಬೆಂಗಳೂರು, ಏ. 30– ಇಂದು ಮೇ 1, ಕಾರ್ಮಿಕರ ದಿನಾಚರಣೆ. 'ಮೇ ದಿನ'ದ ಉದಯವಾದದ್ದು ಜಗತ್ತಿನ ಅತ್ಯಂತ ಪ್ರಬಲ ಬಂಡವಾಳಶಾಹಿ ರಾಷ್ಟ್ರವಾದ ಅಮೆರಿಕದಲ್ಲಿ. ಸಮಾಜವಾದಿ ರಾಷ್ಟ್ರಗಳಲ್ಲಿ ಈ ದಿನಕ್ಕೆ ಹಬ್ಬದಷ್ಟು ಮಹತ್ವ. ಸಂಘಟಿತ ಕಾರ್ಮಿಕರ ಚಳವಳಿಯ ಇತಿಹಾಸದಲ್ಲಿ ಮಹತ್ವದ ದಿನ. ಆದರೆ ಸಂಘಟಿತರಾಗದವರಿಗೆ...?

ಸಂಘಟಿತರಾಗದವರಿಗೆ ಇದೂ ನಿನ್ನೆ ಮೊನ್ನೆಯಂತೆ ಒಂದು ಸಾಧಾರಣವಾದ ದಿನ. ಮೇಲೂ ಅಲ್ಲ, ಕೀಳೂ ಅಲ್ಲ. ದೇಶದಲ್ಲಿ ಗಾಡಿ ಎಳೆಯುವವರು, ಸೌದೆ ಒಡೆಯುವವರು, ಜಲ್ಲಿಕಲ್ಲು ಹೊರುವ ಕೆಲಸ ಮಾಡುವ ಇಂತಹವರು ಲಕ್ಷಾಂತರ ಸಂಖ್ಯೆಯಲ್ಲಿ ಇದ್ದಾರೆ.

ಜಾತಿ ಜನಗಣತಿ: ಬದಲಾಗಬೇಕಿದೆ ಚರ್ಚೆಯ ದಿಕ್ಕು

ಹೊಸ ಪ್ರವರ್ಗ ಸೃಷ್ಟಿಗೆ ಆಧಾರ ಏನು?

ವಿಶ್ಲೇಷಣೆ

ಚೇತನ್ ಅಹಿಂಸಾ

ವ್ಯಕ್ತಿಯೊಬ್ಬನ ಹುಟ್ಟಿನ ಕಾರಣದಿಂದ ಆತನ ಜಾತಿಯ ಆಧಾರದಲ್ಲೇ ವ್ಯಕ್ತಿಯ ಘನತೆ ಹಾಗೂ ಆತನಿಗೆ ಸಂಪನ್ಮೂಲ, ಅವಕಾಶಗಳ ಲಭ್ಯತೆಯನ್ನು ನಿರ್ಧರಿಸುವ ಸಾಮಾಜಿಕ ಶ್ರೇಣೀಕರಣ ವ್ಯವಸ್ಥೆಯು ಭಾರತದಲ್ಲಿ ಈಗಲೂ ಬಲವಾಗಿ ಬೇರೂರಿದೆ. ಕರ್ನಾಟಕದಲ್ಲಿ ನಡೆಸಿರುವ 'ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ'ಯ ವರದಿಯು ಸಾಮಾಜಿಕ ಶ್ರೇಣೀಕರಣದಿಂದ ಸೃಷ್ಟಿಯಾಗಿರುವ ಅಸಮಾನತೆಯನ್ನು ಮೂಲೋತ್ಪಾಟನೆ ಮಾಡಿ, ಸರ್ವರಿಗೂ ಸಾಮಾಜಿಕ ನ್ಯಾಯ ದೊರಕಿಸಿಕೊಡುವ ದೃಷ್ಟಿಯಿಂದ ತೀರಾ ಅಗತ್ಯವಾದುದು.

'ಜಾತಿ ಜನಗಣತಿ' ಎಂದೇ ಹೆಸರುವಾಸಿಯಾಗಿರುವ ಈ ಸಮೀಕ್ಷೆಯ ಮಿತಿಗಳ ಕುರಿತು ಚರ್ಚೆಯಾಗುವುದಕ್ಕಿಂತಲೂ ಹೆಚ್ಚಾಗಿ ರಾಜ್ಯದಲ್ಲಿ ಪ್ರಬಲ ಸಮುದಾಯಗಳು ಎಂದೇ ಗುರುತಿಸಿಕೊಂಡಿರುವ ಲಿಂಗಾಯತರು ಹಾಗೂ ಒಕ್ಕಲಿಗರ ಸಂಖ್ಯಾಬಲಕ್ಕೆ ಸಂಬಂಧಿಸಿದ ದತ್ತಾಂಶ ಮತ್ತು ಗಣತಿದಾರರು ಎಲ್ಲರ ಮನೆಗಳಿಗೂ ಬಂದಿದ್ದರೆ? ಇಲ್ಲವೆ? ಎಂಬುದರ ಕುರಿತೇ ಹೆಚ್ಚು ಚರ್ಚೆಯಾಗುತ್ತಿದೆ. ಸಾಮಾಜಿಕ ನ್ಯಾಯ ಹಂಚಿಕೆಯ ಸೂತ್ರ ರೂಪಿಸುವಲ್ಲಿ ತೊಡಕು ಸೃಷ್ಟಿಸಬಹುದಾದ ಗಹನವಾದ ವಿಷಯಗಳ ಕುರಿತು ಚರ್ಚೆಯನ್ನು ಕೇಂದ್ರೀಕರಿಸುವ ಬದಲಾಗಿ ಒಂದೆರಡು ಸಮುದಾಯಗಳ ಸಂಖ್ಯೆಗೆ ಸಂಬಂಧಿಸಿದಂತಹ ಹೆಚ್ಚು ಪ್ರಾಧಾನ್ಯವಲ್ಲದ ವಿಷಯದ ಸುತ್ತಲೇ ಚರ್ಚೆ ಸಾಗಿರುವುದು ದುರದೃಷ್ಟಕರ.

ಈ ಸಮೀಕ್ಷೆಯು ಹಿಂದುಳಿದ ವರ್ಗಗಳ ಪಟ್ಟಿಯಲ್ಲಿದ್ದ 195 ಜಾತಿ ಮತ್ತು ಉಪಜಾತಿಗಳ ಮಧ್ಯೆ 'ಪ್ರವರ್ಗ-1ಬಿ'ಯನ್ನು ಯಾವ ಆಧಾರದ ಮೇಲೆ ಸೃಷ್ಟಿಸಿದೆ? ಈ ಪ್ರವರ್ಗದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಸಮೀಕ್ಷೆ ನಡೆದಾಗ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರಾಗಿದ್ದ ಎಚ್. ಕಾಂತರಾಜ ಅವರು ಪ್ರತಿನಿಧಿಸುವ ಕುರುಬ ಜಾತಿಯನ್ನು ಸೇರಿಸಿರುವುದರಿಂದ ಈ ಪ್ರಶ್ನೆ ಮಹತ್ವ ಪಡೆದುಕೊಳ್ಳುತ್ತದೆ. ಮೀಸಲಾತಿಯಲ್ಲಿ ಈ ಪ್ರವರ್ಗಕ್ಕೆ ಹೆಚ್ಚಿನ ಪಾಲು ದೊರಕಿಸುವ ಪ್ರಸ್ತಾವವನ್ನು ಕೂಡ ಆಯೋಗ ಶಿಫಾರಸು ಮಾಡಿರುವುದು ಅದರ ಮಹತ್ವವನ್ನು ಇನ್ನಷ್ಟು ಹೆಚ್ಚಿಸುತ್ತದೆ.

2025ರ ಏ. 11ರಂದು 'ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ'ಯ ವರದಿಯನ್ನು ಅಧಿಕೃತವಾಗಿ ರಾಜ್ಯ ಸಚಿವ ಸಂಪುಟ ಸಭೆಯಲ್ಲಿ ಮಂಡಿಸುವವರೆಗೂ ಹಿಂದುಳಿದ ವರ್ಗಗಳಲ್ಲಿ 'ಪ್ರವರ್ಗ 1ಬಿ' ಎಂಬ ಉಪ ವರ್ಗೀಕರಣವೇ ಅಸ್ತಿತ್ವದಲ್ಲಿ ಇರಲಿಲ್ಲ. ನ್ಯಾಯಮೂರ್ತಿ ಓ. ಚಿನ್ನಪ್ಪ ರೆಡ್ಡಿ ಆಯೋಗ 1990ರಲ್ಲಿ ಸಲ್ಲಿಸಿದ್ದ ವರದಿಯ ಆಧಾರದಲ್ಲಿ 1994ರಲ್ಲಿ ರಾಜ್ಯದಲ್ಲಿ ಹಿಂದುಳಿದ ವರ್ಗಗಳನ್ನು ಪ್ರವರ್ಗಗಳ ಆಧಾರದಲ್ಲಿ ವರ್ಗೀಕರಣ ಮಾಡಲಾಗಿತ್ತು. ಆಗ ಪ್ರವರ್ಗ 1, 2ಎ, 2ಬಿ, 3ಎ ಮತ್ತು 3ಬಿ ಸೃಜಿಸಲಾಗಿತ್ತು. ಸಾಮಾಜಿಕ ಅಸ್ಪೃಶ್ಯತೆಯ ಹೊರತಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಗುಣಲಕ್ಷಣಗಳನ್ನು ಹೊಂದಿರುವ ಅತ್ಯಂತ ಹಿಂದುಳಿದ ಜಾತಿಗಳನ್ನು ಪ್ರವರ್ಗ-1ರ ಪಟ್ಟಿಯಲ್ಲಿ ಇರಿಸಲಾಗಿತ್ತು. ಅತಿ ಹಿಂದುಳಿದ ಜಾತಿಗಳನ್ನು ಪ್ರವರ್ಗ 2ಎ ಪಟ್ಟಿಯಲ್ಲಿ ಇರಿಸಿದ್ದರೆ, ಮುಸ್ಲಿಮರು, ಒಕ್ಕಲಿಗರು ಮತ್ತು ಲಿಂಗಾಯತರನ್ನು ಅನುಕ್ರಮವಾಗಿ 2ಬಿ, 3ಎ ಮತ್ತು 3ಬಿ ಪ್ರವರ್ಗಗಳಿಗೆ ಸೇರಿಸಲಾಗಿತ್ತು. ವೈಯಕ್ತಿಕ ನೆಲೆಯ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಹಿಂದುಳಿದಿರುವಿಕೆ ಅಥವಾ ಅಭಿವೃದ್ಧಿ ಹೊಂದಿರುವುದರ ಮಾನದಂಡಗಳ ಆಧಾರದಲ್ಲಿ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿರುವ ಜಾತಿಗಳ ಮರುವರ್ಗೀಕರಣ ಅಗತ್ಯವಾಗಿತ್ತು. ಅದು ವಸ್ತುನಿಷ್ಠವಾಗಿ ಮತ್ತು ವೈಜ್ಞಾನಿಕವಾಗಿ ನಡೆಯಬೇಕಿತ್ತು. ಆದರೆ ನನ್ನ ಪ್ರಕಾರ, ಇಲ್ಲಿ ಆ ರೀತಿ ನಡೆದಿಲ್ಲ.

ಈಗ ಪ್ರವರ್ಗ 1ಬಿ ವಿಚಾರಕ್ಕೆ ಬರೋಣ. ವರದಿಯಲ್ಲಿ 80 ಜಾತಿಗಳು ಮತ್ತು ಅವುಗಳ ಉಪಜಾತಿಗಳನ್ನು ಈ ಪಟ್ಟಿಯಲ್ಲಿ ಸೇರಿಸಲಾಗಿದೆ. ಇವೆಲ್ಲವೂ ಹಿಂದೆ ಪ್ರವರ್ಗ 1ರಲ್ಲಿ (ಹಾಲಕ್ಕಿ ಒಕ್ಕಲಿಗ, ದೇವದಾಸಿ, ಹಂದಿಗೊಲ್ಲ...) ಅಥವಾ ಪ್ರವರ್ಗ 2ಎ (ಕುರುಬ, ಮಡಿವಾಳ, ಕುಂಬಾರ...) ಪಟ್ಟಿಯಲ್ಲಿದ್ದವು. ಕುಲಶಾಸ್ತ್ರೀಯ ಅಧ್ಯಯನದ ಮೂಲಕ ಮುಂದುವರಿದಿರುವಿಕೆ, ಹಿಂದುಳಿದಿರುವಿಕೆ ಗುರುತಿಸಿ ಅಥವಾ ಈ ಎರಡನ್ನೂ ಆಧರಿಸುವುದು ಸೇರಿದಂತೆ ಯಾವ ಮಾನದಂಡ ಆಧರಿಸಿ ಇವುಗಳನ್ನು ಹೊಸ ಗುಂಪಿನಲ್ಲಿ ಸೇರಿಸಲಾಗಿದೆ? ದ್ವಿತೀಯ ಮೂಲದ ಮಾಹಿತಿಯಾದ ಉದ್ಯೋಗದಲ್ಲಿನ ಪ್ರಾತಿನಿಧ್ಯ ಮರೆಮಾಚಿ ಪ್ರವರ್ಗ 1ಬಿ ಪಟ್ಟಿಗೆ ಕೆಲವು ಜಾತಿಗಳನ್ನು ಸೇರಿಸಿದಂತಿದೆ.

ಪರಿಶಿಷ್ಟ ಪಂಗಡಗಳ ಎಲ್ಲ ಗುಣಲಕ್ಷಣಗಳನ್ನು ಹೊಂದಿದ್ದು, ಆ ಪಟ್ಟಿಗೆ ಸೇರಲು ಅರ್ಹತೆ ಹೊಂದಿರುವ ಹಾಲಕ್ಕಿ ಒಕ್ಕಲಿಗರು, ಐತಿಹಾಸಿಕವಾಗಿ ಶೋಷಣೆಗೆ ಒಳಗಾಗಿರುವ ದೇವದಾಸಿಯರು, ಎಲ್ಲ ಮಾನದಂಡಗಳ ದೃಷ್ಟಿಯಿಂದಲೂ ಹಿಂದುಳಿದಿರುವ ಹಂದಿಗೊಲ್ಲ ಸಮುದಾಯಗಳ ಜನರು ಕುರುಬರಂತಹ ಜನಸಂಖ್ಯಾ ಬಾಹುಳ್ಯವಿರುವ, ಮುಖ್ಯವಾಹಿನಿಯಲ್ಲಿದ್ದು, ಪ್ರಭಾವಿಯಾಗಿರುವ ಸಮುದಾಯಗಳ ಜನರೊಂದಿಗೆ ಸ್ಪರ್ಧೆ ಮಾಡಲು ಸಾಧ್ಯವೇ? ಅತಿಸಣ್ಣ ಸಮುದಾಯಗಳಿಗೆ ಸಾಮಾಜಿಕ ನ್ಯಾಯ ಒದಗಿಸುವ ವಿಚಾರದಲ್ಲಿ, ಅತ್ಯಂತ ಚಿಕ್ಕ ಸಮುದಾಯಗಳು ಮತ್ತು ಅಲೆಮಾರಿಗಳ ಜೊತೆ ಕುರುಬ ಸಮುದಾಯವನ್ನು ಸೇರಿಸಿರುವುದು ಪ್ರಬಲ ಸಮುದಾಯಗಳಾದ ಲಿಂಗಾಯತರು ಮತ್ತು ಒಕ್ಕಲಿಗರನ್ನು ಪ್ರತ್ಯೇಕ ಪ್ರವರ್ಗಗಳಲ್ಲಿ ಇರಿಸಿರುವುದಕ್ಕಿಂತಲೂ ದೊಡ್ಡ ಅಡ್ಡಿಯಾಗಬಲ್ಲದು. ಸಮೀಕ್ಷೆಯ ವರದಿ ಪ್ರಕಾರ, 73,97,313 ಜನಸಂಖ್ಯೆ ಹೊಂದಿರುವ ಪ್ರವರ್ಗ 1ಬಿಗೆ ಶೇಕಡ 12ರಷ್ಟು ಮೀಸಲಾತಿಯನ್ನು ಶಿಫಾರಸು ಮಾಡಲಾಗಿದೆ. 77,78,209 ಜನಸಂಖ್ಯೆ ಇರುವ ಪ್ರವರ್ಗ 2ಎಗೆ ಶೇ 10ರಷ್ಟು ಮೀಸಲಾತಿಯನ್ನು ಶಿಫಾರಸು ಮಾಡಲಾಗಿದೆ. 4 ಲಕ್ಷದಷ್ಟು ಕಡಿಮೆ ಜನಸಂಖ್ಯೆ ಇದ್ದಾಗ್ಯೂ ಪ್ರವರ್ಗ 2ಎಗಿಂತ ಪ್ರವರ್ಗ 1ಬಿಗೆ ಶೇ 2ರಷ್ಟು ಹೆಚ್ಚಿನ ಮೀಸಲಾತಿಯನ್ನು ಯಾವ ಆಧಾರದಲ್ಲಿ ಶಿಫಾರಸು ಮಾಡಲಾಗಿದೆ? ಮೀಸಲಾತಿ ನಿಗದಿಗೆ ಜನಸಂಖ್ಯೆಯೇ ಮಾನದಂಡ ಆಗಬೇಕು. ಆದರೆ, ಇಲ್ಲಿ ಅದಾಗಿಲ್ಲ ಎಂಬುದನ್ನು ಪ್ರವರ್ಗ 1ಬಿ ಮೀಸಲಾತಿ ಹಂಚಿಕೆಯ ಶಿಫಾರಸು ತೋರಿಸುತ್ತದೆ. ಇನ್ನು ಪ್ರವರ್ಗ 1ಬಿ ವಿಷಯದಲ್ಲಿ ಹಿಂದುಳಿದಿರುವಿಕೆಯ ಮಾನದಂಡವು ನಿಗೂಢವಾಗಿ ಅಡಗಿರಬಹುದೇ? ಹಾಗಿದ್ದಲ್ಲಿ, ಯಾವ ಕುಲಶಾಸ್ತ್ರೀಯ ಆಧಾರದಲ್ಲಿ ಈ ಸಮುದಾಯಗಳ ಹಿಂದುಳಿದಿರುವಿಕೆಯನ್ನು ನಿರ್ಧರಿಸಲಾಯಿತು? ಪ್ರವರ್ಗ 2ಬಿಗೆ ಈಗ ಇರುವ ಶೇ 15ರಷ್ಟು ಮೀಸಲಾತಿಯಲ್ಲಿ ಶೇ 5ರಷ್ಟನ್ನು ಪ್ರವರ್ಗ 1ಬಿಗೆ ವರ್ಗಾಯಿಸುವುದರ ಜೊತೆಯಲ್ಲೇ ಇನ್ನೂ ಶೇ 7ರಷ್ಟನ್ನು ಒದಗಿಸಿ, ಒಟ್ಟು ಶೇ 12ರಷ್ಟು ಮೀಸಲಾತಿಗೆ ಶಿಫಾರಸು ಮಾಡಲಾಗಿದೆ. ಇದರ ಹಿಂದೆ ಯಾವ ತಾರ್ಕಿಕ ಸಮರ್ಥನೆ ಇದೆ ಎಂಬುದು ತಿಳಿಯಬೇಕು.

ಈಗ ಮತ್ತೊಂದು ಪ್ರಶ್ನೆ ಉದ್ಭವಿಸುತ್ತದೆ: ಚಿನ್ನಪ್ಪ ರೆಡ್ಡಿ ಆಯೋಗದ ವರದಿ ಬಂದ ನಂತರದ 35 ವರ್ಷಗಳಲ್ಲಿ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಮಾನದಂಡಗಳ ನೆಲೆಯಲ್ಲಿ ಯಾವ ಜಾತಿಯೂ ಮುಂದುವರಿದಿಲ್ಲವೇ? ತಮ್ಮ ಜನಸಂಖ್ಯೆಗಿಂತಲೂ ಹೆಚ್ಚು ಪ್ರಾತಿನಿಧ್ಯ ಪಡೆದ ಯಾವ ಜಾತಿಯೂ ಇಲ್ಲವೇ? ಅಂತಹ ಜಾತಿಗಳನ್ನು ಇತರ ಹಿಂದುಳಿದ ವರ್ಗಗಳ ಪಟ್ಟಿಯಿಂದ ಹೊರಗಿಡಬೇಕಲ್ಲವೇ? ಸಮೀಕ್ಷೆಯ ದತ್ತಾಂಶಗಳ ಅಧ್ಯಯನ ವರದಿಯ ಅಂತಿಮ ಶಿಫಾರಸುಗಳನ್ನು ಸಲ್ಲಿಸುವಾಗ ಕಾಂತರಾಜ ಆಯೋಗವು ನಡೆಸಿದ್ದ ಸಮೀಕ್ಷೆಯಲ್ಲಿ ಸಂಗ್ರಹಿಸಿದ್ದ ಪ್ರಾಥಮಿಕ ಮಾಹಿತಿಗಳನ್ನಷ್ಟೇ ಆಧಾರವಾಗಿ ಬಳಸಲಾಗಿದೆ. ದ್ವಿತೀಯ ಮೂಲದ ಮಾಹಿತಿಗಳನ್ನು ಆಧಾರವಾಗಿ ಬಳಸಿಕೊಳ್ಳಲು ಆಯೋಗವು ವಿಫಲವಾಗಿದೆ. ಪ್ರಾಥಮಿಕ ಮಾಹಿತಿಗಳನ್ನು ವಿಶ್ಲೇಷಿಸುವಾಗ ದ್ವಿತೀಯ ಮೂಲದ ವರದಿಗಳನ್ನು ಶಿಕ್ಷಣ, ಉದ್ಯೋಗದಲ್ಲಿ ಇತರ ಹಿಂದುಳಿದ ವರ್ಗಗಳ ಪ್ರಾತಿನಿಧ್ಯ ಖಾತರಿಪಡಿಸಿಕೊಳ್ಳಲು ಬಳಸಿಕೊಳ್ಳಬೇಕಿತ್ತು. ಕುರುಬ ಸಮುದಾಯ ಅತ್ಯಂತ ಹಿಂದುಳಿದಿರುವ ಕಾರಣಕ್ಕಾಗಿ ತನ್ನದೇ ಆದ ಪ್ರತ್ಯೇಕ ಪ್ರವರ್ಗ ಮತ್ತು ಹೆಚ್ಚಿನ ಮೀಸಲಾತಿಗೆ ಹಕ್ಕು ಮಂಡಿಸಿದ ಮಾಹಿತಿಯು ಯಾವ ದ್ವಿತೀಯ ಮೂಲಗಳಲ್ಲಿ ಲಭ್ಯವಿತ್ತು?

ಅಂತಿಮವಾಗಿ, ಲಿಂಗಾಯತರು ಮತ್ತು ಒಕ್ಕಲಿಗರ ಸಂಖ್ಯೆಗೆ ಸಂಬಂಧಿಸಿದ ವಿಷಯವೇ ಕರ್ನಾಟಕದ 'ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ' ಕುರಿತ ಚರ್ಚೆಯ ಕೇಂದ್ರಬಿಂದು ಆಗಬಾರದು. ಕುರುಬ ಸಮುದಾಯಕ್ಕೆ ಆಧಾರರಹಿತವಾಗಿ ಅತ್ಯಂತ ಹಿಂದುಳಿದಿರುವಿಕೆಯ ಪಟ್ಟವನ್ನು ನೀಡಿ, ಹೆಚ್ಚಿನ ಮೀಸಲಾತಿಯ ಶಿಫಾರಸಿನೊಂದಿಗೆ ಅವೈಜ್ಞಾನಿಕವಾಗಿ ಪ್ರವರ್ಗ 1ಬಿ ರಚನೆಗೆ ಶಿಫಾರಸು ಮಾಡಿರುವುದರ ಬಗ್ಗೆಯೇ ಹೆಚ್ಚು ಚರ್ಚೆ ಆಗಬೇಕಿದೆ. ಸಾರ್ವಜನಿಕ ವೇದಿಕೆಗಳಲ್ಲಿ ಸಾಮಾಜಿಕ ನ್ಯಾಯದ ಕುರಿತು ಗಟ್ಟಿ ಧ್ವನಿಯಲ್ಲಿ ಮಾತನಾಡುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈ ಕುರಿತ ಗೊಂದಲಕ್ಕೆ ತೆರೆ ಎಳೆಯುವ ಪ್ರಯತ್ನ ಮಾಡಬೇಕು.

ಲೇಖಕ: ಚಿತ್ರನಟ ಹಾಗೂ ಸಾಮಾಜಿಕ ಹೋರಾಟಗಾರ

ಚುರುಮುರಿ

ಕ್ರಿಕೆಟ್ ಯುದ್ಧ!

• ಗುರು ಪಿ.ಎಸ್.

'ಏನ್ರೀ ಇದು, ಹೆಲ್ಮೆಟ್ ಹಾಕ್ಕೊಂಡು, ಕಾಲಿಗೆಲ್ಲ ಪ್ಯಾಡ್ ಕಟ್ಕೊಂಡು ನಿಂತಿದ್ದೀರಿ, ಯುದ್ಧಕ್ಕೆ ಏನಾದರೂ ಹೋಗ್ತಿದ್ದೀರಾ?' ವ್ಯಂಗ್ಯವಾಗಿ ಕೇಳಿದಳು ಹೆಂಡತಿ.

'ಕ್ರಿಕೆಟ್ ಪ್ರ್ಯಾಕ್ಟಿಸ್ ಮಾಡೋಕೆ ಹೋಗ್ತಿದ್ದೀನಿ' ಬ್ಯಾಟ್ ಕೈಗೆತ್ತಿಕೊಳ್ಳುತ್ತಾ ಹೇಳಿದೆ.

'ಮನೆ, ಆಫೀಸ್ ಕೆಲಸ ಎಲ್ಲ ಬಿಟ್ಟು ಕ್ರಿಕೆಟ್ ಆಡಿ ಏನ್ಮಾಡ್ತೀರಿ?'

'ಕೆಲಸ ಮಾಡಿದರೆ ಬರೋ ಆದಾಯ ಅಷ್ಟರಲ್ಲೇ ಇದೆ. ಕ್ರಿಕೆಟ್ ಆಡಿದರೆ ಕೋಟಿಗಟ್ಟಲೆ ಸಂಪಾದಿಸಬಹುದು. ನೋಡು, ಆ ವೈಭವ್ ಸೂರ್ಯವಂಶಿ ಅನ್ನೋ ಹುಡುಗ 14 ವರ್ಷಕ್ಕೇ ಕೋಟಿಗಟ್ಟಲೆ ಸಂಪಾದನೆ ಮಾಡ್ತಿದ್ದಾನೆ'.

'ರೀ, ನಿಮಗೆ ಅವನ ಮೂರರಷ್ಟು ವಯಸ್ಸಾಗಿದೆ, ಈ ವಯಸ್ಸಲ್ಲಿ ಕ್ರಿಕೆಟ್ ಆಡೋಕೆ ಹೋಗ್ತಿದ್ದೀನಿ ಅಂತಿದ್ದೀರಲ್ಲ'.

'ನಮ್ ಮಗನಿಗೆ ಇನ್ನೂ ಮೂರೂವರೆ ವರ್ಷ. ಅವನನ್ನ ಫೀಲ್ಡ್‌ಗೆ ಕಳಿಸೋಕೆ ಆಗಲ್ಲ, ಅದಕ್ಕೆ ನಾನೇ ಈಗ ಪ್ರ್ಯಾಕ್ಟಿಸ್ ಮಾಡ್ತೀನಿ. ಅವನಿಗೆ ಆರು ವರ್ಷ ಆಗ್ತಿದ್ದಂಗೆ ನಾನೇ ಅವನ ಪರ್ಸನಲ್ ಕೋಚ್ ಆಗಿ ಅವನನ್ನ ದೊಡ್ಡ ಕ್ರಿಕೆಟರ್ ಮಾಡ್ತೀನಿ'.

'ವೈಭವ್‌ಗೆ ಕ್ರಿಕೆಟ್ ಟ್ರೇನಿಂಗ್ ಕೊಡಿಸೋಕೆ ಅವರಪ್ಪ ಹೊಲ ಮಾರಿದ್ರಂತೆ, ಗೊತ್ತಾ ನಿಮಗೆ?'

'ಆಯ್ತು, ಹೊಲದ ಜೊತೆಗೆ ನನ್ನ ಮನೆಯನ್ನೂ ಮಾರ್ತೀನಿ, ನನ್ನ ಮಗ ಕ್ರಿಕೆಟರ್ ಆಗಬೇಕು'.

'ಮಗನನ್ನ ಡಾಕ್ಟರ್ ಮಾಡ್ತೀನಿ ಅಂತಿದ್ದವರು ಇದೇನ್ರೀ ಇದು, ಈಗ ಕ್ರಿಕೆಟರ್ ಮಾಡ್ತೀನಿ ಅಂತಿದ್ದೀರ. ಹೊಲ-ಮನೆ ಮಾರಿದ ತಕ್ಷಣ ಎಲ್ಲರೂ ಆ ಹುಡುಗನಂತೆ ಆಡೋಕೆ ಆಗಲ್ಲ ರೀ. ಅವರ ಅಪ್ಪನ ಎರಡರಷ್ಟು ಶ್ರಮ ಮತ್ತು ಪ್ರತಿಭೆ ಆ ಹುಡುಗನಲ್ಲಿ ಇದ್ದಿದ್ದಕ್ಕೇ ಇಂಟರ್‌ನ್ಯಾಷನಲ್ ಬೌಲರ್‌ಗಳೆದುರು ಆ ರೀತಿ ಆಡೋಕೆ ಸಾಧ್ಯ ಆಗಿರೋದು' ತಲೆಗೆ ಮೊಟಕಿ ಹೇಳಿದಳು ಹೆಂಡತಿ.

'ಯುದ್ಧಕ್ಕಾದರೂ ಹೋಗಲಾ?'

'ಆ ರೀತಿ ದೇಶಸೇವೆ ಮಾಡೋ ಅವಕಾಶ ಬಂದರೆ ಖಂಡಿತ ನಾನೇ ಕಳಿಸಿಕೊಡ್ತೀನಿ. ಈಗ ಟಿ.ವಿಯಲ್ಲಿ ಕ್ರಿಕೆಟ್ ನೋಡುವಂತ್ರಿ ಒಳಗೆ ಬನ್ನಿ ಸಾಕು' ಎಂದಳು ಹೆಂಡತಿ. ತೆಪ್ಪಗೆ ಒಳಗೆ ಹೋದೆ.

ಸಂಗತ

ಪ್ರಥಮ ಭಾಷೆ: ಕನ್ನಡ ಬೇಡವೇಕೆ?

ಅಂಕ ಗಳಿಸಬೇಕೆಂಬ ಏಕೈಕ ಕಾರಣದಿಂದ, ಪ್ರಥಮ ಭಾಷೆಯಾಗಿ ಕನ್ನಡವನ್ನು ಬಿಟ್ಟು ಹಿಂದಿ ಅಥವಾ ಸಂಸ್ಕೃತ ಭಾಷೆಗೆ ಮೊರೆ ಹೋಗುವುದು ಸರಿಯಲ್ಲ

• ಜನಾರ್ದನ ಚ.ಶ್ರೀ.

ನನ್ನ ಸ್ನೇಹಿತರೊಬ್ಬರಿಗೆ ಇತ್ತೀಚೆಗೆ ಮೈಸೂರಿನ ಒಂದು ಪಿಯುಸಿ ಕಾಲೇಜಿನಲ್ಲಿ ಪೂರ್ಣಾವಧಿ ಉಪನ್ಯಾಸಕರಾಗಿ ಉದ್ಯೋಗ ದೊರಕಿತು. ಹಲವು ವರ್ಷಗಳಿಂದ ಪ್ರೌಢಶಾಲೆ ಮತ್ತು ಪಿಯುಸಿ ಕಾಲೇಜುಗಳಲ್ಲಿ ಅರೆಕಾಲಿಕ ಹಿಂದಿ ಬೋಧಕರಾಗಿದ್ದ ಅವರಿಗೆ ಪೂರ್ಣಾವಧಿ ಹಿಂದಿ ಉಪನ್ಯಾಸಕರಾಗಿ ಉದ್ಯೋಗ ದೊರಕಿದ್ದು ನೆಮ್ಮದಿ, ಸಂತಸ ತಂದಿತ್ತು.

ಅದೋ ಅತಿಹೆಚ್ಚು ಕನ್ನಡ ಭಾಷಿಕರೇ ಓದುವ ಕಾಲೇಜು. ಹಾಗಾಗಿ, ನನಗೆ ಅಲ್ಲಿ ಅವರಿಗೆ ಹಿಂದಿ ಉಪನ್ಯಾಸಕರಾಗಿ ಕೆಲಸ ದೊರಕಿದ ಬಗ್ಗೆ ಕುತೂಹಲದಿಂದ ವಿಚಾರಿಸಿದಾಗ ತಿಳಿದದ್ದಿಷ್ಟು. ಅಲ್ಲಿ ಎರಡೂ ವರ್ಷದ ಪಿಯುಸಿಯಲ್ಲಿ ಸುಮಾರು 2,000 ವಿದ್ಯಾರ್ಥಿಗಳು ಕಲಿಯುತ್ತಿದ್ದಾರೆ. ಸುಮಾರು ಶೇ 65ರಷ್ಟು ವಿದ್ಯಾರ್ಥಿಗಳು ಮೊದಲ ಭಾಷೆಯಾಗಿ ಸಂಸ್ಕೃತ ಅಥವಾ ಹಿಂದಿ ತೆಗೆದುಕೊಂಡಿದ್ದಾರೆ. ಕನ್ನಡದ ಮಕ್ಕಳು ಭಾಷೆಗಳನ್ನು ಕಲಿಯಲು ಇಷ್ಟು ಉತ್ಸುಕರಾಗಿ ರುವುದರ ಬಗ್ಗೆ ನನಗೆ ಮತ್ತೂ ಕುತೂಹಲವಾಯಿತು. 'ಇಲ್ಲ ಸಾರ್, ಅವರು ಭಾಷೆ ಕಲಿಯುವ ಆನಂದಕ್ಕಾಗಿ, ಭಾಷೆಯ ಸೌಂದರ್ಯವನ್ನು ಆಸ್ವಾದಿಸುವುದಕ್ಕಾಗಿ ಆಯ್ಕೆ ಮಾಡಿಕೊಂಡದ್ದಲ್ಲ, ಕನ್ನಡ ತಗೊಂಡ್ರೆ ಅಂಕ ಗಳಿಸೋದಕ್ಕೆ ಪರಿಶ್ರಮ ಹಾಕಬೇಕು. ಆದರೆ ಈ ಭಾಷೆಗಳ ಪರೀಕ್ಷೆಗಳು ತುಂಬಾ ಸುಲಭವಾಗಿ ಇರುತ್ತವೆ. ಕೋರ್ ವಿಷಯಗಳಿಗೆ ಹೆಚ್ಚಿನ ಸಮಯ ಕೊಡಬಹುದು. ಹಾಗಾಗಿ, ಇವ್ರೆಲ್ಲ ಕನ್ನಡದವರೇ ಆದರೂ ಅಂಕಗಳಿಗೋಸ್ಕರ ಸಂಸ್ಕೃತ, ಹಿಂದಿ ತಗೋತಾರೆ' ಎಂದರು.

ಅಂದಾಜು ಶೇ 65ರಿಂದ ಶೇ 70ರಷ್ಟು ಕನ್ನಡಿಗರು ಅಂಕಗಳಿಗಾಗಿ ಮಾತ್ರವೇ ಬೇರೆ ಭಾಷೆಯನ್ನು ಆಯ್ಕೆ ಮಾಡಿಕೊಳ್ಳುತ್ತಾರೆ ಎನ್ನುವುದು ವಿಷಯದ ಗಂಭೀರತೆಯನ್ನು ತಿಳಿಸುತ್ತದೆ. ಒಂದೆಡೆ, ಕಲಿಕಾ ಮಾಧ್ಯಮವಾಗಿ ಕನ್ನಡವನ್ನು ಆಯ್ದುಕೊಳ್ಳುವವರ ಸಂಖ್ಯೆಯನ್ನು ವ್ಯವಸ್ಥೆಯೇ ಕುಸಿಯುವಂತೆ ಮಾಡುತ್ತಿದೆ. ಮತ್ತೊಂದೆಡೆ, ಭಾಷೆಯಾಗಿ ಕನ್ನಡವನ್ನು ಓದುವವರ ಸಂಖ್ಯೆಯೂ ಕಡಿಮೆಯಾಗುತ್ತಿದೆ ಎನ್ನುವುದು ನಿಜವಾಗಿ ಗಮನಿಸಬೇಕಾದ ಅಂಶ. ಇದರ ಮೂಲ ಕಾರಣ ನಮ್ಮಲ್ಲಿನ ಶಿಕ್ಷಣ ನೀತಿ ಮತ್ತು ಅದರ ಅನುಷ್ಠಾನದಲ್ಲಿನ ಅಪಸವ್ಯಗಳು.

ಪರೀಕ್ಷೆ, ಅಂಕಗಳು, ಮುಂದಿನ ಓದಿಗೆ ದಾಖಲಾತಿ– ಇವುಗಳ ಸುತ್ತಲೇ ಗಿರಕಿ ಹೊಡೆಯುತ್ತಿರುವ ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ಪೋಷಕರು ಅಥವಾ ವಿದ್ಯಾರ್ಥಿಗಳು ಸಂಸ್ಕೃತ, ಹಿಂದಿಯನ್ನು ಮೊದಲ ಅಥವಾ ಎರಡನೆಯ ಭಾಷೆಯಾಗಿ ತೆಗೆದುಕೊಳ್ಳಲು ನಿರ್ಧರಿಸುವುದರಲ್ಲಿ ಯಾವುದೇ ಆಶ್ಚರ್ಯವೂ ಇಲ್ಲ.

ಕನ್ನಡ ಮೊದಲ ಭಾಷೆಯಾದಾಗ ಯಾವ ಮಟ್ಟದಲ್ಲಿ ಪರಿಣತಿ ಇದ್ದರೆ ಮಾತ್ರ ಅಂಕಗಳು ದೊರೆಯುತ್ತವೆಯೋ ಅದೇ ಮಟ್ಟದ ಪರಿಣತಿಯನ್ನು ಹಿಂದಿ, ಸಂಸ್ಕೃತದಂತಹ ಮೊದಲ ಭಾಷೆಗೂ ಅನ್ವಯಿಸಬೇಕು. ಇದನ್ನೇ ಡಿಎಸ್‌ಇಆರ್‌ಟಿ ಕಲಿಕಾ ಮಾನದಂಡಗಳೂ ಹೇಳುತ್ತವೆ. ಆದರೆ ಸಂಸ್ಕೃತ, ಹಿಂದಿಯಂತಹ ಭಾಷೆಗಳ ಪರೀಕ್ಷೆಗಳಲ್ಲಿ ಉತ್ತರಿಸಲು ಸುಲಭ ಮಾರ್ಗಗಳಿರುತ್ತವೆ, ಮೌಲ್ಯಮಾಪನವೂ ಸುಲಭವಾಗಿರುತ್ತದೆ, ಕನ್ನಡದಲ್ಲಿ ಅಷ್ಟು ಸುಲಭವಾಗಿ ಅಂಕ ಕೊಡುವುದಿಲ್ಲ ಎನ್ನುವುದು 50ಕ್ಕೂ ಹೆಚ್ಚು ವರ್ಷಗಳಿಂದ ಪ್ರಚಲಿತದಲ್ಲಿರುವ ಅಭಿಪ್ರಾಯ. ಸಂಸ್ಕೃತದಲ್ಲಿ 125ಕ್ಕೆ 125 ಅಂಕ ಬಂದರೆ ಎಷ್ಟು ಹೆಮ್ಮೆ ಪಡುತ್ತಿದ್ದರೋ ಕನ್ನಡದಲ್ಲಿ 120 ಅಂಕ ಬಂದರೆ ಅಷ್ಟೇ ಹೆಮ್ಮೆಪಡುತ್ತಿದ್ದರು. ರ್‍ಯಾಂಕ್ ನೀಡುತ್ತಿದ್ದ ಕಾಲಘಟ್ಟದಲ್ಲಂತೂ ಶಾಲೆಗಳಿಗೆ ಈ 5 ಅಂಕಗಳೇ ಎಷ್ಟೋ ರ್‍ಯಾಂಕುಗಳನ್ನು ಕಸಿದುಕೊಂಡುಬಿಡುತ್ತಿದ್ದವು.

ಮುಖ್ಯೋಪಾಧ್ಯಾಯರೇ ರ್‍ಯಾಂಕಿಗಾಗಿ ನನ್ನ ಸ್ನೇಹಿತರಿಗೆ 10ನೇ ತರಗತಿಯಲ್ಲಿ ಸಂಸ್ಕೃತವನ್ನು ಮೊದಲ ಭಾಷೆಯಾಗಿ ಬದಲಾಯಿಸಿದ ಸ್ಪಷ್ಟ ನಿದರ್ಶನ ಇದೆ. ಇದೆಲ್ಲವೂ ಕನ್ನಡ ಕಷ್ಟ ಎಂದು ನಂಬಿಸಿದವರು, ಬಿಂಬಿಸಿದವರಿಂದ ಆದ ಬೆಳವಣಿಗೆಗಳಲ್ಲವೇ? ಆಗಿನಿಂದಲೂ ಎಲ್ಲ ಪ್ರಥಮ ಭಾಷೆಗಳ ಪರೀಕ್ಷೆ ಮತ್ತು ಮೌಲ್ಯಮಾಪನದ ಮಟ್ಟ ಒಂದೇ ರೀತಿ ಇರಬೇಕೆಂದು ಕನ್ನಡ ಶಿಕ್ಷಕರೇ ಒತ್ತಡ ಹೇರಬೇಕಿತ್ತಲ್ಲವೇ? ಹೀಗೆ ಕನ್ನಡವನ್ನು ಬಿಟ್ಟು ಬೇರೆ ಭಾಷೆಗಳಿಗೆ ವಲಸೆ ಹೋಗುವ ಕನ್ನಡಿಗರಲ್ಲಿ ಹೆಚ್ಚಿನವರು ಕನ್ನಡ ಪುಸ್ತಕಗಳ ಓದನ್ನು ಬಿಟ್ಟುಬಿಡುತ್ತಾರೆ. ಹಾಗೆಂದು ಅವರೇನೂ ಸಂಸ್ಕೃತದ್ದೋ ಹಿಂದಿಯದ್ದೋ ಸಾಹಿತ್ಯವನ್ನು, ಗ್ರಂಥಗಳನ್ನು ಓದುತ್ತಾರೆಂದೇನೂ ಅಲ್ಲ. ಅವರಿಗೆ ಅಂಕ ಗಳಿಸುವ ದಾರಿಯಾದದ್ದು ಮುಂದಿನ ಓದಿಗೆ ತೊಡಗಿಸಿಕೊಳ್ಳಲೇನೂ ಉತ್ತೇಜನ ನೀಡುವುದಿಲ್ಲ.

ಎಲ್ಲ ರೀತಿಯಿಂದಲೂ ಇದು ಶಿಕ್ಷಣಕ್ಕೆ, ಕಲಿಕೆಗೆ ಅಪಚಾರವೇ ಆಗುತ್ತದೆ. ಒಂದೋ ಕನ್ನಡವು ಎಲ್ಲರಿಗೂ ಅಂಕ ಗಳಿಸುವ ಸುಲಭ ಮಾರ್ಗವಾಗಬೇಕು ಇಲ್ಲವೇ ಇತರ ಭಾಷೆಗಳಲ್ಲೂ ಪರೀಕ್ಷೆ, ಮೌಲ್ಯಮಾಪನದ ಮಟ್ಟ ಕನ್ನಡದಲ್ಲಿ ಇರುವಷ್ಟೇ ಮಟ್ಟಕ್ಕಿರಬೇಕು. ಇದೆಲ್ಲಕ್ಕಿಂತ ಹೆಚ್ಚಾಗಿ ಹಳಗನ್ನಡವನ್ನು ಕಷ್ಟ ಎಂದು ಬಿಂಬಿಸುವವರಲ್ಲಿ ಹೆಚ್ಚಿನವರು ಕನ್ನಡ ಶಿಕ್ಷಕರೇ ಆಗಿರುತ್ತಾರೆ. ಬಹುಶಃ ತಮ್ಮದೇ ಭಾಷೆಯನ್ನು ಕಷ್ಟ ಎಂದು ಹೇಳುವವರು ಕನ್ನಡಿಗರು ಮಾತ್ರ ಇರಬೇಕು. ಸೂಕ್ತ ರೀತಿಯಲ್ಲಿ ಮಕ್ಕಳನ್ನು ಹಳಗನ್ನಡ ಸಾಹಿತ್ಯದಲ್ಲಿ ತೊಡಗಿಸಿದರೆ, ನಿಜದ ಕನ್ನಡದ ಪದಗಳಿಗೆ ಅವರನ್ನು ಪರಿಚಯಿಸಿದರೆ, ತಮ್ಮದೇ ಭಾಷೆಯ ಸೊಗಸು ಮತ್ತು ಸೊಗಡನ್ನು ಆಳವಾಗಿ ಅನುಭವಿಸಲು ಎಲ್ಲರಿಗೂ ಸಾಧ್ಯವಾಗುತ್ತದೆ.

ಸಮಾನ ಪಾತಳಿಯಲ್ಲಿಯೇ ಪರೀಕ್ಷೆ, ಮೌಲ್ಯಮಾಪನಕ್ಕೆ ಕನ್ನಡ ಶಿಕ್ಷಕರು ಒತ್ತಾಯಿಸುವುದು ತಮ್ಮ ಕೆಲಸಗಳನ್ನು ಉಳಿಸಿಕೊಳ್ಳುವುದಕ್ಕೂ ಅವರಿಗೆ ಸಹಾಯ ಮಾಡಲಿದೆ ಮತ್ತು ಅಸಮಾನ ಸ್ಪರ್ಧೆಯಿಂದ ಕನ್ನಡ ವಿದ್ಯಾರ್ಥಿಗಳನ್ನು ಉಳಿಸಲಿದೆ.

ವಾಚಕರ ವಾಣಿ

ಕ್ರಿಕೆಟಿಗನಿಗೆ ಬೊಕ್ಕಸದ ಹಣ ಕೊಡುವುದೇಕೆ?

ಬಿಹಾರದ ಹದಿಹರೆಯದ ಕ್ರಿಕೆಟ್ ಆಟಗಾರ ವೈಭವ್ ಸೂರ್ಯವಂಶಿಯ ಐಪಿಎಲ್ ಶತಕವನ್ನು ಮೆಚ್ಚಿ ಅಲ್ಲಿನ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ಆತನಿಗೆ ₹ 10 ಲಕ್ಷ ಬಹುಮಾನ ಘೋಷಿಸಿರುವುದಾಗಿ ವರದಿಯಾಗಿದೆ (ಪ್ರ.ವಾ., ಏ. 30). ಯಾವ ರಾಜ್ಯವೇ ಆಗಿರಲಿ, ತೆರಿಗೆದಾರರ ಹಣವನ್ನು ಈ ರೀತಿ ಪೋಲು ಮಾಡುವುದು ಸಾಧುವೇ? ಐಪಿಎಲ್ ತಂಡ ಯಾವುದೇ ರಾಜ್ಯ ಅಥವಾ ದೇಶವನ್ನು ಪ್ರತಿನಿಧಿಸುವುದಿಲ್ಲ. ಇದರಲ್ಲಿ ವಿದೇಶಿಯರೂ ಇರುತ್ತಾರೆ. ದುಡ್ಡಿರುವವರು ಫ್ರಾಂಚೈಸಿಗಳ ನೇತೃತ್ವ ವಹಿಸಿಕೊಂಡು ಆಟಗಾರರನ್ನು ಕೋಟಿಗಳ ಲೆಕ್ಕದಲ್ಲಿ ಹರಾಜಿನಲ್ಲಿ ಖರೀದಿಸುತ್ತಾರೆ. ಉತ್ತಮ ಸಾಧನೆ ತೋರಿದರೆ ಉತ್ಪನ್ನಗಳ ಜಾಹೀರಾತುದಾರರು ಲಕ್ಷಾಂತರ ರೂಪಾಯಿ ಕೊಟ್ಟು ಅವರೊಂದಿಗೆ ಕರಾರು ಮಾಡಿಕೊಳ್ಳುತ್ತಾರೆ. ಅಪರಿಮಿತ ಹಣ ಸಂಪಾದಿಸುವ ಅಗಾಧ ಅವಕಾಶಗಳು ಈ ಆಟಗಾರರಿಗೆ ಇರುತ್ತವೆ. ಹೀಗಿರುವಾಗ, ಇಂತಹವರಿಗೆ ಸರ್ಕಾರದಿಂದ ಹಣ ಕೊಡುವುದು ಖಜಾನೆಯ ದುರುಪಯೋಗವೇ ಸರಿ.

ಗೋಸಾಡ ಕೃಷ್ಣ ಭಟ್, ಬೆಂಗಳೂರು

ಜಾತಿ ಜನಗಣತಿ: ಗೊಂದಲ ತರವಲ್ಲ

ಜಾತಿ ಜನಗಣತಿ ವರದಿಯಲ್ಲಿನ ಸೋರಿಕೆಯಾಗಿರುವ ಅಂಶಗಳನ್ನೇ ಪತ್ರಿಕೆಗಳಲ್ಲಿ ನಾವು ಓದುತ್ತಿದ್ದೇವೆ. ವರದಿಯನ್ನು ಬಹಿರಂಗಪಡಿಸುವ, ಜಾರಿಗೊಳಿಸುವ ದಿನಾಂಕವನ್ನು ಸರ್ಕಾರ ಮುಂದೂಡುತ್ತಲೇ ಇದೆ. ರಾಜಕೀಯ ಕಾರಣಗಳಿಂದಾಗಿ ವರದಿಯನ್ನು ಬಿಡುಗಡೆ ಮಾಡಿ ಜಾರಿಗೊಳಿಸುವ ಬಗ್ಗೆಯೇ ಅನುಮಾನಗಳು ದಟ್ಟವಾಗುತ್ತಿವೆ. ಈ ನಡುವೆ, ಇದಕ್ಕೆ ಕಾರಣರಾದ ಪ್ರಬಲ ಜಾತಿಯವರನ್ನು ಬೈಯುವ ಮತ್ತು ಮುಖ್ಯಮಂತ್ರಿಯವರ ಬಗ್ಗೆ ಅನುಕಂಪ ವ್ಯಕ್ತಪಡಿಸುವ ವರದಿಗಳನ್ನು ಸಹ ನೋಡುತ್ತಿದ್ದೇವೆ. ಮುಖ್ಯಮಂತ್ರಿಯವರೇ, ಜನ ನಿಮಗೆ ಅಧಿಕಾರ ಕೊಟ್ಟಿದ್ದಾರೆ. ಎಂಥದ್ದೇ ಸಂದರ್ಭ ಎದುರಾದರೂ ವರದಿಯಲ್ಲಿನ ಶಿಫಾರಸುಗಳನ್ನು ಜಾರಿಗೊಳಿಸಿಯೇತೀರುವ ತೀರ್ಮಾನ ತೆಗೆದುಕೊಳ್ಳಿ. ಇಲ್ಲವಾದಲ್ಲಿ ಅನ್ಯರನ್ನು ಟೀಕಿಸಿ ಪ್ರಯೋಜನವಿಲ್ಲ.

ಗುರು ಜಗಳೂರು, ಹರಿಹರ

ಸಂವಿಧಾನದ ಆಶಯಕ್ಕೆ ವಿರುದ್ಧವಾದ ನಡೆ

'ಸಂವಿಧಾನ ರಕ್ಷಿಸಿ ದೇಶ ಉಳಿಸಿ' ಎಂದು ಜನರಿಗೆ ಕರೆ ನೀಡುವ ಮುಖ್ಯಮಂತ್ರಿ ಸಿದ್ದರಾಮಯ್ಯ, ಮೊನ್ನೆ ಬೆಳಗಾವಿಯಲ್ಲಿ ಬಿಜೆಪಿ ಕಾರ್ಯಕರ್ತೆಯರು ಪ್ರತಿಭಟನೆ ನಡೆಸಲು ಮುಂದಾದಾಗ ಕೋಪಾವೇಶ ಪ್ರದರ್ಶಿಸಿದ್ದು ದುರದೃಷ್ಟಕರ. ಈ ಮೂಲಕ, ಪ್ರತಿಭಟಿಸುವ ಅವರ ಹಕ್ಕನ್ನು ನಿರಾಕರಿಸುವುದು ಅದೇ ಸಂವಿಧಾನದ ಆಶಯಗಳಿಗೆ ವಿರುದ್ಧವಾದ ನಡೆ ಎಂಬುದನ್ನು ಅವರು ಅರಿಯದಿದ್ದುದು ಅಚ್ಚರಿದಾಯಕ. ಈ ಸಂದರ್ಭದಲ್ಲಿ ಪೊಲೀಸ್ ಅಧಿಕಾರಿಯೊಬ್ಬರ ಜೊತೆ ಮುಖ್ಯಮಂತ್ರಿ ನಡೆದುಕೊಂಡ ರೀತಿಯಂತೂ ಪ್ರಜಾಪ್ರಭುತ್ವಕ್ಕೆ ವ್ಯತಿರಿಕ್ತವಾದ ಪಾಳೆಗಾರಿಕೆಯ ಶೈಲಿಯನ್ನು ನೆನಪಿಸುವಂತೆ ಇತ್ತು. ಸಂವಿಧಾನವನ್ನು ಉಳಿಸುವ ಇಂಗಿತ ನಿಜವಾಗಿಯೂ ಅವರಿಗೆ ಇದ್ದರೆ ಇಂತಹ ಗತ್ತುಗಾರಿಕೆಯನ್ನು ಅವರು ಮೊದಲು ಬಿಡಬೇಕು.

ಸುನೀಲ ನಾಯಕ, ಬೆಂಗಳೂರು

ಬೀದಿನಾಯಿಗಳ ಸ್ವಾಸ್ಥ್ಯದ ಹೊಣೆ ಹೊರಲಿ

ಬೀದಿನಾಯಿಗಳಿಗೆ ಅನ್ನ ಹಾಕುವವರು ಅವುಗಳಿಗೆ ಜಂತುಹುಳುವಿನ ಔಷಧಿ ಕೊಡಿಸುವ, ಲಸಿಕೆ ಹಾಕಿಸುವ ಹೊಣೆಯನ್ನೂ ಹೊರಬೇಕು ಎಂಬ ಡಾ. ಮುರಳೀಧರ ಕಿರಣಕೆರೆ ಅವರ ಸಲಹೆ (ಸಂಗತ, ಏ. 29) ಬೀದಿನಾಯಿಗಳನ್ನು ಪೋಷಿಸುವ ಹಲವರಿಗೆ ಖಂಡಿತ ಜವಾಬ್ದಾರಿಯುತ ತಿಳಿವಳಿಕೆ ನೀಡುವಂತಿದೆ. ಕೆಲವರು ಮನೆಯಲ್ಲಿ ಅಳಿದುಳಿದ ಆಹಾರವನ್ನು ತ್ಯಾಜ್ಯವೆಂದು ಕಸದ ಡಬ್ಬಿಗೆ ಹಾಕುವ ಬದಲು ಬೀದಿನಾಯಿಗೆ ತಿನ್ನಲು ಹಾಕಿ ಕೈ ತೊಳೆದುಕೊಳ್ಳುತ್ತಾರೆ. ಆದರೆ ನಾಯಿಗಳು ಪೂರ್ಣವಾಗಿ ತಿನ್ನದೇ ಉಳಿಸಿದ ಅಂತಹ ಆಹಾರ ಪದಾರ್ಥದ ಮೇಲೆ ನೊಣಗಳು ಕುಳಿತುಕೊಂಡು ಸುತ್ತಲಿನ ಮನೆಗಳವರಿಗೆ ರೋಗರುಜಿನ ಹರಡುತ್ತವೆ. ಹೀಗೆ ಜನ ಅಳಿದುಳಿದ ಆಹಾರವನ್ನು ಬೀದಿನಾಯಿಗಳಿಗೆ ಹಾಕುವ ಬದಲು ಹಸಿಕಸದ ಜೊತೆಯಲ್ಲಿ ಸಾಗಿಸುವುದು ಆರೋಗ್ಯದ ದೃಷ್ಟಿಯಿಂದ ಒಳ್ಳೆಯದು. ಇಲ್ಲವಾದರೆ ಅಂತಹವರು ಬೀದಿನಾಯಿಗಳ ಸ್ವಾಸ್ಥ್ಯದ ಹೊಣೆಯನ್ನೂ ಹೊರಬೇಕು.

ಅನುರಾಧ ತಾಪ್ಸೆ, ದಾವಣಗೆರೆ

ಭ್ರಷ್ಟಾಚಾರದ ಬೇರು ಬಲು ಗಟ್ಟಿ

'ಗ್ರಾಮ ಆಡಳಿತಾಧಿಕಾರಿಗಳ ನೇಮಕಾತಿಯನ್ನು ಲಂಚವಿಲ್ಲದೇ ಮಧ್ಯವರ್ತಿಗಳ ಹಾವಳಿ ಇಲ್ಲದೇ ಮಾಡಿದ್ದೇವೆ. ನೀವು ಸಹ ಜನರ ಸೇವೆ ಮಾಡುವಾಗ ಲಂಚ ಪಡೆಯದೇ ಪ್ರಾಮಾಣಿಕತೆಯಿಂದ ಕರ್ತವ್ಯ ನಿರ್ವಹಿಸಬೇಕು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗ್ರಾಮ ಆಡಳಿತಾಧಿಕಾರಿಗಳಿಗೆ ಸೂಚಿಸಿದ್ದಾರೆ (ಪ್ರ.ವಾ., ಏ. 30). ಇದು ಕೇಳುಗರಿಗೆ ಮೇಲ್ನೋಟಕ್ಕೆ ತುಂಬಾ ಆಹ್ಲಾದಕರವಾದ ಹೇಳಿಕೆಯಂತೆ ಕಾಣುತ್ತದೆ. ಆದರೆ ಬೆಂಗಳೂರಿನಲ್ಲಿ ಕುಳಿತುಕೊಂಡು ಸರ್ಕಾರಿ ನೌಕರರಿಗೆ ಹೀಗೆ ಹೇಳಿ ಕೈತೊಳೆದುಕೊಂಡ ಮಾತ್ರಕ್ಕೆ ಭ್ರಷ್ಟಾಚಾರ ನಿಗ್ರಹ ಖಂಡಿತ ಸಾಧ್ಯವಿಲ್ಲ. ಏಕೆಂದರೆ ಇಂದಿನ ರಾಜಕೀಯ ವ್ಯವಸ್ಥೆಯು ಭ್ರಷ್ಟಾಚಾರವನ್ನೇ ತನ್ನ ಉಸಿರನ್ನಾಗಿಸಿಕೊಂಡಿದೆ. ಭ್ರಷ್ಟಾಚಾರದ ಬೇರುಗಳು ಆಳವಾಗಿ ಬೇರೂರಿಬಿಟ್ಟಿವೆ.

ಗ್ರಾಮೀಣ ಪ್ರದೇಶಗಳಲ್ಲಿನ ಸರ್ಕಾರಿ ಕಚೇರಿಗಳಲ್ಲಿ ಅದರಲ್ಲೂ ವಿಶೇಷವಾಗಿ ಕಂದಾಯ ಇಲಾಖೆಯ ಕಚೇರಿಗಳಲ್ಲಿ ಲಂಚ ಇಲ್ಲದೆ ಒಂದು ಕಡ್ಡಿಯೂ ಅಲುಗಾಡದ ಪರಿಸ್ಥಿತಿ ಇದೆ. ಮಧ್ಯವರ್ತಿಗಳ ಹಾವಳಿ ಹೆಚ್ಚಾಗಿದೆ. ಸರ್ಕಾರಿ ಕಚೇರಿಗಳಿಗೆ ಜನ ಅಲೆದಲೆದು ಹೈರಾಣಾಗಿ ಹೋಗಿದ್ದಾರೆ. ಎಚ್.ಜಿ.ಗೋವಿಂದೇಗೌಡ ಅವರು ಹಿಂದೆ ಶಾಸಕರು, ಸಚಿವರಾಗಿದ್ದಾಗ ಯಾರಾದರೂ ಸರ್ಕಾರಿ ನೌಕರ ಲಂಚ ತೆಗೆದುಕೊಳ್ಳುವುದು ಗಮನಕ್ಕೆ ಬಂದರೆ, ಆ ಕಚೇರಿಗೆ ದಿಢೀರ್ ಭೇಟಿ ನೀಡಿ ಎಲ್ಲರೆದುರಿಗೆ ಆತನನ್ನು ಹಿಗ್ಗಾಮುಗ್ಗಾ ತರಾಟೆಗೆ ತೆಗೆದುಕೊಂಡು ಎಚ್ಚರಿಕೆ ನೀಡುತ್ತಿದ್ದರು. ಆದರೆ ಈಗ ಎಷ್ಟು ಜನ ಸಂಸದರು, ಶಾಸಕರು, ಮಂತ್ರಿಗಳು ಅಂತಹ ಕೆಲಸ ಮಾಡುತ್ತಾರೆ? ಸರ್ಕಾರದ ಮಟ್ಟದಲ್ಲಿ ದಿನಕ್ಕೊಂದು ಭ್ರಷ್ಟಾಚಾರದ ಹಗರಣ ಬಯಲಿಗೆ ಬರುತ್ತಿದ್ದರೆ ಯಾವ ನೌಕರ ತಾನೇ ಲಂಚ ತೆಗೆದುಕೊಳ್ಳಲು ಹೆದರುತ್ತಾನೆ? ಹಾಗಾಗಿ, ಭ್ರಷ್ಟಾಚಾರ ನಿಗ್ರಹ ಮೊದಲು ವಿಧಾನಸೌಧದಿಂದಲೇ ಶುರುವಾಗಬೇಕು. ಆಗಮಾತ್ರ ನೌಕರರು ಜನಪ್ರತಿನಿಧಿಗಳ ಮಾತಿಗೆ ಬೆಲೆ ಕೊಟ್ಟು, ಲಂಚ ತೆಗೆದುಕೊಳ್ಳಲು ಸ್ವಲ್ಪ ಮಟ್ಟಿಗಾದರೂ ಹೆದರಬಹುದು.

ಚಾವಲ್ಮನೆ ಸುರೇಶ್ ನಾಯಕ್, ಹಾಲ್ಮುತ್ತೂರು, ಕೊಪ್ಪ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಪ್ರಜಾವಾಣಿ ವಾರ್ತೆ

ದನದ ಮಾಂಸ ಸೇವಿಸಿರುವ ಶಂಕೆಯ ಮೇಲೆ ಸ್ವಯಂಘೋಷಿತ ಗೋರಕ್ಷಕರು 2024ರ ಆ.31ರಂದು ಹರಿಯಾಣದ ಚರ್ಖಿ ದಾದ್ರಿ ಜಿಲ್ಲೆಯಲ್ಲಿ ವಲಸೆ ಕಾರ್ಮಿಕನ ಮೇಲೆ ಹಲ್ಲೆ ಮಾಡಿ, ಹತ್ಯೆ ಮಾಡಿದ್ದರು

ಗುಂಪು ಹಲ್ಲೆ

ಮತ್ತೆ ತಲೆ ಎತ್ತಿದ ಪಿಡುಗು

ಕರ್ನಾಟಕವೂ ಸೇರಿದಂತೆ ದೇಶದ ಹಲವು ರಾಜ್ಯಗಳಲ್ಲಿ ಈ ಹಿಂದೆ ನೂರಾರು ಗುಂಪು ಹಲ್ಲೆ/ಗುಂಪು ಹತ್ಯೆ ಪ್ರಕರಣಗಳು ನಡೆದಿವೆ. ಜಾತಿ, ಧರ್ಮ, ಲಿಂಗ ಆಧಾರಿತವಾಗಿ ಗುಂಪುಗಳಿಂದ ಹಲ್ಲೆ, ಹತ್ಯೆ ನಡೆದು, ಅದು ಜಾಗತಿಕ ಮಟ್ಟದಲ್ಲಿ ಸುದ್ದಿಯೂ ಆಗಿತ್ತು. ಇಂಥ ಪ್ರಕರಣಗಳು ಹೆಚ್ಚಾಗಿ ನಡೆಯುತ್ತಿದ್ದರೂ, ಅವುಗಳನ್ನು ಪ್ರತ್ಯೇಕವಾಗಿ ದಾಖಲಿಸುವ, ಪ್ರತ್ಯೇಕ ನಿಯಮದಡಿ ಶಿಕ್ಷೆ ವಿಧಿಸುವ ವ್ಯವಸ್ಥೆಯೇ ದೇಶದಲ್ಲಿ ಇರಲಿಲ್ಲ. ಸುಪ್ರೀಂ ಕೋರ್ಟ್ ಈ ಬಗ್ಗೆ ಎಚ್ಚರಿಸಿದ ನಂತರ ಈ ಪ್ರವೃತ್ತಿಗೆ ಕೊಂಚ ಕಡಿವಾಣ ಬಿದ್ದಿತ್ತು. ಈಗ ಮಂಗಳೂರಿನಲ್ಲಿ ನಡೆದಿರುವ ಹತ್ಯೆ ಪ್ರಕರಣವು ಗುಂಪು ಹಲ್ಲೆ ವಿಷಯವನ್ನು ಮತ್ತೆ ಮುನ್ನೆಲೆಗೆ ತಂದಿದೆ

ಮೀನು ಕದ್ದಿದ್ದಾರೆ ಎಂದು ಆರೋಪಿಸಿ ಗುಂಪೊಂದು ಮಹಿಳೆಯೊಬ್ಬರನ್ನು ಮರಕ್ಕೆ ಕಟ್ಟಿ ಥಳಿಸಿದ ಪ್ರಕರಣ ಉಡುಪಿ ಜಿಲ್ಲೆಯ ಮಲ್ಪೆಯಲ್ಲಿ ಮಾರ್ಚ್‌ನಲ್ಲಿ ನಡೆದಿತ್ತು. ಈಗ ಮಂಗಳೂರಿನ ಕುಡುಪುವಿನಲ್ಲಿ ಕೇರಳದ ವಯನಾಡ್‌ನ ಮುಸ್ಲಿಂ ಯುವಕನನ್ನು ಗುಂಪೊಂದು ಹತ್ಯೆ ಮಾಡಿದೆ. ಹತ್ಯೆಗೆ ಕಾರಣ ಏನು ಎನ್ನುವುದು ಇನ್ನೂ ಸ್ಪಷ್ಟವಾಗಿಲ್ಲ. ಆದರೆ, ಈ ಪ್ರಕರಣದ ಮೂಲಕ ಅತ್ಯಂತ ಅಮಾನುಷವಾದ ಮತ್ತು ಕಾನೂನಿಗೆ ಹೊರತಾದ ಶಿಕ್ಷಾ ಪದ್ಧತಿ ಮತ್ತೊಮ್ಮೆ ಸದ್ದು ಮಾಡಿದೆ.

ಸಾಮಾನ್ಯವಾಗಿ ಒಂದು ನಿರ್ದಿಷ್ಟ ಸಮುದಾಯ, ಸಂಪ್ರದಾಯ, ರಾಜಕೀಯ ಹಾಗೂ ಧಾರ್ಮಿಕ ಸಿದ್ಧಾಂತಗಳ ರಕ್ಷಣೆಯ ಹೆಸರಿನಲ್ಲಿ ಐದು ಮತ್ತು ಅದಕ್ಕಿಂತ ಹೆಚ್ಚು ಮಂದಿ ಕಾನೂನುಪ್ರಕ್ರಿಯೆಗೆ ಅತೀತವಾಗಿ ವ್ಯಕ್ತಿಯ ಮೇಲೆ ನಡೆಸುವ ಹಲ್ಲೆ, ದೌರ್ಜನ್ಯ, ಹತ್ಯೆಯನ್ನು ಗುಂಪು ಹಲ್ಲೆ/ಗುಂಪು ಹತ್ಯೆ ಎನ್ನಲಾಗುತ್ತದೆ. ಕೆಲವು ಜನ ಕಾನೂನನ್ನು ತಮ್ಮ ಕೈಗೆ ತೆಗೆದುಕೊಂಡು, ವ್ಯಕ್ತಿಯೊಬ್ಬರನ್ನು ತೀವ್ರವಾಗಿ ಹೊಡೆದು, ಹಿಂಸಿಸಿ ಕೊಲ್ಲುವ ಬಗೆ ಬೆಚ್ಚಿಬೀಳಿಸುವಂಥದ್ದು. ತೀವ್ರ ಹಿಂಸೆ ಮತ್ತು ಅಪರಾಧದ ಸ್ವರೂಪದಿಂದಾಗಿ ಭಾರತದ ಗುಂಪು ಹಲ್ಲೆ ಪ್ರಕರಣಗಳು ಜಾಗತಿಕ ಮಟ್ಟದಲ್ಲಿ ಸುದ್ದಿಯಾದವು. ಕೇಂದ್ರದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದ ನಂತರ (2014ರಿಂದ) ಇಂಥ ಪ್ರಕರಣಗಳು ಹೆಚ್ಚಳವಾದವು ಎಂದು ಹಲವು ಅಧ್ಯಯನಗಳು ಹೇಳುತ್ತವೆ. ಸಾಮಾಜಿಕ ಮಾಧ್ಯಮಗಳು ಮತ್ತು ಇಂಟರ್‌ನೆಟ್, ಸುಳ್ಳು ಸುದ್ದಿಗಳು ಕೂಡ ಪ್ರಕರಣ ಹೆಚ್ಚಳಕ್ಕೆ ಕಾರಣ.

> ಬಿಎನ್‌ಎಸ್ ಪ್ರಕಾರ, ಐದು ಮತ್ತು ಅದಕ್ಕಿಂತ ಹೆಚ್ಚು ಜನರ ಗುಂಪು ಧರ್ಮ, ಜಾತಿ ಅಥವಾ ಸಮುದಾಯದ ಆಧಾರದಲ್ಲಿ ಯಾರನ್ನಾದರೂ ಕೊಲೆ ಮಾಡಿದರೆ ಅದು ಗುಂಪು ಹತ್ಯೆಯಾಗುತ್ತದೆ

ಗೋ ಹತ್ಯೆ, ದನದ ಮಾಂಸ ಸಾಗಣೆ ಮತ್ತು ಸೇವನೆ, ಗಂಡು ಹೆಣ್ಣಿನ ಸಂಬಂಧ ಮುಂತಾದ ಕಾರಣಗಳಿಗಾಗಿ ಗುಂಪು ಹಲ್ಲೆಗಳು ನಡೆದಿವೆ. ಜೈ ಶ್ರೀರಾಮ್ ಘೋಷಣೆ ಕೂಗುವಂತೆ ಒತ್ತಾಯಿಸಿ ಇಂಥ ಘಟನೆಗಳು ನಡೆದ ಬಗ್ಗೆಯೂ ವರದಿಯಾಗಿವೆ. ಈ ಪ್ರಕರಣಗಳಲ್ಲಿ ತೊಂದರೆಗೊಳಗಾದವರ ಪೈಕಿ ಬಡವರು, ದಲಿತರು, ಹಿಂದುಳಿದವರು, ಅಲ್ಪಸಂಖ್ಯಾತರು, ಮಹಿಳೆಯರೇ ಹೆಚ್ಚಿದ್ದಾರೆ.

‘ಸಿಟಿಜನ್ಸ್ ಫಾರ್ ಜಸ್ಟೀಸ್ ಆ್ಯಂಡ್ ಪೀಸ್’ ವರದಿಯಲ್ಲಿ 2014ರ ಜನವರಿಯಿಂದ 2018ರ ಜುಲೈವರೆಗೆ ದೇಶದಲ್ಲಿ ನಡೆದ ಗುಂಪು ಹಲ್ಲೆ ಪ್ರಕರಣಗಳ ಬಗ್ಗೆ ಉಲ್ಲೇಖವಿದೆ. ಗೋ ಹತ್ಯೆ, ಲವ್ ಜಿಹಾದ್, ಮಕ್ಕಳ ಕಳ್ಳರು ಎಂಬ ವದಂತಿ ಮುಂತಾದ ಕಾರಣಗಳಿಗಾಗಿ ಈ ಅವಧಿಯಲ್ಲಿ 109 ಗುಂಪು ಹಲ್ಲೆಗಳು ನಡೆದಿವೆ ಎಂದು ವರದಿ ಹೇಳಿದೆ. ಈ ಪೈಕಿ ಮಹಾರಾಷ್ಟ್ರದಲ್ಲಿ 22, ಉತ್ತರ ಪ್ರದೇಶದಲ್ಲಿ 19 ಮತ್ತು ಜಾರ್ಖಂಡ್‌ನಲ್ಲಿ 10 ಪ್ರಕರಣಗಳು ನಡೆದಿವೆ. 109 ಪ್ರಕರಣಗಳ ಪೈಕಿ ಬಿಜೆಪಿ ಆಡಳಿತದ ರಾಜ್ಯಗಳಲ್ಲಿ 82, ಸಮಾಜವಾದಿ ಪಕ್ಷದ ಆಡಳಿತದಲ್ಲಿ 9, ಕಾಂಗ್ರೆಸ್ ಆಡಳಿತದ ರಾಜ್ಯಗಳಲ್ಲಿ ಐದು, ಟಿಎಂಸಿ ಆಡಳಿತದಲ್ಲಿ ನಾಲ್ಕು ಪ್ರಕರಣಗಳು ನಡೆದಿರುವುದಾಗಿ ವರದಿ ತಿಳಿಸಿದೆ. 109 ಪ್ರಕರಣಗಳ ಪೈಕಿ 39 ಪ್ರಕರಣಗಳಿಗೆ ಮಕ್ಕಳ ಕಳ್ಳರು ಎನ್ನುವ ವದಂತಿ ಕಾರಣವಾದರೆ, 39 ಪ್ರಕರಣಗಳಿಗೆ ‘ಗೋ ರಕ್ಷಣೆ’ ಕಾರಣ; 14 ಪ್ರಕರಣಗಳಿಗೆ ‘ಲವ್ ಜಿಹಾದ್’ ಕಾರಣ ಎಂದು ದಾಖಲಿಸಿದೆ.

ಮುಂಬೈನ ‘ಸೆಂಟರ್ ಫಾರ್ ಸ್ಟಡಿ ಆಫ್ ಸೊಸೈಟಿ ಆ್ಯಂಡ್ ಸೆಕ್ಯುಲರಿಸಂ’ ಸಂಸ್ಥೆಯು ಗುಂಪು ಹಲ್ಲೆಗಳ ಬಗ್ಗೆ ಅಧ್ಯಯನ ನಡೆಸಿದ್ದು, 2024ರಲ್ಲಿ 13 ಪ್ರಕರಣಗಳು ನಡೆದಿರುವುದಾಗಿ ತಿಳಿಸಿದೆ. ಈ ಪೈಕಿ 11 ಮಂದಿ ಸಾವಿಗೀಡಾಗಿದ್ದು, ಮೃತರಲ್ಲಿ ಒಬ್ಬರು ಹಿಂದೂ, ಒಬ್ಬರು ಕ್ರಿಶ್ಚಿಯನ್ ಮತ್ತು 9 ಮಂದಿ ಮುಸ್ಲಿಮರು. ಮಹಾರಾಷ್ಟ್ರ ಮತ್ತು ಉತ್ತರ ಪ್ರದೇಶದಲ್ಲಿ ತಲಾ ಮೂರು, ಛತ್ತೀಸಗಢ, ಹರಿಯಾಣ, ಗುಜರಾತ್‌ನಲ್ಲಿ ತಲಾ ಎರಡು ಮತ್ತು ಕರ್ನಾಟಕದಲ್ಲಿ ಒಂದು ಪ್ರಕರಣ ನಡೆದಿದೆ. ಇವುಗಳಲ್ಲಿ ಏಳು (ಶೇ 50ರಷ್ಟು) ಘಟನೆಗಳಿಗೆ ಗೋ ಹತ್ಯೆ ಕಾರಣ ಎಂದು ವರದಿ ಹೇಳಿದೆ. 2023ರಲ್ಲಿ ಇಂಥ 21 ಪ್ರಕರಣಗಳು ನಡೆದಿದ್ದು, 2024ರಲ್ಲಿ ಅವುಗಳ ಸಂಖ್ಯೆ ಕಡಿಮೆ ಆಗಿದೆ. ಅದಕ್ಕೆ ಸುಪ್ರೀಂ ಕೋರ್ಟ್ ಕಾರಣ ಎಂದೂ ಉಲ್ಲೇಖಿಸಿದೆ.

ತೆಹಸೀನ್ ಎಸ್.ಪೂನಾವಾಲಾ ಮತ್ತು ಕೇಂದ್ರ ಸರ್ಕಾರದ ನಡುವಿನ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ 2018ರ ಜುಲೈ 17ರಂದು ಗುಂಪು ಹಲ್ಲೆಗೆ ಸಂಬಂಧಿಸಿದಂತೆ ಮಹತ್ವದ ತೀರ್ಪು ನೀಡಿದೆ. ಗುಂಪು ಹಲ್ಲೆ, ಹತ್ಯೆ ಪ್ರವೃತ್ತಿಯನ್ನು ತೀವ್ರವಾಗಿ ಖಂಡಿಸಿದ್ದ ನ್ಯಾಯಾಲಯವು, ಅಂಥ ಪ್ರಕರಣಗಳನ್ನು ತಡೆಯಲು, ಅಪರಾಧಿಗಳನ್ನು ಶಿಕ್ಷಿಸಲು ಕ್ರಮ ಕೈಗೊಳ್ಳುವಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಸೂಚಿಸಿತ್ತು. ಅದರ ನಂತರ ಹಲವು ರಾಜ್ಯಗಳಲ್ಲಿ ಈ ಸಂಬಂಧ ಕಾಯ್ದೆ ರೂಪಿಸುವ ಪ್ರಯತ್ನಗಳು ಆರಂಭವಾದವು. ಗುಂಪು ಹಲ್ಲೆಗೆ ಸಂಬಂಧಿಸಿದಂತೆ ಕಾಯ್ದೆ ರೂಪಿಸಿದ್ದ ಮೊದಲ ರಾಜ್ಯ ಮಣಿಪುರ. ರಾಜಸ್ಥಾನ, ಪಶ್ಚಿಮ ಬಂಗಾಳದಲ್ಲಿಯೂ ಮಸೂದೆಗಳನ್ನು ಮಂಡಿಸಲಾಗಿದ್ದು, ಅವುಗಳಿಗೆ ಅಡ್ಡಿ ಎದುರಾಗಿದೆ.

ಗುಂಪು ಹಲ್ಲೆ, ಸಂವಿಧಾನದ ಬದುಕುವ ಮತ್ತು ಸ್ವಾತಂತ್ರ್ಯದ ಹಕ್ಕಿನ (21ನೇ ವಿಧಿ) ಉಲ್ಲಂಘನೆ ಎನ್ನುತ್ತಾರೆ ಸಂವಿಧಾನ ತಜ್ಞರು. ಗುಂಪು ಹಲ್ಲೆ, ಹತ್ಯೆ ಪ್ರಕರಣಗಳು ನಮ್ಮ ಸಂವಿಧಾನ, ಸಮಾಜ, ನ್ಯಾಯ ವ್ಯವಸ್ಥೆಯ ವಿಡಂಬನೆಯಾಗಿದ್ದು, ಅವುಗಳನ್ನು ತಡೆಯಬೇಕು ಎನ್ನುವ ಒತ್ತಾಯ ಕೇಳಿಬಂದಿದೆ.



ಬಿಎನ್‌ಎಸ್‌ನಲ್ಲಿ ಪ್ರತ್ಯೇಕ ಸೆಕ್ಷನ್

ದೇಶದಲ್ಲಿ ಹೊಸದಾಗಿ ಅಳವಡಿಸಿಕೊಂಡಿರುವ ಕ್ರಿಮಿನಲ್ ಕಾನೂನು ‘ಭಾರತೀಯ ನ್ಯಾಯ ಸಂಹಿತೆ’ಯಲ್ಲಿ (ಬಿಎನ್‌ಎಸ್) ಗುಂಪು ಹಲ್ಲೆ ಮಾಡಿ ಕೊಲೆ ಮಾಡಿದ ಪ್ರಕರಣಗಳಿಗಾಗಿ ಪ್ರತ್ಯೇಕ ಸೆಕ್ಷನ್ ಇದೆ. ಹಿಂದಿನ ಭಾರತೀಯ ದಂಡ ಸಂಹಿತೆಯಲ್ಲಿ ಇರಲಿಲ್ಲ. ಗುಂಪು ಹತ್ಯೆ ಪ್ರಕರಣವೂ 302 ಸೆಕ್ಷನ್ ಅಡಿಯಲ್ಲೇ ಬರುತ್ತಿತ್ತು (ಬಿಎನ್‌ಎಸ್‌ನಲ್ಲಿ 103ನೇ ಸೆಕ್ಷನ್ ಕೊಲೆಗೆ (ದಂಡನೆ) ಸಂಬಂಧಿಸಿದ್ದಾಗಿದೆ).

ಬಿಎನ್‌ಎಸ್‌ನ 103 (2)ನೇ ಸೆಕ್ಷನ್ ಗುಂಪು ಹತ್ಯೆಗೆ ಸಂಬಂಧಿಸಿದ್ದಾಗಿದೆ. ಗುಂಪು ಹತ್ಯೆ ಮಾಡಿದ ಅಪರಾಧಕ್ಕೆ ದಂಡ ಸಹಿತ ಮರಣದಂಡನೆ ಅಥವಾ ಜೀವಾವಧಿ ಶಿಕ್ಷೆ ವಿಧಿಸಲು ಅವಕಾಶ ಇದೆ.

ರಾಜ್ಯದಲ್ಲಿ ನಡೆದ ಪ್ರಮುಖ ಪ್ರಕರಣಗಳು

> **ಕರಾವಳಿಯಲ್ಲೇ ಹೆಚ್ಚು**
> ಕರ್ನಾಟಕದಲ್ಲಿ ಉಳಿದ ಭಾಗಗಳಿಗೆ ಹೋಲಿಸಿದರೆ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲೇ ಗುಂಪು ಹಲ್ಲೆಗಳು ಹೆಚ್ಚು ವರದಿಯಾಗಿವೆ; ಗೋರಕ್ಷಣೆ, ಧರ್ಮದ ಹೆಸರಿನಲ್ಲಿ ದಾಳಿಗಳು ನಡೆದಿವೆ

- **ಮಹಿಳೆಯರ ಮೇಲೆ ತೀವ್ರ ಹಲ್ಲೆ:** ಪರ ಪುರುಷನೊಂದಿಗೆ ಸಲುಗೆಯಿಂದ ವರ್ತಿಸಿದ ಹಾಗೂ ಇದಕ್ಕೆ ಸಹಕರಿಸಿದ ಆರೋಪದ ಮೇರೆಗೆ ಇಬ್ಬರು ಮಹಿಳೆಯರನ್ನು ಗ್ರಾಮದ ಮಸೀದಿಗೆ ಕರೆಸಿ ಅವರ ಮೇಲೆ ಗುಂಪೊಂದು ಹಲ್ಲೆ ನಡೆಸಿದ್ದ ಘಟನೆ ದಾವಣಗೆರೆ ಜಿಲ್ಲೆಯ ಚನ್ನಗಿರಿ ತಾಲ್ಲೂಕಿನ ತಾವರೆಕೆರೆಯಲ್ಲಿ ಇದೇ ಏಪ್ರಿಲ್ 9ರಂದು ನಡೆದಿತ್ತು. ಈ ಸಂಬಂಧ ಸಂತ್ರಸ್ತೆಯೊಬ್ಬರ ಪತಿ ಸೇರಿದಂತೆ 6 ಆರೋಪಿಗಳನ್ನು ಬಂಧಿಸಲಾಗಿದೆ. ಮಹಿಳೆಯರ ಮೇಲೆ ದೊಣ್ಣೆ, ಕಲ್ಲು, ವೈರ್, ಪೈಪ್‌ಗಳಿಂದ ಹೊಡೆದು ಕಲ್ಲು ಎತ್ತಿಹಾಕಿ ಕೊಲೆಗೆ ಯತ್ನಿಸಿದ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿತ್ತು.
- **ಮೀನು ಕದ್ದದ್ದಕ್ಕೆ ಮಹಿಳೆಯನ್ನು ಮರಕ್ಕೆ ಕಟ್ಟಿ ಹೊಡೆದರು:** ಉಡುಪಿಯ ಮಲ್ಪೆ ಮೀನುಗಾರಿಕಾ ಬಂದರಿನಲ್ಲಿ ಇದೇ ಮಾರ್ಚ್ 18ರಂದು ಮೀನು ಕದ್ದ ಆರೋಪದಲ್ಲಿ ಬಂಜಾರ ಸಮಾಜದ ಮಹಿಳೆಯನ್ನು ಮರಕ್ಕೆ ಕಟ್ಟಿ ಹಲ್ಲೆ ನಡೆಸಲಾಗಿತ್ತು. ಪೊಲೀಸರು ಐವರನ್ನು ಬಂಧಿಸಿದ್ದರು. ಪ್ರಕರಣ ಕೋರ್ಟ್‌ನಲ್ಲಿ ವಿಚಾರಣೆ ಹಂತದಲ್ಲಿದೆ.
- **ಮಕ್ಕಳ ಅಪಹರಣಕಾರರೆಂದು ಹತ್ಯೆ:** ಬೀದರ್ ಜಿಲ್ಲೆಯ ಕಮಲನಗರ ತಾಲ್ಲೂಕಿನ ಮುರ್ಕಿಯಲ್ಲಿ ಮಕ್ಕಳ ಅಪಹರಣಕಾರರೆಂದು ಆರೋಪಿಸಿ ಗ್ರಾಮಸ್ಥರ ಗುಂಪು ಒಬ್ಬರನ್ನು ಕೊಲೆಗೈದು, ಮೂವರನ್ನು ಗಂಭೀರವಾಗಿ ಗಾಯಗೊಳಿಸಿರುವ ಪ್ರಕರಣ 2018ರ ಜುಲೈ 13ರಂದು ನಡೆದಿತ್ತು. ಘಟನೆಯಲ್ಲಿ ಹೈದರಾಬಾದ್‌ನ ಮುಹಮ್ಮದ್ ಅಜಂ ಮೃತಪಟ್ಟಿದ್ದರು. ಇನ್ನಿಬ್ಬರು ಗಂಭೀರವಾಗಿ ಗಾಯಗೊಂಡಿದ್ದರು. ಔರಾದ್ ಠಾಣೆ ಪೊಲೀಸರು ಅಪರಿಚಿತರ ವಿರುದ್ಧ ಪ್ರಕರಣ ದಾಖಲಿಸಿದ್ದರು. ಆದರೆ, ಯಾರನ್ನೂ ಬಂಧಿಸಿರಲಿಲ್ಲ.
- **ದನದ ವ್ಯಾಪಾರಿ ಹಲ್ಲೆ, ಸಾವು:** ಉಡುಪಿ ತಾಲ್ಲೂಕಿನ ಪೆರ್ಡೂರಿನಲ್ಲಿ 2018ರ ಜೂನ್‌ನಲ್ಲಿ ಜೋಕಟ್ಟೆಯ ದನದ ವ್ಯಾಪಾರಿ ಹುಸೈನಬ್ಬ (61) ಅವರು ಯುವಕರಿಂದ ಹಲ್ಲೆಗೊಳಗಾಗಿ ಸಾವಿಗೀಡಾಗಿದ್ದರು. ಈ ಪ್ರಕರಣದಲ್ಲಿ ಮೂವರು ಪೊಲೀಸ್ ಸಿಬ್ಬಂದಿ ಆರೋಪಿಗಳಾಗಿದ್ದರು. ಅಲ್ಲದೇ, ಬಜರಂಗದಳ ಕಾರ್ಯಕರ್ತರು ಸೇರಿದಂತೆ ಹತ್ತು ಮಂದಿಯನ್ನು ಈ ಪ್ರಕರಣದಲ್ಲಿ ಬಂಧಿಸಲಾಗಿತ್ತು. ಹಲ್ಲೆ ಮಾಡಿದ ಬಳಿಕ ಹುಸೈನಬ್ಬ ಅವರನ್ನು ಬಜರಂಗದಳ ಕಾರ್ಯಕರ್ತರು ಪೊಲೀಸರಿಗೆ ನೀಡಿದ್ದರು. ಈ ವೇಳೆ ಜೀಪಿನ ಹಿಂಬದಿ ಇದ್ದ ಹುಸೈನಬ್ಬ ಅಲ್ಲೇ ಮೃತಪಟ್ಟಿದ್ದರು.
- **ಬಿಜೆಪಿ ಮುಖಂಡನ ಹತ್ಯೆ:** ಜಾನುವಾರು ಸಾಗಾಟ ಮಾಡುತ್ತಿದ್ದಾರೆ ಎಂಬ ಆರೋಪದ ಮೇಲೆ ಬಿಜೆಪಿ ಮುಖಂಡ ಪ್ರವೀಣ್ ಪೂಜಾರಿ ಮತ್ತು ಅವರ ಗೆಳೆಯ ಅಕ್ಷಯ್ ಮೇಲೆ ಹಿಂದೂ ಜಾಗರಣ ವೇದಿಕೆಯ ಕಾರ್ಯಕರ್ತರು ಎನ್ನಲಾದವರು 2016ರ ಆಗಸ್ಟ್‌ನಲ್ಲಿ ಉಡುಪಿ ಜಿಲ್ಲೆಯ ಕಜ್ಕೆಯಲ್ಲಿ ಟೆಂಪೊ ಅಡ್ಡ ಹಾಕಿ ಗಂಭೀರ ಹಲ್ಲೆ ನಡೆಸಿದ್ದರು. ಗಂಭೀರ ಗಾಯಗೊಂಡಿದ್ದ ಪ್ರವೀಣ್ ಪೂಜಾರಿ ಬಳಿಕ ಮೃತಪಟ್ಟಿದ್ದರು. ಪೊಲೀಸರು 21 ಆರೋಪಿಗಳನ್ನು ಬಂಧಿಸಿದ್ದರು
- **ವಿದ್ಯುತ್ ಕಂಬಕ್ಕೆ ಕಟ್ಟಿ ಹಾಕಿ ಯುವಕನಿಗೆ ಪೆಟ್ಟು:** 2015 ಆ.28ರಂದು ಮಂಗಳೂರಿನ ಅತ್ತಾವರದಲ್ಲಿ ಸಹೋದ್ಯೋಗಿ ಯುವತಿ ಜೊತೆ ಕಾರಿನಲ್ಲಿ ಪ್ರಯಾಣಿಸುತ್ತಿದ್ದ ಯುವಕನನ್ನು ಕಾರಿನಿಂದ ಹೊರಗೆಳೆದು ವಿದ್ಯುತ್ ಕಂಬಕ್ಕೆ ಕಟ್ಟಿ ಹಾಕಿ ಹಲ್ಲೆ ನಡೆಸಲಾಗಿತ್ತು. ಈ ಪ್ರಕರಣದ 19 ಆರೋಪಿಗಳನ್ನೂ ಇಲ್ಲಿನ ಒಂದನೇ ಹೆಚ್ಚುವರಿ ಮತ್ತು ಸೆಷನ್ಸ್ ನ್ಯಾಯಾಲಯ 2025 ರ ಮಾರ್ಚ್‌ನಲ್ಲಿ ಖುಲಾಸೆಗೊಳಿಸಿದೆ
- **10 ಮಂದಿಯ ಕೊಲೆ:** ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿ ತಾಲ್ಲೂಕಿನ ಯರ್ರಕೋಟೆ ಮತ್ತು ಬಾರ್ಲಹಳ್ಳಿಯಲ್ಲಿ 2011ರಲ್ಲಿ ಕಳ್ಳರು ಎಂದು ಶಂಕಿಸಿ ಆಂಧ್ರಪ್ರದೇಶದ 10 ಮಂದಿಯನ್ನು ಹೊಡೆದು ಹತ್ಯೆ ಮಾಡಲಾಗಿತ್ತು. ಈ ಸಂಬಂಧ ಗ್ರಾಮಸ್ಥರ ಮೇಲೆ ಪ್ರಕರಣವೂ ದಾಖಲಾಗಿತ್ತು. ಪ್ರಕರಣದ ಎಲ್ಲ ಆರೋಪಿಗಳು ಖುಲಾಸೆಗೊಂಡಿದ್ದರು
- **ದನದ ವ್ಯಾಪಾರಿಗಳ ಮೇಲೆ ಹಲ್ಲೆ:** ಉಡುಪಿ ಸಮೀಪದ ಆದಿ ಉಡುಪಿಯಲ್ಲಿ 2005 ರ ಮಾರ್ಚ್ 13 ರಂದು ಇಬ್ಬರು ವ್ಯಾಪಾರಿಗಳಾದ ಹಾಜಬ್ಬ (60) ಮತ್ತು ಅವರ ಮಗ ಹಸನಬ್ಬ (25) ಅವರನ್ನು ಬೆತ್ತಲೆಗೊಳಿಸಿ ಹಲ್ಲೆ ನಡೆಸಿ ಮೆರವಣಿಗೆ ಮಾಡಲಾಗಿತ್ತು. ಕೋಲುಗಳು ಹಾಗೂ ಕಬ್ಬಿಣದ ರಾಡ್ ಗಳಿಂದ ಹಲ್ಲೆ ನಡೆದಿತ್ತು. ಈ ಪ್ರಕರಣ ವಿಧಾನ ಮಂಡಲ ಅಧಿವೇಶನದಲ್ಲೂ ಚರ್ಚೆಯಾಗಿತ್ತು. ಈ ಪ್ರಕರಣದ ಆರೋಪಿಗಳೆಲ್ಲರೂ ಖುಲಾಸೆಯಾಗಿದ್ದಾರೆ. ಪ್ರಮುಖ ಆರೋಪಿಯಾಗಿದ್ದ ಯಶ್‌ಪಾಲ್ ಸುವರ್ಣ ಈಗ ಉಡುಪಿ ಕ್ಷೇತ್ರದ ಬಿಜೆಪಿ ಶಾಸಕ

ಮಾಹಿತಿ: ವಿವಿಧ ಬ್ಯೂರೊಗಳಿಂದ

ಮಹಿಳೆ ವಿವಸ್ತ್ರಗೊಳಿಸಿ ಹಲ್ಲೆ

ಯುವಕನೊಬ್ಬ ತನ್ನ ಪ್ರಿಯತಮೆಯೊಂದಿಗೆ ಮನೆ ಬಿಟ್ಟುಹೋದ ಕಾರಣಕ್ಕೆ ಬೆಳಗಾವಿ ತಾಲ್ಲೂಕಿನ ಹೊಸ ವಂಟಮೂರಿ ಗ್ರಾಮದಲ್ಲಿ 2023ರ ಡಿಸೆಂಬರ್ 11ರಂದು ಯುವಕನ ತಾಯಿಯನ್ನು ಬೆತ್ತಲೆಗೊಳಿಸಿ ಹಲ್ಲೆ ಮಾಡಲಾಗಿತ್ತು. ವಿವಸ್ತ್ರವಾಗಿ ವಿದ್ಯುತ್ ಕಂಬಕ್ಕೆ ಕಟ್ಟಿ ನಾಲ್ಕು ತಾಸು ಹೊಡೆಯಲಾಗಿತ್ತು.

ಹಲ್ಲೆ ಮಾಡಿದ 12 ಆರೋಪಿಗಳನ್ನು ಬಂಧಿಸಿ, ಕಾನೂನು ಸಂಘರ್ಷಕ್ಕೆ ಒಳಪಟ್ಟ ಒಬ್ಬ ಬಾಲಕನನ್ನು ಬಾಲಕರ ಬಾಲಮಂದಿರಕ್ಕೆ ಕಳುಹಿಸಲಾಗಿತ್ತು. 12 ಆರೋಪಿಗಳಿಗೆ ಜಾಮೀನು ಸಿಕ್ಕಿದೆ. ಬಾಲಕ ಇನ್ನೂ ಬಾಲಮಂದಿರದಲ್ಲಿದ್ದಾನೆ. ಪರಿಶಿಷ್ಟ ಪಂಗಡಕ್ಕೆ ಸೇರಿದ ಸಂತ್ರಸ್ತ ಮಹಿಳೆ ತಿಂಗಳವರೆಗೆ ಚಿಕಿತ್ಸೆ ಪಡೆದಿದ್ದರು. ಕಾಕತಿ ಠಾಣೆಯ ಸಿಪಿಐ ಅವರನ್ನು ಅಮಾನತು ಮಾಡಲಾಗಿತ್ತು. ಸಿಐಡಿಯು ತನಿಖೆ ನಡೆಸುತ್ತಿದೆ.

ಘಟನೆ ಖಂಡಿಸಿ ಬೆಳಗಾವಿಯಲ್ಲಿ ನಡೆದ ಪ್ರತಿಭಟನೆಯ ಚಿತ್ರ

ಕೇಂದ್ರ ಸರ್ಕಾರ ಹೇಳಿದ್ದೇನು?

ಪೊಲೀಸ್ ಮತ್ತು ಸಾರ್ವಜನಿಕ ರಕ್ಷಣೆ ರಾಜ್ಯದ ವ್ಯಾಪ್ತಿಗೆ ಬರುವ ವಿಚಾರಗಳಾಗಿದ್ದು, ಗುಂಪು ಹಲ್ಲೆ ಪ್ರಕರಣಗಳ ದತ್ತಾಂಶ ತನ್ನ ಬಳಿ ಇಲ್ಲ ಎಂದು ಕೇಂದ್ರ ಸರ್ಕಾರ ಹಲವು ಬಾರಿ ಹೇಳಿದೆ. ರಾಷ್ಟ್ರೀಯ ಅಪರಾಧಗಳ ದಾಖಲೆಗಳ ಬ್ಯೂರೊದಲ್ಲಿ 2022ರವರೆಗೆ ದೇಶದಲ್ಲಿ ನಡೆದ ಅಪರಾಧಗಳ ದತ್ತಾಂಶ ಲಭ್ಯವಿದೆ. ಆದರೆ, ಅದರಲ್ಲಿ ಗುಂಪು ಹಲ್ಲೆಗೆ ಸಂಬಂಧಿಸಿದಂತೆ ಪ್ರತ್ಯೇಕ ವಿಭಾಗ ಇಲ್ಲ. ಆದಾಗ್ಯೂ, ಭಾರತೀಯ ದಂಡ ಸಂಹಿತೆಯ (ಐಪಿಸಿ) ಬದಲಿಗೆ ಜಾರಿಗೊಳಿಸಲಾಗಿರುವ ಭಾರತೀಯ ನ್ಯಾಯ ಸಂಹಿತೆಯಲ್ಲಿ (ಐಪಿಸಿ) ಗುಂಪು ಹಲ್ಲೆಗೆ ಸಂಬಂಧಿಸಿದ ಸೆಕ್ಷನ್ ಅಳವಡಿಸಲಾಗಿದೆ.

ಆಧಾರ: ಸೆಂಟರ್ ಫಾರ್ ಸ್ಟಡಿ ಆಫ್ ಸೊಸೈಟಿ ಆ್ಯಂಡ್ ಸೆಕ್ಯುಲರಿಸಂ, ಸಿಟಿಜನ್ಸ್ ಫಾರ್ ಜಸ್ಟೀಸ್ ಆ್ಯಂಡ್ ಪೀಸ್, ಆಕ್ಸ್‌ಫರ್ಡ್ ಹ್ಯೂಮನ್ ರೈಟ್ಸ್ ಹಬ್

ದೇಶದಲ್ಲಿ ನಡೆದ ಪ್ರಮುಖ ಪ್ರಕರಣಗಳು

- **ದಾದ್ರಿ ಗುಂಪು ಹತ್ಯೆ:** 2015ರ ಸೆಪ್ಟೆಂಬರ್‌ನಲ್ಲಿ ಉತ್ತರ ಪ್ರದೇಶದ ದಾದ್ರಿಯಲ್ಲಿ ಮೊಹಮ್ಮದ್ ಇಕ್ಲಾಖ್ ಎಂಬುವವರ ಹತ್ಯೆ ಜಾಗತಿಕ ಮಟ್ಟದಲ್ಲಿ ಸುದ್ದಿಯಾಗಿತ್ತು. ಇಕ್ಲಾಖ್ ಅವರು ದನದ ಮಾಂಸ ಸೇವಿಸಿದ್ದಾರೆ ಎಂಬ ಶಂಕೆಯಿಂದ ಗುಂಪೊಂದು ಅವರ ಮೇಲೆ ಹಲ್ಲೆ ನಡೆಸಿ ಹತ್ಯೆ ಮಾಡಿತ್ತು. ಈ ಘಟನೆಯ ಬಳಿಕ ಗೋಮಾಂಸದ ವಿಚಾರದಲ್ಲಿ ದೇಶದ ವಿವಿಧ ರಾಜ್ಯಗಳಲ್ಲಿ ಮುಸ್ಲಿಮರನ್ನು ಗುರಿಯಾಗಿಸಿಕೊಂಡು ನಡೆದ ಹಲವು ಗುಂಪು ಹಲ್ಲೆ ಪ್ರಕರಣಗಳು ವರದಿಯಾಗಿದ್ದವು
- **ಜಾರ್ಖಂಡ್ ಗುಂಪು ಹತ್ಯೆ:** 2016ರ ಮಾರ್ಚ್ 18ರಂದು ಜಾರ್ಖಂಡ್‌ನ ಝಬರ್ ಗ್ರಾಮದಲ್ಲಿ ಗೋರಕ್ಷಕರು ಎಂದು ಕರೆಸಿಕೊಳ್ಳುತ್ತಿದ್ದ ಎಂಟು ಮಂದಿ ಜಾನುವಾರು ವ್ಯಾಪಾರಿ 32 ವರ್ಷದ ಮಜ್ಲೂಮ್ ಅನ್ಸಾರಿ ಹಾಗೂ ಅವರ ಪಾಲುದಾರರ ಮಗ 11 ವರ್ಷದ ಇಮ್ತಿಯಾಜ್ ಖಾನ್ ಅವರ ಮೇಲೆ ಹಲ್ಲೆ ಮಾಡಿ ಹತ್ಯೆ ಮಾಡಿದ್ದರು. ಬಳಿಕ ಇಬ್ಬರನ್ನೂ ಮರಕ್ಕೆ ನೇತು ಹಾಕಿದ್ದರು. ಎಲ್ಲ ಎಂಟು ಮಂದಿಯೂ ತಪ್ಪಿತಸ್ಥರು ಎಂದು ನ್ಯಾಯಾಲಯ ಘೋಷಿಸಿತ್ತು
- **ಉನಾ ಪ್ರಕರಣ:** 2016ರ ಜುಲೈ 11ರಂದು ಗುಜರಾತ್‌ನ ಸೋಮನಾಥ ಜಿಲ್ಲೆಯ ಉನಾದಲ್ಲಿ ಸತ್ತ ದನದ ಚರ್ಮ ಸುಲಿದ ಕಾರಣಕ್ಕೆ ಸ್ವಯಂಘೋಷಿತ ಗೋರಕ್ಷಕರ ತಂಡವೊಂದು ನಾಲ್ವರು ದಲಿತರನ್ನು ಸರಪಳಿಯಲ್ಲಿ ಕಟ್ಟಿ ಹಾಕಿ ಥಳಿಸಿತ್ತು. ಈ ಘಟನೆಗೆ ದೇಶದಾದ್ಯಂತ ಖಂಡನೆ ವ್ಯಕ್ತವಾಗಿತ್ತು. ದಲಿತ ಸಂಘಟನೆಗಳು ವ್ಯಾಪಕ ಪ್ರತಿಭಟನೆ ನಡೆಸಿದ್ದವು. ನಾಲ್ವರು ಪೊಲೀಸ್ ಅಧಿಕಾರಿಗಳು, ಇಬ್ಬರು ಬಾಲಕರು ಸೇರಿದಂತೆ 43 ಜನರನ್ನು ಪೊಲೀಸರು ಬಂಧಿಸಿದ್ದರು. ಆರೋಪಿಗಳಿಗೆ ಜಾಮೀನು ಸಿಕ್ಕಿತ್ತು.
- **ಅಲ್ವಾರ್ ಪ್ರಕರಣ:** ರಾಜಸ್ಥಾನದ ಅಲ್ವಾರ್‌ನ ಬೆಹ್ರೋರ್‌ನಲ್ಲಿ 2017ರ ಏಪ್ರಿಲ್ 1ರಂದು ನಡೆದ ಪ್ರಕರಣ. ಹರಿಯಾಣದ ಹೈನುಗಾರ ಪೆಹ್ಲು ಖಾನ್ ಅವರು ಇತರ ಆರು ಮಂದಿಯೊಂದಿಗೆ ಜೈಪುರದಿಂದ ಹಸುಗಳು ಮತ್ತು ಕರುಗಳನ್ನು ಖರೀದಿಸಿ ವಾಹನದಲ್ಲಿ ತನ್ನ ಊರಿಗೆ ಕೊಂಡೊಯ್ಯುತ್ತಿದ್ದಾಗ, ಗೋರಕ್ಷಣೆಯ ಹೆಸರಿನಲ್ಲಿ ಹಿಂದೂ ಸಂಘಟನೆಗಳ ಕಾರ್ಯಕರ್ತರು ಖಾನ್ ಹಾಗೂ ಇತರರ ಮೇಲೆ ಹಲ್ಲೆ ನಡೆಸಿದ್ದರು. ಎರಡು ದಿನಗಳ ನಂತರ ಅವರು ಮೃತಪಟ್ಟಿದ್ದರು. 2018ರಲ್ಲೂ ಇಂತಹದ್ದೇ ಮತ್ತೊಂದು ಪ್ರಕರಣ ಅಲ್ವಾರ್‌ನಲ್ಲಿ ನಡೆದಿತ್ತು.
- **ಪಾಲ್ಘರ್ ಪ್ರಕರಣ:** 2020ರ ಏಪ್ರಿಲ್ 16ರ ರಾತ್ರಿ ಕೋವಿಡ್ ಲಾಕ್‌ಡೌನ್ ಸಮಯದಲ್ಲಿ ಮಹಾರಾಷ್ಟ್ರದ ಪಾಲ್ಘರ್ ಸಮೀಪದ ಗಡ್‌ಚಿಂಚಾಲೆ ಗ್ರಾಮಸ್ಥರು, ವಾಟ್ಸ್‌ಆ್ಯಪ್‌ನಲ್ಲಿ ಹರಿದಾಡಿದ ವದಂತಿಯನ್ನು ನಂಬಿ ಮಕ್ಕಳ ಅಪಹರಣಕಾರರು ಎಂದುಕೊಂಡು ಕಾರಿನಲ್ಲಿ ಹೋಗುತ್ತಿದ್ದ ಇಬ್ಬರು ಸಾಧುಗಳು (ಜುನಾ ಅಖಾಡ) ಮತ್ತು ಕಾರಿನ ಚಾಲಕನ ಮೇಲೆ ಹಲ್ಲೆ ನಡೆಸಿ ಹತ್ಯೆ ಮಾಡಿದ್ದರು. ಪೊಲೀಸರು 100ಕ್ಕೂ ಹೆಚ್ಚು ಜನರನ್ನು ಬಂಧಿಸಿದ್ದರು. ಪ್ರಕರಣವನ್ನು ಸಿಬಿಐಗೆ ಹಸ್ತಾಂತರಿಸಲಾಗಿತ್ತು

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

✗ **ಭಾರತೀಯ ಸೇನೆ ಮತ್ತು ಶಂಕಿತ** ಉಗ್ರಗಾಮಿಗಳ ನಡುವೆ ನಡೆದಿದೆ ಎನ್ನಲಾದ ಭಾರಿ ಗುಂಡಿನ ಚಕಮಕಿಯ ವಿಡಿಯೊವೊಂದು ಕೆಲವು ದಿನಗಳಿಂದ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಪಹಲ್ಗಾಮ್ ಭಯೋತ್ಪದನಾ ದಾಳಿಯ ನಂತರ ಭಾರತೀಯ ಸೇನೆಯು ದಾಳಿ ನಡೆಸಿ ಉಗ್ರರನ್ನು ಎನ್‌ಕೌಂಟರ್ ಮಾಡಿರುವ ದೃಶ್ಯ ಎಂದು ಪ್ರತಿಪಾದಿಸುತ್ತಾ ಈ ವಿಡಿಯೊವನ್ನು ಹಂಚಿಕೊಳ್ಳಲಾಗುತ್ತಿದೆ. ಆದರೆ ಇದು ಸುಳ್ಳು. ಅದು ಈಗಿನ ವಿಡಿಯೊ ಅಲ್ಲ.

✓ **ವಿಡಿಯೊದ ಒಂದು ಕೀ ಫ್ರೇಮ್** ಅನ್ನು ರಿವರ್ಸ್ ಇಮೇಜ್ ವಿಧಾನದ ಮೂಲಕ ಗೂಗಲ್‌ನಲ್ಲಿ ಹುಡುಕಾಟ ನಡೆಸಿದಾಗ ಆ ವಿಡಿಯೊ 2021ರ ಮೇ ತಿಂಗಳಲ್ಲಿ ಅಪ್‌ಲೋಡ್ ಆಗಿರುವುದು ತಿಳಿದುಬಂತು. ಜಮ್ಮು ಮತ್ತು ಕಾಶ್ಮೀರದ ಎಕ್ಸೆಲ್ಸಿಯರ್ ನ್ಯೂಸ್ ಎಂಬ ಮಾಧ್ಯಮ ಸಂಸ್ಥೆಯು ‘ಡೈಲಿ ಎಕ್ಸೆಲ್ಸಿಯರ್’ ಎಂಬ ತನ್ನ ಅಧಿಕೃತ ವಿಡಿಯೊ ಚಾನೆಲ್‌ನಲ್ಲಿ ವಿಡಿಯೊವನ್ನು ಅಪ್‌ಲೋಡ್ ಮಾಡಿತ್ತು. ಅದು ಕೊಕರ್ನಾಗ್‌ನಲ್ಲಿ ನಡೆದ ಎನ್‌ಕೌಂಟರ್‌ನ ವಿಡಿಯೊವಾಗಿತ್ತು. ಕೊಕರ್ನಾಗ್‌ನ ವೈಲೂ ಪ್ರದೇಶದಲ್ಲಿ ಭಾರತೀಯ ಭದ್ರತಾ ಪಡೆಗಳು ಎನ್‌ಕೌಂಟರ್ ನಡೆಸಿ ಮೂವರು ಲಷ್ಕರ್ ಎ-ತಯಬಾದ ಉಗ್ರರನ್ನು ಹೊಡೆದುರುಳಿಸಿರುವ ಬಗ್ಗೆ 2011ರ ಮೇ 11ರಂದು ಮಾಧ್ಯಮಗಳು ವರದಿಯನ್ನೂ ಪ್ರಕಟಿಸಿದ್ದವು. ಈ ಹಳೆಯ ವಿಡಿಯೊವನ್ನು ಈಗ ಪಹಲ್ಗಾಮ್ ದಾಳಿಯ ಜೊತೆ ತಳಕು ಹಾಕಲಾಗುತ್ತಿದ್ದು, ಈ ವಿಡಿಯೊಕ್ಕೆ ಈಗಿನ ಬೆಳವಣಿಗೆಗಳಿಗೂ ಸಂಬಂಧ ಇಲ್ಲ ಎಂದು ಬೂಮ್ ಫ್ಯಾಕ್ಟ್ ಚೆಕ್ ವರದಿ ಪ್ರಕಟಿಸಿದೆ.

ಗುಂಡಣ್ಣ

ಡೊನೇಶನ್ ಇಲ್ಲದ ಪಾಠಶಾಲೆ!

ನುಡಿ ಬೆಳಗು 185

ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

ತಾಯಿಯ ಗರ್ಭದಿಂದ ಭೂಮಿಗೆ ಬಂದ ಮಗು ಅಳುತ್ತದೆ. ಭೂಮಿಯನ್ನು ಬಿಟ್ಟು ಹೋಗುವ ಮನುಷ್ಯನೂ ಅಳುತ್ತಾನೆ. ಭೂಮಿಗೆ ಬಂದ ಮಗು ಏನು ಪಡೆಯಬೇಕು ಅಂತ ಅಳುತ್ತಿದೆ. ಭೂಮಿಯನ್ನು ಬಿಟ್ಟು ಹೋಗುವ ಮನುಷ್ಯ ತಾನು ಏನನ್ನು ಕಳೆದುಕೊಳ್ಳುತ್ತೇನೆ ಎಂದು ಅಳುತ್ತಾನೆ. ಭೂಮಿಗೆ ಬಂದ ಮಗು ಸಂತೋಷ ಪಡೆಯಬೇಕು ಅಂತ ಅಳುತ್ತದೆ. ಭೂಮಿಯನ್ನು ಬಿಟ್ಟು ಹೋಗುವ ಮನುಷ್ಯ ಸಂತೋಷ ಕಳೆದುಹೋಗುತ್ತದೆ ಎಂದು ಅಳುತ್ತಾನೆ. ಮನುಷ್ಯನ ಪರಮ ಗುರಿ ಏನು ಎಂದರೆ, ಸಾಯುವವರೆಗೆ ನಾವು ಸಂತೋಷವಾಗಿ ಬದುಕಬೇಕು ಎನ್ನುವುದೇ ಆಗಿದೆ. ಸಂತೋಷವಾಗಿ ಬದುಕಲು ಮನುಷ್ಯನಿಗೆ ಏನು ಬೇಕು? ಉಣ್ಣಲಿಕ್ಕೆ ಅನ್ನ ಬೇಕು, ಉಡಲು ಅರಿವೆ ಬೇಕು, ಇರಲಿಕ್ಕೆ ಆಶ್ರಯ ಬೇಕು. ಇಷ್ಟಿದ್ದರೆ ಸಾಲದು. ಅನ್ನ, ಅರಿವೆ, ಆಶ್ರಯದ ಜೊತೆಗೆ ಹೇಗೆ ಬದುಕಬೇಕು ಎನ್ನುವ ಅರಿವು ಇರಬೇಕು. ಅಂದರೆ ಮಾತ್ರ ಸಂತೋಷವಾಗಿ ಇರಬಹುದು.

ಒಂದು ಕಲ್ಲು ಇದೆ. ಅದನ್ನು ಅರಿವು ಇಲ್ಲದ ವ್ಯಕ್ತಿಗೆ ಕೊಟ್ಟರೆ ಅವನು ಅದನ್ನು ಒಡೆದು ಹಾಕುತ್ತಾನೆ. ಅರಿವು ಪ್ರಜ್ಞೆ ಇದ್ದವನಿಗೆ ಕೊಟ್ಟರೆ ಅವನು ಅದನ್ನು ಶಂಕರನ ಮೂರ್ತಿಯನ್ನಾಗಿ ಮಾಡುತ್ತಾನೆ. ಮೊಬೈಲ್ ಬಿದ್ದರೆ ಒಡೆಯಬಾರದು ಎಂದು ಸ್ಕ್ರೀನ್ ಗಾರ್ಡ್ ಹಾಕುತ್ತೇವೆ. ಆದರೆ ಬೈಕ್‌ನಲ್ಲಿ ಹೋಗುವಾಗ ಬಿದ್ದರೆ ತಲೆ ಒಡೆಯಬಾರದು ಎಂದು ಹೆಲ್ಮೆಟ್ ಹಾಕಿಕೊಳ್ಳಬೇಕು ಎಂಬ ಅರಿವು ನಮಗೆ ಇರುವುದಿಲ್ಲ. ಕನ್ನಡದಲ್ಲಿ 49 ಮೂಲಾಕ್ಷರ ಇವೆ. ಇದೇ ಮೂಲಾಕ್ಷರಗಳನ್ನು ಬಳಸಿದ ಕುವೆಂಪು, ಬೇಂದ್ರೆ ಜ್ಞಾನಪೀಠ ಪ್ರಶಸ್ತಿ ಪಡೆದರು. ಅವೇ ಮೂಲಾಕ್ಷರಗಳನ್ನು ನಾವು ಬಳಸಿದ್ದೇವೆ. ಆದರೆ ನಮಗೆ ಯಾವುದೇ ಪ್ರಶಸ್ತಿ ಬಂದಿಲ್ಲ. ಯಾಕೆಂದರೆ ನಾವು ಅಕ್ಷರ ಬಳಸಿ ಇನ್ನೊಬ್ಬರಿಗೆ ಬೆಂಕಿ ಹಚ್ಚುವ ಕೆಲಸ ಮಾಡುತ್ತೇವೆ. ಅರಿವು ಇರುವವರು ಜ್ಞಾನಪೀಠ ಪ್ರಶಸ್ತಿ ಪಡೀತಾರೆ. ಅರಿವು ಇಲ್ಲದವರು ಬೆಂಕಿ ಹಚ್ಚುವ ಕೆಲಸ ಮಾಡುತ್ತಾರೆ.

ಹಾಲು ಕುಡಿದರೆ ಏನಾಗುತ್ತದೆ ಎನ್ನುವುದು ಗೊತ್ತಿದೆ. ಅದೇ ಆಲ್ಕೊಹಾಲ್ ಕುಡಿದರೆ ಏನಾಗುತ್ತದೆ ಎನ್ನುವುದೂ ಗೊತ್ತಿದೆ. ಆದರೂ ಆಲ್ಕೊಹಾಲ್ ಕುಡೀತಾರೆ. ಅಂದರೆ ಅವರಿಗೆ ಅರಿವು ಇಲ್ಲ ಎಂದೇ ಅರ್ಥ. ಅದಕ್ಕಾಗಿ ಮನುಷ್ಯ ಹುಟ್ಟಿನಿಂದ ಸಾಯುವವರೆಗೆ ಮಾಡುವ ಒಂದೇ ಒಂದು ಕೆಲಸ ಎಂದರೆ, ಕಲಿಯುವುದು. ಕಲೀಬೇಕು ಮನುಷ್ಯ. ಜಗತ್ತು ಬಹಳ ಕಲಿಸುತ್ತದೆ. ಪ್ರತಿ ಕ್ಷಣ ಇಲ್ಲಿ ಕಲಿಯುವುದು ಇದೆ. ಜೀವನ ಕಲಿಸುವುದನ್ನು ಯಾವಾಗಲೂ ನಿಲ್ಲಿಸುವುದಿಲ್ಲ. ಅದಕ್ಕೆ ನೀವು ಎಂದೂ ಕಲಿಯುವುದನ್ನು ಬಿಡಬೇಡಿರಿ.

ಶಾಲೆ ಕಲಿತವರು ಮಾತ್ರ ಕಲಿಸುತ್ತಾರೆ ಎನ್ನುವುದಲ್ಲ. ಮಂದಿ ನಂಬಿ ಕೆಟ್ಟವರಿದ್ದಾರೆ. ಮಣ್ಣು ನಂಬಿ ಕೆಟ್ಟವರಿಲ್ಲ ಎಂದು ಅನಕ್ಷರಸ್ಥ ತಂದೆ ತಾಯಿ ಕಲಿಸಿಲ್ಲವೇನು? ತಾಯಂದಿರು ಕುಕ್ಕರ್‌ನಲ್ಲಿ ಅಡುಗೆ ಮಾಡುತ್ತಾರೆ. ಆ ಕುಕ್ಕರ್ ಸಹ ನಮಗೆ ಏನು ಕಲಿಸುತ್ತದೆ ನೋಡಿ. ಬುಡಕ್ಕೆ ಬೆಂಕಿ ಹಚ್ಚಿದರೂ ಸಂತೋಷವಾಗಿ ಸೀಟಿ ಹೊಡೀಬೇಕು ಎನ್ನುವುದನ್ನು ಅದು ಕಲಿಸುತ್ತದೆ. ನೋಡಿ ಕಲಿಯಬೇಕು ನಾವು. ಮಿಕ್ಸರ್ ಇರತ್ತೈತಿ. ಅದು ಏನು ಕಲಿಸುತ್ತದೆ; ಹೊಟ್ಟೆಯಲ್ಲಿ ಏನೇ ಸಂಕಟ ಇರಲಿ, ಬಾಯಿ ಮುಚ್ಚಿಕೊಂಡು ಕೆಲಸ ಮಾಡೋದನ್ನು ಕಲಿ ಎನ್ನುವುದನ್ನು ಅದು ನಮಗೆ ಕಲಿಸುತ್ತದೆ. ಜೀವನ ಎಲ್ಲವನ್ನೂ ಕಲಿಸುತ್ತದೆ. ಜಗತ್ತು ಎಂದರೆ ಡೊನೇಷನ್ ಇಲ್ಲದ ಪಾಠಶಾಲೆ. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಗುರುವಾರ ಮೇ 1, 2025

ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ವೈಶಾಖ ಶುಕ್ಲ ಚತುರ್ಥಿ ಗಂ. 11-24 ನಕ್ಷತ್ರ: ಮೃಗಶಿರ ಗಂ. 14-21 ಯೋಗ: ಅತಿಗಂಡ ಗಂ. 8-34 ಕರಣ: ವಿಷ್ಟಿ ಗಂ. 11-24, ಮೇಷ ಮಾಸದ 18 ನೇ ದಿನ.
ರಾಹುಕಾಲ: ಮಧ್ಯಾಹ್ನ 01-30–03-00
ಸೂರ್ಯೋದಯ: 06-13 **ಸೂರ್ಯಾಸ್ತ:** 06-42
ಮುಸ್ಲಿಂ ದಿನಾಂಕ: 02 ಜುಲ್ಕಾಯಿದ್
ದಿನ ವಿಶೇಷ: ಮೇ ಡೇ, ಅದೃಷ್ಟ ಸಂಖ್ಯೆ : 11, 7

ಮೇಷ: ಛಲದಿಂದ ಕೆಲಸ ಹುಡುಕುವಿರಿ. ಕೆಲವೊಂದು ಸನ್ನಿವೇಶಗಳು ನಿಮ್ಮ ಪರವಾಗಿ ಇಲ್ಲದಿದ್ದ ಪಕ್ಷದಲ್ಲಿ ಪರಿಸ್ಥಿತಿಗೆ ತಕ್ಕಂತೆ ಹೊಂದಾಣಿಕೆ ಮಾಡಿಕೊಳ್ಳುವುದು ಸೂಕ್ತ.

ವೃಷಭ: ಷೇರುಪೇಟೆಯ ಹೂಡಿಕೆಯಲ್ಲಿ ಬುದ್ಧಿವಂತಿಕೆ ಉಪಯೋಗಿಸಬೇಕಾಗುತ್ತದೆ. ಕೈ ಕಾಲು ಸೆಳೆತದಂಥ ವ್ಯಾಧಿಯಲ್ಲಿ ಹಳ್ಳಿ ಔಷಧಿಯನ್ನು ಮಾಡಿ. ಹಿರಿಯರು ತಪ್ಪುಗಳನ್ನು ಹೇಳಿದಾಗ ಒಪ್ಪಿಕೊಳ್ಳಿ.

ಮಿಥುನ: ಮಗ ಅಥವಾ ಮಗಳ ಆರೋಗ್ಯದ ವಿಚಾರವಾಗಿ ಆಸ್ಪತ್ರೆಗೆ ತಿರುಗಾಡುವ ಪರಿಸ್ಥಿತಿ ಬರುತ್ತದೆ. ಸಂಬಂಧಿಕರ ಮಾತುಗಳು ಬೇಸರವನ್ನು ತರಬಹುದು. ದೈಹಿಕ ಆಯಾಸವಾಗುವುದರಿಂದ ಕೆಲಸಗಳನ್ನು ಬೇಗ ಮುಗಿಸಿರಿ.

ಕರ್ಕಾಟಕ: ದೇಹದಲ್ಲಾಗುವ ಪ್ರತಿ ಬದಲಾವಣೆಗಳನ್ನು ಸೂಕ್ಷ್ಮವಾಗಿ ಗಮನಿಸಿ. ಆಲಸ್ಯತನವನ್ನು ದೂರ ಮಾಡಿಕೊಂಡು ಸಾಮರ್ಥ್ಯವನ್ನು ಸಂಪೂರ್ಣವಾಗಿ ಬಳಸಿಕೊಳ್ಳುವುದನ್ನು ಅಭ್ಯಾಸ ಮಾಡಿ.

ಸಿಂಹ: ರೋಗಿಯ ಸೇವೆಯಲ್ಲಿ ಇಡೀ ದಿನವು ಕಳೆದು ಹೋಗುವುದು. ಹಾಲು ಹಾಗೂ ಅದಕ್ಕೆ ಸಂಬಂಧಪಟ್ಟ ವಸ್ತುಗಳ ಮಾರಾಟಗಾರರಿಗೆ ಉತ್ತಮ ಲಾಭ ಇರಲಿದೆ. ಅನಿರೀಕ್ಷಿತ ತಿರುಗಾಟ ಇರಲಿದೆ.

ಕನ್ಯಾ: ಮಕ್ಕಳ ಬಗ್ಗೆ ಬೇರೆಯವರು ವಿಷಯ ತಿಳಿಸುವ ಮೊದಲು ಗಮನಿಸಿ. ಸಮಯಕ್ಕೆ ಸರಿಯಾಗಿ ಕೆಲಸವನ್ನು ಮುಗಿಸಿಕೊಳ್ಳುವಿರಿ. ಉಪ್ತವಾಗಿ ಇರುವ ಪ್ರತಿಭೆಯನ್ನು ಎಲ್ಲರೂ ನೋಡುವರು.

ತುಲಾ: ಕಾರ್ಮಿಕರ ಮೇಲ್ವಿಚಾರಣೆ ಮಾಡುವಂಥವರಿಗೆ ಕೆಲಸದಲ್ಲಿ ಇಟ್ಟ ಶ್ರದ್ಧೆಯಿಂದಾಗಿ ಉನ್ನತ ಹಂತಕ್ಕೆ ತಲುಪುವಿರಿ. ಇತ್ತೀಚಿನ ದಿನಗಳಲ್ಲಿ ಜೀವನದಲ್ಲಾಗುತ್ತಿರುವ ಉನ್ನತಿಯು ಶತ್ರುಗಳ ಕಣ್ಣನ್ನು ಕೆಂಪಾಗಿಸುವುದು.

ವೃಶ್ಚಿಕ: ಅಡುಗೆ ಕೆಲಸ ಮಾಡುವವರಿಗೆ ಕೆಲಸದ ಬಿಗಿಯಿಂದಾಗಿ ಸ್ವಂತ ಕೆಲಸ ಮಾಡಿಕೊಳ್ಳುವುದು ದುಸ್ತರವಾಗುತ್ತದೆ. ಪ್ರಯಾಣದ ಸಂದರ್ಭದಲ್ಲಿ ದ್ವಿಚಕ್ರ ವಾಹನಕ್ಕಿಂತ ಚತುಶ್ಚಕ್ರ ವಾಹನವನ್ನು ಬಳಸುವುದು ಲೇಸು.

ಧನು: ಕೆಲಸಗಳ ಒತ್ತಡದ ನಡುವೆ ಇತರರಿಗೆ ಸಹಾಯವನ್ನು ಮಾಡುವಿರಿ. ಮನೆಯಲ್ಲಿ ನಡೆಯುವ ಮಂಗಳಕಾರ್ಯಗಳಿಗೆ ಉಪಯೋಗಕ್ಕೆ ಬರುವಂಥ ಪೂಜಾ ಸಾಮಗ್ರಿಗಳ ಖರೀದಿಯನ್ನು ನಡೆಸುವಿರಿ.

ಮಕರ: ಸೊಸೆಯರು, ಅತ್ತೆಯೊಂದಿಗೆ ಸಂಬಂಧವನ್ನು ಸ್ಥಾಪಿಸುವಲ್ಲಿ ಕೆಲವು ಕಾರ್ಯಗಳನ್ನು ಮಾಡುವಿರಿ. ಶಾಲಾ ಸಮಯದ ಗೆಳೆಯರೊಂದಿಗೆ ದೂರದ ಪ್ರಯಾಣ ನಡೆಸುವ ಯೋಜನೆಯನ್ನು ಮಾಡುವಿರಿ.

ಕುಂಭ: ಜೀವನದಲ್ಲಿ ಉಂಟಾಗುತ್ತಿರುವ ಅನುಭವಗಳನ್ನು ಸಂತೋಷದಲ್ಲಿ ಸ್ವಾಗತಿಸುವಿರಿ. ಕಷ್ಟದ ಪರಿಸ್ಥಿತಿಯಲ್ಲಿ ಆಗಿ ಬಂದವರ ಋಣವನ್ನು ತೀರಿಸಲು ಅವಕಾಶ ದೊರೆಯುವುದು.

ಮೀನ: ವಯಸ್ಸಿನಲ್ಲಿ ಸಣ್ಣವರೊಂದಿಗೆ ವ್ಯವಹರಿಸುವಾಗ ತಾಳ್ಮೆ ಹೊಂದುವುದು ಮುಖ್ಯವಾಗುವುದು. ಪ್ರತಿ ವೈಯಕ್ತಿಕ ನಿರ್ಧಾರವನ್ನು ತೆಗೆದುಕೊಳ್ಳುವಾಗಲೂ ಹೆಂಡತಿಯೊಂದಿಗೆ ಚರ್ಚಿಸಿ.

ಪದಬಂಧ 6028

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ನಾಡಾಡಿ ಇಲ್ಲಿದ್ದಾನೆ (4)
4.ಜೋಗ್‌ಜಲಪಾತವು ಈ ನದಿಯಿಂದ ರೂಪುಗೊಂಡಿದೆ (4)
6.ಯಾವುದೇ ಪ್ರಯೋಜನವಿಲ್ಲದ್ದು (4)
8.ಕಡಲ ಹತ್ತಿರ ಪಡೆದ ಸಾಲ! (2)
9.ಹೊಂಬಳ ಗ್ರಾಮದಲ್ಲಿ ಜನಿಸಿದ ಚೆಂಬೆಳಕಿನ ಕವಿ (7)
11.ಸಂದುಗೊಂದುಗಳಲ್ಲಿ ಕಾಣುತ್ತಿರುವ ಅಂಟು! (2)
14.ನಡುವೆ ವರ ತಿರುಗಿ ನೀಡಿದ ಆಶ್ವಾಸನೆ(4)
15.ಮಂಗಳಾದೇವಿ ದೇವಾಲಯವಿರುವ ಪ್ರಮುಖ ಕೈಗಾರಿಕಾ ಬಂದರು ನಗರ (4)
16.ಈಕೆ ಬಹಳ ಬುದ್ಧಿವಂತೆ (4)

ಮೇಲಿಂದ ಕೆಳಕ್ಕೆ
1.ಈತ ತತ್ವಜ್ಞಾನಿ (4)
2.ಹತ್ತು ವರ್ಷಗಳ ಅವಧಿ (3)
3.ಬೀಜ ಬಿತ್ತಲು ಮಾಡಿರುವ ಮಡಿ (2)
5.ಶ್ರೇಷ್ಠನಾದ ಕವಿ (4)
7.ನೋಡುಗ ಇಲ್ಲಿ ತಿರುಗಿದ್ದಾನಲ್ಲಾ! (3)
9.ರಾಜ ಕಾಲಾಳುಗಳಿಂದ ಆಡುವ ಒಳಾಂಗಣ ಆಟ (4)
10.ಆನೆಯ ಮರಿ (3)
12.ಶುಭಕಾರ್ಯಗಳಲ್ಲಿ ಹಾಕುವ ಆಸನ (4)
13.ಕರುವಿಗೆ ತೋರಿದ ದಯೆ (3)
15.ಮಂಗಳವಾರ ಕಾಣಿಸಿದ ಕಪಿ (2)



6027ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ವಿಶ್ವವಿದ್ಯಾಲಯ 3.ತತ್ತಿ 4.ತಿರುಕ 5.ಮಡದಿ 7.ಲಿಪಿ 8.ಜನಕ 10.ಯವನ 12.ಸಾಮು 14.ವಲ್ಲರಿ 15.ನಿಕ್ಷೇಪ 17.ಹಸು 18.ಲೋಕವ್ಯವಹಾರ
ಮೇಲಿಂದ ಕೆಳಕ್ಕೆ: 1.ವಿನಿಮಯ 2.ಯತಿ 3.ತಕಲಿ 6.ದಿಗ್ವಿಜಯ 8.ಜವಾನ 9.ಕಲರವ 11.ಪರಿಹಾರ 13.ಮುನಿಸು 16.ಪಲೋ

ಸುಡೊಕು 6413

		6		4		3		5
	3		5					
	9	2		3		7		1
2	1		9		3	6		
				1			5	3
3	8			5			7	
9		8						7
				9			3	
4		3			1	2		6

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ

6412 ಸುಡೊಕು

2	4	8	1	6	3	5	9	7
7	5	6	4	9	8	2	3	1
1	3	9	2	5	7	4	8	6
6	1	5	9	7	4	8	2	3
3	9	7	8	1	2	6	5	4
8	2	4	6	3	5	7	1	9
5	6	3	7	2	1	9	4	8
9	8	2	3	4	6	1	7	5
4	7	1	5	8	9	3	6	2

2,380 ಕೆ.ಜಿ ಚಿನ್ನ, 4,560 ಕೆ.ಜಿ ಬೆಳ್ಳಿ ಮಾರಾಟ • ರಾಜ್ಯದಲ್ಲಿ ಒಂದೇ ದಿನ ₹3 ಸಾವಿರ ಕೋಟಿ ವಹಿವಾಟು

ಅಕ್ಷಯ ತೃತೀಯ: ಬಂಗಾರ ಖರೀದಿ ಜೋರು

ಪ್ರಜಾವಾಣಿ ವಾರ್ತೆ

ಅಕ್ಷಯ ತೃತೀಯ ಅಂಗವಾಗಿ ಬುಧವಾರ ಬೆಂಗಳೂರಿನ ಗಾಂಧಿ ಬಜಾರ್‌ನಲ್ಲಿರುವ ಚಿನ್ನಾಭರಣ ಮಳಿಗೆಯೊಂದರಲ್ಲಿ ಮಹಿಳೆಯರು ಆಭರಣ ಖರೀದಿಸಿದರು ಚಿತ್ರ: ಎಸ್‌.ಕೆ. ದಿನೇಶ್

ಬೆಂಗಳೂರು: ಬೆಂಗಳೂರು ಸೇರಿ ರಾಜ್ಯದ ವಿವಿಧೆಡೆ ಅಕ್ಷಯ ತೃತೀಯ ದಿನವಾದ ಬುಧವಾರ ಆಭರಣದ ಅಂಗಡಿಗಳಲ್ಲಿ ಚಿನ್ನ ಮತ್ತು ಬೆಳ್ಳಿ ಖರೀದಿ ಜೋರಾಗಿತ್ತು.

ಈ ಮಂಗಳಕರ ದಿನದಂದು ಚಿನ್ನಾಭರಣ ಖರೀದಿಸಿದರೆ ಸಂಪತ್ತು ವೃದ್ಧಿಯಾಗಲಿದೆ ಎಂಬುದು ಜನರ ನಂಬಿಕೆ. ಹಾಗಾಗಿ, ಹಳದಿ ಲೋಹ ಮತ್ತು ಬೆಳ್ಳಿ ಬೆಲೆ ಏರಿಕೆಯಾದರೂ ಗ್ರಾಹಕರಲ್ಲಿ ಖರೀದಿ ಉತ್ಸಾಹ ಕಡಿಮೆಯಾಗಿರಲಿಲ್ಲ. ಬೆಳಿಗ್ಗೆಯಿಂದಲೇ ಅಂಗಡಿಗಳಿಗೆ ದಾಂಗುಡಿ ಇಟ್ಟಿದ್ದರು.

ಕರ್ನಾಟಕ ರಾಜ್ಯ ಆಭರಣ ವರ್ತಕರ ಒಕ್ಕೂಟದ ಮಾಹಿತಿ ಪ್ರಕಾರ, ರಾಜ್ಯದಲ್ಲಿ ಒಂದೇ ದಿನ ಸುಮಾರು ₹3 ಸಾವಿರ ಕೋಟಿ ವಹಿವಾಟು ನಡೆದಿದೆ. ಕಳೆದ ವರ್ಷದ ಅಕ್ಷಯ ತೃತೀಯ ದಿನದಂದು ನಡೆದ ವಹಿವಾಟಿಗೆ ಹೋಲಿಸಿದರೆ ಚಿನ್ನಾಭರಣ ಮಾರಾಟದಲ್ಲಿ ಶೇ 30ರಷ್ಟು ಹೆಚ್ಚಳವಾಗಿದೆ.

‘ಮಂಗಳಕರ ದಿನದಂದು ಗ್ರಾಹಕರು ಉತ್ಸಾಹದಿಂದಲೇ ಚಿನ್ನದ ಆಭರಣಗಳನ್ನು ಖರೀದಿಸಿದ್ದಾರೆ. ರಾಜ್ಯದಲ್ಲಿ 2,380 ಕೆ.ಜಿ ಚಿನ್ನ ಮತ್ತು 4,560 ಕೆ.ಜಿ ಬೆಳ್ಳಿ ಮಾರಾಟವಾಗಿದೆ’ ಎಂದು ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಬಿ. ರಾಮಾಚಾರಿ ‘ಪ್ರಜಾವಾಣಿ’ಗೆ ತಿಳಿಸಿದರು.

ಕಳೆದ ವರ್ಷಕ್ಕೆ ಹೋಲಿಸಿದರೆ ಚಿನ್ನಾಭರಣ ಮಾರಾಟದಲ್ಲಿ ಶೇ 30ರಷ್ಟು ಮತ್ತು ಬೆಳ್ಳಿ ಆಭರಣಗಳ ಮಾರಾಟದಲ್ಲಿ ಶೇ 50ರಷ್ಟು ಹೆಚ್ಚಳವಾಗಿದೆ’ ಎಂದರು.

ಈ ಬಾರಿ ಜಗಜ್ಯೋತಿ ಬಸವೇಶ್ವರ ಜಯಂತಿ ಮತ್ತು ಅಕ್ಷಯ ತೃತೀಯ ಹಬ್ಬವನ್ನು ಒಂದೇ ದಿನ ಆಚರಿಸಲಾಗುತ್ತದೆ. ಹಾಗಾಗಿ, ಬಸವಣ್ಣ, ಶಂಕರಾಚಾರ್ಯ ಅವರ ಚಿತ್ರವಿರುವ ನಾಣ್ಯಗಳಿಗೆ ಬೇಡಿಕೆ ಹೆಚ್ಚಿತ್ತು ಎಂದು ವಿವರಿಸಿದರು.

‘ಸಿನಿಮಾ ನಟರು ಧರಿಸುವ ಕರುಂಗಲಿ ಮಾಲೆ ಇತ್ತೀಚೆಗೆ ಹೆಚ್ಚು ಪ್ರಸಿದ್ಧಿ ಪಡೆದಿದೆ. ಈ ಬಾರಿ ಚಿನ್ನದ ಕರುಂಗಲಿ ಮಾಲೆಗಳಿಗೆ ಹೆಚ್ಚಿನ ಬೇಡಿಕೆ ಕಂಡುಬಂದಿತು’ ಎಂದರು.

ಗ್ರಾಹಕರನ್ನು ಸೆಳೆಯಲು ಚಿನ್ನದ ಅಂಗಡಿಗಳಿಂದ ರಿಯಾಯಿತಿ ಘೋಷಿಸಲಾಗಿತ್ತು. ಅಲ್ಲದೆ, ಪ್ರಮುಖ ಜ್ಯುವೆಲ್ಲರಿ ಬ್ರ್ಯಾಂಡ್‌ಗಳಿಂದ ಚಿನ್ನ, ಬೆಳ್ಳಿ, ವಜ್ರದ ಆಭರಣಗಳ ತಯಾರಿಕೆ ವೆಚ್ಚದಲ್ಲಿ ರಿಯಾಯಿತಿ ಪ್ರಕಟಿಸಲಾಗಿತ್ತು.

ಚಿನ್ನದ ದರ ₹900, ಬೆಳ್ಳಿ ₹4 ಸಾವಿರ ಇಳಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಬುಧವಾರ ನಡೆದ ವಹಿವಾಟಿನಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆಯು ಇಳಿಕೆಯಾಗಿದೆ.

ಬೆಳ್ಳಿ ದರವು ಕೆ.ಜಿಗೆ ₹4 ಸಾವಿರ ಇಳಿಕೆಯಾಗಿದ್ದು, ₹98 ಸಾವಿರ ಆಗಿದೆ.

10 ಗ್ರಾಂ ಚಿನ್ನದ ದರವು (ಶೇ 99.9 ಪರಿಶುದ್ಧತೆ) ₹900 ಕಡಿಮೆಯಾಗಿದ್ದು, ₹98,550ರಂತೆ ಮಾರಾಟವಾಗಿದೆ.

ಆಭರಣ ಚಿನ್ನದ ದರವು (ಶೇ 99.5 ಪರಿಶುದ್ಧತೆ) ಇಷ್ಟೇ ಪ್ರಮಾಣದಲ್ಲಿ ಇಳಿಕೆಯಾಗಿ, ₹98,100 ಆಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಡೊನಾಲ್ಡ್ ಟ್ರಂಪ್ ಅವರು ಆಟೊ ವಲಯದ ಮೇಲಿನ ಆಮದು ಸುಂಕ ಕಡಿಮೆ ಮಾಡುವ ಕಾರ್ಯಕಾರಿ ಆದೇಶಕ್ಕೆ ಸಹಿ ಹಾಕಿದ್ದಾರೆ. ಮತ್ತೊಂದೆಡೆ ಭಾರತ ಸೇರಿ ಹಲವು ರಾಷ್ಟ್ರಗಳ ಜೊತೆ ದ್ವಿಪಕ್ಷೀಯ ವ್ಯಾಪಾರ ಕುರಿತು ಮಾತುಕತೆ ನಡೆಸುತ್ತಿದ್ದಾರೆ. ಇದು ಚಿನ್ನದ ದರ ಇಳಿಕೆಗೆ ಕಾರಣವಾಗಿದೆ.

ಚಿನ್ನಕ್ಕೆ ತಗ್ಗಿದ ಬೇಡಿಕೆ

ನವದೆಹಲಿ (ಪಿಟಿಐ): ಬೆಲೆ ಏರಿಕೆಯಿಂದಾಗಿ ದೇಶದಲ್ಲಿ ಚಿನ್ನದ ಬೇಡಿಕೆ ಪ್ರಮಾಣ ಕುಸಿದಿದೆ. ಪ್ರಸಕ್ತ ವರ್ಷದ ಮೊದಲ ತ್ರೈಮಾಸಿಕದಲ್ಲಿ (ಜನವರಿ–ಮಾರ್ಚ್) ಒಟ್ಟು ಬೇಡಿಕೆ 118.1 ಟನ್ ಆಗಿದೆ. ಕಳೆದ ವರ್ಷದ ಇದೇ ಅವಧಿಗೆ ಹೋಲಿಸಿದರೆ ಶೇ 15ರಷ್ಟು ಇಳಿಕೆಯಾಗಿದೆ ಎಂದು ವಿಶ್ವ ಚಿನ್ನ ಸಮಿತಿ (ಡಬ್ಲ್ಯುಜಿಸಿ) ಬುಧವಾರ ತಿಳಿಸಿದೆ.

ಈ ಬೇಡಿಕೆಯು ಮೌಲ್ಯದ ಲೆಕ್ಕದಲ್ಲಿ ₹94,030 ಕೋಟಿ ಆಗಿದೆ. ಕಳೆದ ವರ್ಷದ ಇದೇ ತ್ರೈಮಾಸಿಕಕ್ಕೆ ಹೋಲಿಸಿದರೆ ಶೇ 22ರಷ್ಟು ಕಡಿಮೆಯಾಗಿದೆ ಎಂದು ಹೇಳಿದೆ.

ಪ್ರಸಕ್ತ ವರ್ಷದಲ್ಲಿ ಭಾರತದ ಚಿನ್ನದ ಬೇಡಿಕೆಯು 700ರಿಂದ 800 ಟನ್‌ಗೆ ಮುಟ್ಟಲಿದೆ ಎಂದು ಅಂದಾಜಿಸಿದೆ. ಜನವರಿಯಿಂದ ಇಲ್ಲಿಯವರೆಗೆ ಚಿನ್ನದ ಬೆಲೆಯಲ್ಲಿ ಶೇ 25ರಷ್ಟು ಹೆಚ್ಚಳವಾಗಿದೆ. 10 ಗ್ರಾಂ ದರವು ₹1 ಲಕ್ಷ ಹತ್ತಿರದಲ್ಲಿದೆ. ಇದು ಗ್ರಾಹಕರ ಖರೀದಿ ಉತ್ಸಾಹವನ್ನು ಕುಗ್ಗಿಸಿದೆ ಎಂದು ತಜ್ಞರು ಹೇಳಿದ್ದಾರೆ.

‘ದರ ಏರಿಕೆಯು ಖರೀದಿಗೆ ಮೇಲೆ ಪರಿಣಾಮ ಬೀರಿದೆ. ಆದರೆ, ಭಾರತೀಯ ಸಂಸ್ಕೃತಿಯಲ್ಲಿ ಚಿನ್ನಕ್ಕೆ ವಿಶಿಷ್ಟ ಸ್ಥಾನವಿದೆ. ಅಕ್ಷಯ ತೃತೀಯ ಹಾಗೂ ಮದುವೆ ಋತುವಿನಲ್ಲಿ ಗ್ರಾಹಕರಿಂದ ಹಳದಿ ಲೋಹ ಖರೀದಿ ಹೆಚ್ಚಳವಾಗಲಿದೆ’ ಎಂದು ಸಮಿತಿಯ ಭಾರತದ ಸಿಇಒ ಸಚಿನ್ ಜೈನ್ ಹೇಳಿದ್ದಾರೆ.

ದೆಹಲಿ: ಒಂದೇ ದಿನ 21 ಸಾವಿರ ಮದುವೆ

ನವದೆಹಲಿ (ಪಿಟಿಐ): ಅಕ್ಷಯ ತೃತೀಯದಂದು ದೇಶದ ರಾಜಧಾನಿ ದೆಹಲಿಯು 21 ಸಾವಿರ ಮದುವೆಗಳಿಗೆ ಸಾಕ್ಷಿಯಾಗಿದೆ.

ಹಿಂದೂ ಪಂಚಾಂಗದ ಪ್ರಕಾರ ಅಕ್ಷಯ ತೃತೀಯವು ಮಂಗಳಕರವಾಗಿದೆ. ಹಾಗಾಗಿ, ಈ ದಿನದಂದು ಹಿಂದೂ ಕುಟುಂಬಸ್ಥರು ವಧು–ವರರ ವಿವಾಹ ಮಾಡುವುದು ವಾಡಿಕೆ.

ಸಾವಿರಾರು ಸಂಖ್ಯೆಯಲ್ಲಿ ಮದುವೆ ಕಾರ್ಯಕ್ರಮ ಜರುಗುತ್ತಿವೆ. ಇದರಿಂದ ಕಲ್ಯಾಣ ಮಂಟಪ, ಹೋಟೆಲ್, ಅಡುಗೆ, ಸಲೂನ್, ಅಲಂಕಾರ, ಆರ್ಕೆಸ್ಟ್ರಾಕ್ಕೆ ಬೇಡಿಕೆ ಹೆಚ್ಚಿದೆ. ಬುಧವಾರ ಒಂದೇ ದಿನ ₹1 ಸಾವಿರ ಕೋಟಿಗೂ ಹೆಚ್ಚು ವಹಿವಾಟು ನಡೆದಿದೆ ಎಂದು ದೆಹಲಿಯ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ ತಿಳಿಸಿದೆ.

ಸುದ್ದಿ 2 ನಿಮಿಷ

ಮದರ್ ಡೇರಿ, ಅಮೂಲ್ ಹಾಲಿನ ದರ ಲೀಟರ್‌ಗೆ ₹2 ಏರಿಕೆ

ನವದೆಹಲಿ (ಪಿಟಿಐ): ದೇಶದ ಪ್ರಮುಖ ಹಾಲು ಪೂರೈಕೆ ಕಂಪನಿ ಮದರ್ ಡೇರಿ, ಪ್ರತಿ ಲೀಟರ್ ಹಾಲಿನ ದರವನ್ನು ₹2 ಹೆಚ್ಚಿಸಿದೆ.

ರೈತರಿಂದ ಖರೀದಿಸುತ್ತಿರುವ ಹಾಲಿನ ದರ ಹೆಚ್ಚಳವಾಗಿದೆ. ಅಲ್ಲದೆ, ಉತ್ಪಾದನೆ ವೆಚ್ಚವೂ ಏರಿಕೆಯಾಗಿದೆ. ಹೀಗಾಗಿ, ಬೆಲೆ ಏರಿಕೆ ಮಾಡಲಾಗಿದೆ ಎಂದು ಮದರ್ ಡೇರಿ ತಿಳಿಸಿದೆ.

ಟೋನ್ಡ್ ಹಾಲಿನ ದರವನ್ನು ₹54ರಿಂದ ₹56ಕ್ಕೆ ಹಾಗೂ ಡಬಲ್ ಟೋನ್ಡ್ ಹಾಲಿನ ದರವು ₹49ರಿಂದ ₹51ಕ್ಕೆ ಏರಿಕೆಯಾಗಿದೆ.

ದೆಹಲಿ ಮಾರುಕಟ್ಟೆಯಲ್ಲಿ ಕಂಪನಿಯು ಪ್ರತಿನಿತ್ಯ ಅಂದಾಜು 35 ಲಕ್ಷ ಲೀಟರ್ ಹಾಲು ಮಾರಾಟ ಮಾಡುತ್ತದೆ. ಉತ್ತರ ಪ್ರದೇಶ, ಹರಿಯಾಣ, ಉತ್ತರಾಖಂಡ ಮತ್ತು ಬಿಹಾರದಲ್ಲಿಯೂ ಮಾರುಕಟ್ಟೆ ಹೊಂದಿದೆ.

ಅಮೂಲ್ ದರ ಏರಿಕೆ: ಗುಜರಾತ್ ಸಹಕಾರ ಹಾಲು ಮಾರುಕಟ್ಟೆ ಒಕ್ಕೂಟದ (ಜಿಸಿಎಂಎಂಎಫ್) ಅಮೂಲ್ ಬ್ರ್ಯಾಂಡ್‌ನ ಹಾಲಿನ ದರವನ್ನು ಗುರುವಾರದಿಂದ ಜಾರಿಗೆ ಬರುವಂತೆ ₹2 ಹೆಚ್ಚಳ ಮಾಡಲಾಗಿದೆ.

ಇಂದಿನಿಂದ ಎಟಿಎಂ ಶುಲ್ಕ ಹೆಚ್ಚಳ

ಬೆಂಗಳೂರು: ಎಟಿಎಂ ಬಳಕೆ ಶುಲ್ಕವು ಗುರುವಾರದಿಂದ (ಮೇ 1ರಂದು) ಏರಿಕೆಯಾಗಲಿದೆ. ಭಾರತೀಯ ರಿಸರ್ವ್ ಬ್ಯಾಂಕ್‌ನ ಆದೇಶದ ಅನ್ವಯ ಬ್ಯಾಂಕ್‌ಗಳು ಶುಲ್ಕ ಹೆಚ್ಚಳ ಮಾಡಿವೆ.

ಮಾಸಿಕ ಉಚಿತ ವಹಿವಾಟು ಮಿತಿ ಮೀರಿದರೆ ಪ್ರತಿ ವಹಿವಾಟಿಗೆ ಗ್ರಾಹಕರು ₹2 ಹೆಚ್ಚುವರಿ ಶುಲ್ಕ ಭರಿಸಬೇಕಿದೆ. ಪ್ರಸ್ತುತ ಪ್ರತಿ ವಹಿವಾಟಿಗೆ ₹21 ಶುಲ್ಕ ವಿಧಿಸಲಾಗುತ್ತಿದ್ದು, ಇದನ್ನು ಗರಿಷ್ಠ ₹23ಕ್ಕೆ ಏರಿಕೆ ಮಾಡಲಾಗಿದೆ.

ಗ್ರಾಹಕರು ತಮ್ಮ ಖಾತೆ ಇರುವ ಬ್ಯಾಂಕ್‌ನ ಎಟಿಎಂಗಳಿಂದ ಪ್ರತಿ ತಿಂಗಳು ಉಚಿತವಾಗಿ 5 ವಹಿವಾಟು ನಡೆಸಲು ಅವಕಾಶವಿದೆ. ಇತರೆ ಬ್ಯಾಂಕ್‌ನ ಎಟಿಎಂಗಳಲ್ಲಾದರೆ ಮಹಾನಗರಗಳ ವ್ಯಾಪ್ತಿಯಲ್ಲಿ ಮೂರು ಮತ್ತು ಇತರೆ ಪ್ರದೇಶಗಳಲ್ಲಿ 5 ವಹಿವಾಟುಗಳನ್ನು ಉಚಿತವಾಗಿ ನಡೆಸಬಹುದಾಗಿದೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	24,335
ಇಂದಿನ ಅಂತ್ಯ	24,334
▼	1
ದಿನದ ಕನಿಷ್ಠ	24,198

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹475
12 ಕ್ಕೆ	₹64
ಮೈಸೂರು	
100ಕ್ಕೆ	₹490

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹200-595
ದ್ವಿತಳಿ (ಬಿ.ವಿ)	₹399-715

ಎನ್‌.ಆರ್‌.ಪುರ ರಬ್ಬರ್

ಆರ್‌ಎಸ್‌ಎಸ್‌-4	₹195
ಆರ್‌ಎಸ್‌ಎಸ್‌-5	₹190
ಗುಡ್ ಲಾಟ್	₹180

(ಪ್ರತಿ ಕೆ.ಜಿಗೆ)

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹29000
ಎಸಿ	₹16800
ಆರ್‌ಪಿ	₹22600
ಆರ್‌ಸಿ	₹12400

ವಿನಿಮಯ ದರ

$ ಡಾಲರ್	84.54
£ ಪೌಂಡ್	112.91
€ ಯುರೊ	96.03
¥ ಯೆನ್ (100ಕ್ಕೆ)	59

ಮುಂಬೈ ಧಾರಣೆ

ಶೇಂಗಾ

30-04-2025

ಜಾವಾ 70/80(ಹೊಸ)	9500-9600
ಜಾವಾ 80/90(ಹೊಸ)	9000-9100
ದಪ್ಪ ಮಧ್ಯಪ್ರದೇಶ(ಹೊಸ)	7400-7500
ದಪ್ಪ ಗುಜರಾತ್(ಹೊಸ)	7700-7800

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1330 (1340)
ಒಂದು ವಾರದ ಡೆಲಿವರಿ	1325 (1335)
ಪಾಮ್ ವಾರದ ಡೆಲಿವರಿ	1238 (1248)
ಸೂರ್ಯಕಾಂತಿ ಎಣ್ಣೆ ಕಚ್ಚಾ	1325 (1325)

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1320 (1330)
ಸೋಯಾ (ರಿಫೈನ್ಡ್)	₹1255 (1275)
ಸೂರ್ಯಕಾಂತಿ (ರಿಫೈನ್ಡ್)	₹1380 (1380)
ಪಾಮೋಲಿನ್	₹1240 (1250)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ ₹94,250 (95,750)

ಬೆಳ್ಳಿ ಕೆ.ಜಿ ₹94,300 (97,500)

ಆವರಣದಲ್ಲಿ ಹಿಂದಿನ ವಹಿವಾಟಿನ ದರ

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ದೆಹಲಿ: ಉಪೇಂದ್ರನಾಥ ಬ್ರಹ್ಮ ರಸ್ತೆ ಉದ್ಘಾಟನೆ ಇಂದು

ಪ್ರಜಾವಾಣಿ ವಾರ್ತೆ

ನವದೆಹಲಿ: ದೆಹಲಿ ಮಹಾನಗರ ಪಾಲಿಕೆಯು ದಕ್ಷಿಣ ದೆಹಲಿಯಲ್ಲಿ ಇರುವ ಲಾಲಾ ಲಜಪತ್ ರಾಯ್ ಮಾರ್ಗದ ಒಂದು ಭಾಗದ ರಸ್ತೆಗೆ ಬೋಡೊ ಸಮುದಾಯದ ನೇತಾರ ‘ಬೋಡೊಫಾ’ ಉಪೇಂದ್ರನಾಥ ಬ್ರಹ್ಮ ಅವರ ಹೆಸರನ್ನು ಮರುನಾಮಕರಣ ಮಾಡಿದೆ.

ಈ ರಸ್ತೆಯು ಕೈಲಾಶ್ ಕಾಲೊನಿಯ ಮೆಟ್ರೊ ನಿಲ್ದಾಣ ಬಳಿಯಿಂದ ಬೋಡೊಲ್ಯಾಂಡ್ ಅತಿಥಿ ಗೃಹದವರೆಗೆ ವಿಸ್ತರಿಸಿದೆ.

ಉಪೇಂದ್ರನಾಥ ಅವರನ್ನು ‘ಬೋಡೊಫಾ’ ಎಂದು ಕರೆಯಲಾಗುತ್ತದೆ. ಬೋಡೊಗಳ ರಕ್ಷಕ ಎಂಬುದು ಇದರರ್ಥ. ಅವರು ಆಲ್ ಬೋಡೊ ಸ್ಟೂಡೆಂಟ್ಸ್ ಯೂನಿಯನ್ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ಈ ಸಮುದಾಯದ ಶಿಕ್ಷಣ ಮತ್ತು ಅಭಿವೃದ್ಧಿಗೆ ತಮ್ಮ ಜೀವನವನ್ನು ಮುಡಿಪಾಗಿಟ್ಟಿದ್ದು ಅವರ ಹೆಗ್ಗಳಿಕೆ.

ಮೇ 1ರಂದು ಕೈಲಾಸ್ ಕಾಲೊನಿಯಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಮರುನಾಮಕರಣಗೊಂಡಿರುವ ರಸ್ತೆ ಹಾಗೂ ಉಪೇಂದ್ರನಾಥ ಅವರ ಪ್ರತಿಮೆಯನ್ನು ಕೇಂದ್ರ ಗೃಹ ಸಚಿವ ಅಮಿತ್ ಶಾ ಅನಾವರಣ ಮಾಡಲಿದ್ದಾರೆ.

ಅಸ್ಸಾಂ ಮುಖ್ಯಮಂತ್ರಿ ಹಿಮಂತ್ ಬಿಸ್ವ ಶರ್ಮಾ, ದೆಹಲಿ ಮುಖ್ಯಮಂತ್ರಿ ರೇಖಾ ಗುಪ್ತ, ಬೋಡೊಲ್ಯಾಂಡ್ ಪ್ರಾದೇಶಿಕ ಮಂಡಳಿಯ ಕಾರ್ಯನಿರ್ವಾಹಕ ಸದಸ್ಯ ಪ್ರಮೋದ್ ಬೋರೊ, ದೆಹಲಿ ಮಹಾನಗರ ಪಾಲಿಕೆಯ ಮೇಯರ್ ರಾಜಾ ಇಕ್ಬಾಲ್ ಸಿಂಗ್ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ.

ಉಪೇಂದ್ರನಾಥ ಬ್ರಹ್ಮ ಅವರ 35ನೇ ವರ್ಷ ಸಂಸ್ಮರಣೆ ಅಂಗವಾಗಿ ಅಸ್ಸಾಂ ಸರ್ಕಾರವು ಈ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ.

ರೂಪಾಯಿ ಮೌಲ್ಯ 42 ಪೈಸೆ ಏರಿಕೆ

ಮುಂಬೈ (ಪಿಟಿಐ): ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಬುಧವಾರದ ವಹಿವಾಟಿನಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು 42 ಪೈಸೆ ಏರಿಕೆಯಾಗಿದೆ. ಪ್ರತೀ ಡಾಲರ್ ಮೌಲ್ಯ ₹84.54 ಆಗಿದೆ.

ಭಾರತ ಮತ್ತು ಅಮೆರಿಕದ ನಡುವಿನ ದ್ವಿಪಕ್ಷೀಯ ವ್ಯಾಪಾರ ಒಪ್ಪಂದ ಕುರಿತ ಮಾತುಕತೆಯು ಉತ್ತಮವಾಗಿ ನಡೆಯುತ್ತಿದೆ ಎಂದು ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ. ದೇಶದ ಈಕ್ವಿಟಿ ಮಾರುಕಟ್ಟೆಯಲ್ಲಿ ವಿದೇಶಿ ಬಂಡವಾಳದ ಒಳಹರಿವು ಹೆಚ್ಚಿದೆ. ಹೀಗಾಗಿ, ರೂಪಾಯಿ ಮೌಲ್ಯ ಏರಿಕೆಯಾಗಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಸೂಚ್ಯಂಕ ಇಳಿಕೆ: ಭಾರತ ಮತ್ತು ಪಾಕಿಸ್ತಾನದ ನಡುವೆ ತಲೆದೋರಿರುವ ಬಿಕ್ಕಟ್ಟಿನಿಂದ ಷೇರು ಸೂಚ್ಯಂಕಗಳು ಇಳಿಕೆಯಾಗಿವೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 46 ಅಂಶ ಇಳಿಕೆಯಾಗಿದ್ದು, 80,242 ಅಂಶಗಳಲ್ಲಿ ವಹಿವಾಟು ಅಂತ್ಯಗೊಂಡಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 1 ಅಂಶ ಕಡಿಮೆಯಾಗಿ, 24,334 ಆಗಿದೆ.

ಕಬ್ಬಿಗೆ ಎಫ್‌ಆರ್‌ಪಿ ಹೆಚ್ಚಳ

ಪ್ರಜಾವಾಣಿ ವಾರ್ತೆ

ನವದೆಹಲಿ: ಸಕ್ಕರೆ ಕಾರ್ಖಾನೆಗಳು ಕಬ್ಬು ಬೆಳೆಗಾರರಿಗೆ ಪ್ರತಿ ಕ್ವಿಂಟಲ್‌ಗೆ ಪಾವತಿಸಬೇಕಿರುವ ಮೊತ್ತವನ್ನು ಕೇಂದ್ರ ಸರ್ಕಾರ ₹15 ಹೆಚ್ಚಿಸಿದೆ. ಈ ವರ್ಷದ ಅಕ್ಟೋಬರ್‌ನಿಂದ ಆರಂಭವಾಗುವ 2025–26ನೇ ಹಂಗಾಮಿನಲ್ಲಿ ಕಾರ್ಖಾನೆಗಳು ಕ್ವಿಂಟಲ್‌ಗೆ ₹355 ಪಾವತಿಸಬೇಕಿದೆ.

ಕಬ್ಬು ಬೆಳೆಗಾರರ ಹಿತಾಸಕ್ತಿ ಗಮನದಲ್ಲಿಟ್ಟುಕೊಂಡು ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ಬುಧವಾರ ನಡೆದ ಆರ್ಥಿಕ ವ್ಯವಹಾರಗಳ ಸಚಿವ ಸಂಪುಟ ಸಮಿತಿ ಸಭೆಯಲ್ಲಿ ಈ ಬಗ್ಗೆ ನಿರ್ಧಾರ ತೆಗೆದುಕೊಳ್ಳಲಾಗಿದೆ. ನ್ಯಾಯಸಮ್ಮತ ಹಾಗೂ ಪ್ರೋತ್ಸಾಹದಾಯಕ ದರವನ್ನು (ಎಫ್‌ಆರ್‌ಪಿ) ಶೇ 4.41 ಹೆಚ್ಚಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

2024-25ನೇ ಹಂಗಾಮಿನಲ್ಲಿ ಕಬ್ಬಿನ ಎಫ್‌ಆರ್‌ಪಿಯನ್ನು ಕ್ವಿಂಟಲ್‌ಗೆ ₹340 ಕ್ಕೆ ನಿಗದಿಪಡಿಸಲಾಗಿತ್ತು.

ಸಕ್ಕರೆ ವಲಯವು ಪ್ರಮುಖ ಕೃಷಿ ಆಧಾರಿತ ವಲಯ. ಈ ವಲಯದಲ್ಲಿ ಸುಮಾರು 5 ಕೋಟಿ ಕಬ್ಬು ಬೆಳೆಗಾರರು ಮತ್ತು ಅವರ ಅವಲಂಬಿತರು ಹಾಗೂ ಸಕ್ಕರೆ ಕಾರ್ಖಾನೆಗಳಲ್ಲಿ ನೇರವಾಗಿ ಕೆಲಸ ಮಾಡುತ್ತಿರುವ 5 ಲಕ್ಷ ಕಾರ್ಮಿಕರು ಇದ್ದಾರೆ. ಕೃಷಿ ವೆಚ್ಚ ಮತ್ತು ಬೆಲೆಗಳ ಆಯೋಗದ ಶಿಫಾರಸುಗಳ ಆಧಾರದಲ್ಲಿ, ರಾಜ್ಯ ಸರ್ಕಾರಗಳು ಮತ್ತು ಇತರ ಪಾಲುದಾರರೊಂದಿಗೆ ಸಮಾಲೋಚಿಸಿದ ಬಳಿಕ ಎಫ್‌ಆರ್‌ಪಿ ಹೆಚ್ಚಿಸಲು ನಿರ್ಧರಿಸಲಾಗಿದೆ ಎಂದು ಸಚಿವ ಅಶ್ವಿನಿ ವೈಷ್ಣವ್ ಸುದ್ದಿಗಾರರಿಗೆ ತಿಳಿಸಿದರು.

ಹೆದ್ದಾರಿ ಅಭಿವೃದ್ಧಿ: ಮೇಘಾಲಯದ ಮಾವ್ಲಿಂಗ್‌ಖುಂಗ್‌ನಿಂದ (ಶಿಲ್ಲಾಂಗ್ ಬಳಿ) ಅಸ್ಸಾಂನ ಪಂಚಗ್ರಾಮ್ ವರೆಗಿನ (ಸಿಲ್ಚಾರ್ ಬಳಿ) ಗ್ರೀನ್‌ಫೀಲ್ಡ್ ಹೈಸ್ಪೀಡ್ ಕಾರಿಡಾರ್ ಅನ್ನು ಅಭಿವೃದ್ಧಿಪಡಿಸಲು ಆರ್ಥಿಕ ವ್ಯವಹಾರಗಳ ಸಂಪುಟ ಸಮಿತಿಯು ಅನುಮೋದನೆ ನೀಡಿದೆ. 166.89 ಕಿ.ಮೀ. ಉದ್ದದ ಹೆದ್ದಾರಿ ಅಭಿವೃದ್ಧಿಗೆ ₹ 22,864 ಕೋಟಿ ವೆಚ್ಚ ಆಗಲಿದೆ.

ಅಶ್ಲೀಲ ಚಿತ್ರ, ವಿಡಿಯೊ ಕಳುಹಿಸಲು ಬೆದರಿಕೆ: ಇಬ್ಬರು ಆರೋಪಿಗಳ ಸೆರೆ

ನವದೆಹಲಿ (ಪಿಟಿಐ): ಅಮೆರಿಕದಲ್ಲಿರುವ ಬಾಲಕಿಯರಿಗೆ ಅಶ್ಲೀಲ ಚಿತ್ರ, ವಿಡಿಯೊಗಳನ್ನು ಕಳುಹಿಸುವಂತೆ ಆನ್‌ಲೈನ್‌ನಲ್ಲಿ ಬೆದರಿಕೆ ಹಾಕಿದ ಆರೋಪ ಸಂಬಂಧ ಮಂಗಳೂರು ಮೂಲದ ವ್ಯಕ್ತಿ ಸೇರಿ ಇಬ್ಬರು ಆರೋಪಿಗಳನ್ನು ಸಿಬಿಐ ಅಧಿಕಾರಿಗಳು ಬಂಧಿಸಿದ್ದಾರೆ.

‘ಅಮೆರಿಕದ ತನಿಖಾ ಏಜೆನ್ಸಿಗಳು ನೀಡಿದ ಮಾಹಿತಿ ಮೇರೆಗೆ ದೇಶದಲ್ಲಿ ‘ಆಪರೇಷನ್ ಹಾಕ್’ ಕಾರ್ಯಾಚರಣೆ ಕೈಗೊಳ್ಳಲಾಗಿತ್ತು. ಸಿಬಿಐನ ಅಂತರರಾಷ್ಟ್ರೀಯ ಕಾರ್ಯಾಚರಣೆ ವಿಭಾಗವು ಪ್ರತ್ಯೇಕ ಪ್ರಕರಣಗಳಲ್ಲಿ ಮಂಗಳೂರು ಮೂಲದ ಶೇಖ್ ಮುಯಿಝ್ ಅಹ್ಮದ್ ಮತ್ತು ದೆಹಲಿ ನಿವಾಸಿ ಮುಕುಲ್ ಸೈನಿ ಅವರನ್ನು ಬಂಧಿಸಿದೆ’ ಎಂದು ಬುಧವಾರ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಹನ್ನೊಂದನೇ ವರ್ಷದ ಚಿರಸ್ಮರಣೆ

ಶ್ರೀಯುತ ಎಸ್.ಎನ್.ಬಚ್ಚಣ್ಣನವರು
ಜನನ: 18-01-1944 (ಸಂಪಿಗೆಹಳ್ಳಿ) ನಿಧನ: 01-05-2014
ನೀವು ನಮ್ಮನ್ನಗಲಿ ಇಂದಿಗೆ ಹನ್ನೊಂದು ವರ್ಷವಾಗಿದೆ,
ನಿಮ್ಮ ಸವಿ ನೆನಪು ನಮ್ಮ ಮನದಂಗಳದಲ್ಲಿ ಸದಾ ಹಚ್ಚ ಹಸಿರಾಗಿದೆ.
ನಿಮ್ಮ ದಿವ್ಯ ಆತ್ಮಕ್ಕೆ ಭಗವಂತನು ಚಿರಶಾಂತಿಯನ್ನು ನೀಡಲಿ ಎಂದು ಪ್ರಾರ್ಥಿಸುವ.
ಶ್ರೀಮತಿ ರಾಧಮ್ಮ ಮತ್ತು ಕುಟುಂಬದವರು
ಶ್ರೀ ಎಸ್.ಎನ್.ಆನಂದಮೂರ್ತಿ ಮತ್ತು ಕುಟುಂಬದವರು

14ನೇ ವರ್ಷದ ಚಿರಸ್ಮರಣೆ

ಶ್ರೀ ಕೆ. ರಾಮಯ್ಯನವರು
ಜನನ: 02.04.1933 ಮರಣ: 01.05.2011
ಮಾಜಿ ನಗರಸಭಾ ಸದಸ್ಯರು, ಬಿ.ಬಿ.ಎಂ.ಪಿ ಸದ್ದುಗುಂಟೆಪಾಳ್ಯ, ಚಿಕ್ಕಆಡುಗೋಡಿ, ಬೆಂ.
ಸಂಸ್ಥಾಪಕರು: ಶ್ರೀ ಲಕ್ಷ್ಮೀವೆಂಕಟೇಶ್ವರ ದೇವಸ್ಥಾನ, ಚಿಕ್ಕಆಡುಗೋಡಿ, ಬೆಂಗಳೂರು
ನೀವು ನಮ್ಮನ್ನಗಲಿದರೂ ನಿಮ್ಮ ಸರಳತೆ, ಪ್ರೀತಿ ಆದರ್ಶಗಳೇ ನಮಗೆ ದಾರಿದೀಪ, ಸದಾ ನಿಮ್ಮ ನೆನಪಿನಲ್ಲಿರುವ...
ಮಕ್ಕಳು, ಸೊಸೆಯಂದಿರು, ಅಳಿಯಂದಿರು ಮೊಮ್ಮಕ್ಕಳು ಹಾಗೂ ಮರಿಮಕ್ಕಳು

14ನೇ ವರ್ಷದ ಪುಣ್ಯಸ್ಮರಣೆ

ಶ್ರೀ ಎಲ್. ನಾರಾಯಣಸ್ವಾಮಿಯವರು
(ಮಾಜಿ ಛೇರ್ಮನ್, ರಾಚೇನಹಳ್ಳಿ, ಬೆಂಗಳೂರು–77)
ನೀವು ನಮ್ಮನ್ನಗಲಿ ಇಂದಿಗೆ 14 ವರ್ಷಗಳು ಕಳೆದವು (01.05.2011)
ನಿಮ್ಮ ಮಾರ್ಗದರ್ಶನವೇ ನಮಗೆ ದಾರಿದೀಪವಾಗಿದೆ ನಿಮ್ಮ ಸವಿನೆನಪುಗಳು ನಮ್ಮ ಹೃದಯಗಳಲ್ಲಿ ಸದಾ ಅಚ್ಚಳಿಯದೇ ಉಳಿದಿದೆ
ಇಂತಿ ಸದಾ ನಿಮ್ಮ ನೆನಪಿನಲ್ಲಿ
–:: ಧರ್ಮಪತ್ನಿ ::–
ಶ್ರೀಮತಿ ಟಿ.ಎನ್. ನಾಗರತ್ನಮ್ಮ
ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಕುಟುಂಬದವರು

ಚಿರಸ್ಮರಣೆ

ಶ್ರೀಮತಿ. ಸರೋಜಿನಿ ಕಾರ್ಲೆ
ನಿಧನ: 01–05–2019
ನಿಮ್ಮ ಆದರ್ಶ ಜೀವನ ನಮಗೆ
ಎಂದೆಂದೂ ಮಾರ್ಗದರ್ಶಕ, ನಿಮ್ಮ ನೆನಪು
ನಮಗೆ ಸದಾ ಹಸಿರು ಮತ್ತು ಸ್ಫೂರ್ತಿದಾಯಕ.
ಸದಾ ಸ್ಮರಿಸುವ
ಕುಟುಂಬ ವರ್ಗದವರು

24ನೇ ವರ್ಷದ ಪುಣ್ಯಸ್ಮರಣೆ
ನಿಮ್ಮ ಪ್ರೀತಿ, ವಾತ್ಸಲ್ಯ ಮತ್ತು ಮಾರ್ಗದರ್ಶನವನ್ನು ಅತ್ಯಂತ ಗೌರವಾದರಗಳಿಂದ ಸ್ಮರಿಸುತ್ತೇವೆ

ಶ್ರೀ ಸಿ. ನಾರಾಯಣ ರೆಡ್ಡಿ ವಿಧಾನ ಪರಿಷತ್ ಸದಸ್ಯರಾಗಿದ್ದವರು
ಸಂಸ್ಥಾಪಕರು: ಶ್ರೀ ಮೀನಾಕ್ಷಿ ಸುಂದರೇಶ್ವರ ದೇವಾಲಯ, ಬನ್ನೇರುಘಟ್ಟ ರಸ್ತೆ, ಬೆಂಗಳೂರು.
ಇವರು ಸ್ವರ್ಗಸ್ಥರಾಗಿ ತಾ॥ 01.05.2025ಕ್ಕೆ 24 ವರ್ಷಗಳಾದವು
“ಪ್ರಭುವು ಸರ್ವ ಜೀವಿಗಳ ಮೂಲ ಮತ್ತು ಸರ್ವವ್ಯಾಪಿ; ಅವನನ್ನು ಪೂಜಿಸುವುದರಿಂದ ಮತ್ತು ತನ್ನ ಕರ್ಮವನ್ನು ಮಾಡುವುದರಿಂದ ಮನುಷ್ಯನು ಸಿದ್ಧಿಯನ್ನು ಪಡೆಯಬಹುದು.”
– ಅಧ್ಯಾಯ–18, ಶ್ಲೋಕ–46, ಶ್ರೀಮತ್ ಭಗವದ್ಗೀತೆ
ತಮ್ಮನ್ನು ಸದಾ ಸ್ಮರಿಸುವ :
ಶ್ರೀಮತಿ ವನಿತಾ ಮತ್ತು ಶ್ರೀ ಎನ್. ಸ್ವರೂಪ್ ಕುಮಾರ್,
ಶ್ರೀಮತಿ ಪ್ರಿಯಾಂಕ ಮತ್ತು ಶ್ರೀ ಎನ್. ಶಶಾಂಕ್ ಕುಮಾರ್,
ನಾರಾಯಣ್ ಸ್ವರೂಪ್, ನವರತನ್ ಸ್ವರೂಪ್,
ಆಯನ ಶಶಾಂಕ್, ಅರ್ಹ ವಿಹಾನ ಶಶಾಂಕ್,
ಬಂಧುಗಳು ಹಾಗೂ ಆಪ್ತರು

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI,Degree. ಸಂಬಳ 16,000 - 86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

PROPERTY CORNER

ಕೃಷಿ ಭೂಮಿ ಮಾರಾಟಕ್ಕಿದೆ
ಆಸ್ತಿಯ ಅಳತೆ:
3.04 ಗುಂಟೆ (3310 ಚದರ ಅಡಿ)
ಸ್ಥಳ: ಹಾರೋಹಳ್ಳಿ, ರಾಮನಗರ ಜಿಲ್ಲೆ
ಸಂಪರ್ಕಿಸಿ: 89042 40322

Wanted

ಶ್ರೀ ಶಕ್ತಿ ಹೆಲ್ತ್ ಕೇರ, ಶೇಷಾದ್ರಿಪುರಂ ಬೆಂಗಳೂರು, ರಾಜ್ಯದಾದ್ಯಂತ ತೆರೆಯಲಿರುವ ನಮ್ಮ ಶಾಖೆಗಳಿಗೆ ಹೆಲ್ಪರಗಳು ಬೇಕಾಗಿದ್ದಾರೆ. ವೇತನ ತಿಂಗಳಿಗೆ 25000/- ಸಂಪರ್ಕಿಸಿ: 7349494852

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ,ತಿಂಗಳಿಗೆ, 15,000.ರಿಂದ 20,000. ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಶಿಕ್ಷಣ
ಶಿಕ್ಷಣಕ್ಕೆ ಸಂಬಂಧಿತ ಎಲ್ಲಾ ಜಾಹೀರಾತುಗಳ ಪ್ರಕಟಣೆಗಾಗಿ
www.dhclassifieds.com
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9731810277 | +91 9845114560 | +91 9900428036
*Conditions apply

ಪ್ರಜಾವಾಣಿ
ಪ್ರಜಾ ಪ್ಲಸ್
| ಮನರಂಜನೆ
| ಜಾಹೀರಾತು ಪ್ರೋತ್ಸಾಹ
| ಉದ್ಯಮ ಅಭಿವೃದ್ಧಿ

ಸಿದ್ಧಾರ್ಥ್‌ಗೆ ತಮನ್ನಾ ಜೋಡಿ

ಸಿದ್ಧಾರ್ಥ್ ಮಲ್ಹೋತ್ರಾ ನಟನೆಯ ಸಸ್ಪೆನ್ಸ್ ಥ್ರಿಲ್ಲರ್ 'ವಿವಾನ್- ಫೋರ್ಸ್ ಆಫ್ ದಿ ಫಾರೆಸ್ಟ್' ಸಿನಿಮಾದಲ್ಲಿ ಮಿಲ್ಕಿ ಬ್ಯೂಟಿ ತಮನ್ನಾ ಭಾಟಿಯಾ ನಟಿಸಲಿದ್ದಾರೆ. 2026ರಲ್ಲಿ ಈ ಸಿನಿಮಾ ತೆರೆಕಾಣಲಿದೆ.

ವಿಜಯ ರಾಘವೇಂದ್ರ ನಟೇಶ್ ಹೆಗಡೆ

ಅವಿನಾಶ್

ಚಿತ್ರ ನಿರ್ಮಾಣಕ್ಕಿಳಿದ ವಾಘಚಿಪಾಣಿ ಸೂತ್ರಧಾರ

ಅಭಿಲಾಷ್ ಪಿ.ಎಸ್.

'ಪೆದ್ರೊ', 'ವಾಘಚಿಪಾಣಿ' ಸಿನಿಮಾಗಳ ಮೂಲಕ ಗುರುತಿಸಿಕೊಂಡಿರುವ ನಿರ್ದೇಶಕ ನಟೇಶ್ ಹೆಗಡೆ ಹಾಗೂ 'ನೀಲಿ ಹಕ್ಕಿ' ಚಿತ್ರದ ನಿರ್ದೇಶಕ ಗಣೇಶ್ ಹೆಗಡೆ ಜೊತೆಯಾಗಿ ಸಿನಿಮಾವೊಂದನ್ನು ನಿರ್ಮಾಣ ಮಾಡಿದ್ದಾರೆ. 'ಕುರ್ಕ' ಎನ್ನುವ ಶೀರ್ಷಿಕೆ ಹೊತ್ತ ಈ ಸಿನಿಮಾ ಇದೇ ವರ್ಷ ತೆರೆಕಾಣಲಿದೆ.

ಚಿತ್ರ ನಿರ್ಮಾಣಕ್ಕೆ ಇಳಿದಿರುವ ಕುರಿತು 'ಪ್ರಜಾವಾಣಿ' ಜೊತೆ ಮಾತನಾಡಿದ ನಟೇಶ್, 'ನಾವೇ ನಿರ್ಮಾಣ ಮಾಡುವುದರಿಂದ ನಮ್ಮ ಕಥೆಯನ್ನು ನಾವೇ ಹೇಳಲು ಸ್ವಾತಂತ್ರ್ಯ ಸಿಗುತ್ತದೆ. ಜೊತೆಗೆ ವಿಷಯಾಧರಿತ(ಕಂಟೆಂಟ್) ಸಿನಿಮಾಗಳನ್ನು ಜನರ ಎದುರಿಗೆ ಇರಿಸಲು ಇದು ಸರಿಯಾದ ಸಮಯ ಎನ್ನುವ ದೃಷ್ಟಿಯಿಂದ ನಿರ್ಮಾಣ ಸಂಸ್ಥೆ ಆರಂಭಿಸಿದೆವು. ಒಂದು ಸಿನಿಮಾಗೆ ಬಜೆಟ್ ನಿರ್ಧರಿಸುವುದು ಈಗಿನ ಸಂದರ್ಭದಲ್ಲಿ ಬಹುಮುಖ್ಯ. ಹಾಗೇ ನಮ್ಮ ಕಥೆಯ ಮೇಲೆ ನಂಬಿಕೆ ಇರಬೇಕು. ನಮ್ಮನ್ನು ನಮಗಿಂತ ಚೆನ್ನಾಗಿ ಅರ್ಥ ಮಾಡಿಕೊಳ್ಳುವವರು ಬೇರೆ ಯಾರೂ ಇಲ್ಲವಲ್ಲ. ನಿರಂತರವಾಗಿ ಸಿನಿಮಾಗಳು ಬಂದರೆ ಉದ್ಯಮವೂ ಚೆನ್ನಾಗಿರುತ್ತದೆ. ಈ ನಿಟ್ಟಿನಲ್ಲಿ ನಾವೇ ಸಿನಿಮಾ ನಿರ್ಮಾಣ ಮಾಡುವುದು ಇರುವ ಒಂದು ದಾರಿ. ಒಂದಷ್ಟು ಸಿನಿಮಾ ಅನುಭವವನ್ನು ನಾನು ಪಡೆದಿದ್ದೇನೆ. ಹೊಸಬರು ಬಂದರೂ ಒಂದು ಜಾಗ, ಅವಕಾಶ ಸಿಗಬೇಕಲ್ಲವೇ. ಕರ್ನಾಟಕದ ಬೇರೆ ಬೇರೆ ಭಾಗದ ಕಥೆಗಳನ್ನು ಮಾಡಬೇಕು ಎನ್ನುವ ಉದ್ದೇಶ ನಮ್ಮದು. ನಮ್ಮ ಸಿನಿಮಾಗಳನ್ನಷ್ಟೇ ಅಲ್ಲದೆ ಹೊಸಬರ ಅರ್ಹ ಕಥೆಗಳಿಗೂ ನಮ್ಮಲ್ಲಿ ಜಾಗ ಸಿಗಲಿದೆ. ಈ ಆಶಯ ಇಟ್ಟುಕೊಂಡೇ ನಿರ್ಮಾಣಕ್ಕೆ ಕೈಹಾಕಿದ್ದೇವೆ' ಎಂದರು.

ಗಣೇಶ್ ಹೆಗಡೆ

'ಕುರ್ಕ ಸಿನಿಮಾ ಹೊನ್ನಾವರದಲ್ಲಿ ನಡೆಯುವ ಕಥೆ. ಮಿಸ್ಟರಿ ಹಾಗೂ ಕ್ರೈಮ್ ಥ್ರಿಲ್ಲರ್ ಡ್ರಾಮಾ ಶೈಲಿಯಲ್ಲಿ ಸಿನಿಮಾ ಮೂಡಿ ಬರುತ್ತಿದೆ. ಕಥೆ, ನಿರ್ದೇಶನದ ಜೊತೆಗೆ ಗಣೇಶ್ ಹೆಗಡೆ ಛಾಯಾಚಿತ್ರಗ್ರಹಣವನ್ನೂ ಮಾಡಿದ್ದಾರೆ. ನಾನೂ ಇದರಲ್ಲಿ ನಟಿಸಿದ್ದೇನೆ. ಜೊತೆಗೆ ವಿಜಯ ರಾಘವೇಂದ್ರ, ಅವಿನಾಶ್ ಮುಖ್ಯಭೂಮಿಕೆಯಲ್ಲಿದ್ದಾರೆ. ಸಂಗೀತ ನಿರ್ದೇಶಕ ಚರಣ್ ರಾಜ್ ಅವರು ಈ ಚಿತ್ರಕ್ಕೆ ಸಂಗೀತ ಸಂಯೋಜನೆ ಮಾಡಿದ್ದಾರೆ. ಇದರ ಚಿತ್ರೀಕರಣ ಮುಗಿದಿದ್ದು, ಸದ್ಯ ವಿಎಫ್‌ಎಕ್ಸ್ ಕೆಲಸಗಳು ನಡೆಯುತ್ತಿದೆ. 2025ರಲ್ಲೇ ಈ ಸಿನಿಮಾ ತೆರೆಕಾಣಲಿದೆ' ಎಂದರು ನಟೇಶ್ ಹೆಗಡೆ.

ಉದ್ಯಮಿ ರೇವಣ್ಣ ಎಚ್. ಅವರ 'ಅಫೋರ್ ಮೋಷನ್ ಪಿಕ್ಚರ್ಸ್' ಹಾಗೂ ನಟೇಶ್ ಹೆಗಡೆ ಮತ್ತು ಗಣೇಶ್ ಹೆಗಡೆ ಅವರ 'ಫಾಕ್ಸ್ ಆ್ಯಂಡ್ ಫ್ರೆಂಡ್ಸ್' ನಿರ್ಮಾಣ ಸಂಸ್ಥೆ ಒಟ್ಟಾಗಿ 'ಕುರ್ಕ' ಚಿತ್ರವನ್ನು ನಿರ್ಮಾಣ ಮಾಡುತ್ತಿದೆ. ಅನುಪಮಾ ಗೌಡ, ಜಹಾಗೀರ್ ಎಂಎಸ್, ಜಿಬಿ ಭರತ್, ಸಿಂಧು ಹೇರೂರ್, ನಾಗರಾಜ್ ಹೆಗಡೆ, ಶ್ವೇತಾ ದೇಸಾಯಿ ಪಾತ್ರವರ್ಗದಲ್ಲಿ ಇದ್ದಾರೆ. ನಟೇಶ್ ಹೆಗಡೆ ನಟನೆಯ ಜೊತೆಗೆ ಸಂಕಲನದ ಜವಾಬ್ದಾರಿಯನ್ನೂ ಹೊತ್ತಿದ್ದು, ಶ್ರೇಯಾಂಕ್ ನಂಜಪ್ಪ ಶಬ್ದ ವಿನ್ಯಾಸ ಚಿತ್ರಕ್ಕಿದೆ.

2025ರಲ್ಲೇ 'ವಾಘಚಿಪಾಣಿ'

'ನನ್ನ ಸಿನಿಮಾಗಳನ್ನು ಚಿತ್ರಮಂದಿರಗಳಲ್ಲಿ ನೋಡಬೇಕು ಎನ್ನುವ ಆಸೆ ಹೇಗೆ ಪ್ರೇಕ್ಷಕರಿಗೆ ಇದೆಯೋ ನನಗೂ ಇದೆ. ಯಾವ ಮಾದರಿಯಲ್ಲಿ ಈ ಸಿನಿಮಾಗಳನ್ನು ಬಿಡುಗಡೆ ಮಾಡಬೇಕು ಎನ್ನುವುದರ ಬಗ್ಗೆ ಯೋಚನೆ ಮಾಡುತ್ತಿದ್ದೇನೆ. ಇತರೆ ಕನ್ನಡ ಸಿನಿಮಾಗಳಂತೆ ನಾವು ಬಿಡುಗಡೆ ಮಾಡಿದರೆ ಕಷ್ಟವಾಗುತ್ತದೆ. ವಾಸ್ತವ ಸ್ಥಿತಿಯನ್ನು ಒಪ್ಪಿಕೊಳ್ಳಬೇಕು. ಚಿತ್ರೋತ್ಸವಗಳಲ್ಲಿ ದೊಡ್ಡ ಪರದೆ ಮೇಲೆ ಸಿನಿಮಾಗಳು ಬರುತ್ತಿವೆ. ಆದರೆ ನಮ್ಮ ನೆಲದಲ್ಲೇ ಇವುಗಳನ್ನು ಬಿಡುಗಡೆ ಮಾಡಲು ಕಷ್ಟಪಡುತ್ತಿದ್ದೇವೆ. ಚಿತ್ರೋದ್ಯಮದ, ಜನರ ಬೆಂಬಲವಿದ್ದರೆ ಬಿಡುಗಡೆಗೆ ಧೈರ್ಯ ಮಾಡಬಹುದು. 'ವಾಘಚಿಪಾಣಿ' ಸಿನಿಮಾ ಸದ್ಯ ಚಿತ್ರೋತ್ಸವಗಳಲ್ಲಿ ಪ್ರದರ್ಶನ ಕಾಣುತ್ತಿದ್ದು, ಅಕ್ಟೋಬರ್ ವೇಳೆಗೆ ಆಯ್ದ ನಗರಗಳ ಚಿತ್ರಮಂದಿರಗಳಲ್ಲಿ ಬಿಡುಗಡೆ ಮಾಡಲಿದ್ದೇವೆ. ಜೊತೆಗೆ 'ಪೆದ್ರೊ'ವನ್ನೂ ಬಿಡುಗಡೆ ಮಾಡುತ್ತೇವೆ. ಆದರೆ ಇತರೆ ಸಿನಿಮಾಗಳ ಬಿಡುಗಡೆಯಂತೆ ಇದು ಸುಲಭವಿಲ್ಲ ಎಂದೂ ತಿಳಿದಿದೆ' ಎನ್ನುತ್ತಾರೆ ನಟೇಶ್.

'ಹೊಸ ಮಾದರಿಯೊಂದನ್ನು ನಾವು ಪ್ರಯತ್ನಿಸಬೇಕಿದೆ. ಒಂದು ನಗರದಲ್ಲಿ ಒಂದೆರಡು ಚಿತ್ರಮಂದಿರಗಳಲ್ಲಿ ಎರಡು ಶೋಗಳನ್ನು ನಿಗದಿಪಡಿಸಿ ಅವುಗಳನ್ನು ಹೌಸ್‌ಫುಲ್ ಮಾಡಿ, ಈ ಮೂಲಕ ಚಿತ್ರದ ಕುರಿತು ಚರ್ಚೆ ಹುಟ್ಟುಹಾಕಬೇಕಿದೆ' ಎಂದು ತಮ್ಮ ಹೊಸ ಕಲ್ಪನೆಯನ್ನು ತೆರೆದಿಟ್ಟರು ನಟೇಶ್.

ನಟೇಶ್ ನಿರ್ದೇಶನದ 'ವಾಘಚಿಪಾಣಿ' ಬರ್ಲಿನ್ ಅಂತರರಾಷ್ಟ್ರೀಯ ಚಿತ್ರೋತ್ಸವಕ್ಕೆ ಆಯ್ಕೆಗೊಂಡ ಮೊದಲ ಕನ್ನಡ ಚಿತ್ರವಾಗಿದೆ.

ನಾನಿಯ 'ಹಿಟ್–3'ತೆರೆಗೆ

ಶ್ರೀನಿಧಿ ಶೆಟ್ಟಿ, ನಾನಿ

'ಹಿಟ್' ಸರಣಿ ಸಿನಿಮಾಗಳನ್ನು ನೀಡಿರುವ ಶೈಲೇಶ್ ಕೋಲನು ನಿರ್ದೇಶನದ ಹೊಸ ಪ್ರಾಜೆಕ್ಟ್ 'ಹಿಟ್-3'. ಈ ಪ್ಯಾನ್ ಇಂಡಿಯಾ ಚಿತ್ರ ಇಂದು(ಮೇ 1) ತೆರೆಕಾಣುತ್ತಿದ್ದು, ನಾನಿ ಐಪಿಎಸ್ ಅರ್ಜುನ್ ಸರ್ಕಾರ್ ಆಗಿ ಕಾಣಿಸಿಕೊಂಡಿದ್ದಾರೆ. 'ಮೃದುಲಾ' ಎಂಬ ಪಾತ್ರದಲ್ಲಿ 'ಕೆ.ಜಿ.ಎಫ್.' ಬೆಡಗಿ ಶ್ರೀನಿಧಿ ಶೆಟ್ಟಿ ನಟಿಸಿದ್ದಾರೆ.

'ನನ್ನ ಪ್ರತಿಯೊಂದು ಸಿನಿಮಾದ ಪ್ರಚಾರ ಅಂತ್ಯಗೊಳ್ಳುವುದೇ ಬೆಂಗಳೂರಿನಲ್ಲಿ. ಮುಂದೆ ನನ್ನ ಸಿನಿಮಾ ಬಿಡುಗಡೆಗೂ ಮುನ್ನ ಬೆಂಗಳೂರಿಗೆ ಭೇಟಿ ನೀಡುವುದನ್ನು ಬಿಡುವುದಿಲ್ಲ. ಪ್ರತಿ ಬಾರಿಯೂ ಬಂದಾಗ ಶಿವಣ್ಣ, ಸುದೀಪ್ ಅವರು ನನ್ನನ್ನು ಕುಟುಂಬದಂತೆ ನೋಡಿಕೊಳ್ಳುತ್ತಾರೆ. ನಾನು ಇಲ್ಲಿಯವನೇ ಎನ್ನುವ ಭಾವನೆ ಮೂಡಿಸುತ್ತಾರೆ. ಬೆಂಗಳೂರಿನಲ್ಲಿ ನನ್ನ ಸಿನಿಮಾಗಳಿಗೆ ಹೆಚ್ಚಿನ ಪ್ರೀತಿ ದೊರಕಿದೆ. ಈ ಸಿನಿಮಾದಲ್ಲಿ ಕನ್ನಡದ ನಟಿಯೇ ನನ್ನ ಜೊತೆ ನಟಿಸುತ್ತಿದ್ದಾರೆ. ತೆಲುಗಿನಲ್ಲಿ ಸಿನಿಮಾಗೆ ಡಬ್ಬಿಂಗ್ ಮಾಡುವುದರ ಜೊತೆಗೆ ಕನ್ನಡದ ಆವೃತ್ತಿಗೂ ಶ್ರೀನಿಧಿಯೇ ಡಬ್ ಮಾಡಿದ್ದಾರೆ. ಕನ್ನಡದ ಮೇಲೆ ಅವರಿಗೆ ಇರುವ ಪ್ರೀತಿಯನ್ನು ನಾನು ಈ ಮೂಲಕ ಅವರಲ್ಲಿ ಕಂಡಿದ್ದೇನೆ. ಈ ಚಿತ್ರದ ಬಗ್ಗೆ ಬಹಳಷ್ಟು ನಂಬಿಕೆ ಇದೆ. ನಾನು ಸಿನಿಮಾ ನೋಡಿದ್ದೇನೆ. ಅದ್ಭುತವಾಗಿ ಮೂಡಿಬಂದಿದೆ. ನಾನು ವಿಭಿನ್ನ ಪಾತ್ರಗಳನ್ನು ಮಾಡಿಕೊಂಡು ಬಂದಿದ್ದೇನೆ. ಯಾವುದೇ ಜಾನರ್‌ಗೆ ಅಂಟಿಕೊಳ್ಳುವುದಿಲ್ಲ. ಸದಾ ಹೊಸದನ್ನು ಕಲಿಯಲು ಪ್ರಯತ್ನ ಮಾಡುತ್ತಿರುತ್ತೇನೆ' ಎಂದಿದ್ದಾರೆ ನಾನಿ.

'ತೆರೆ ಮೇಲೆ ನನ್ನನ್ನು ನಾನು ನೋಡಿಯೇ ಮೂರು ವರ್ಷವಾಗಿದೆ. 'ಕೆ.ಜಿ.ಎಫ್' ಸರಣಿ ನನಗೆ ಹೆಚ್ಚಿನ ಪ್ರೀತಿಯನ್ನು ತಂದುಕೊಟ್ಟಿದೆ. ಇದು ತೆಲುಗಿನಲ್ಲಿ ನನ್ನ ಮೊದಲ ಸಿನಿಮಾ. ನಾನಿ ಅವರ ಜೊತೆ ಸಿನಿಮಾ ಮಾಡಲು ಅವಕಾಶ ಸಿಕ್ಕಿದ್ದೇ ಭಾಗ್ಯ. ಹಿಟ್–1 ಮತ್ತು 2ನೇ ಸಿನಿಮಾವನ್ನು ನೋಡದೇ ಇರುವವರೂ ಈ ಸಿನಿಮಾ ನೋಡಬಹುದು. ಇದರಲ್ಲಿ ಬೇರೆಯದೇ ಕಥೆಯಿದೆ' ಎನ್ನುತ್ತಾರೆ ಶ್ರೀನಿಧಿ ಶೆಟ್ಟಿ.

'ಹಿಟ್–3' ಸಿನಿಮಾ ಹಿಂದಿ, ಕನ್ನಡ, ತಮಿಳು ಭಾಷೆಗಳಿಗೂ ಡಬ್ ಆಗಿ ರಿಲೀಸ್ ಆಗುತ್ತಿದೆ. ಶಾಂತಿ ತಿಪಿರ್ನೇನಿ ನಿರ್ಮಾಣದಲ್ಲಿ ಈ ಚಿತ್ರ ಮೂಡಿಬಂದಿದ್ದು, ಮಿಕ್ಕಿ ಜೆ. ಮೇಯರ್ ಸಂಗೀತ, ಸಾನು ಜಾನ್ ವರ್ಗೀಸ್ ಛಾಯಾಚಿತ್ರಗ್ರಹಣ ಹಾಗೂ ಕಾರ್ತಿಕ್ ಶ್ರೀನಿವಾಸ್ ಸಂಕಲನ ಚಿತ್ರಕ್ಕಿದೆ.

"ನಾನು ಸಾನ್ವಿ ಅವರ ದನಿಯ ದೊಡ್ಡ ಫ್ಯಾನ್. ಪ್ರತಿ ಬಾರಿಯೂ ಸಾನ್ವಿ ಅವರನ್ನು ಭೇಟಿಯಾದ ಸಂದರ್ಭದಲ್ಲಿ ಹಾಡು ಹಾಡುವಂತೆ ಕೇಳಿಕೊಳ್ಳುತ್ತೇನೆ."
–ನಾನಿ, ನಟ

ಟ್ರೇಲರ್‌ನಲ್ಲಿ ಸಾನ್ವಿ ದನಿ

'ಹಿಟ್–3' ಚಿತ್ರದ ಟ್ರೇಲರ್‌ನಲ್ಲಿ ಬರುವ ಬಿಜಿಎಂಗೆ(ಬ್ಯಾಕ್ ಗ್ರೌಂಡ್ ಮ್ಯೂಸಿಕ್) ಸಾನ್ವಿ ಸುದೀಪ್ ದನಿ ನೀಡಿದ್ದು, ಇದನ್ನು ಸ್ವತಃ ನಾನಿ ಮೆಚ್ಚಿಕೊಂಡಿದ್ದಾರೆ. ಈ ಮೂಲಕ ತೆಲುಗು ಚಿತ್ರರಂಗಕ್ಕೆ ಸಾನ್ವಿ ಪ್ರವೇಶವಾಗಿದೆ. ಕನ್ನಡದ 'ಜಿಮ್ಮಿ' ಸಿನಿಮಾದ ಟೀಸರ್‌ಗೆ ಇಂಗ್ಲಿಷ್ ಹಾಡು ಬರೆದು ಹಾಡಿದ್ದರು ಸಾನ್ವಿ. ಅವರ ಕಂಚಿನ ಕಂಠಕ್ಕೆ ಎಲ್ಲರೂ ಮೆಚ್ಚುಗೆ ವ್ಯಕ್ತಪಡಿಸಿದ್ದರು.

ಸಾನ್ವಿ ಸುದೀಪ್

ದೇಸಿ 'ಕಂಟೆಂಟ್' ಸೃಷ್ಟಿಕರ್ತರ ಕನಸಿಗೆ ರೆಕ್ಕೆ • ಮನರಂಜನಾ ಮಾಧ್ಯಮದ ಮಾರುಕಟ್ಟೆ ದಾರಿ

ಇಂದಿನಿಂದ ಶ್ರವಣ–ದೃಶ್ಯ ಮನರಂಜನೆ ಶೃಂಗ

• ವಿಶಾಖ ಎನ್.

ಮುಂಬೈ: ಭಾರತ ಸರ್ಕಾರವು ಆಯೋಜಿಸಿರುವ 'ಜಾಗತಿಕ ಶ್ರವಣ–ದೃಶ್ಯ ಮನರಂಜನೆ ಶೃಂಗ–2025' (ವೇವ್ಸ್)ಗೆ ಇಲ್ಲಿನ ಜಿಯೊ ವರ್ಲ್ಡ್ ಸೆಂಟರ್‌ನಲ್ಲಿ ಪ್ರಧಾನಿ ನರೇಂದ್ರ ಮೋದಿ ಗುರುವಾರ ಚಾಲನೆ ನೀಡಲಿದ್ದಾರೆ.

ಮೇ 4ರವರೆಗೆ ನಾಲ್ಕು ದಿನ ಈ ಶೃಂಗಸಭೆ ನಡೆಯಲಿದೆ. 'ಭಾರತದಲ್ಲಿ ಸೃಷ್ಟಿಸಿ, ಪ್ರಪಂಚಕ್ಕಾಗಿ ಸೃಷ್ಟಿಸಿ' ಎಂಬ ಕಿವಿಮಾತನ್ನು ಅರುಹುವ ಈ ಶೃಂಗವು 'ಕಂಟೆಂಟ್'ಗೆ ಮಾರುಕಟ್ಟೆ ಕಲ್ಪಿಸಬಲ್ಲ ಅವಕಾಶಕ್ಕೆ ಕಿಟಕಿಯಂತಾಗಲಿದೆ. 'ಕಂಟೆಂಟ್ ಸೃಷ್ಟಿಕರ್ತರ ನಡುವಿನ ಸಂಪರ್ಕ ಸೇತು, ಹಲವು ದೇಶಗಳಿಗೆ ಸಂಪರ್ಕ ಸೇತು' ಎಂಬ ಧ್ಯೇಯವಾಕ್ಯ ಇದರದ್ದು.

ಕಂಟೆಂಟ್ ಸೃಷ್ಟಿಕರ್ತರು, ನವೋದ್ಯಮಗಳು, ಡಿಜಿಟಲ್ ಆವಿಷ್ಕಾರಗಳು, ಉದ್ಯಮದ ದಿಗ್ಗಜರು, ವಿಶ್ವದ ವಿವಿಧೆಡೆಯ ನೀತಿ ನಿರೂಪಕರು... ಎಲ್ಲರನ್ನೂ ಒಂದೇ ಸೂರಿನಡಿ ತಂದು, ಶೃಂಗವು ಸಂವಾದಕ್ಕೆ ಅವಕಾಶ ಕಲ್ಪಿಸಲಿದೆ.

ಚಲನಚಿತ್ರಗಳು, ಒಟಿಟಿ ವೇದಿಕೆಗಳು, ಗೇಮಿಂಗ್, ಕಾಮಿಕ್ಸ್, ಡಿಜಿಟಲ್ ಮಾಧ್ಯಮ, ಹೊಸಕಾಲದ ತಂತ್ರಜ್ಞಾನ ಎಲ್ಲವುಗಳಲ್ಲಿ ಭಾರತದ ಸಾಧನೆಯನ್ನು ಬಿಂಬಿಸಲು 'ಭಾರತ್ ಪೆವಿಲಿಯನ್' ಎಂಬ ವೇದಿಕೆಯನ್ನೂ ಒದಗಿಸಲಾಗಿದೆ.

'ವೇವ್ಸ್' ಶೃಂಗ ನಡೆಯಲಿರುವ ಜಿಯೊ ವರ್ಲ್ಡ್ ಸೆಂಟರ್‌ನಲ್ಲಿನ ಕಲಾಕೃತಿ –ಪ್ರಜಾವಾಣಿ ಚಿತ್ರ

2029ರ ಹೊತ್ತಿಗೆ ಭಾರತದ ಮನರಂಜನಾ ಉದ್ಯಮದ ಮಾರುಕಟ್ಟೆಯನ್ನು 50 ಶತಕೋಟಿ ಡಾಲರ್‌ಗೆ (ಸುಮಾರು 4 ಲಕ್ಷದ 23 ಸಾವಿರ ಕೋಟಿ ರೂಪಾಯಿ) ವಿಸ್ತರಿಸುವ ಗುರಿಯನ್ನು 'ವೇವ್ಸ್' ಹೊಂದಿದೆ.

ತಾರಾ ಆಕರ್ಷಣೆ

ಎಂ.ಎಂ. ಕೀರವಾಣಿ ಅವರ ತಂಡದ ಸಂಗೀತ ಕಾರ್ಯಕ್ರಮವು 'ವೇವ್ಸ್' ಶೃಂಗದ ಆಕರ್ಷಣೆಗಳಲ್ಲಿ ಒಂದು. ದೃಷ್ಟಿದೋಷ ಇರುವವರೇ ಆರ್ಕೆಸ್ಟ್ರಾ ನಡೆಸಿಕೊಡಲಿದ್ದಾರೆ.

ಮುಕೇಶ್ ಅಂಬಾನಿ, ಬಯೋಕಾನ್ ಸಂಸ್ಥಾಪಕಿ ಕಿರಣ್ ಮಜುಂದಾರ್ ಶಾ, ನಟರಾದ ರಜನಿಕಾಂತ್, ಅಮಿತಾಭ್ ಬಚ್ಚನ್, ಮೋಹನ್ ಲಾಲ್, ಚಿರಂಜೀವಿ, ಅಲ್ಲು ಅರ್ಜುನ್, ಅಕ್ಷಯ್ ಕುಮಾರ್, ನಟಿ ಆಲಿಯಾ ಭಟ್, ನಿರ್ದೇಶಕ ರಾಜಮೌಳಿ ಒಳಗೊಂಡಂತೆ ಪ್ರಮುಖರು ಶೃಂಗಸಭೆಯಲ್ಲಿ ಭಾಗವಹಿಸುವ ನಿರೀಕ್ಷೆ ಇದೆ.

ಜಾಗತಿಕ ಮಾಧ್ಯಮ ಸಂವಾದ (ಜಿಎಂಡಿ)ಯನ್ನು ಇದೇ ಮೊದಲ ಬಾರಿಗೆ ಆಯೋಜಿಸಲಾಗುತ್ತಿದ್ದು, ಇದರಲ್ಲಿ 25 ದೇಶದ ಪ್ರತಿನಿಧಿಗಳು ಭಾಗವಹಿಸಲಿದ್ದಾರೆ. 'ವೇವ್ಸ್ ಬಜಾರ್' ಎಂಬ ಚಾವಡಿ ವೇದಿಕೆಯನ್ನು ಕಲ್ಪಿಸಲಾಗಿದ್ದು, ಅಲ್ಲಿ ಕಂಟೆಂಟ್ ಸೃಷ್ಟಿಕರ್ತರು ತಮ್ಮ ಸೃಜನಶೀಲತೆಗೆ ತಕ್ಕ ಖರೀದಿ ದಾರರನ್ನು ಸಂಪರ್ಕಿಸಬಹುದಾಗಿದೆ. 6,100 ಖರೀದಿದಾರರನ್ನು 'ಕಂಟೆಂಟ್' ಮಾರುಕಟ್ಟೆಗಾಗಿ ಹುಡುಕಾಡುತ್ತಿರುವ 5,200 ಮಂದಿ ಸಂಧಿಸುವ ಅವಕಾಶ ಇದಾಗಿದೆ. 2,100 ಪ್ರಾಜೆಕ್ಟ್‌ಗಳು ಇಲ್ಲಿ ಖರೀದಿದಾರರ ಗಮನಸೆಳೆಯಲು ಕಾದಿವೆ.

ಶೃಂಗವನ್ನು ಉದ್ಘಾಟಿಸುವುದಷ್ಟೆ ಅಲ್ಲದೆ 'ಕಂಟೆಂಟ್' ಸೃಷ್ಟಿಕರ್ತರ ಜೊತೆ ಪ್ರಧಾನಿ ಮೋದಿ ಮಾತುಕತೆ ನಡೆಸಲಿದ್ದಾರೆ. ಕೆಲವು ಕಂಪನಿಗಳ ಸಿಇಒಗಳೊಟ್ಟಿಗೆ ಸಂವಾದದಲ್ಲೂ ತೊಡಗಲಿದ್ದಾರೆ.

ಸುಮಾರು 10 ಸಾವಿರ ಪ್ರತಿನಿಧಿಗಳು 'ವೇವ್ಸ್'ಗೆ ಸಾಕ್ಷಿಯಾಗುವ ನಿರೀಕ್ಷೆ ಆಯೋಜಕರಿಗೆ ಇದೆ. 90ಕ್ಕೂ ಹೆಚ್ಚು ದೇಶಗಳಿಂದ ಪ್ರತಿನಿಧಿಗಳು, 300ಕ್ಕೂ ಹೆಚ್ಚು ಕಂಪನಿಗಳು, 350ಕ್ಕೂ ಹೆಚ್ಚು ನವೋದ್ಯಮಗಳು ಪಾಲ್ಗೊಳ್ಳಲಿವೆ.

'ಕಂಟೆಂಟ್'ಗೆ ಸಂಬಂಧಿಸಿದಂತೆ ವಿವಿಧ ವಿಭಾಗಗಳಲ್ಲಿ ಸ್ಪರ್ಧೆಗಳನ್ನು ನಡೆಸಲಾಗಿದ್ದು, ವಿಜೇತರಿಗೆ ಬಹುಮಾನಗಳನ್ನು ಶೃಂಗದಲ್ಲಿ ಘೋಷಿಸಲಾಗುವುದು.

ಹೋಟೆಲ್‌ಗೆ ಬೆಂಕಿ: 14 ಮಂದಿ ಸಾವು

ಕೋಲ್ಕತ್ತ (ಪಿಟಿಐ): ಇಲ್ಲಿನ ಹೋಟೆಲ್‌ವೊಂದರಲ್ಲಿ ಮಂಗಳವಾರ ಸಂಭವಿಸಿದ ಅಗ್ನಿ ಅವಘಡದಲ್ಲಿ 14 ಮಂದಿ ಮೃತಪಟ್ಟಿದ್ದು, 13 ಮಂದಿ ಗಾಯಗೊಂಡಿದ್ದಾರೆ ಎಂದು ಪೊಲೀಸರು ಬುಧವಾರ ಮಾಹಿತಿ ನೀಡಿದ್ದಾರೆ.

42 ಕೊಠಡಿಗಳಿದ್ದ 6 ಅಂತಸ್ತಿನ ರಿತುರಾಜ್ ಹೋಟೆಲ್‌ನಲ್ಲಿ ಈ ದುರ್ಘಟನೆ ನಡೆದಿದ್ದು, ಮೃತರಲ್ಲಿ 11 ಪುರುಷರು, ಒಬ್ಬ ಮಹಿಳೆ ಹಾಗೂ ಇಬ್ಬರು ಮಕ್ಕಳು ಸೇರಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರು ಮೃತರ ಕುಟುಂಬಕ್ಕೆ ತಲಾ ₹2 ಲಕ್ಷ, ಗಾಯಗೊಂಡವರಿಗೆ ₹50000 ಪರಿಹಾರ ಘೋಷಿಸಿದ್ದಾರೆ. ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಕೂಡ ಇದೇ ಪ್ರಮಾಣದಲ್ಲಿ ಪರಿಹಾರ ಘೋಷಿಸಿದ್ದಾರೆ.



ಹೊತ್ತಿ ಉರಿದ ಹೋಟೆಲ್ ಕಟ್ಟಡ

ಮಂಗಳವಾರ ಸಂಜೆ 7.30ರ ವೇಳೆಗೆ ಹೋಟೆಲ್‌ನಲ್ಲಿ ಬೆಂಕಿ ಹೊತ್ತಿಕೊಂಡಿದೆ. ಈ ವೇಳೆ 88 ಮಂದಿ ಅತಿಥಿಗಳು ಮತ್ತು ಸಿಬ್ಬಂದಿ ಇದ್ದರು. ಸಹಾಯಕ್ಕಾಗಿ ಅಂಗಲಾಚುತ್ತಿದ್ದ ಹಲವರು ಗಾಬರಿಯಲ್ಲಿ ಕಿಟಕಿಗಳ ಮೂಲಕ ಹೋಟೆಲ್‌ನಿಂದ ಹೊರಕ್ಕೆ ಹಾರಿ ಮೃತಪಟ್ಟಿದ್ದಾರೆ. ಇನ್ನೂ ಕೆಲವರು ಹೊಗೆಯಿಂದ ಉಸಿರುಗಟ್ಟಿ ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

16 ಗಂಟೆ ಬಳಿಕ ಬೆಕ್ಕಿನ ರಕ್ಷಣೆ

ಹೋಟೆಲ್‌ನಲ್ಲಿ 16 ಗಂಟೆಗಳ ಕಾಲ ಸಿಲುಕಿದ್ದ ಬೆಕ್ಕೊಂದನ್ನು ಅಗ್ನಿಶಾಮಕ ಸಿಬ್ಬಂದಿ ಬುಧವಾರ ರಕ್ಷಿಸಿದ್ದಾರೆ. ಕಟ್ಟಡದ 3ನೇ ಅಂತಸ್ತಿನ ಕೊಠಡಿಯಲ್ಲಿ ಸಿಲುಕಿದ್ದ ಬೆಕ್ಕನ್ನು ಸುರಕ್ಷಿತವಾಗಿ ಹೊರಗೆ ಕರೆತಂದಿದ್ದಾರೆ. ರಕ್ಷಣಾ ಕಾರ್ಯಾಚರಣೆಯಲ್ಲಿ ತೊಡಗಿದ್ದ ಸಿಬ್ಬಂದಿಗೆ ಬೆಕ್ಕಿನ ಸುಳಿವು ಮೊದಲಿಗೆ ಸಿಕ್ಕಿರಲಿಲ್ಲ. ಬುಧವಾರ ಸಂಜೆ 4 ಗಂಟೆ ಸಮಯದಲ್ಲಿ ಬೆಕ್ಕಿನ ಶಬ್ದ ಕೇಳಿ ರಕ್ಷಣೆ ಮಾಡಿದ್ದಾಗಿ ಹೇಳಿದ್ದಾರೆ.

ಸಿಸೋಡಿಯಾ, ಜೈನ್ ವಿರುದ್ಧ ಎಸಿಬಿ ಪ್ರಕರಣ

ಅಂದಾಜು ₹2000 ಕೋಟಿ ಮೊತ್ತದ ಹಗರಣ: ಭ್ರಷ್ಟಾಚಾರ ನಿಗ್ರಹ ದಳದ ಹೇಳಿಕೆ

ನವದೆಹಲಿ (ಪಿಟಿಐ): ಸರ್ಕಾರಿ ಶಾಲಾ ಕೊಠಡಿಗಳ ನಿರ್ಮಾಣದಲ್ಲಿ ನಡೆದಿದೆ ಎನ್ನಲಾದ ಭ್ರಷ್ಟಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಆಮ್ ಆದ್ಮಿ ಪಕ್ಷದ ನಾಯಕರಾದ ಮನೀಷ್ ಸಿಸೋಡಿಯಾ ಹಾಗೂ ಸತ್ಯೇಂದ್ರ ಜೈನ್ ವಿರುದ್ಧ ದೆಹಲಿ ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ಪ್ರಕರಣ ದಾಖಲಿಸಿದೆ.

'ಇದು ಸುಮಾರು ₹2000 ಕೋಟಿ ಹಗರಣವೆಂದು ಅಂದಾಜಿಸಲಾಗಿದೆ. ದೆಹಲಿಯಾದ್ಯಂತ ಒಟ್ಟು 12,748 ಶಾಲಾ ಕೊಠಡಿಗಳನ್ನು ಹಾಗೂ ಕಟ್ಟಡಗಳನ್ನು ನಿರ್ಮಿಸುವ ಯೋಜನೆ ಇದಾಗಿತ್ತು. ಇದರ ಅಡಿ ಪ್ರತಿ ಕೊಠಡಿಯನ್ನು ₹24.86 ಲಕ್ಷ ವೆಚ್ಚದಂತೆ ನಿರ್ಮಿಸಲಾಗಿದೆ. ಇದು ಸಾಮಾನ್ಯ ಖರ್ಚಿಗಿಂತ 5 ಪಟ್ಟು ಅಧಿಕವಾಗಿದ್ದು, ಹೆಚ್ಚಿನ ಮೊತ್ತಕ್ಕೆ ಗುತ್ತಿಗೆ ನೀಡಲಾಗಿದೆ' ಎಂದು ಎಸಿಬಿ ತನ್ನ ಹೇಳಿಕೆಯಲ್ಲಿ ತಿಳಿಸಿದೆ.

ಸಿಸೋಡಿಯಾ ಶಿಕ್ಷಣ ಸಚಿವರಾಗಿದ್ದಾಗ ಹಾಗೂ ಜೈನ್ ಲೋಕೋಪಯೋಗಿ ಸಚಿವರಾಗಿದ್ದ ವೇಳೆ 34 ಗುತ್ತಿಗೆದಾರರಿಗೆ ಯೋಜನೆಯ ಗುತ್ತಿಗೆ ನೀಡಲಾಗಿತ್ತು. ಬಹುತೇಕರು ಎಎಪಿಯೊಂದಿಗೆ ಸಂಪರ್ಕದಲ್ಲಿರುವ ವ್ಯಕ್ತಿಗಳೇ ಆಗಿದ್ದಾರೆ. ಉತ್ತಮ ಕೊಠಡಿ ನಿರ್ಮಾಣಕ್ಕೆ ಅಂದಾಜು ₹5 ಲಕ್ಷ ವೆಚ್ಚವಾಗಲಿದೆ. ಆದರೆ ಪ್ರತಿ ಕೊಠಡಿ ನಿರ್ಮಾಣಕ್ಕೆ ₹24.86 ಲಕ್ಷದಂತೆ ಒಟ್ಟು ₹2,892 ಕೋಟಿ ವೆಚ್ಚ ಮಾಡಲಾಗಿದೆ ಎನ್ನಲಾಗಿದೆ.

2016ರ ಒಳಗಾಗಿ ಯೋಜನೆಯನ್ನು ಪೂರ್ಣಗೊಳಿಸಲು ಉದ್ದೇಶಿಸಲಾಗಿತ್ತು. ಆದರೆ ಈ ಅವಧಿಯೊಳಗೆ ಒಂದೂ ಕಾಮಗಾರಿ ಪೂರ್ಣಗೊಂಡಿಲ್ಲ ಎಂದು ಎಸಿಬಿ ಆರೋಪಿಸಿದೆ.

ಇದು ರಾಜಕೀಯ ನಡೆ: ಎಎಪಿ ಆರೋಪ

ಸಿಸೋಡಿಯಾ ಹಾಗೂ ಜೈನ್ ಅವರ ಮೇಲೆ ಒತ್ತಡ ಹೇರುವ ಮತ್ತು ಹೆದರಿಸುವ ಸಲುವಾಗಿ ಎಸಿಬಿ ಪ್ರಕರಣ ದಾಖಲಿಸಿದೆ ಎಂದು ಎಎಪಿಯು ಬುಧವಾರ ಆರೋಪಿಸಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಎಎಪಿ ರಾಷ್ಟ್ರೀಯ ಮಾಧ್ಯಮ ಉಸ್ತುವಾರಿ ಅನುರಾಗ್ ಧಂಡಾ 'ಇತ್ತೀಚೆಗೆ ಸಿಸೋಡಿಯಾ ಮತ್ತು ಜೈನ್ ಅವರನ್ನು ಪಕ್ಷದ ಪಂಜಾಬ್ ಘಟಕದ ಉಸ್ತುವಾರಿ ಮತ್ತು ಸಹ ಉಸ್ತುವಾರಿಗಳನ್ನಾಗಿ ನೇಮಿಸಲಾಗಿದೆ. ಹೀಗಾಗಿ ಈ ಪ್ರಕರಣವು ಅವರನ್ನು ಹೆದರಿಸುವ ರಾಜಕೀಯ ನಡೆಯಾಗಿದೆ' ಎಂದು ಆರೋಪಿಸಿದರು.

ಹಿಂದಿನ ಎಎಪಿ ಸರ್ಕಾರದ ಆಡಳಿತದಲ್ಲಿ ಶಾಲೆಗಳ ನಿರ್ಮಾಣದಲ್ಲಿ ಭ್ರಷ್ಟಾಚಾರ ನಡೆದಿದೆ. ಹಗರಣದಲ್ಲಿ ಅರವಿಂದ ಕೇಜ್ರಿವಾಲ್ ಅವರ ಪಾತ್ರದ ಬಗ್ಗೆಯೂ ಎಸಿಬಿ ತನಿಖೆ ನಡೆಸಬೇಕು
ವೀರೇಂದ್ರ ಸಚದೇವ್
ದೆಹಲಿ ಬಿಜೆಪಿ ಮುಖ್ಯಸ್ಥ

ಭಾರತದ ಜೊತೆ ಮಾತುಕತೆಯಲ್ಲಿ ಪ್ರಗತಿ: ಟ್ರಂಪ್

ನ್ಯೂಯಾರ್ಕ್/ವಾಷಿಂಗ್ಟನ್ (ಪಿಟಿಐ): ದ್ವಿಪಕ್ಷೀಯ ವ್ಯಾಪಾರ ಒಪ್ಪಂದದ ಕುರಿತಾಗಿ ಭಾರತದ ಜೊತೆಗಿನ ಮಾತುಕತೆಗಳಲ್ಲಿ ದೊಡ್ಡಮಟ್ಟದ ಪ್ರಗತಿ ಆಗಿದೆ ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ. ಭಾರತದ ಜೊತೆ ಅಮೆರಿಕ ಒಪ್ಪಂದವೊಂದನ್ನು ಮಾಡಿಕೊಳ್ಳಲಿದೆ ಎಂದು ತಾವು ಭಾವಿಸಿರುವುದಾಗಿಯೂ ಅವರು ತಿಳಿಸಿದ್ದಾರೆ.

'ನಿಮಗೆ ತಿಳಿದಿರುವಂತೆ ಪ್ರಧಾನಿ ನರೇಂದ್ರ ಮೋದಿ ಅವರು ಕೆಲವು ವಾರಗಳ ಹಿಂದೆ ಇಲ್ಲಿಗೆ ಭೇಟಿ ನೀಡಿದ್ದರು. ಒಪ್ಪಂದ ಮಾಡಿಕೊಳ್ಳಲು ಅವರು ಬಯಸಿದ್ದಾರೆ. ಏನಾಗುತ್ತದೆಯೋ ನೋಡೋಣ' ಎಂದು ಟ್ರಂಪ್ ಅವರು ಸುದ್ದಿಗಾರರ ಬಳಿ ಹೇಳಿದ್ದಾರೆ.

ಇದಕ್ಕೂ ಮೊದಲು ಅಮೆರಿಕದ ಹಣಕಾಸು ಸಚಿವ ಸ್ಕಾಟ್ ಬೆಸೆಂಟ್ ಅವರು, 'ಭಾರತದ ಜೊತೆಗಿನ ವಾಣಿಜ್ಯ ಒಪ್ಪಂದವು ಬಹಳ ಸನಿಹಕ್ಕೆ ಬಂದಿದೆ' ಎಂದು ಶ್ವೇತಭವನದಲ್ಲಿ ತಿಳಿಸಿದ್ದರು. ಒಪ್ಪಂದ ಮಾಡಿಕೊಳ್ಳುವ ವಿಚಾರದಲ್ಲಿ ಏಷ್ಯಾದ ವಾಣಿಜ್ಯ ಪಾಲುದಾರರು ಮತ್ತು ಮಿತ್ರರಾಷ್ಟ್ರಗಳು ಬಹಳ ಮುಂದೆ ಬಂದಿದ್ದಾರೆ ಎಂದು ಬೆಸೆಂಟ್ ಹೇಳಿದ್ದಾರೆ.

ವಾಣಿಜ್ಯ ಒಪ್ಪಂದದ ಕಾಲಮಿತಿ ಕುರಿತ ಪ್ರಶ್ನೆಗೆ ಬೆಸೆಂಟ್ ಅವರು, 'ಭಾರತದ ಜೊತೆ ಒಪ್ಪಂದವು ಬಹಳ ಸನ್ನಿಹಿತವಾಗಿದೆ... ಭಾರತದ ಜೊತೆ ಮಾತುಕತೆ ನಡೆಸುವುದು ಬೇರೆ ದೇಶಗಳ ಜೊತೆ ಮಾತುಕತೆ ನಡೆಸುವುದಕ್ಕಿಂತ ಸುಲಭ. ಏಕೆಂದರೆ, ಅವರು ಬಹಳ ಹೆಚ್ಚು ಸುಂಕ ವಿಧಿಸುತ್ತಾರೆ' ಎಂದು ಉತ್ತರಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಚಿನ್ಮಯಿ ಕೃಷ್ಣ ದಾಸ್‌ಗೆ ಜಾಮೀನು

ಢಾಕಾ (ಪಿಟಿಐ): ಹಿಂದೂ ಆಧ್ಯಾತ್ಮಿಕ ಮುಖಂಡ ಚಿನ್ಮಯಿ ಕೃಷ್ಣ ದಾಸ್ ಅವರಿಗೆ ಬಾಂಗ್ಲಾದೇಶದ ಹೈಕೋರ್ಟ್ ಬುಧವಾರ ಜಾಮೀನು ಮಂಜೂರು ಮಾಡಿದೆ.

ರಾಷ್ಟ್ರಧ್ವಜವನ್ನು ಅವಹೇಳನ ಮಾಡಿದ ಆರೋಪದಡಿ ದಾಸ್ ಅವರನ್ನು ಢಾಕಾದ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಕಳೆದ ನ.25ರಂದು ಬಂಧಿಸಲಾಗಿತ್ತು.

ನ್ಯಾಯಮೂರ್ತಿ ಅತಾವುರ್ ರಹಮಾನ್ ಮತ್ತು ನ್ಯಾಯಮೂರ್ತಿ ಅಲಿ ರೆಜಾ ಅವರನ್ನೊಳಗೊಂಡ ಪೀಠವು ಜಾಮೀನು ನೀಡಿದೆ ಎಂದು ನ್ಯಾಯಾಲಯದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ದಾಸ್ ಮತ್ತು ಇತರ 18 ಮಂದಿ ಬಾಂಗ್ಲಾದೇಶದ ರಾಷ್ಟ್ರೀಯ ಧ್ವಜವನ್ನು ಅಗೌರವಗೊಳಿಸಿದ್ದಾರೆ ಎಂದು ಆರೋಪಿಸಿ ಚಟ್ಟೋಗ್ರಾಮದ ಕೊಟ್ವಾಲಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಮರಾಠ ಮೀಸಲು: ಜೂನ್ 6ರ ಗಡುವು

ಛತ್ರಪತಿ ಸಂಭಾಜಿನಗರ (ಪಿಟಿಐ): ನಮ್ಮ ಸಮುದಾಯದ ಬೇಡಿಕೆ ಈಡೇರಿಕೆಗಾಗಿ ಆಗ್ರಹಿಸಿ ಆ. 29ರಿಂದ ಆಮರಣಾಂತ ಉಪವಾಸ ಸತ್ಯಾಗ್ರಹ ನಡೆಸುವುದಾಗಿ ಮರಾಠ ಮೀಸಲಾತಿ ಹೋರಾಟಗಾರ ಮನೋಜ್ ಜರಾಂಗೆ ಬುಧವಾರ ಹೇಳಿದರು.

ಮರಾಠರು ಕುಣಬಿಗಳ ರಕ್ತ ಸಂಬಂಧಿಗಳು ಎಂಬ ಕರಡು ಅಧಿಸೂಚನೆಯನ್ನು ನಮ್ಮ ಸಮುದಾಯದ ಬೇಡಿಕೆಯಂತೆ ಜೂನ್ 6ರೊಳಗೆ ಕಾನೂನಾಗಿಸಬೇಕು ಎಂದು ಜಲ್ನಾ ಜಿಲ್ಲೆಯ ಅಂತರವಾಲಿ ಸರಾಟಿ ಗ್ರಾಮದಲ್ಲಿ ಸರ್ಕಾರಕ್ಕೆ ಗಡುವು ನಿಗದಿಪಡಿಸಿದರು.

ಸಿಐಎಸ್‌ಸಿಇ: ಬಾಲಕಿಯರೇ ಮೇಲುಗೈ

ನವದೆಹಲಿ (ಪಿಟಿಐ): ಕೌನ್ಸಿಲ್ ಫಾರ್ ದಿ ಇಂಡಿಯನ್ ಸ್ಕೂಲ್ ಸರ್ಟಿಫಿಕೇಟ್ ಎಕ್ಸಾಮಿನೇಷನ್ಸ್‌ನ (ಸಿಐಎಸ್‌ಸಿಇ) 10 ಮತ್ತು 12ನೇ ತರಗತಿಯ ಫಲಿತಾಂಶ ಬುಧವಾರ ಪ್ರಕಟವಾಗಿದೆ. ಬಾಲಕಿಯರು ಮತ್ತು ಬಾಲಕರ ಮಧ್ಯದ ತೇರ್ಗಡೆ ಪ್ರಮಾಣದಲ್ಲಿ ಸ್ವಲ್ಪವೇ ಅಂತರ ಇದ್ದು, ಬಾಲಕಿಯರೇ ಮೇಲುಗೈ ಸಾಧಿಸಿದ್ದಾರೆ.

10ನೇ ತರಗತಿಯಲ್ಲಿ ಬಾಲಕಿಯರ ತೇರ್ಗಡೆ ಪ್ರಮಾಣ ಶೇ 99.45 ರಷ್ಟಿದ್ದರೆ, ಬಾಲಕರದ್ದು ಶೇ 98.64ರಷ್ಟಿದೆ. ಇನ್ನು 12ನೇ ತರಗತಿಯಲ್ಲಿ ಬಾಲಕಿಯರು ಶೇ 99.45ರಷ್ಟು ಪಾಸಾಗಿದ್ದರೆ, ಬಾಲಕರು ಶೇ 98.64ರಷ್ಟು ಪಾಸಾಗಿದ್ದಾರೆ. 2,803 ಶಾಲೆಗಳಿಂದ ಒಟ್ಟು 2.52 ಲಕ್ಷ ವಿದ್ಯಾರ್ಥಿಗಳು 10ನೇ ತರಗತಿ ಪರೀಕ್ಷೆ ಬರೆದಿದ್ದರು. ಈ ಪೈಕಿ 2,308 ವಿದ್ಯಾರ್ಥಿಗಳು ಅನುತ್ತೀರ್ಣರಾಗಿದ್ದಾರೆ. 12ನೇ ತರಗತಿ ಪರೀಕ್ಷೆಯಲ್ಲಿ 1,460 ಶಾಲೆಗಳಿಂದ 99,551 ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದರು. ಈ ಪೈಕಿ 973 ಮಂದಿ ಪರೀಕ್ಷೆಯಲ್ಲಿ ಪಾಸಾಗಿಲ್ಲ.



ಇಂಡಿಯನ್ ಪ್ರೀಮಿಯರ್ ಲೀಗ್ 2025

ಶ್ರೇಯಸ್, ಪ್ರಭಸಿಮ್ರನ್ ಅರ್ಧಶತಕ • ಚಾಹಲ್ ಹ್ಯಾಟ್ರಿಕ್ • ಟೂರ್ನಿಯಿಂದ ಹೊರಬಿದ್ದ ಚೆನ್ನೈ

ಕಿಂಗ್ಸ್‌ಗೆ ಮಣಿದ ಸೂಪರ್ ಕಿಂಗ್ಸ್

ಚೆನ್ನೈ (ಪಿಟಿಐ): ಆತಿಥೇಯ ಚೆನ್ನೈ ಸೂಪರ್ ಕಿಂಗ್ಸ್ ತಂಡದ ಗಾಯದ ಮೇಲೆ ಪಂಜಾಬ್ ಕಿಂಗ್ಸ್ ಉಪ್ಪು ಸವರಿತು.

ಚೆಪಾಕ್‌ನಲ್ಲಿ ಬುಧವಾರ ನಡೆದ ಐಪಿಎಲ್ ಪಂದ್ಯದಲ್ಲಿ ಯುಜುವೇಂದ್ರ ಚಾಹಲ್ ಹ್ಯಾಟ್ರಿಕ್ ಮತ್ತು ಶ್ರೇಯಸ್ ಅಯ್ಯರ್ ಚೆಂದದ ಬ್ಯಾಟಿಂಗ್ ಬಲದಿಂದ ಕಿಂಗ್ಸ್ 4 ವಿಕೆಟ್‌ಗಳಿಂದ ಚೆನ್ನೈ ತಂಡವನ್ನು ಸೋಲಿಸಿತು. ಇದರೊಂದಿಗೆ ಚೆನ್ನೈ ತಂಡವು ಅಧಿಕೃತವಾಗಿ ಟೂರ್ನಿಯಿಂದ ಹೊರಬಿದ್ದಿತು.

ಈ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್‌ಗೆ ಇಳಿಸಲ್ಪಟ್ಟ ಚೆನ್ನೈ ತಂಡ ನಾಲ್ಕು ಎಸೆತಗಳು ಉಳಿದಿರುವಂತೆ 190 ರನ್ನಿಗೆ ಆಲೌಟ್ ಆಯಿತು. ಆಲ್‌ರೌಂಡರ್ ಸ್ಯಾಮ್ ಕರನ್ ಒತ್ತಡದ ಸ್ಥಿತಿಯಲ್ಲಿ ಬಿರುಸಿನ 88 ರನ್ (47 ಎಸೆತ) ಬಾರಿಸಿದರು. ಅದಕ್ಕುತ್ತರವಾಗಿ ಪಂಜಾಬ್ 19.4 ಓವರುಗಳಲ್ಲಿ 6ಕ್ಕೆ 194 ರನ್ ಗಳಿಸಿತು.

ಕರನ್ ಆಸರೆ: ಪವರ್‌ಪ್ಲೇ ಆಟದಲ್ಲಿ 48 ರನ್‌ಗಳಿಗೆ 3 ವಿಕೆಟ್ ಕಳೆದುಕೊಂಡ ಚೆನ್ನೈ ತಂಡಕ್ಕೆ ಕರನ್ ಆಧಾರವಾದರು. ಅವರು ಎಚ್ಚರಿಕೆಯ ಜೊತೆಗೆ ಆಕ್ರಮಣದ ಆಟವನ್ನು ಬೆರೆಸಿದರು. ಡೆವಾಲ್ಡ್ ಬ್ರೆವಿಸ್ (32, 26 ಎಸೆತ) ಜೊತೆ ನಾಲ್ಕನೇ ವಿಕೆಟ್‌ಗೆ 78 ರನ್ ಸೇರಿಸಿ ಕುಸಿತ ತಪ್ಪಿಸಿದರು.

16ನೇ ಓವರ್‌ಗಳವರೆಗೆ ಚೆನ್ನೈ ಓವರೊಂದಕ್ಕೆ 9 ರನ್ ಗಳಿಸುತ್ತ ಸಾಗಿತ್ತು. ಈ ವೇಳೆ ಕರನ್ ಅಬ್ಬರಿಸಿದರು. ಮಧ್ಯಮ ವೇಗಿ ಸೂರ್ಯಾಂಶ್ ಶೆಡ್ಗೆ ಬೌಲಿಂಗ್‌ನ ಮೊದಲ ಎರಡು ಎಸೆತಗಳಲ್ಲಿ ಕ್ರಮವಾಗಿ ಲಾಂಗ್ ಆಫ್ ಮತ್ತು ಸ್ಕ್ವೇರ್‌ಲೆಗ್‌ಗೆ ಸಿಕ್ಸರ್ ಎತ್ತಿದರು. ಮೂರನೇ ಸಿಕ್ಸರ್ ಯತ್ನವನ್ನು ಪಂಜಾಬ್ ನಾಯಕ ಶ್ರೇಯಸ್ ಅಯ್ಯರ್ ಡೈವ್ ಮಾಡಿ ತಡೆದರು. ಆದರೆ ಕರನ್ ಮುಂದಿನ ಎರಡು ಎಸೆತಗಳಲ್ಲಿ ಬೌಂಡರಿಗಳನ್ನು ಅಟ್ಟಿದರು. ಆ ಓವರಿನಲ್ಲಿ 26 ರನ್‌ಗಳು ಹರಿದುಬಂದವು.

ನಾಯಕ ಶ್ರೇಯಸ್ ಅಯ್ಯರ್ ಮತ್ತು ಪ್ರಭಸಿಮ್ರನ್ ಸಿಂಗ್ ಎಎಫ್‌ಪಿ ಚಿತ್ರ

ಕರನ್ 18ನೇ ಓವರಿನಲ್ಲಿ ಮಾರ್ಕೊ ಯಾನ್ಸೆನ್ ಬೌಲಿಂಗ್‌ನಲ್ಲಿ ವಿಕೆಟ್ ಕೀಪರ್‌ಗೆ ಕ್ಯಾಚಿತ್ತು ನಿರ್ಗಮಿಸಿದರು. ಅವರ ಆಟದಲ್ಲಿ 9 ಬೌಂಡರಿ, 4 ಸಿಕ್ಸರ್‌ಗಳಿದ್ದವು.

ಚಾಹಲ್ ಹ್ಯಾಟ್ರಿಕ್: ಚಾಹಲ್ 19ನೇ ಓವರಿನಲ್ಲಿ ದಾಳಿಗಿಳಿದರು. ಮೊದಲ ಎಸೆತವನ್ನು ಧೋನಿ ಸಿಕ್ಸರ್‌ಗಟ್ಟಿದರು. ಎರಡನೇ ಎಸೆತದಲ್ಲೂ ದೊಡ್ಡ ಹೊಡೆತಕ್ಕೆ ಯತ್ನಿಸಿದಾಗ ಅವರು ಲಾಂಗ್ ಆಫ್‌ನಲ್ಲಿ ಹಿಡಿದ ಕ್ಯಾಚಿಗೆ ನಿರ್ಗಮಿಸಬೇಕಾಯಿತು. ಚಾಹಲ್ ಅವರ ನಾಲ್ಕನೇ ಎಸೆತದಲ್ಲಿ ದೀಪಕ್ ಹೂಡ (2) ಬ್ಯಾಕ್‌ವರ್ಡ್ ಪಾಯಿಂಟ್‌ಲ್ಲಿ ಕ್ಯಾಚಿತ್ತರು. ಇಂಪ್ಯಾಕ್ಟ್ ಸಬ್ ಅನ್ಶುಲ್ ಕಾಂಬೋಜ್ ನಂತರದ ಎಸೆತ ಅರ್ಥೈಸದೇ ಬೌಲ್ಡ್ ಆದರು.

ನೂರ್ ಅಹ್ಮದ್ ದೊಡ್ಡ ಹೊಡೆತಕ್ಕೆ ಯತ್ನಿಸಿ ಮಾರ್ಕೊ ಯಾನ್ಸೆನ್ ಲಾಂಗ್ ಆನ್‌ನಲ್ಲಿ ಕ್ಯಾಚ್ ಹಿಡಿದಾಗ ಚಾಹಲ್ ಹ್ಯಾಟ್ರಿಕ್ ಪೂರೈಸಿ ಸಂಭ್ರಮಿಸಿದರು.

ಹ್ಯಾಟ್ರಿಕ್ ವಿಕೆಟ್ ಪಡೆದ ಯುಜುವೇಂದ್ರ ಚಾಹಲ್

ಇದಕ್ಕೆ ಮೊದಲು ಚೆನ್ನೈ ಆರಂಭ ನಿರಾಶಾದಾಯಕವಾಗಿತ್ತು. ಶೇಖ್ ರಶೀದ್ (11) ಮತ್ತು ಆಯುಷ್ ಮ್ಹಾತ್ರೆ (7) ಬೇಗನೇ ನಿರ್ಗಮಿಸಿದರು. ರವೀಂದ್ರ ಜಡೇಜ (17, 12ಎ) ಮತ್ತೊಮ್ಮೆ ವಿಫಲರಾದರು. ಚೆನ್ನೈ ತಂಡ ಕೊನೆಯ ಐದು ವಿಕೆಟ್‌ಗಳನ್ನು ಕೇವಲ ಆರು ರನ್‌ಗಳ (ಏಳು ಎಸೆತಗಳ) ಅಂತರದಲ್ಲಿ ಕಳೆದುಕೊಂಡಿತು.

ಸಂಕ್ಷಿಪ್ತ ಸ್ಕೋರು: ಚೆನ್ನೈ ಸೂಪರ್ ಕಿಂಗ್ಸ್: 19.2 ಓವರುಗಳಲ್ಲಿ 190 (ಸ್ಯಾಮ್ ಕರನ್ 88, ಡೆವಾಲ್ಡ್ ಬ್ರೆವಿಸ್ 32, ರವೀಂದ್ರ ಜಡೇಜ 17; ಅರ್ಷದೀಪ್ ಸಿಂಗ್ 25ಕ್ಕೆ2, ಮಾರ್ಕೊ ಯಾನ್ಸೆನ್ 30ಕ್ಕೆ2, ಯುಜುವೇಂದ್ರ ಚಾಹಲ್ 32ಕ್ಕೆ4) **ಪಂಜಾಬ್ ಕಿಂಗ್ಸ್:** 19.4 ಓವರ್ ಗಳಲ್ಲಿ 6 ವಿಕೆಟ್ ಗಳಿಗೆ 194 (ಪ್ರಿಯಾಂಶ್ ಆರ್ಯ 23, ಪ್ರಭಸಿಮ್ರನ್ ಸಿಂಗ್54, ಶ್ರೇಯಸ್ ಅಯ್ಯರ್ 72, ಖಲೀಲ್ ಅಹಮದ್ 28ಕ್ಕೆ 2, ಮಥೀಷ ಪಥಿರಾಣ 45ಕ್ಕೆ2) **ಫಲಿತಾಂಶ:** ಪಂಜಾಬ್ ಕಿಂಗ್ಸ್ ತಂಡಕ್ಕೆ 4 ವಿಕೆಟ್ ಜಯ. **ಪಂದ್ಯದ ಆಟಗಾರ:** ಶ್ರೇಯಸ್ ಅಯ್ಯರ್

ವೈಭವ್– ಬೂಮ್ರಾ ಮುಖಾಮುಖಿಗೆ ಸಜ್ಜು

ರಾಯಲ್ಸ್‌ಗೆ ಮುಂಬೈ ಸವಾಲು

ಜೈಪುರ (ಪಿಟಿಐ): ಉದಯೋನ್ಮುಖ ತಾರೆ ವೈಭವ್ ಸೂರ್ಯವಂಶಿ ಈ ಹಿಂದಿನ ಪಂದ್ಯದಲ್ಲಿ ತೋರಿದ ಬ್ಯಾಟಿಂಗ್ ಪರಾಕ್ರಮವು ರಾಜಸ್ಥಾನ ರಾಯಲ್ಸ್ ತಂಡದಲ್ಲಿ ನವೋಲ್ಲಾಸ ಮೂಡಿಸಿದೆ. ಗುರುವಾರ ನಡೆಯಲಿರುವ ಐಪಿಎಲ್ ಪಂದ್ಯದಲ್ಲಿ ಈ ತಂಡಕ್ಕೆ, ಪ್ರಬಲವಾಗಿ ಪುಟಿದೆದ್ದಿರುವ ಮುಂಬೈ ಇಂಡಿಯನ್ಸ್ ತಂಡವನ್ನು ತಡೆದು ನಿಲ್ಲಿಸುವ ಸವಾಲು ಇದೆ.

ರಾಯಲ್ಸ್ ತಂಡದ ಲೀಗ್ ಆಸೆ ಕಮರಿಹೋಯಿತು ಎನ್ನುವಷ್ಟರಲ್ಲಿ 14 ವರ್ಷ ವಯಸ್ಸಿನ ವೈಭವ್ ಸೋಮವಾರ ಗುಜರಾತ್ ಟೈಟನ್ಸ್‌ನ ಪ್ರಬಲ ದಾಳಿಯನ್ನು ಪುಡಿಗಟ್ಟಿ ಅವಿಸ್ಮರಣೀಯ ಇನಿಂಗ್ಸ್ ಆಡಿದ್ದರು. ಆದರೂ ರಾಯಲ್ಸ್‌ಗೆ ಪ್ಲೇಆಫ್ ಸಾಧ್ಯತೆ ಕ್ಷೀಣವಾಗಿಯೇ ಇದೆ.

ಸಂಜು ಸ್ಯಾಮ್ಸನ್ ಪಕ್ಕೆಲುಬಿನ ಗಾಯದಿಂದ ಹಿಂದೆಸರಿದ ಪರಿಣಾಮ ಅವಕಾಶ ಪಡೆದ ಎಡಗೈ ಬ್ಯಾಟರ್ ವೈಭವ್ ಮೂರೇ ಇನಿಂಗ್ಸ್ ಬಳಿಕ ಮನೆಮಾತಾಗಿದ್ದಾರೆ. ಸ್ಯಾಮ್ಸನ್ ತಂಡಕ್ಕೆ ಮರಳುವ ಬಗ್ಗೆ ಇನ್ನೂ ಸ್ಪಷ್ಟತೆಯಿಲ್ಲ. ಅವರು ಏಪ್ರಿಲ್ 16ರಂದು ಕೊನೆಯ ಪಂದ್ಯ ಆಡಿದ್ದರು.

ಜೈಪುರದಲ್ಲಿ ಜೈಸ್ವಾಲ್ ಜೊತೆ ಇನಿಂಗ್ಸ್ ಆರಂಭಿಸಿದ್ದ ಸೂರ್ಯವಂಶಿ ಮೊದಲ ವಿಕೆಟ್‌ಗೆ 166 ರನ್ ಸೇರಿಸಿ 'ಕನಸಿನ ಆರಂಭ' ಒದಗಿಸಿದ್ದರು. ಹೀಗಾಗಿ 210 ರನ್‌ಗಳ ಗೆಲುವಿನ ಗುರಿಯನ್ನು ರಾಯಲ್ಸ್ ತಂಡವು ಲೀಲಾಜಾಲವಾಗಿ ತಲುಪಿತು.

ವೈಭವ್ ಸೂರ್ಯವಂಶಿ



ಜಸ್‌ಪ್ರೀತ್ ಬೂಮ್ರಾ

ಅಂತರರಾಷ್ಟ್ರೀಯ ಬೌಲರ್‌ಗಳಿಗೆ ಬೆವರಿಳಿಸಿದ ಸೂರ್ಯವಂಶಿ ಅವರು ಅಗ್ರ ವೇಗದ ಬೌಲರ್ ಜಸ್‌ಪ್ರೀತ್ ಬೂಮ್ರಾ ಅವರನ್ನು ಹೇಗೆ ನಿಭಾಯಿಸುವರು ಎನ್ನುವ ಕುತೂಹಲ ಮೂಡಿದೆ.

ರಾಯಲ್ಸ್ ಕೆಳಕ್ರಮಾಂಕದಲ್ಲಿ ಶಿಮ್ರೋನ್ ಹೆಟ್ಮೆಯರ್ ಅವರ ಮೇಲೆ ಒತ್ತಡವಿದೆ. ವೆಸ್ಟ್ ಇಂಡೀಸ್‌ನ ಈ ಆಟಗಾರ ಈ ಋತುವಿನಲ್ಲಿ ಪಂದ್ಯ ಗೆಲ್ಲಿಸುವ ಆಟವಾಡಿಲ್ಲ.

ಆದರೆ ರಾಯಲ್ಸ್ ಈ ಬಾರಿ ತೀವ್ರ ಪೈಪೋಟಿಯ ಪಂದ್ಯಗಳಲ್ಲಿ ಮೇಲುಗೈಯನ್ನು ಗೆಲುವಾಗಿ ಪರಿವರ್ತಿಸಲು ವಿಫಲವಾದ ಕಾರಣ ಅದು ಅಂಕಪಟ್ಟಿಯಲ್ಲಿ ಕೆಳಭಾಗಕ್ಕೆ ಸರಿದಿದೆ. ಜೋಫ್ರಾ ಆರ್ಚರ್ ವಿಕೆಟ್‌ಗಳನ್ನು ಪಡೆದರೂ 10ಕ್ಕಿಂತ ಹೆಚ್ಚು ರನ್ ಕೊಟ್ಟು ಧಾರಾಳಿ ಎನಿಸಿದ್ದಾರೆ. ಸಂದೀಪ್ ಶರ್ಮಾ ಕೂಡ ಮಿತವ್ಯಯಿಯಾಗಿಲ್ಲ.

ಆರಂಭದಲ್ಲಿ ಕೆಲವು ಪಂದ್ಯಗಳನ್ನು ಸೋತರೂ ಮುಂಬೈ ಕೊನೆಯ ಐದು ಪಂದ್ಯಗಳನ್ನು ಗೆದ್ದು ಪ್ಲೇ ಆಫ್ ಸಾಧ್ಯತೆ ಉಜ್ವಲಗೊಳಿಸಿದೆ. ಹಾರ್ದಿಕ್ ಪಾಂಡ್ಯ ಪಡೆ ಈಗ ರಣೋತ್ಸಾಹದಲ್ಲಿದೆ.

ಮುಂಬೈ ಪರ ಪದಾರ್ಪಣೆ ಮಾಡಿದ್ದ ಕಾರ್ಬಿನ್ ಬಾಷ್ 200ರ ಸ್ಟ್ರೈಕ್‌ರೇಟ್‌ನಲ್ಲಿ ರನ್ ಗಳಿಸಿರುವುದು ಆ ತಂಡಕ್ಕೆ ಸಕಾರಾತ್ಮಕ ಅಂಶ. ಸೂರ್ಯಕುಮಾರ್ ಯಾದವ್, ರೋಹಿತ್ ಶರ್ಮಾ ಅವರೂ ಸಕಾಲದಲ್ಲಿ ಲಯಕಂಡುಕೊಂಡಿದ್ದಾರೆ. ಎದುರಾಳಿಗಳಿಗೆ ಅಪಾಯದ ಸಂಕೇತ ರವಾನಿಸಿದ್ದಾರೆ.

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೊ ಹಾಟ್‌ಸ್ಟಾರ್

ಬಾಕ್ಸಿಂಗ್: ಭಾರತಕ್ಕೆ 25 ಪದಕ

ಅಮ್ಮಾನ್, ಜೋರ್ಡಾನ್ (ಪಿಟಿಐ): ಜೂನಿಯರ್ ಏಷ್ಯನ್ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಭಾರತದ ಪ್ರಾಬಲ್ಯ ಮುಂದುವರಿದಿದೆ. 15 ವರ್ಷದೊಳಗಿನವರ ವಿಭಾಗದಲ್ಲಿ 25 ಪದಕಗಳನ್ನು ಗೆದ್ದು ಅಗ್ರಸ್ಥಾನದಲ್ಲಿದೆ.

ಭಾರತದ ಮಹಿಳಾ ಬಾಕ್ಸರ್‌ಗಳು ಮಂಗಳವಾರ ನಡೆದ 15 ತೂಕ ವಿಭಾಗಗಳ ಫೈನಲ್ ಸ್ಪರ್ಧೆಯಲ್ಲಿ 10 ಚಿನ್ನ ಗೆದ್ದುಕೊಂಡರು. ಜೊತೆಗೆ ನಾಲ್ಕು ಕಂಚಿನ ಪದಕ ಜಯಿಸಿದರು.15 ವರ್ಷದೊಳಗಿನವರ ಬಾಲಕಿಯರ ವಿಭಾಗದಲ್ಲಿ ಕೋಮಲ್ (30–33 ಕೆ.ಜಿ) 3–2 ಅಂತರದಿಂದ ಕಜಕಸ್ತಾನದ ಐಯಾರು ಒಂಗಾರ್ಬೆಕ್ ಅವರನ್ನು ಸೋಲಿಸುವುದರೊಂದಿಗೆ ಭಾರತದ ಚಿನ್ನದ ಬೇಟೆ ಆರಂಭವಾಯಿತು. ನಂತರ ಖುಷಿ ಅಹ್ಲಾವತ್ (35 ಕೆ.ಜಿ), ತಮನ್ನಾ (37 ಕೆ.ಜಿ) ಸ್ವರ್ಣ ಗೆದ್ದರು.

ಸ್ವಿ (40 ಕೆ.ಜಿ), ಮಿಲ್ಕಿ ಮೀನಮ್ (43 ಕೆ.ಜಿ), ಪ್ರಿನ್ಸಿ (52 ಕೆ.ಜಿ), ನವ್ಯಾ (58 ಕೆ.ಜಿ), ಸುನೈನಾ (61 ಕೆ.ಜಿ), ತೃಶಾನಾ ಮೋಹಿತೆ (67 ಕೆ.ಜಿ) ಮತ್ತು ವಂಶಿಕಾ (70+ ಕೆ.ಜಿ) ಅವರೂ ಚಿನ್ನಕ್ಕೆ ಮುತ್ತಿಟ್ಟರು.15 ವರ್ಷದೊಳಗಿನವರ ಬಾಲಕರ ವಿಭಾಗದ ಫೈನಲ್‌ನಲ್ಲಿ ಭಾರತದ ನಾಲ್ವರು ಸ್ಪರ್ಧಿಸಿದ್ದರು. ಸಂಸ್ಕಾರ್ ವಿನೋದ್ (35 ಕೆಜಿ) ಚಿನ್ನ ಗೆದ್ದರೆ, ಉಳಿದ ಮೂವರು ಬೆಳ್ಳಿ ಪದಕ ಜಯಿಸಿದರು.

17 ವರ್ಷದೊಳಗಿನವರ ವಿಭಾಗದಲ್ಲಿ 18 ಪದಕಗಳು ಈಗಾಗಲೇ ಖಚಿತವಾಗಿದ್ದು, ಬುಧವಾರ ಫೈನಲ್ ಸ್ಪರ್ಧೆಗಳು ನಡೆಯಲಿವೆ. ಚಿನ್ನದ ಪದಕದ ಸುತ್ತಿನಲ್ಲಿ ಭಾರತ ಏಳು ಮಂದಿ ಕಣದಲ್ಲಿದ್ದಾರೆ.

ಐಪಿಎಲ್: ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಜಯ	ಸೋಲು	ಅಂಕ	ಎನ್‌ಆರ್‌ಆರ್
ರಾಯಲ್ ಚಾಲೆಂಜರ್ಸ್ ಬೆಂಗಳೂರು	10	7	3	14	0.521
ಪಂಜಾಬ್ ಕಿಂಗ್ಸ್	10	6	3	13	0.199
ಮುಂಬೈ ಇಂಡಿಯನ್ಸ್	10	6	4	12	0.889
ಗುಜರಾತ್ ಟೈಟನ್ಸ್	9	6	3	12	0.748
ಡೆಲ್ಲಿ ಕ್ಯಾಪಿಟಲ್ಸ್	10	6	4	12	0.362
ಲಖನೌ ಸೂಪರ್ ಜೈಂಟ್ಸ್	10	5	5	10	-0.325
ಕೋಲ್ಕತ್ತ ನೈಟ್ ರೈಡರ್ಸ್	10	4	5	9	0.271
ರಾಜಸ್ಥಾನ ರಾಯಲ್ಸ್	10	3	7	6	-0.349
ಸನ್‌ರೈಸರ್ಸ್ ಹೈದರಾಬಾದ್	9	3	6	6	-1.103
ಚೆನ್ನೈ ಸೂಪರ್ ಕಿಂಗ್ಸ್	10	2	8	4	-1.211

ಆರೇಂಜ್ ಕ್ಯಾಪ್
ಸಾಯಿ ಸುದರ್ಶನ್ (ಜಿಟಿ) 456 ರನ್

ಪರ್ಪಲ್ ಕ್ಯಾಪ್
ಜೋಶ್ ಹೇಜಲ್‌ವುಡ್ (ಆರ್‌ಸಿಬಿ) 18 ವಿಕೆಟ್

ದಿಢೀರ್ ತಾರಾಪಟ್ಟ: ವೈಭವ್‌ಗೆ ದ್ರಾವಿಡ್ ಕಿವಿಮಾತು

ನವದೆಹಲಿ (ಪಿಟಿಐ/ಎಎಫ್‌ಪಿ): ಉದಯೋನ್ಮುಖ ಬ್ಯಾಟರ್ ವೈಭವ್ ಸೂರ್ಯವಂಶಿ ಅವರ ನಿರ್ಭೀತ ಆಟ ಮತ್ತು ಸಾಮರ್ಥ್ಯಕ್ಕೆ ಪ್ರಶಂಸೆ ವ್ಯಕ್ತಪಡಿಸಿರುವ ರಾಜಸ್ಥಾನ ರಾಯಲ್ಸ್ ತಂಡದ ಮುಖ್ಯಕೋಚ್ ರಾಹುಲ್ ದ್ರಾವಿಡ್ ಅವರು, ಈ ಪ್ರತಿಭಾನ್ವಿತ ಆಟಗಾರ ಪ್ರಚಾರದ ಗುಂಗಿನಲ್ಲಿ ಮೈಮರೆಯದಂತೆ ಎಚ್ಚರಿಕೆ ವಹಿಸಬೇಕೆಂದು ಕಿವಿಮಾತನ್ನೂ ಹೇಳಿದ್ದಾರೆ.

ಬುಧವಾರ ಸ್ಟಾರ್ ಸ್ಪೋರ್ಟ್ಸ್ ಹಮ್ಮಿಕೊಂಡ ಆನ್‌ಲೈನ್ ಸಂವಾದದಲ್ಲಿ ಭಾರತದ ತಂಡದ ದಿಗ್ಗಜ ಬ್ಯಾಟರ್‌ಗೆ ನಿರೀಕ್ಷೆಯಂತೆ ಸೂರ್ಯವಂಶಿ ಕುರಿತಾದ ಪ್ರಶ್ನೆಗಳೇ ಹರಿದುಬಂದವು.

'ಇನ್ನು ಮುಂದೆ ಕ್ರಿಕೆಟ್ ಜಗವು ಪ್ರತಿಭಾನ್ವಿತ ಆಟಗಾರನ ಬೆನ್ನು ಬೀಳಲಿದ್ದು ಅವನಷ್ಟಕ್ಕೆ ಇರಲು ಬಿಡುವುದಿಲ್ಲ. ದಿನ ಬೆಳಗಾಗುವುದರೊಳಗೆ ದೊರಕಿದ ಈ ತಾರಾ ಪಟ್ಟವನ್ನು ನಿರ್ವಹಿಸಲು ಬಿಹಾರದ ಹದಿಹರೆಯದ ಆಟಗಾರ ದಾರಿ ಕಂಡುಕೊಳ್ಳಬೇಕು' ಎಂದು ಹೇಳಿದರು.

'ಜನರು ಅವನ ಬಗ್ಗೆ ಮಾತನಾಡುವುದನ್ನು ನಮಗೆ ನಿಯಂತ್ರಿಸಲಾಗದು. ನಾನು ಈ ಸಂವಾದಕ್ಕೆ ಬಂದರೆ ಇಲ್ಲೂ ವೈಭವ್ ಬಗ್ಗೆಯೇ ಪ್ರಶ್ನೆಗಳು ಎದುರಾಗುತ್ತಿವೆ' ಎಂದರು.

'ಇನ್ನು ಮುಂದೆ ವೈಭವ್‌ಗೆ ಸವಾಲುಗಳು ಎದುರಾಗಲಿವೆ. ಅದೇ ವೇಳೆ ಮುಂದೆ ಹೇಗೆ ಆಡುತ್ತಾನೆಂಬ ಕುತೂಹಲವೂ ಇರಲಿದೆ. ಆದರೆ ಹೊಗಳಿಕೆಯ ಸುರಿಮಳೆಯೊಡನೆ ಪ್ರಚಾರದಲ್ಲಿ ಕಳೆದುಹೋಗುವಂತೆ ಆಗಬಾರದು' ಎಂದು ಎಚ್ಚರಿಕೆಯ ಧಾಟಿಯಲ್ಲಿ ಹೇಳಿದರು.

19 ವರ್ಷದೊಳಗಿನವರ ತಂಡದ ಕೋಚ್ ಆಗಿದ್ದ ದ್ರಾವಿಡ್ ಅವರು ರಿಷಭ್ ಪಂತ್, ಶುಭಮನ್ ಗಿಲ್, ಪೃಥ್ವಿ ಶಾ, ಯಶಸ್ವಿ ಜೈಸ್ವಾಲ್ ಅಂಥ ಅನೇಕ ಪ್ರತಿಭಾನ್ವಿತ ಆಟಗಾರರನ್ನು ಬೆಳೆಸಿದವರು.

ರಾಜಸ್ಥಾನ ತಂಡದ ಕೋಚ್ ರಾಹುಲ್ ದ್ರಾವಿಡ್

ಸೂರ್ಯವಂಶಿ ಅವರಲ್ಲಿ ಕಂಡುಕೊಂಡ ವಿಶೇಷ ಪ್ರತಿಭೆಯ ಬಗ್ಗೆ ಕೇಳಿದ ಪ್ರಶ್ನೆಗೆ ದ್ರಾವಿಡ್ ಅವರು, 'ಅವನ ನಿರ್ಭೀತ ಆಟ ಮತ್ತು ಸಂದರ್ಭವು ತನ್ನ ಆಟದ ಮೇಲೆ ಪರಿಣಾಮ ಬೀರದಂತೆ ನೋಡಿಕೊಳ್ಳುವ ರೀತಿ ಗಮನ ಸೆಳೆಯಿತು. ಅವನು ಪ್ರದರ್ಶಿಸಿದ ವೈವಿಧ್ಯಮಯ ಹೊಡೆತಗಳನ್ನು ಗಮನಿಸಿದರೆ ಇಷ್ಟೊಂದು ಎಳೆ ವಯಸ್ಸಿನಲ್ಲಿ ಈ ಸಾಮರ್ಥ್ಯದ ಆಟಗಾರ ನೋಡಲು ಸಿಗುವುದಿಲ್ಲ' ಎಂದು ವಿಶ್ಲೇಷಿಸಿದರು.

'ಅವನು ಇನ್ನಷ್ಟು ಉತ್ತಮ ಆಟಗಾರನಾಗುತ್ತಾನೆ. ಅವನು ಈಗಾಗಲೇ ಪೂರ್ಣಪ್ರಮಾಣದ ಆಟಗಾರನಾಗಿದ್ದಾನೆಂದು ಹೇಳಲಾಗದು. ಅವನನ್ನು ಈಗಾಗಲೇ ಇನ್ನೊಬ್ಬರ ಜೊತೆ ಹೋಲಿಸಬಾರದು. ಎದುರಾಳಿ ತಂಡಗಳು ಅವನಿಗೆ ಬೌಲಿಂಗ್ ಮಾಡುವಾಗ ಜಾಣ್ಮೆ ವಹಿಸಬಹುದು. ಟಿ20 ಮಾದರಿಯಲ್ಲಿ ಇಂಥ ಆಟ ಕೆಲಸಕ್ಕೆ ಬರದೇ ಇರುವ ಸಂದರ್ಭ ಎದುರಾಗಬಹುದು' ಎಂದೂ ದ್ರಾವಿಡ್ ಹೇಳಿದರು.

ಸೋಮವಾರ ನಡೆದ ಪಂದ್ಯದಲ್ಲಿ ಗುಜರಾತ್ ಟೈಟನ್ಸ್‌ನ ಅನುಭವಿ ಬೌಲರ್‌ಗಳ ದಾಳಿಯನ್ನು ಹಿಗ್ಗಾಮುಗ್ಗ ದಂಡಿಸಿದ ಸೂರ್ಯವಂಶಿ ಆ ಪಂದ್ಯದಲ್ಲಿ ಸಿಕ್ಸರ್‌ಗಳನ್ನು ಅಟ್ಟುವ ಸಾಮರ್ಥ್ಯ ಪ್ರದರ್ಶಿಸಿದ್ದರು. 11 ಸಿಕ್ಸರ್‌ಗಳನ್ನು ಸಿಡಿಸಿದ್ದರು.

'ಬ್ಯಾಟಿನ ವೇಗ, ಕಣ್ಣು–ಕೈ ಸಂಯೋಜನೆ ಅವನಿಗೆ ಅಂಥ ಶಕ್ತಿ ಕೊಟ್ಟಿದೆ. ಲೆಂತ್ ಅಳೆಯುವಲ್ಲಿ ಚುರುಕುತನ ನನಗೆ ಅಚ್ಚರಿ ಮೂಡಿಸಿತು. ಬೌಲರ್‌ಗಳ ಎಸೆತ ಶಾರ್ಟ್ ಆದರೆ, ಫುಲ್ ಆದರೆ ಅದನ್ನು ತಪ್ಪದೇ ಬಂಡವಾಳ ಮಾಡಿಕೊಳ್ಳುತ್ತಿದ್ದ. ಅವನಲ್ಲಿರುವ ಈ ಸಹಜ ಸಾಮರ್ಥ್ಯ ಆ ಪಂದ್ಯದ ಸಂದರ್ಭದಲ್ಲಿ ನಮಗೆ ನೆರವಾಯಿತು' ಎಂದು ಹೇಳಿದರು.

ಸಂವಾದದ ವೇಳೆ ಸೂರ್ಯವಂಶಿಯ ಆಟದ ವಿಡಿಯೊ ದೃಶ್ಯಾವಳಿಗಳನ್ನು ಪ್ರದರ್ಶಿಸಲಾಯಿತು. ಅಲ್ಲಿ ತಮ್ಮನ್ನು ಉತ್ತಮ ಆಟಗಾರನಾಗಿ ರೂಪುಗೊಳಿಸಿದ ದ್ರಾವಿಡ್ ಬಗ್ಗೆ ಸೂರ್ಯವಂಶಿ ಮೆಚ್ಚುಗೆ ಸೂಚಿಸುತ್ತಿದ್ದ ಕ್ಲಿಪ್ಪಿಂಗ್ ಕೂಡ ಇತ್ತು. ಆದರೆ ಈ ದೃಶ್ಯಾವಳಿ ಮುಗಿದ ತಕ್ಷಣ ಮಾತು ಮುಂದುವರಿಸಿದ ದ್ರಾವಿಡ್, 'ಅವನ ಈ ಏಳಿಗೆಯಲ್ಲಿ ನನ್ನ ಪಾತ್ರ ಅಷ್ಟೇನೂ ಇರಲಿಲ್ಲ' ಎಂದು ಹೇಳಿಬಿಟ್ಟರು.

'ಅವನ ತಂದೆ ಅವನಿಗೆ ಬೆಂಬಲವಾಗಿ ನಿಂತಿದ್ದಾರೆ. ರಾಜಸ್ಥಾನ ರಾಯಲ್ಸ್ ಬೆಂಬಲವೂ ಅವನಿಗಿದೆ. ಹಲವರು ವೈಭವ್ ಆಟ ಈ ಮಟ್ಟಕ್ಕೆ ಬೆಳೆಯುವಲ್ಲಿ ಭಾಗಿಯಾಗಿದ್ದಾರೆ' ಎಂದರು.

ಸಂಕ್ಷಿಪ್ತ ಸುದ್ದಿ

ಕಳಿಂಗ ಕಪ್: ಫೈನಲ್‌ಗೆ ಗೋವಾ

ಭುವನೇಶ್ವರ (ಪಿಟಿಐ): ಎಫ್‌ಸಿ ಗೋವಾ ತಂಡವು ಬುಧವಾರ ಕಳಿಂಗ ಸೂಪರ್ ಕಪ್ ಫುಟ್‌ಬಾಲ್ ಟೂರ್ನಿಯಲ್ಲಿ 3–1 ಗೋಲುಗಳಿಂದ ಮೋಹನ್ ಬಾಗನ್ ಎಸ್‌ಜಿ ತಂಡವನ್ನು ಮಣಿಸಿ ಫೈನಲ್ ಪ್ರವೇಶಿಸಿತು. 2019ರ ಚಾಂಪಿಯನ್ ಗೋವಾ ತಂಡವು ಶನಿವಾರ ನಡೆಯುವ ಫೈನಲ್‌ನಲ್ಲಿ ಜೆಮ್ಶೆಡ್‌ಪುರ ಎಫ್‌ಸಿ ತಂಡವನ್ನು ಎದುರಿಸಲಿದೆ.

ಬಿಟಿಎಂ ತಂಡಕ್ಕೆ ಭರ್ಜರಿ ಜಯ

ಬೆಂಗಳೂರು: ಬಿಟಿಎಂ ಫುಟ್‌ಬಾಲ್ ಕ್ಲಬ್ ತಂಡವು ಬುಧವಾರ ನಡೆದ ಬಿಡಿಎಫ್‌ಎ 'ಎ' ಡಿವಿಷನ್ ಲೀಗ್ ಪಂದ್ಯದಲ್ಲಿ 8–0 ಗೋಲುಗಳಿಂದ ಎಫ್‌ಸಿ ಡೆಕ್ಕನ್ ತಂಡವನ್ನು ಮಣಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಮತ್ತೊಂದು ಪಂದ್ಯದಲ್ಲಿ ಆದಾಯ ತೆರಿಗೆ ಎಫ್‌ಸಿ ತಂಡ 5–4 ಗೋಲುಗಳಿಂದ ಶ್ರೀ ಗಜಾನನ ಎಫ್‌ಸಿ ವಿರುದ್ಧ ಜಯಿಸಿತು. ಆದಾಯ ತೆರಿಗೆ ಎಫ್‌ಸಿ ತಂಡದ ಪರ ಲತೇಶ್ ಎಸ್ (16ನೇ ನಿ.), ಅಕ್ಷಯ್ ಕೆಎಸ್. (23ನೇ ನಿ.), ನರೇಂದ್ರ ಕುಮಾರ್ (51ನೇ, 57ನೇ ನಿ.), ಪಾಂಡ್ಯನ್ ಎಂ. (74ನೇ ನಿ.) ಗೋಲು ಹೊಡೆದರು.ಗಜಾನನ ತಂಡದ ಪರ ಹ್ಯಾರಿಸ್ ಡಾರೆಲ್ ಸಿ. (9ನೇ ನಿ.), ಅರುಣ್‌ಕುಮಾರ್ ಪೆರಿಯಾಸ್ವಾಮಿ (29ನೇ ನಿ.) ಮತ್ತು ಜಾನ್ಸ್ ಮುತ್ತುರಾಜ್ (34ನೇ ನಿ.ಮತ್ತು 48ನೇ ನಿ.) ಗೋಲು ಬಾರಿಸಿದರು.

ನಿಧನ ವಾರ್ತೆ

ರೊನಾಲ್ಡ್ ಎರ್ನೆಸ್ಟ್

ಬೆಂಗಳೂರು: ಉದಯೋನ್ಮುಖ ಫುಟ್‌ಬಾಲ್ ಆಟಗಾರ ರೊನಾಲ್ಡ್ ಎರ್ನೆಸ್ಟ್ ಡಿ'ಗ್ರಾಸ್ಸಾ (10 ವರ್ಷ) ಅನಾರೋಗ್ಯದಿಂದ ಬುಧವಾರ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದಿದ್ದಾನೆ.

ಬಿಬಿಎಫ್‌ಎಸ್ ತಂಡದ ಮೂಲಕ ರೊನಾಲ್ಡ್ ಫುಟ್‌ಬಾಲ್ ಪಯಣ ಆರಂಭಿಸಿದ್ದ. ಕಳೆದ ವರ್ಷ ಬೆಂಗಳೂರು ಫುಟ್‌ಬಾಲ್ ಕ್ಲಬ್ ಅಕಾಡೆಮಿ ಸೇರಿದ್ದ. ಕರ್ನಾಟಕ ರಾಜ್ಯ ಫುಟ್‌ಬಾಲ್ ಸಂಸ್ಥೆಯ (ಕೆಎಸ್‌ಎಫ್‌ಎ) 11 ವರ್ಷದೊಳಗಿನವರ 2025ರ ಯೂತ್ ಲೀಗ್ ಪ್ರೀಮಿಯರ್ ಟೂರ್ನಿಯಲ್ಲಿ ಬಿಎಫ್‌ಸಿ ತಂಡವನ್ನು ಪ್ರತಿನಿಧಿಸಿದ್ದ. ವಾರದಿಂದ ಜ್ವರದಿಂದ ಬಳಲುತ್ತಿದ್ದ ರೊನಾಲ್ಡ್ ಶನಿವಾರ ಕುಸಿದುಬಿದ್ದಿದ್ದು, ನಂತರ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಈತ ಫ್ರಾಂಕ್ ಆಂಥೋನಿ ಪಬ್ಲಿಕ್ ಶಾಲೆಯ ವಿದ್ಯಾರ್ಥಿ. ಖಾಸಗಿ ಸಂಸ್ಥೆಯಲ್ಲಿ ಲೆಕ್ಕಪರಿಶೋಧಕರಾಗಿರುವ ಡೊನಾಲ್ಡ್ ಡಿ'ಗ್ರಾಸ್ಸಾ ಅವರ ಪುತ್ರ.

ಪುರುಷರ ರಿಲೆ: ರಾಷ್ಟ್ರೀಯ ದಾಖಲೆ

ಚಂಡೀಗಢ (ಪಿಟಿಐ): ಗುರಿಂದರ್‌ವೀರ್ ಸಿಂಗ್, ಅನಿಮೇಶ್ ಕುಜುರ್, ಮಣಿಕಂಠ ಹೋಬಳಿದಾರ್ ಮತ್ತು ಅಮ್ಲಾನ್ ಬೋರ್ಗೊಹೈನ್ ಅವರನ್ನು ಒಳಗೊಂಡ ರಿಲಯನ್ಸ್ ತಂಡವು ಬುಧವಾರ ಇಲ್ಲಿ ನಡೆದ ಇಂಡಿಯನ್ ಓಪನ್ ರಿಲೆ ಪುರುಷರ 4x100 ಮೀಟರ್ ಸ್ಪರ್ಧೆಯಲ್ಲಿ 38.69 ಸೆಕೆಂಡುಗಳಲ್ಲಿ ಗುರಿ ತಲುಪಿ, ರಾಷ್ಟ್ರೀಯ ದಾಖಲೆ ನಿರ್ಮಿಸಿತು.

2010ರ ನವದೆಹಲಿಯ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ನಿರ್ಮಾಣವಾಗಿದ್ದ 38.89 ಸೆಕೆಂಡುಗಳ ದಾಖಲೆಯನ್ನು ರಿಲಯನ್ಸ್ ತಂಡ ಮುರಿಯಿತು. ರಹಮತ್ ಉಲ್ಲಾ ಮೊಲ್ಲಾ, ಸುರೇಶ್ ಸತ್ಯ, ಶಮೀರ್ ಮೋನ್ ಮತ್ತು ಎ. ಖುರೇಷಿ ಅವರನ್ನು ಒಳಗೊಂಡ ತಂಡವು 15 ವರ್ಷಗಳ ಹಿಂದೆ ದಾಖಲೆ ಬರೆದಿತ್ತು.

ಚಂಡೀಗಢದ ಸೆಕ್ಟರ್ 7 ಕ್ರೀಡಾ ಸಂಕೀರ್ಣದಲ್ಲಿ ನಡೆದ ಸ್ಪರ್ಧೆಯಲ್ಲಿ ತಮಿಳುನಾಡು (39.83 ಸೆಕೆಂಡ್) ಮತ್ತು ಆರ್ಮಿ (41.40 ಸೆಕೆಂಡ್) ಕ್ರಮವಾಗಿ ಎರಡನೇ ಮತ್ತು ಮೂರನೇ ಸ್ಥಾನ ಪಡೆದವು.

ಫಲಿತಾಂಶ: ಪುರುಷರು: 4X100 ರಿಲೆ: ರಿಲಯನ್ಸ್ (ಕಾಲ: 38.69ಸೆ: ಗುರಿಂದರ್‌ವೀರ್ ಸಿಂಗ್, ಅನಿಮೇಶ್ ಕುಜುರ್, ಮಣಿಕಂಠ ಹೋಬಳಿಧರ್ ಮತ್ತು ಆಮ್ಲಾನ್ ಬೋರ್ಗೊಹೈನ್)–1, ತಮಿಳುನಾಡು (39.83ಸೆ)–2, ಆರ್ಮಿ (41.40ಸೆ)–3. 4X400 ರಿಲೆ: ಎನ್‌ಸಿಸಿ (3ನಿ.04.31ಸೆ: ಜಯ್ ಕುಮಾರ್, ವಿಶಾಲ್ ಟಿ.ಕೆ, ಮನು ಟಿ.ಎಸ್, ಡಿ. ಚೌಧರಿ)–1, ಎನ್‌ಸಿಸಿ 2 (3ನಿ.04.92ಸೆ)–2, ತಮಿಳುನಾಡು (3ನಿ.10.67ಸೆ)–3 **ಮಹಿಳೆಯರು:** 4X100 ರಿಲೆ: ಎನ್‌ಸಿಒಇ ತಿರುವನಂತಪುರ (44.12 ಸೆ: ಶ್ರಬಾನಿ ನಂದಾ, ಅಭಿನಯಾ ರಾಜರಾಜನ್, ಸ್ನೇಹಾ ಎಸ್.ಎಸ್, ನಿತ್ಯಾ ಜಿ)–1, ತಮಿಳುನಾಡು (46.07ಸೆ)–2, ಹರಿಯಾಣ (49.68ಸೆ)–3. 4X400 ರಿಲೆ: ಎನ್‌ಸಿಸಿ (3ನಿ.32.64ಸೆ: ಸ್ನೇಹಾ ಕೆ, ರೂಪಲ್ ಚೌಧರಿ, ಜಿಸ್ನಾ ಮ್ಯಾಥ್ಯೂ, ಶುಭಾ ವೆಂಕಟೇಶನ್)–1, ತಮಿಳುನಾಡು (3ನಿ.40.85ಸೆ)–2, ಉತ್ತರಪ್ರದೇಶ (3ನಿ.56.70ಸೆ)–3.

ಗುರಿಂದರ್‌ವೀರ್ ಸಿಂಗ್, ಅಮ್ಲಾನ್ ಬೋರ್ಗೊಹೈನ್, ಮಣಿಕಂಠ ಹೋಬಳಿದಾರ್ ಮತ್ತು ಅನಿಮೇಶ್ ಕುಜೂರ್

ಮಹಿಳಾ ಹಾಕಿ: ಆಸ್ಟ್ರೇಲಿಯಾಕ್ಕೆ ಭಾರತ ಸವಾಲು

ಪರ್ತ್ (ಪಿಟಿಐ): ಆತಿಥೇಯ ಆಸ್ಟ್ರೇಲಿಯಾ ವಿರುದ್ಧ ಮೂರು ಪಂದ್ಯಗಳ ಟೆಸ್ಟ್ ಸರಣಿಯ ಮೊದಲ ಹಣಾಹಣಿಯಲ್ಲಿ ಗುರುವಾರ ಭಾರತ ಮಹಿಳಾ ಹಾಕಿ ತಂಡವು ಅತ್ಯುತ್ತಮ ಸಂಯೋಜನೆಯೊಂದಿಗೆ ಕಣಕ್ಕೆ ಇಳಿಯಲು ಸಜ್ಜಾಗಿದೆ.

ಸಲೀಮಾ ಟೇಟೆ ಬಳಗವು ರಕ್ಷಣಾ ವ್ಯೂಹದಲ್ಲಿನ ದೌರ್ಬಲ್ಯಗಳನ್ನು ಸರಿಪಡಿಸಲು ಪ್ರಯತ್ನಿಸಲಿದೆ. ಜೂನ್‌ನಲ್ಲಿ ನಡೆಯಲಿರುವ ಎಫ್‌ಐಎಚ್ ಪ್ರೊ ಲೀಗ್ ಟೂರ್ನಿಯ ಪಂದ್ಯಗಳಿಗೆ ಮುಖ್ಯ ಕೋಚ್ ಹರೇಂದ್ರ ಸಿಂಗ್ ಅವರು ಪ್ರಬಲ ತಂಡವನ್ನು ಗುರುತಿಸುವತ್ತ ಕಣ್ಣಿಟ್ಟಿದ್ದಾರೆ.

ಆಸ್ಟ್ರೇಲಿಯಾ 'ಎ' ತಂಡದ ವಿರುದ್ಧ ಅಭ್ಯಾಸ ಪಂದ್ಯಗಳಲ್ಲಿ ಸತತ ಸೋಲು ಅನುಭವಿಸಿದ ಪ್ರವಾಸಿ ತಂಡವು ಈ ಸರಣಿಯ ಮೂಲಕ ತಿರುಗೇಟು ನೀಡುವ ವಿಶ್ವಾಸದಲ್ಲಿದೆ. ಭಾರತ ತಂಡವು ಕ್ರಮವಾಗಿ 3–5ರಿಂದ ಮತ್ತು 2–3ರಿಂದ ಸೋತಿತ್ತು.

'ಅಭ್ಯಾಸ ಪಂದ್ಯಗಳಲ್ಲಿ ತಂಡದ ಹೆಚ್ಚಿನ ಆಟಗಾರ್ತಿಯರಿಗೆ ಆಡಲು ಅವಕಾಶ ಸಿಕ್ಕಿತ್ತು. ಈಗ ಉತ್ತಮ ಸಂಯೋಜನೆಯ ತಂಡವನ್ನು ಕಣಕ್ಕೆ ಇಳಿಸಲು ಪ್ರಯತ್ನಿಸುತ್ತೇವೆ' ಎಂದು ಹರೇಂದ್ರ ಸಿಂಗ್ ತಿಳಿಸಿದ್ದಾರೆ.

ಜೂನ್ 4ರಂದು ಸೌಹಾರ್ದ ಫುಟ್‌ಬಾಲ್

ನವದೆಹಲಿ (ಪಿಟಿಐ): ಭಾರತ ಪುರುಷರ ಫುಟ್‌ಬಾಲ್ ತಂಡವು ಜೂನ್ 4ರಂದು ಥಾಯ್ಲೆಂಡ್ ಜೊತೆ ಆ ದೇಶದಲ್ಲಿ ಅಂತರರಾಷ್ಟ್ರೀಯ ಸೌಹಾರ್ದ ಪಂದ್ಯವನ್ನು ಆಡಲಿದೆ ಎಂದು ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ ಬುಧವಾರ ತಿಳಿಸಿದೆ.

ಭಾರತ ತಂಡವು ಪ್ರಸ್ತುತ ಎಎಫ್‌ಸಿ ಏಷ್ಯನ್ ಕಪ್ 2027 ಕ್ವಾಲಿಫೈಯರ್‌ನ ಫೈನಲ್ ಸುತ್ತಿನ ಸ್ಪರ್ಧೆಗೆ ಸಜ್ಜಾಗುತ್ತಿದೆ. ಥಮ್ಮಸತ್ ಕ್ರೀಡಾಂಗಣದಲ್ಲಿ ನಡೆಯಲಿರುವ ಸೌಹಾರ್ದ ಪಂದ್ಯವು ಜೂನ್ 10ರಂದು ಹಾಂಗ್‌ಕಾಂಗ್ ವಿರುದ್ಧದ ಅರ್ಹತಾ ಸುತ್ತಿನ ಪಂದ್ಯಕ್ಕೆ ಪೂರ್ವಸಿದ್ಧತೆಯ ಭಾಗವಾಗಿದೆ. ಪ್ರಸ್ತುತ ಫಿಫಾ ರ‍್ಯಾಂಕಿಂಗ್‌ನಲ್ಲಿ ಭಾರತ 127ನೇ ಸ್ಥಾನದಲ್ಲಿದ್ದರೆ, ಥಾಯ್ಲೆಂಡ್ ತಂಡವು 99ನೇ ಸ್ಥಾನದಲ್ಲಿದೆ. ಉಭಯ ತಂಡಗಳು ಈತನಕ ಒಟ್ಟು 26 ಬಾರಿ ಮುಖಾಮುಖಿಯಾಗಿವೆ. ಅದರಲ್ಲಿ ಏಳು ಬಾರಿ ಭಾರತ, 12 ಸಲ ಥಾಯ್ಲೆಂಡ್ ಗೆದ್ದಿದ್ದರೆ, ಉಳಿದ ಏಳು ಪಂದ್ಯಗಳು ಡ್ರಾಗೊಂಡಿವೆ.

ಬಿಲಿಯರ್ಡ್ಸ್: ಪಂಕಜ್ ಗೆಲುವಿನ ಓಟ

ಮುಂಬೈ (ಪಿಟಿಐ): ಭಾರತದ ಅಗ್ರಮಾನ್ಯ ಆಟಗಾರ ಪಂಕಜ್ ಅಡ್ವಾನಿ ಮತ್ತು ಶಯಾನ್ ರಜ್ಮಿ ಅವರು ಇಲ್ಲಿ ನಡೆಯುತ್ತಿರುವ ಸಿಸಿಐ ಬಿಲಿಯರ್ಡ್ಸ್ ಕ್ಲಾಸಿಕ್ ಸ್ಪರ್ಧೆಯಲ್ಲಿ ಗೆಲುವಿನ ಓಟ ಮುಂದುವರಿಸಿದ್ದಾರೆ.

ಬುಧವಾರ ನಡೆದ ಗುಂಪು ಹಂತದ ಪಂದ್ಯದಲ್ಲಿ ಪಂಕಜ್ 777-387ರ ಅಂತರದಿಂದ ಅಶೋಕ್ ಶಾಂಡಿಲ್ಯ ವಿರುದ್ಧ ಗೆಲುವು ಸಾಧಿಸಿದರು.

ಯುವ ಆಟಗಾರ ಶಯಾನ್ 409-403ರಿಂದ ಬ್ರಿಟನ್‌ನ ಮಾರ್ಟಿನ್ ಗುಡ್ವಿಲ್ ಅವರನ್ನು ಮಣಿಸಿದರು. ಅವರು 516-380 ಅಂತರದಿಂದ ರಫತ್ ಹಬೀಬ್ ಅವರನ್ನೂ ಸೋಲಿಸಿದರು.

ನಳಿನ್ ಪಟೇಲ್ 750-278ರಿಂದ ಅಕ್ಷಯ್ ಗೋಗ್ರಿ ಅವರನ್ನು ಸೋಲಿಸಿ ತಮ್ಮ ಎರಡನೇ ಗೆಲುವು ದಾಖಲಿಸಿದರು. ಗೋಗ್ರಿ ಅವರು 230–799ರಿಂದ ಸಿದ್ಧಾರ್ಥ್ ಪರೀಖ್ ವಿರುದ್ಧವೂ ಸೋತರು.

ಪಂಕಜ್ ಅಡ್ವಾಣಿ

2026ರ ಏಷ್ಯನ್ ಗೇಮ್ಸ್ ಕ್ರಿಕೆಟ್‌ಗೆ ಮತ್ತೆ ಸ್ಥಾನ

ನವದೆಹಲಿ (ಪಿಟಿಐ): 2026ರ ಏಷ್ಯನ್ ಕ್ರೀಡಾಕೂಟದಲ್ಲಿ ಕ್ರಿಕೆಟ್ ಅನ್ನು ಉಳಿಸಿಕೊಳ್ಳಲಾಗಿದೆ. ಏಷ್ಯಾ ಒಲಿಂಪಿಕ್ ಕೌನ್ಸಿಲ್ (ಒಸಿಎ) ಮತ್ತು ಆಯೋಜನಾ ಸಮಿತಿಯ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ.

ಸೆ.19ರಿಂದ ಅ.4ರವರೆಗೆ ಜಪಾನ್‌ನಲ್ಲಿ ಕೂಟ ನಡೆಯಲಿದೆ. ನಗೋಯಾ ಸಿಟಿ ಹಾಲ್‌ನಲ್ಲಿ ಸೋಮವಾರ ನಡೆದ ಸಂಘಟನಾ ಸಮಿತಿಯ ನಿರ್ದೇಶಕರ ಮಂಡಳಿಯ ಸಭೆಯಲ್ಲಿ ಕ್ರಿಕೆಟ್ ಮತ್ತು ಮಿಶ್ರ ಮಾರ್ಷಲ್ ಆರ್ಟ್ಸ್ ಅನ್ನು ಔಪಚಾರಿಕವಾಗಿ ಅನುಮೋದಿಸಲಾಯಿತು ಎಂದು ಒಸಿಎ ತಿಳಿಸಿದೆ.

ಏಷ್ಯನ್ ಕ್ರೀಡಾಕೂಟದಲ್ಲಿ ಕ್ರಿಕೆಟ್ ನಾಲ್ಕನೇ ಬಾರಿ ಸ್ಥಾನ ಪಡೆದಂತಾಗಿದೆ. ಈ ಮೊದಲು ಗುವಾಂಗ್‌ಝೌ (2010), ಇಂಚಿಯಾನ್ (2014) ಮತ್ತು ಹಾಂಗ್‌ಝೌ (2023) ಕೂಟಗಳಲ್ಲಿ ಕ್ರಿಕೆಟ್ ಸೇರಿತ್ತು. ಭಾರತ ಪುರುಷ ಮತ್ತು ಮಹಿಳಾ ತಂಡಗಳು ಹಾಲಿ ಚಾಂಪಿಯನ್‌ಗಳಾಗಿವೆ.

'ಏಷ್ಯನ್ ಗೇಮ್ಸ್‌ನಲ್ಲಿ ಕ್ರಿಕೆಟ್ ಪಂದ್ಯಗಳನ್ನು ಟಿ20 ಮಾದರಿಯಲ್ಲಿ ಆಡಲಾಗುತ್ತದೆ. ಐಚಿ ಪ್ರಾಂತ್ಯದಲ್ಲಿ ಆಯೋಜಿಸಲು ಚಿಂತಿಸಲಾಗಿದೆ. ಆದರೂ ತಾಣಗಳು ಇನ್ನೂ ಅಂತಿಮಗೊಂಡಿಲ್ಲ. ದಕ್ಷಿಣ ಏಷ್ಯಾದಲ್ಲಿ ಕ್ರಿಕೆಟ್ ಜನಪ್ರಿಯತೆ ಹೊಂದಿದೆ ಮಾತ್ರವಲ್ಲದೆ, 2028ರ ಲಾಸ್ ಏಂಜಲೀಸ್ ಒಲಿಂಪಿಕ್ಸ್‌ನಲ್ಲೂ ಸೇರ್ಪಡೆಗೊಂಡಿರುವುದರಿಂದ ಈ ಕ್ರೀಡೆಗೆ ಇನ್ನಷ್ಟು ಉತ್ತೇಜನ ಸಿಗಲಿದೆ' ಎಂದು ಒಸಿಎ ಪ್ರಕಟಣೆ ತಿಳಿಸಿದೆ.

1900ರಲ್ಲಿ (ಪ್ಯಾರಿಸ್) ಬ್ರಿಟನ್ ತಂಡವು 158 ರನ್‌ಗಳಿಂದ ಫ್ರಾನ್ಸ್ ತಂಡವನ್ನು ಫೈನಲ್ ಪಂದ್ಯದಲ್ಲಿ ಸೋಲಿಸಿದ ನಂತರ ಇದೇ ಮೊದಲ ಬಾರಿಗೆ ಒಲಿಂಪಿಕ್ಸ್‌ನಲ್ಲೂ ಕ್ರಿಕೆಟ್ ಕಾಣಿಸಿಕೊಳ್ಳಲಿದೆ.ಏಷ್ಯನ್ ಕ್ರೀಡಾಕೂಟದಲ್ಲಿ ಕ್ರಿಕೆಟ್ ಸೇರಿದಂತೆ 41 ಕ್ರೀಡೆಗಳು ಇರಲಿವೆ. ಏಷ್ಯಾ ಒಲಿಂಪಿಕ್ ಕೌನ್ಸಿಲ್ ಅಧೀನದಲ್ಲಿರುವ 45 ರಾಷ್ಟ್ರೀಯ ಒಲಿಂಪಿಕ್ ಸಮಿತಿಗಳನ್ನು ಪ್ರತಿನಿಧಿಸುವ 15 ಸಾವಿರ ಕ್ರೀಡಾಪಟುಗಳು ಮತ್ತು ಅಧಿಕಾರಿಗಳು ಭಾಗವಹಿಸುವ ನಿರೀಕ್ಷೆಯಿದೆ.

ಹಲವು ದಿಗ್ಗಜ ಶೂಟರ್‌ಗಳಿಗೆ ಮಾರ್ಗದರ್ಶಕ

ಶೂಟಿಂಗ್ ತರಬೇತುದಾರ ಥಾಮಸ್ ಇನ್ನಿಲ್ಲ

ಕೊಚ್ಚಿ (ಪಿಟಿಐ): ವಿಶ್ವ ಶೂಟಿಂಗ್‌ನಲ್ಲಿ ಭಾರತ ಪ್ರಬಲ ಶಕ್ತಿಯಾಗಿ ಮೂಡಲು ಕಾರಣರಾಗಿದ್ದ ಭಾರತ ತಂಡದ ಮಾಜಿ ಕೋಚ್ ಪ್ರೊ.ಸನ್ನಿ ಥಾಮಸ್ (84) ಅವರು ಕೋಟಯಂನಲ್ಲಿ ಬುಧವಾರ ಹೃದಯಸ್ತಂಭನದಿಂದ ನಿಧನರಾದರು.

ಅವರು ಕೋಚ್ ಆಗಿದ್ದ ಅವಧಿ ಯಲ್ಲಿ ಭಾರತಕ್ಕೆ ಒಲಿಂಪಿಕ್ಸ್ ಪದಕಗಳೂ ಬಂದಿದ್ದವು. ಅವರಿಗೆ ಪತ್ನಿ, ಪುತ್ರಿ ಮತ್ತು ಇಬ್ಬರು ಪುತ್ರರು ಇದ್ದಾರೆ. 1993 ರಿಂದ 2012ರವರೆಗೆ ಅವರು ಭಾರತದ ಶೂಟರ್‌ಗಳಿಗೆ ಮಾರ್ಗ ದರ್ಶನ ಮಾಡಿದ್ದರು. 2001ರಲ್ಲಿ ದ್ರೋಣಾಚಾರ್ಯ ಪುರಸ್ಕಾರಕ್ಕೆ ಪಾತ್ರರಾಗಿದ್ದ ಅವರು ಈ ಕ್ರೀಡೆಯಲ್ಲಿ ಭಾರತದ ಹಲವು ಐತಿಹಾಸಿಕ ಕ್ಷಣಗಳಿಗೆ ಸಾಕ್ಷಿಯಾಗಿದ್ದರು.

2004ರ ಒಲಿಂಪಿಕ್ಸ್‌ನಲ್ಲಿ ಅವರು ತಂಡದ ಕೋಚ್ ಆಗಿದ್ದಾಗ ರಾಜವರ್ಧನ್ ಸಿಂಗ್ ರಾಥೋಡ್ ಅವರು ಪುರುಷರ ಡಬಲ್ ಟ್ರ್ಯಾಪ್‌ನಲ್ಲಿ ಬೆಳ್ಳಿ ಗೆದ್ದಿದ್ದರು. ಒಲಿಂಪಿಕ್ಸ್‌ನಲ್ಲಿ ಭಾರತಕ್ಕೆ ಅದು ಶೂಟಿಂಗ್‌ನಲ್ಲಿ ಮೊದಲ ಪದಕವಾಗಿತ್ತು.

ಸನ್ನಿ ಥಾಮಸ್

ಬೀಜಿಂಗ್ ಒಲಿಂಪಿಕ್ಸ್‌ನಲ್ಲಿ (2008) ಅಭಿನವ್ ಬಿಂದ್ರಾ ಪುರುಷರ 10 ಮೀ. ಏರ್ ರೈಫಲ್ ಸ್ಪರ್ಧೆಯಲ್ಲಿ ಚಿನ್ನ ಗೆದ್ದುಕೊಂಡಿದ್ದು ಸನ್ನಿ ಥಾಮಸ್ ವೃತ್ತಿಬದುಕಿನ ಉತ್ತುಂಗದ ಕ್ಷಣವಾಯಿತು. ಅದುವರೆಗೆ ಭಾರತ ಒಲಿಂಪಿಕ್ಸ್‌ನ ವೈಯಕ್ತಿಕ ಸ್ಪರ್ಧೆಗಳಲ್ಲಿ ಚಿನ್ನ ಗೆದ್ದಿರಲಿಲ್ಲ.

ಭಾರತ ರಾಷ್ಟ್ರೀಯ ರೈಫಲ್ ಸಂಸ್ಥೆಯ ಅಧ್ಯಕ್ಷ ಕಲಿಕೇಶ್ ನಾರಾಯಣ್ ಸಿಂಗ್ ದೇವ್ ಸಂತಾಪ ಸೂಚಿಸಿದ್ದು, 'ಪ್ರೊಫೆಸರ್ ಥಾಮಸ್ ಅವರ ನಿಧನ ಶೂಟಿಂಗ್‌ನಲ್ಲಿ ನಿರ್ವಾತ ಸೃಷ್ಟಿಸಿದ್ದು, ಇದನ್ನು ತುಂಬುವುದು ಕಠಿಣ' ಎಂದಿ ದ್ದಾರೆ. ಅಭಿನವ್ ಬಿಂದ್ರಾ ಅವರೂ ಶೋಕ ಸೂಚಿಸಿ ಎಕ್ಸ್‌ನಲ್ಲಿ ಸಂದೇಶ ಹಾಕಿದ್ದಾರೆ.

ದಿಗ್ಗಜ ಶೂಟರ್‌ಗಳಾದ ವಿಜಯ ಕುಮಾರ್ (ಲಂಡನ್ ಒಲಿಂಪಿಕ್ಸ್ ಬೆಳ್ಳಿ ವಿಜೇತ), ಜಸ್ಪಾಲ್ ರಾಣಾ, ಸಮರೇಶ್ ಜಂಗ್ ಮತ್ತು ಗಗನ್ ನಾರಂಗ್ ಅವರೂ ಸನ್ನಿ ಥಾಮಸ್ ಗರಡಿಯಲ್ಲಿ ಪಳಗಿದವರು. ನಾರಂಗ್ ಅವರು ಲಂಡನ್ (2012) ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ಜಯಿಸಿದ್ದರು. ಜಸ್ಪಾಲ್ ರಾಣಾ 2006ರ ದೋಹಾ ಏಷ್ಯನ್ ಕ್ರೀಡೆಗಳಲ್ಲಿ ಮೂರು ಚಿನ್ನ ಗೆದ್ದುಕೊಂಡಿದ್ದರು.

ಕೋಟಯಂನ ಉಳವೂರಿನಲ್ಲಿ ಇಂಗ್ಲಿಷ್ ಪ್ರಾಧ್ಯಾಪಕರಾಗಿದ್ದ ಥಾಮಸ್ ಅವರಿಗೆ ಶೂಟಿಂಗ್ ಕ್ರೀಡೆ ಎಂದರೆ ಪಂಚಪ್ರಾಣ. 1970ರ ದಶಕದಲ್ಲಿ ಅವರು ರಾಜ್ಯ ಮತ್ತು ರಾಷ್ಟ್ರೀಯ ಚಾಂಪಿಯನ್ ಆಗಿದ್ದರು. ಇಡುಕ್ಕಿ ರೈಫಲ್ ಅಸೋಸಿಯೇಷನ್‌ನಲ್ಲಿ ಅವರು ಶೂಟಿಂಗ್ ರೇಂಜ್ ಆರಂಭಿಸಿ ಈ ಆಟ ಜನಪ್ರಿಯಗೊಳಿಸಲು ಶ್ರಮಿಸಿದ್ದರು. ಆದರೆ ಕೇರಳದಿಂದ ರಾಷ್ಟ್ರೀಯ ಮಟ್ಟದ ಶೂಟರ್‌ಗಳನ್ನು ರೂಪಿಸಲು ಸಾಧ್ಯವಾಗದೇ ಹೋಗಿದ್ದು ಅವರಿಗೆ ವಿಷಾದವಾಗಿ ಕಾಡಿತ್ತು.

ಚೆಸ್: ಬ್ಲಿಟ್ಜ್‌ನಲ್ಲಿ ಮಿಂಚಿದ ಪ್ರಜ್ಞಾನಂದ

ವಾರ್ಸಾ (ಪೋಲೆಂಡ್), (ಪಿಟಿಐ): ಗ್ರ್ಯಾಂಡ್‌ಮಾಸ್ಟರ್ ಆರ್. ಪ್ರಜ್ಞಾನಂದ ಅವರು ಆರಂಭದ ಹಿನ್ನಡೆಯ ಬಳಿಕ ಅಮೋಘ ರೀತಿ ಪುಟಿದೆದ್ದು, ಸೂಪರ್‌ಬೆಟ್ ರ‍್ಯಾಪಿಡ್ ಮತ್ತು ಬ್ಲಿಟ್ಜ್ ಚೆಸ್ ಟೂರ್ನಿಯ ಬ್ಲಿಟ್ಜ್ ವಿಭಾಗದ ಮೊದಲ ಅರ್ಧಭಾಗ ಮುಗಿದಾಗ ಎರಡನೇ ಸ್ಥಾನಕ್ಕೆ ಏರಿದ್ದಾರೆ.

ಈ ಟೂರ್ನಿಯು ಗ್ರ್ಯಾಂಡ್ ಚೆಸ್ ಟೂರ್‌ನ ಭಾಗವಾಗಿದೆ. ಮೊದಲ ಎರಡು ದಿನ ರ‍್ಯಾಪಿಡ್ ವಿಭಾಗದ ಬಹುತೇಕ ಅವಧಿಯಲ್ಲಿ ಹಿನ್ನಡೆ ಕಂಡಿದ್ದ ಪ್ರಜ್ಞಾನಂದ ನಂತರದ ಎರಡೂ ದಿನ ಉತ್ತಮ ಪ್ರದರ್ಶನ ನೀಡಿದ್ದಾರೆ. ವಿಶೇಷವಾಗಿ ಬ್ಲಿಟ್ಜ್‌ನಲ್ಲಿ ತಮ್ಮ ಪರಿಣತಿ ಏನೆಂಬುದನ್ನು ತೋರಿಸಿಕೊಟ್ಟಿದ್ದಾರೆ. 9 ಪಂದ್ಯಗಳಿಂದ 5.5 ಅಂಕ ಸಂಗ್ರಹಿಸಿದ್ದಾರೆ. ಒಟ್ಟಾರೆ ಎರಡೂ ವಿಭಾಗಗಳಿಂದ (ರ‍್ಯಾಪಿಡ್ ಮತ್ತು ಬ್ಲಿಟ್ಜ್) ಅವರು 15.5 ಅಂಕ ಗಳಿಸಿದ್ದಾರೆ.

ಸ್ಲೋವೇನಿಯದ ವ್ಲಾದಿಮಿರ್ ಫೆಡೊಸೀವ್ (9 ಸುತ್ತುಗಳಿಂದ 8) ಅವರು ಬ್ಲಿಟ್ಜ್‌ನಲ್ಲಿ ಅಮೋಘ ಪ್ರದರ್ಶನದೊಡನೆ ಅಗ್ರಸ್ಥಾನಕ್ಕೇರಿದರು. ಒಟ್ಟು (ರ‍್ಯಾಪಿಡ್ + ಬ್ಲಿಟ್ಜ್‌ನಲ್ಲಿ) 19 ಅಂಕ ಅವರ ಖಾತೆಯಲ್ಲಿದೆ. ಅವರು ಎರಡನೇ ಸ್ಥಾನದಲ್ಲಿರುವ ಪ್ರಜ್ಞಾನಂದ ಅವರಿಗಿಂತ 3.5 ಅಂಕಗಳ ಲೀಡ್ ಹೊಂದಿದ್ದಾರೆ.

ಬ್ಲಿಟ್ಜ್‌ನಲ್ಲಿ ಪ್ರತಿ ಆಟ ಐದು ನಿಮಿಷಗಳ ಅವಧಿ ಹೊಂದಿರುತ್ತದೆ. ಫೆಡೊಸೀವ್ ಅಂತಿಮ ದಿನ 9 ಸುತ್ತುಗಳಿಂದ 4.5 ಅಂಕ ಗಳಿಸಿದರೆ, ಕಿರೀಟ ಅವರ ಪಾಲಾಗಲಿದೆ.



ಪ್ರಜ್ಞಾನಂದ

ಮೊದಲು ರುಮೇನಿಯಾದ ಡೇಕ್ ಬೊಗ್ಡಾನ್ ಡೇನಿಯಲ್ ಮತ್ತು ಅಮೆರಿಕದ ಲೆವೊನ್ ಅರೋನಿಯನ್ ಅವರಿಗೆ ಸೋತ ಪ್ರಜ್ಞಾನಂದ ನಂತರ ಗಮನಾರ್ಹ ಚೇತರಿಕೆ ಕಂಡರು. ಭಾರತದ ಆಟಗಾರ ಫ್ರಾನ್ಸ್‌ನ ಅಲಿರೇಝಾ ಫಿರೋಝ್‌ಜಾ ಮತ್ತು ಮ್ಯಾಕ್ಸಿಂ ವೇಷಿಯರ್ ಲಗ್ರಾವ್ ಅವರನ್ನು ಮಣಿಸಿದರು. ನಂತರದ ಮೂರು ಸುತ್ತುಗಳಲ್ಲಿ ಮಾಜಿ ವಿಶ್ವ ಚಾಂಪಿಯನ್ ವ್ಯಾಸೆಲಿನ್ ಟೊಪಲೋವ್, ಅರವಿಂದ್ ಚಿದಂಬರಮ್ ಮತ್ತು ಡೇವಿಡ್ ಗಾವ್ರಿಲೆಸ್ಕು ಅವರನ್ನು ಸೋಲಿಸಿದರು.

ರ‍್ಯಾಪಿಡ್ ವಿಭಾಗದಲ್ಲಿ ಉತ್ತಮ ಪ್ರದರ್ಶನ ನೀಡಿದ್ದ ಅರವಿಂದ್ ಚಿದಂಬರಂ ಇಲ್ಲಿ 9 ಸುತ್ತುಗಳಿಂದ 3.5 ಅಂಕ ಅಷ್ಟೇ ಸಂಗ್ರಹಿಸಲು ಶಕ್ತರಾದರು. ಅವರು ಅರೋನಿಯನ್, ಲಗ್ರಾವ್ ಅವರೊಂದಿಗೆ ಒಟ್ಟು 14.5 ಪಾಯಿಂಟ್ಸ್ ಗಳಿಸಿ ಮೂರನೇ ಸ್ಥಾನ ಹಂಚಿಕೊಂಡಿದ್ದಾರೆ.